
ಭಾನುವಾರ, ಡಿಸೆಂಬರ್ 11, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 341 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ


ಹಿಮಾಚಲ ಮುಖ್ಯಮಂತ್ರಿ ಸುಖ್ವಿಂದರ್ ಸುಖ್ಖು



ಶಿಮ್ಲಾ: ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಹುದ್ದೆಯ ಪೈಪೋಟಿ ಕೊನೆಗೊಂಡಿದೆ. ಹಿಮಾಚಲ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರಾಗಿದ್ದ ಸುಖ್ವಿಂದರ್ ಸಿಂಗ್ ಸುಖ್ಖು ಅವರು ಹೊಸ ಮುಖ್ಯಮಂತ್ರಿ ಆಗಲಿದ್ದಾರೆ ಎಂದು ಪಕ್ಷವು ಶನಿವಾರ ಘೋಷಿಸಿದೆ. 6

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸದ್ಬಳಕೆಯಾಗದ ಪರೀಕ್ಷಾ ಕೇಂದ್ರಗಳು • ಕಣ್ಣೋಟದಲ್ಲೇ ಗೂಡಿನ ಬೆಲೆ ನಿಗದಿ

ರೇಷ್ಮೆ: ಸಿಗದ ವೈಜ್ಞಾನಿಕ ಬೆಲೆ

• ಎಸ್. ಸಂಪತ್

ಒಳನೋಟ
ಮೋಸದ ಜಾಲದಲ್ಲಿ ಕೃಷಿಕ
ಪ್ರತಿಕ್ರಿಯಿಸಿ: 9606038256
feedback@prajavani.co.in


ಬೆಂಗಳೂರು: ಅದು 2022ರ ಫೆಬ್ರುವರಿ 3. ರಾಮನಗರ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ರೈತರೊಬ್ಬರು ತಂದಿದ್ದ ದ್ವಿತಳಿ ರೇಷ್ಮೆ ಗೂಡು ಕೆ.ಜಿಗೆ ₹1,043ಕ್ಕೆ ಮಾರಾಟವಾಗಿತ್ತು! ಏಷ್ಯಾದ ಅತಿ ದೊಡ್ಡ ರೇಷ್ಮೆ ಗೂಡಿನ ಮಾರುಕಟ್ಟೆಯಾಗಿರುವ ರಾಮನಗರ ಮಾರುಕಟ್ಟೆಯ ಇತಿಹಾಸದಲ್ಲಿಯೇ ರೇಷ್ಮೆ ಗೂಡಿಗೆ ಸಿಕ್ಕಿರುವ ಗರಿಷ್ಠ ಬೆಲೆ ಅದಾಗಿತ್ತು!

ಇದಾದ ಕೆಲವೇ ದಿನಗಳಲ್ಲಿ (ಫೆ 9) ಶಿಡ್ಲಘಟ್ಟದ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ದ್ವಿತಳಿ ರೇಷ್ಮೆ ಗೂಡು ಕೆ.ಜಿಗೆ ₹ 1,199ಕ್ಕೆ ಮಾರಾಟವಾಗುವ ಮೂಲಕ ರೇಷ್ಮೆ ಕೃಷಿಕರು, ನೂಲು ಬಿಚ್ಚಾಣಿಕೆದಾರರು (ರೀಲರ್‌ಗಳು) ಹಾಗೂ ರೇಷ್ಮೆ ಅಧಿಕಾರಿಗಳ ಹುಬ್ಬೇರುವಂತೆ ಮಾಡಿತ್ತು. ಇದು ರೈತರ ಮೊಗದಲ್ಲಿ ಮಂದಹಾಸ ಮೂಡಿಸಿತ್ತು. 2022ರ ಏಪ್ರಿಲ್‌ನಲ್ಲಿ ಮಿಶ್ರ ತಳಿಯ (ಸಿ.ಬಿ) ಗೂಡು ಕೆ.ಜಿಗೆ ಗರಿಷ್ಠ ₹ 999 ಹಾಗೂ ದ್ವಿತಳಿ (ಬಿ.ವಿ) ಗೂಡು ಕೆ.ಜಿಗೆ ಗರಿಷ್ಠ ₹ 988ಕ್ಕೆ ಮಾರಾಟವಾಗಿತ್ತು. ಡಿಸೆಂಬರ್ 7ರಂದು ಸಿ.ಬಿ ಕೆ.ಜಿಗೆ ಗರಿಷ್ಠ 712 ಹಾಗೂ ಬಿ.ವಿ ಕೆ.ಜಿಗೆ ಗರಿಷ್ಠ 825ಕ್ಕೆ ಮಾರಾಟವಾಗಿತ್ತು.

ಮೂರು ನಾಲ್ಕು ವರ್ಷಗಳ ಹಿಂದೆ ಕೆ.ಜಿ ಗೂಡಿಗೆ ₹ 250ರಿಂದ ₹350ರ ಆಸುಪಾಸಿನಲ್ಲಿ ನಿಗದಿಯಾಗುತ್ತಿದ್ದ ಧಾರಣೆ, ದಿಢೀರನೇ ಸರಾಸರಿ ₹ 800ರಿಂದ ₹900ರವರೆಗೂ ಜಿಗಿದಿದೆ. ಆದರೆ ಈ ಬೆಳವಣಿಗೆ ಶಾಶ್ವತವೇ ಎಂಬ ಪ್ರಶ್ನೆಗೆ ರೇಷ್ಮೆ ಅಧಿಕಾರಿಗಳು, ರೀಲರ್‌ಗಳ ಬಳಿ ಸಮರ್ಪಕ ಉತ್ತರವಿಲ್ಲ.

ಕಾರಣ ಇದು ವೈಜ್ಞಾನಿವಾಗಿ ಗೂಡಿನ ಗುಣಮಟ್ಟ ಆಧರಿಸಿ, ಶ್ರೇಣೀಕರಿಸಿ ನಿಗದಿಯಾದ ಬೆಲೆಯಲ್ಲ. ಬದಲಿಗೆ ಭಾರತ– ಚೀನಾ ನಡುವಿನ ಬಾಂಧವ್ಯ ಹಳಸಿರುವುದರ 'ಎಫೆಕ್ಟ್'. ಭಾರತಕ್ಕೆ ಚೀನಾದಿಂದ ಹೆಚ್ಚಾಗಿ ಬರುತ್ತಿದ್ದ ರೇಷ್ಮೆ ನೂಲಿನ ಪ್ರಮಾಣವೀಗ ಬಹುತೇಕ ಕುಸಿದಿದೆ. ಅದರ ಜತೆಗೆ ರೇಷ್ಮೆ ನೂಲಿನ ಆಮದು ಸುಂಕ ಶೇ 10ರಿಂದ 15ಕ್ಕೆ ಏರಿರುವುದೂ ವರದಾನವಾಗಿದೆ.

ಸ್ಕ್ಯಾನ್ ಮಾಡಿ ವಿಡಿಯೊ ನೋಡಿ
ಪ್ರಜಾವಾಣಿ ನೋಡಿಯೊ





ರಾಮನಗರದ ಎಆರ್‌ಎಂ ಘಟಕವೊಂದರಲ್ಲಿ ಸ್ಥಾಪಿಸಿರುವ 2 ಟನ್ ಸಾಮರ್ಥ್ಯದ 'ಹಾಟ್ ಏರ್ ಡ್ರೈಯರ್' ಪ್ರಜಾವಾಣಿ ಚಿತ್ರ: ಚಂದ್ರೇಗೌಡ

ಏನಿದು 'ಹಾಟ್ ಏರ್ ಡ್ರೈಯರ್'

ತಂತ್ರಜ್ಞಾನ ಬೆಳೆದಂತೆಲ್ಲ ರೇಷ್ಮೆ ಕೃಷಿಯಲ್ಲೂ ಹೊಸ ಸಂಶೋಧನೆ, ಆವಿಷ್ಕಾರಗಳು ನಡೆದಿದ್ದು, ರೈತರಿಗೆ ಉಪಯುಕ್ತವಾಗಿವೆ. ರೇಷ್ಮೆ ಕೃಷಿಕರು ಮತ್ತು ಗೂಡನ್ನು ಸಂಸ್ಕರಿಸುವ ಉದ್ಯಮಿಗಳ ಅನುಕೂಲಕ್ಕೆಂದು 'ಹಾಟ್ ಏರ್ ಡ್ರೈಯರ್'ಗಳ ಬಳಕೆ ಹೆಚ್ಚತೊಡಗಿದೆ. ಇದರಿಂದಾಗಿ ರೇಷ್ಮೆಗೂಡನ್ನು ಒಣಗಿಸಿ ದೀರ್ಘ ಕಾಲ ಸಂರಕ್ಷಿಸಬಹುದಾಗಿದೆ. ಸದ್ಯ ಸ್ವಯಂಚಾಲಿತ ರೀಲಿಂಗ್ ಘಟಕಗಳಲ್ಲಿ (ಎಆರ್‌ಎಂ) ಈ ತಂತ್ರಜ್ಞಾನ ಬಳಕೆಯಲ್ಲಿದೆ.

ಇಲ್ಲಿ 200–250 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಬಳಸಿ ಬಿಸಿ ಗಾಳಿ ಮೂಲಕ ರೇಷ್ಮೆಗೂಡನ್ನು ಒಣಗಿಸಲಾಗುತ್ತದೆ. ಇದರಿಂದಾಗಿ ಗೂಡಿನ ಒಳಗಿನ ಹುಳು ಸಾಯುತ್ತದೆ. ಹೀಗೆ ಒಣಗಿಸಲಾದ ಗೂಡನ್ನು ಮೂರು ತಿಂಗಳುಗಳವರೆಗೆ ಸಂರಕ್ಷಿಸಿ, ನೂಲು ಉತ್ಪಾದನೆಗೆ ಬಳಸಬಹುದಾಗಿದೆ.

ಅನುಕೂಲವೇನು?: ಮಾರುಕಟ್ಟೆಯಲ್ಲಿ ಗೂಡಿಗೆ ಕಡಿಮೆ ಬೆಲೆ ಇದ್ದಾಗ ಅದನ್ನು ಸಂಗ್ರಹ ಮಾಡಿ, ಹೆಚ್ಚು ಬೆಲೆ ಬಂದಾಗ ಮಾರಬಹುದು. ಇದರಿಂದ ರೈತರಿಗೆ ಉತ್ತಮ ಬೆಲೆ ಸಿಗುತ್ತದೆ. ಹೀಗೆ ಸಂಸ್ಕರಿಸಿದ ಗೂಡಿನಿಂದ ಹೆಚ್ಚು ಉದ್ದನೆಯ ನೂಲು ತೆಗೆಯಬಹುದು ಎನ್ನುತ್ತಾರೆ ರಾಮನಗರ ರೇಷ್ಮೆ ಗೂಡಿನ ಮಾರುಕಟ್ಟೆಯ ಸಹಾಯಕ ನಿರ್ದೇಶಕ ಶ್ರೀನಿವಾಸ ಶರ್ಮ.

100 ಕೆ.ಜಿ ಸಾಮರ್ಥ್ಯದ ಡ್ರೈಯರ್‌ಗೆ ₹2.2 ಲಕ್ಷ, 1 ಸಾವಿರ ಕೆ.ಜಿ ಸಾಮರ್ಥ್ಯದ ಡ್ರೈಯರ್‌ಗೆ ₹ 17 ಲಕ್ಷ ಹಾಗೂ 2 ಟನ್ ಸಾಮರ್ಥ್ಯದ ಡ್ರೈಯರ್ ಘಟಕ ಸ್ಥಾಪನೆಗೆ ₹25ರಿಂದ ₹30 ಲಕ್ಷದವರೆಗೆ ಖರ್ಚಾಗಲಿದೆ. 'ಸಿಲ್ಕ್ ಸಮಗ್ರ ಯೋಜನೆ' ಅಡಿ ಇದಕ್ಕೆ ಸರ್ಕಾರದಿಂದ ನೆರವು ಸಿಗಲಿದೆ.

ತುಮಕೂರು ಜಿಲ್ಲೆಯ ಪಾವಗಡದಲ್ಲಿ ಸರ್ಕಾರ ಈಗಾಗಲೇ ₹2 ಕೋಟಿ ವೆಚ್ಚದಲ್ಲಿ ರೈತರಿಗಾಗಿ ಇಂತಹ ಬೃಹತ್ ಡ್ರೈಯರ್ ಘಟಕವನ್ನು ತೆರೆದಿದೆ. ಸದ್ಯ ಅದರ ಸಾಧಕ–ಬಾಧಕಗಳ ಬಗ್ಗೆ ಪ್ರಯೋಗ ನಡೆಯುತ್ತಿದೆ ಎನ್ನುತ್ತಾರೆ ಅಧಿಕಾರಿಗಳು.

ಸ್ಕ್ಯಾನ್ ಮಾಡಿ ವಿಡಿಯೊ ನೋಡಿ
ಪ್ರಜಾವಾಣಿ ನೋಡಿಯೊ

4ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 4

ಪೂಜೆಗೆ ಇನ್ನು 'ಸಲಾಂ' ಪದ ಬಳಕೆ ಇಲ್ಲ: ಜೊಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ದೇವಾಲಯಗಳಲ್ಲಿ ರೂಢಿಯಾಗಿ ಬಂದಿರುವ 'ದೀವಟಿಗೆ ಸಲಾಂ', 'ಸಲಾಂ ಆರತಿ', 'ಸಲಾಂ ಮಂಗಳಾರತಿ' ಎಂಬ ಪೂಜಾ ಕಾರ್ಯಗಳ ಹೆಸರನ್ನು 'ದೀವಟಿಗೆ ನಮಸ್ಕಾರ', 'ಆರತಿ ನಮಸ್ಕಾರ, 'ಮಂಗಳಾರತಿ ನಮಸ್ಕಾರ' ಎಂದು ಬದಲಿಸಲು ನಿರ್ಧರಿಸಲಾಗಿದೆ' ಎಂದು ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದ್ದಾರೆ.

'ಹಿರಿಯ ಆಗಮ ಪಂಡಿತರ ಅಭಿಪ್ರಾಯದಂತೆ ಹೆಸರು ಬದಲಾಯಿಸಿ, ಸೇವೆಗಳನ್ನು ಮತ್ತು ಸೇವಾ ಕಾರ್ಯಗಳನ್ನು ಮುಂದುವರೆಸಲು ಸುತ್ತೋಲೆ ಹೊರಡಿಸಲಾಗುವುದು' ಎಂದು ಅವರು ಹೇಳಿದ್ದಾರೆ.

'ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಂಜೆ ದೇವಾಲಯಕ್ಕೆ ಮತ್ತು ದೇವರಿಗೆ ದೀವಟಿಗೆ ಹಿಡಿದು ಆರತಿಯಂತೆ ನಡೆಸುವ ಪೂಜಾಕಾರ್ಯಕ್ಕೆ ಕೆಲವು ದೇವಾಲಯಗಳಲ್ಲಿ 'ದೀವಟಿಗೆ ಸಲಾಂ', 'ಸಲಾಂ ಮಂಗಳಾರತಿ', 'ಸಲಾಂ ಆರತಿ ಎಂದು ಕರೆಯಲಾಗುತ್ತಿದೆ. ಇದನ್ನು ಬದಲಿಸಬೇಕು ಎಂದು ಭಕ್ತಾದಿಗಳಿಂದ ಒತ್ತಾಯ ಬಂದಿತ್ತು. ಈ ವಿಷಯವನ್ನು ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಯಲ್ಲಿ ಸದಸ್ಯರು ಗಮನಕ್ಕೆ ತಂದರು. ಈ ಬಗ್ಗೆ ವಿಸ್ತೃತ ಚರ್ಚೆ ನಡೆಸಿದ ಬಳಿಕ, ಪೂಜಾ ಕಾರ್ಯಗಳ ಹೆಸರನ್ನು ನಮ್ಮ ಸ್ಥಳೀಯ ಭಾಷೆಯ ಪದಗಳಿಗೆ ಬದಲಿಸಲು ನಿರ್ಧರಿಸಲಾಯಿತು' ಎಂದಿದ್ದಾರೆ.

'ಕೇವಲ ಪದಗಳನ್ನು ಬದಲಿಸಿ, ನಮ್ಮ ಭಾಷೆಯ ಪದ ಅಳವಡಿಸಿ, ಈ ಹಿಂದಿನಿಂದ ನಡೆದುಕೊಂಡು ಬಂದಿರುವ ಸಂಪ್ರದಾಯ ಮತ್ತು ಪೂಜೆಗಳನ್ನು ಮುಂದುವರೆಸಲಾಗುವುದು. ಪೂಜಾ ಕಾರ್ಯಗಳನ್ನು ರದ್ದು–ಪಡಿಸುವುದಿಲ್ಲ' ಎಂದೂ ಅವರು ಸ್ಪಷ್ಟಪಡಿಸಿದ್ದಾರೆ.

ಖಾಸಗಿ ಸಂಸ್ಥೆಗಳಿಗೆ ಲೆಕ್ಕಪರಿಶೋಧನೆ ಹೊಣೆ ವಹಿಸಿಲ್ಲ: 'ಇಲಾಖೆಯ ವ್ಯಾಪ್ತಿಯಲ್ಲಿ ಬರುವ 'ಎ' ಮತ್ತು 'ಬಿ' ವರ್ಗದ ದೇವಸ್ಥಾನಗಳು ಪ್ರತಿವರ್ಷ ಲೆಕ್ಕ ಪರಿಶೋಧನೆ ಮಾಡಿಸುವುದು ಕಡ್ಡಾಯ. ಆದರೆ, ಹಲವು ದೇವಸ್ಥಾನಗಳಲ್ಲಿ ಹಲವು ವರ್ಷಗಳಿಂದ ಲೆಕ್ಕ ಪರಿಶೋಧನೆ ನಡೆದಿಲ್ಲ. ದೇವಸ್ಥಾನಗಳ ಆಡಳಿತದಲ್ಲಿ, ಭಕ್ತರು ನೀಡುವ ಕಾಣಿಕೆಯ ಬಳಕೆಯ ಪಾರದರ್ಶಕತೆ ಹೆಚ್ಚಿಸುವ ಉದ್ದೇಶದಿಂದ ಆಯಾ ವರ್ಷ ಲೆಕ್ಕಪರಿಶೋಧನೆ ನಡೆಸಿ ವರದಿ ಸಲ್ಲಿಸುವಂತೆ ಆದೇಶ ನೀಡಲಾಗಿತ್ತು. ಸರ್ಕಾರದ ಲೆಕ್ಕಪತ್ರ ಇಲಾಖೆಯಿಂದಲೇ ಲೆಕ್ಕಪರಿಶೋಧನೆ ನಡೆಸಿ ವರದಿ ಸಲ್ಲಿಸಿದ್ದಾರೆ. ಈ ಹೊಣೆಯನ್ನು ಖಾಸಗಿ ಸಂಸ್ಥೆಗಳಿಗೆ ವಹಿಸಿಲ್ಲ' ಎಂದೂ ಅವರು ಸ್ಪಷ್ಟಪಡಿಸಿದ್ದಾರೆ.

ಎಲ್ಲೆಲ್ಲಿ 'ಸಲಾಂ ಆರತಿ'

ಮಂಡ್ಯ ಜಿಲ್ಲೆಯ ಮೇಲುಕೋಟೆಯ ಚೆಲುವ ನಾರಾಯಣಸ್ವಾಮಿ ದೇವಾಲಯ, ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ, ಕೊಲ್ಲೂರು ಮೂಕಾಂಬಿಕಾ ದೇವಸ್ಥಾನ ಮತ್ತು ಪುತ್ತೂರಿನ ಮಹಾಲಿಂಗೇಶ್ವರ ದೇವಾಲಯಗಳಲ್ಲಿ 'ಸಲಾಂ ಆರತಿ' ಪೂಜೆ ನಡೆಸಲಾಗುತ್ತಿತ್ತು.

ತಗ್ಗಿದ ಮ್ಯಾಂಡಸ್ ಪ್ರಭಾವ: 5 ಸಾವು

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡು ಹಾಗೂ ಅಂಧ್ರದ ಕರಾವಳಿ ಪ್ರದೇಶಗಳಲ್ಲಿ ಆತಂಕ ಸೃಷ್ಟಿಸಿದ ಮ್ಯಾಂಡಸ್ ಚಂಡಮಾರುತದ ಪ್ರಭಾವ ಶನಿವಾರ ತಗ್ಗಿದೆ. ಗಂಟೆಗೆ 65ರಿಂದ 75 ಕಿಲೋ ಮೀಟರ್ ವೇಗದಲ್ಲಿ ಬೀಸುತ್ತಿದ್ದ ಚಂಡಮಾರುತವು 85 ಕಿಲೋ ಮೀಟರ್ ವೇಗದಲ್ಲಿ ತಮಿಳುನಾಡಿನ ಮಾಮಲ್ಲಪುರಂ ಕಡಲ ತೀರಕ್ಕೆ ಶನಿವಾರ ಬೆಳಗಿನ ಜಾವ ಅಪ್ಪಳಿಸಿತು. ನಂತರ ಅದರ ವೇಗ ಕ್ಷೀಣಗೊಂಡು, ವಾಯುಭಾರ ಕುಸಿತವಾಗಿ ಮಾರ್ಪಾಡಾಯಿತು.

ಎರಡೂ ರಾಜ್ಯಗಳಲ್ಲಿ ದೊಡ್ಡ ಪ್ರಮಾಣದ ಹಾನಿ ಸಂಭವಿಸಿಲ್ಲ. ತಮಿಳುನಾಡಿನಲ್ಲಿ ಚಂಡಮಾರುತ ಸಂಬಂಧಿ ಅವಘಡಗಳಲ್ಲಿ ಐದು ಮಂದಿ ಮೃತಪಟ್ಟಿದ್ದಾರೆ. ಚೆನ್ನೈನಲ್ಲಿ ವಿದ್ಯುತ್ ತಂತಿ ಸ್ಪರ್ಶಿಸಿ ಇಬ್ಬರು ಮೃತಪಟ್ಟಿದ್ದಾರೆ. ಗೋಡೆ ಕುಸಿದು ದಂಪತಿ ಪ್ರಾಣ ಕಳೆದು–ಕೊಂಡಿದ್ದಾರೆ.

4ನೇ ಪುಟ ನೋಡಿ

ಮಳೆ ಮುಂದುವರಿಕೆ: ಚಳಿ ತೀವ್ರ

ಬೆಂಗಳೂರು: ಬಂಗಾಳ ಕೊಲ್ಲಿಯಲ್ಲಿ ಕಾಣಿಸಿಕೊಂಡಿರುವ 'ಮ್ಯಾಂಡಸ್' ಚಂಡಮಾರುತದ ಪರಿಣಾಮದಿಂದಾಗಿ ರಾಜ್ಯದಲ್ಲಿ ಇನ್ನೂ ಮೂರು ದಿನ ಮಳೆಯಾಗಲಿದೆ. ಜತೆಗೆ, ಮೈಕೊರೆಯುವ ಚಳಿ ಇರಲಿದೆ ಎಂದು ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ.

4ನೇ ಪುಟ ನೋಡಿ

ಇಂದು ಆಯುರ್ವೇದ ಆರೋಗ್ಯ ತಪಾಸಣಾ ಶಿಬಿರ

ಬೆಂಗಳೂರು: ಯೋಗ ಪರಿಜ್ಞಾನ ಪ್ರತಿಷ್ಠಾನವು ಕೆಂಗೇರಿಯ ಕೊಮ್ಮಘಟ್ಟದಲ್ಲಿರುವ ಪೂರ್ಣಾಯುರ್ಧಾಮ, ಪೂರ್ಣಾಯು ಆರೋಗ್ಯ ಕೇಂದ್ರದಲ್ಲಿ ಭಾನುವಾರ ವರ್ಷಾಂತ್ಯದ ಉಚಿತ ಆಯುರ್ವೇದ ಆರೋಗ್ಯ ಶಿಬಿರ ಮತ್ತು ಮಧುಮೇಹ, ರಕ್ತ ಪರೀಕ್ಷೆ ಶಿಬಿರ ಏರ್ಪಡಿಸಿದೆ.

ಬೆನ್ನುನೋವು, ಮಂಡಿ, ಕತ್ತು, ದೀರ್ಘ ಕಾಲದ ನೋವುಗಳು, ಡಯಾಬಿಟೀಸ್, ಕೂದಲು ಉದುರುವಿಕೆ ಪಿಸಿಒಡಿ, ಸೋರಿಯಾಸಿಸ್ ಮತ್ತಿತರ ಕಾಯಿಲೆ ಇರುವವರನ್ನು ಆಯುರ್ವೇದ ತಜ್ಞ ವೈದ್ಯರು ಬೆಳಗ್ಗೆ 10ರಿಂದ ಮಧ್ಯಾಹ್ನ 3 ಗಂಟೆಯ ವರೆಗೆ ತಪಾಸಣೆ ಮಾಡಲಿದ್ದಾರೆ. ಆಸಕ್ತರು 9480709995, 9481037171 ದೂರವಾಣಿ ಸಂಖ್ಯೆಗೆ ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

'ರಾಜ್ಯಕ್ಕೆ ನಿಜಲಿಂಗಪ್ಪ ಕೊಡುಗೆ ಅಪಾರ'

ಬೆಂಗಳೂರು: ಕಾವೇರಿ, ಕೃಷ್ಣಾ ಯೋಜನೆಗಳು ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಅವರ ಕಲ್ಪನೆ ಹಾಗೂ ಕ್ರಿಯಾ ಯೋಜನೆಗಳ ಫಲ. ಕರ್ನಾಟಕಕ್ಕೆ ಅವರ ಕೊಡುಗೆ ಅಪಾರ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಣ್ಣಿಸಿದರು.

ವಿಧಾನಸೌಧದ ಆವರಣದಲ್ಲಿ ಶನಿವಾರ ದಿ. ಎಸ್. ನಿಜಲಿಂಗಪ್ಪ ಅವರ ಜನ್ಮ ದಿನದ ಅಂಗವಾಗಿ ನಿರಂತರ ಸಾಯಿ ಕಮ್ಯೂನಿಕೇಷನ್ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ಧೀಮಂತ ಮುತ್ಸದ್ದಿ ಎಸ್. ನಿಜಲಿಂಗಪ್ಪ' ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್, ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್, ಪಿ. ಜಯಕುಮಾರ್ ಉಪಸ್ಥಿತರಿದ್ದರು.

ಲಾಲ್‌ಬಾಗ್: ತೋಟಗಾರಿಕೆ ಇಲಾಖೆಯ ನೇತೃತ್ವ

ಕಲಾಸಂಘ ಹೊರಗಿಟ್ಟು ಫಲಪುಷ್ಪ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಲ್‌ಬಾಗ್‌ನಲ್ಲಿ ಹಲವು ದಶಕಗಳಿಂದ ಫಲಪುಷ್ಪ ಪ್ರದರ್ಶನವನ್ನು ಆಯೋಜಿಸಿಕೊಂಡು ಬಂದಿರುವ ಮೈಸೂರು ಉದ್ಯಾನ ಕಲಾಸಂಘವನ್ನು ಹೊರಗಿಟ್ಟು, ತೋಟಗಾರಿಕೆ ಇಲಾಖೆಯ ನೇತೃತ್ವದಲ್ಲಿ 2023ರ ಗಣರಾಜ್ಯೋತ್ಸವದ ಫಲಪುಷ್ಪ ಪ್ರದರ್ಶನ ಆಯೋಜಿಸಲು ನಿರ್ಧರಿಸಲಾಗಿದೆ.

'ಈ ಬಾರಿಯ ಐತಿಹಾಸಿಕ ಫಲಪುಷ್ಪ ಪ್ರದರ್ಶನ ಹಲವು ಪ್ರಥಮಗಳಿಗೆ ಸಾಕ್ಷಿಯಾಗಲಿದೆ. 'ಕ್ರಿ.ಶ. 1500ರ ಬೆಂಗಳೂರು, ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಇದುವರೆಗಿನ ಬೆಂಗಳೂರಿನ ವಿಕಾಸ' ಎಂಬ ವಿಷಯಾಧಾರಿತ ಫಲಪುಷ್ಪ ಪ್ರದರ್ಶನ ಆಯೋಜಿಸಲು ತೋಟಗಾರಿಕೆ ಇಲಾಖೆ ಸಜ್ಜಾಗಿದೆ. ಇದರಲ್ಲಿ 15 ಲಕ್ಷದಿಂದ 20 ಲಕ್ಷ ಜನ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಗಾಜಿನ ಮನೆಯ ಸುತ್ತಮುತ್ತ ಬೆಂಗಳೂರಿನ ವಿವಿಧ ವಿಷಯಗಳ ಕುರಿತು ಪ್ರದರ್ಶನವನ್ನು ಹಮ್ಮಿಕೊಳ್ಳಲಾಗುವುದು' ಎಂದು ತೋಟಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಟಾರಿಯಾ ತಿಳಿಸಿದರು.

ಸ್ವದೇಶಿ ತಳಿಗಳಿಗೆ ಹೆಚ್ಚಿನ ಆದ್ಯತೆ: 'ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನದಲ್ಲಿ ಪ್ರತಿ ಬಾರಿ ವಿದೇಶಿ ಹೂವುಗಳನ್ನು ಬಳಸಲಾಗುತ್ತಿತ್ತು. ಆದರೆ ಈ ಬಾರಿ ದೇಶದ ಈಶಾನ್ಯ ಮತ್ತು ಉತ್ತರದ ರಾಜ್ಯಗಳು ಸೇರಿ ಊಟಿ ಮತ್ತು ದಕ್ಷಿಣ ಭಾರತದ ಗುಡ್ಡಗಾಡು ಪ್ರದೇಶಗಳಲ್ಲಿ ಬೆಳೆಯುವ ವಿವಿಧ ತಳಿಗಳ ಹೂವುಗಳನ್ನು ಬಳಸಿಕೊಳ್ಳಲಾಗುವುದು' ಎಂದು ಮಾಹಿತಿ ನೀಡಿದರು.

'ನ್ಯಾಯಾಂಗ ನಿಂದನೆ'

'ನೂರಾರು ವರ್ಷಗಳ ಇತಿಹಾಸ ಹೊಂದಿರುವ ಮೈಸೂರು ಉದ್ಯಾನ ಕಲಾಸಂಘದ ಗುತ್ತಿಗೆ ಅವಧಿ ಮುಗಿದಿದೆ ಎಂಬ ಕಾರಣ ನೀಡಿ ಸಂಘಕ್ಕೆ ಏಕಾಏಕಿ ಬೀಗ ಹಾಕಲಾಗಿತ್ತು. ಸಂಘ ಇದನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯ ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ತಡೆಯಾಜ್ಞೆ ನೀಡಿದೆ. ಆದರೂ ನಮ್ಮ ಸಂಘವನ್ನು ಹೊರಗಿಟ್ಟು ಫಲಪುಷ್ಪ ಪ್ರದರ್ಶನ ಆಯೋಜಿಸಿದರೆ ಅದು ನ್ಯಾಯಾಂಗ ನಿಂದನೆಯಾಗುತ್ತದೆ' ಎಂದು ಸಂಘದ ಪದಾಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.




ನಗರದ ಮುತ್ಯಾಲಮ್ಮ ಜಂಕ್ಷನ್ ಬಳಿ ಮಳೆಯ ನಡುವೆ ಕೊಡೆಯ ಆಶ್ರಯದಲ್ಲಿರುವ ಜನರು (ಎಡಚಿತ್ರ), ಬಸವನಗುಡಿಯಲ್ಲಿ ಶನಿವಾರ ತುಂತುರು ಮಳೆ ಸುರಿದ ಪರಿಣಾಮ ಮಳೆಯಲ್ಲೇ ಕೊಡೆಯ ರಕ್ಷಣೆ ಪಡೆದು ಬೈಕ್‌ನಲ್ಲಿ ಸಾಗಿದರು – ಪ್ರಜಾವಾಣಿ ಚಿತ್ರಗಳು

ಬೆಂಗಳೂರಿಗೂ ತಟ್ಟಿದ 'ಮ್ಯಾಂಡಸ್' ಚಂಡಮಾರುತ ಪರಿಣಾಮ

ರಾಜಧಾನಿಯಲ್ಲಿ ದಿನವಿಡೀ ಮಳೆ, ಚಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂಗಾಳ ಕೊಲ್ಲಿಯಲ್ಲಿ ಕಾಣಿಸಿಕೊಂಡಿರುವ 'ಮ್ಯಾಂಡಸ್' ಚಂಡಮಾರುತದ ಮಳೆ– ಚಳಿಯ ತೀವ್ರತೆ ರಾಜಧಾನಿ ಬೆಂಗಳೂರಿಗೂ ತಟ್ಟಿದೆ. ನಗರದಲ್ಲಿ ಶನಿವಾರ ದಿನವಿಡೀ ಮಳೆ ಸುರಿಯಿತು. ಕೆಲವು ಬಡಾವಣೆಗಳಲ್ಲಿ ಮಳೆ ಬಿರುಸಾಗಿ ಸುರಿದರೆ, ಕೆಲವು ಕಡೆ ಜಿಟಿಜಿಟಿಯಾಗಿ ಬಂದಿತು.

ಭಾನುವಾರ ಸಹ ನಗರದಲ್ಲಿ ಇದೇ ರೀತಿಯ ವಾತಾವರಣ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕೊರೆಯುವ ಚಳಿಯಿಂದ ವೃದ್ಧರಿಗೆ ಮನೆಯಿಂದ ಹೊರಬರಲು ಸಾಧ್ಯವಾಗಲಿಲ್ಲ. ದಿನವಿಡೀ ಸೂರ್ಯನ ದರ್ಶನವಾಗಲಿಲ್ಲ. ಅಕಾಲಿಕ ಮಳೆಯು ಮಳೆಗಾಲ ನೆನಪಿಸಿತು.

ಮಲ್ಲೇಶ್ವರ, ಬ್ಯಾಟರಾಯನಪುರ, ಪೀಣ್ಯ ಕೈಗಾರಿಕಾ ಪ್ರದೇಶ, ಜಾಲಹಳ್ಳಿ, ಯಲಹಂಕ, ಕೆಂಗೇರಿ, ಕೆಂಗೇರಿ ಉಪನಗರ, ರಾಜಾಜಿನಗರ, ಹೆಬ್ಬಾಳ, ಸದಾಶಿವನಗರ, ವಿಜಯನಗರ, ರಾಜರಾಜೇಶ್ವರಿ ನಗರ, ಟಿ.ದಾಸರಹಳ್ಳಿ, ಸುಂಕದಕಟ್ಟೆ, ಯಶವಂತಪುರ, ಹೆಗ್ಗನಹಳ್ಳಿ, ಹೆಬ್ಬಾಳ, ರಾಜಗೋಪಾಲನಗರ, ಶ್ರೀರಾಮಪುರ, ಸುಬ್ರಹ್ಮಣ್ಯ ನಗರ, ಚಂದ್ರಲೇಔಟ್, ಕಲಾಸಿಪಾಳ್ಯ, ಚಾಮರಾಜಪೇಟೆ, ಉಪ್ಪಾರಪೇಟೆ, ಜೆ.ಜೆ. ನಗರ, ಮಾಗಡಿ ರಸ್ತೆ, ವಿಜಯನಗರ, ಕೋರಮಂಗಲದಲ್ಲಿ ಇಡೀ ದಿನ ಮಳೆಯಾಗಿದೆ. ಮಳೆ ಹಾಗೂ ಚಳಿಯಿಂದ ನಗರದ ಜನರು ತೊಂದರೆ ಅನುಭವಿಸಿದರು. ವಾರಾಂತ್ಯದಲ್ಲಿ ಖರೀದಿಗೆ ಮನೆಯಿಂದ ಹೊರಬಂದವರು ಕೊಡೆಯ ರಕ್ಷಣೆ ಪಡೆದು ಸಾಗಿದರು.

ಚಳಿಯಿಂದ ರಕ್ಷಣೆ ಪಡೆಯಲು ಜನರು ಬಿಸಿ ಜೋಳ, ಬಿಸಿಯಾದ ಕಾಫಿ ಮೊರೆಹೋದರು. ಕೆಲಸ ಮುಗಿಸಿ ದ್ವಿಚಕ್ರ ವಾಹನಗಳಲ್ಲಿ ಮನೆಗೆ ತೆರಳುವವರು ಪರದಾಡಿದರು.

ಅಕಾಲಿಕ ಮಳೆಯಿಂದ ಬೀದಿಬದಿಯ ವ್ಯಾಪಾರಿಗಳು ನಷ್ಟಕ್ಕೆ ಒಳಗಾದರು. ನಿತ್ಯ ಮೆಜೆಸ್ಟಿಕ್ ಸುತ್ತಮುತ್ತ, ಕೆ.ಆರ್.ಮಾರುಕಟ್ಟೆ, ಚಿಕ್ಕಪೇಟೆಯ ರಸ್ತೆಗಳಲ್ಲಿ ವ್ಯಾಪಾರ ನಡೆಸುತ್ತಿದ್ದವರು ತೊಂದರೆ ಅನುಭವಿಸಿದರು. ಅವರಿಗೆ ವ್ಯಾಪಾರ ನಡೆಸಲು ಸಾಧ್ಯವಾಗಲಿಲ್ಲ.

ನಗರದಲ್ಲಿ ತಾಪಮಾನ ಕುಸಿದಿದ್ದು ಮೈಕೊರೆಯುವ ಚಳಿಯಿತ್ತು. ಶನಿವಾರ ಕನಿಷ್ಠ 19 ಹಾಗೂ ಗರಿಷ್ಠ 22 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿತ್ತು.

ಡಿ.11ರಂದು ಕನಿಷ್ಠ 19, ಗರಿಷ್ಠ 25, ಡಿ.12ರಂದು ಕನಿಷ್ಠ 19 ಹಾಗೂ ಗರಿಷ್ಠ 26 ಡಿಗ್ರಿ ಸೆಲ್ಸಿಯಸ್ಸ್ ಉಷ್ಣಾಂಶ ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

'ನಮ್ಮ ಭಾರತ' ಕೃತಿ ಬಿಡುಗಡೆ ಕಾರ್ಯಕ್ರಮ

ತಾತ್ವಿಕ ಪ್ರಜಾಪ್ರಭುತ್ವಕ್ಕೆ ಧಕ್ಕೆ: ಬರಗೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಾಂತ್ರಿಕ ಪ್ರಜಾಪ್ರಭುತ್ವವು ಇಂದು ತಾತ್ವಿಕ ಪ್ರಜಾಪ್ರಭುತ್ವವನ್ನೇ ನುಂಗಿ ಹಾಕುವಂತೆ ಕಾಣಿಸುತ್ತಿದೆ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಆತಂಕ ವ್ಯಕ್ತಪಡಿಸಿದರು.

ಪತ್ರಕರ್ತ ವಿಜಯ್ ಜೋಶಿ ಕನ್ನಡಕ್ಕೆ ಅನುವಾದಿಸಿರುವ 'ಹರಿವು ಬುಕ್ಸ್' ಪ್ರಕಟಿಸಿರುವ ನಮ್ಮ ಭಾರತ' (ಮೂಲ:ಕ್ಯಾಪ್ಟನ್ ಗೋಪಿನಾಥ್) ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ನಮ್ಮ ಭಾರತವು ಇಂದು ಆದ್ಯತೆಗಳ ಪಲ್ಲಟವನ್ನು ಕಂಡಿದೆ. ಹಿಂದೆ ಸಮಾನತೆ ಬಗ್ಗೆ ಮಾತನಾಡುತ್ತಿದ್ದೆವು. ಈಗ ಸಹಿಷ್ಣುತೆ ಬಗ್ಗೆ ಮಾತನಾಡುತ್ತಿದ್ದೇವೆ. ದೊಡ್ಡ ನಾಗರಿಕತೆಯ ವಾರಸುದಾರರು ನಾವು. ಇಲ್ಲಿ ಬಡತನವೂ ಇದೆ, ಸಂಘರ್ಷವೂ ಇದೆ. ಸ್ವಾತಂತ್ರ್ಯ ಮತ್ತು ಸಮಾನತೆ ಇಲ್ಲದ ಪ್ರಜಾಪ್ರಭುತ್ವ ಇಲ್ಲ. ನಾವೆಲ್ಲರೂ ಜಾತಿ ಎಂಬ ಜೈಲು, ಧರ್ಮ ಎಂಬ ದ್ವೀಪಗಳಲ್ಲಿ ಬಂಧಿಯಾಗಿದ್ದೇವೆ. ಇದರಿಂದ ಕಳಚಿಕೊಳ್ಳಬೇಕು. ನಾಯಕ, ಖಳನಾಯಕರನ್ನು ಸೃಷ್ಟಿಸುವ ಚಾಳಿಯನ್ನು ಬಿಡಬೇಕಿದೆ. ನಮ್ಮ ದೇಶವೇ ನಿಜವಾದ ನಾಯಕ' ಎಂದು ಹೇಳಿದರು.



'ನಮ್ಮ ಭಾರತ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಬರಗೂರು ರಾಮಚಂದ್ರಪ್ಪ ಮತ್ತು ಕ್ಯಾಪ್ಟನ್ ಗೋಪಿನಾಥ್ ಅವರು ಸಮಾಲೋಚನೆಯಲ್ಲಿ ತೊಡಗಿದ್ದರು. ಲೇಖಕಿ ಗೀತಾ ವಸಂತ ಇದ್ದರು. –ಪ್ರಜಾವಾಣಿ ಚಿತ್ರ

'ಉದ್ಯಮಶೀಲತೆ ಹಾಗೂ ಚಿಂತನಶೀಲತೆ ಒಂದಾಗಿರುವ ವ್ಯಕ್ತಿತ್ವ ಗೋಪಿನಾಥ್ ಅವರದ್ದು. ಜಾತಿಯೊಳಗಿದ್ದು ಜಾತಿಯನ್ನು ಮೀರಿ, ಧರ್ಮದೊಳಗಿದ್ದು ಧರ್ಮವನ್ನು ಮೀರಿ, ರಾಜಕೀಯದಲ್ಲಿದ್ದು ರಾಜಕೀಯವನ್ನು ಮೀರಿ ನಿಲ್ಲುವ ನಾಯಕತ್ವ ಈ ದೇಶಕ್ಕೆ ಇಂದು ಬೇಕಿದೆ' ಎಂದು ಹೇಳಿದರು.

ಲೇಖಕಿ ಗೀತಾ ವಸಂತ ಮಾತನಾಡಿ, 'ಒಂದೇ ಜೀವಿತಾವಧಿಯಲ್ಲಿ ಹಲವು ಅವತಾರಗಳನ್ನು ಎತ್ತಿದವರು ಕ್ಯಾಪ್ಟನ್ ಗೋಪಿನಾಥ್. ಹಾಗಾಗಿ ಅವರ ಬಗ್ಗೆ ಬೆರಗು ಇದೆ. ಅವರ ಬರಹಗಳಲ್ಲಿ ಕೇವಲ ತಾತ್ವಿಕತೆ ಅಥವಾ ಏಕಪಕ್ಷೀಯತೆ ಇಲ್ಲ, ಅನುಭವ ಇದೆ. ದೇಶದ ಎಲ್ಲ ಸಕಾರಾತ್ಮಕ ಶಕ್ತಿಗಳನ್ನು ಅವರು ಗುರುತಿಸಿದ್ದಾರೆ. ಬದುಕನ್ನು ಕಟ್ಟಲೇಬೇಕು ಎಂಬ ಆಶಾವಾದ ಅವರ ಬರಹದಲ್ಲಿದೆ' ಎಂದು ತಿಳಿಸಿದರು.

'ಒಡನಾಟಗಳ ನೆನಪು ಈ ಪುಸ್ತಕದ ವೈಶಿಷ್ಟ್ಯ. ಧಾರ್ಮಿಕ ಸಂಕೇತಗಳನ್ನು ಸಹಜವಾಗಿ ಸ್ವೀಕರಿಸಿದರೆ ಹಿಜಾಬ್ ಅಥವಾ ಇತರ ಧಾರ್ಮಿಕ ಸಂಕೇತಕ್ಕೆ ಸಂಬಂಧಿಸಿದ ಬಿಕ್ಕಟ್ಟು ಇರುವುದಿಲ್ಲ ಎನ್ನುವುದನ್ನು ಕ್ಯಾಪ್ಟನ್ ಪ್ರತಿಪಾದಿಸಿದ್ದಾರೆ' ಎಂದರು.

'ಪ್ರಜಾವಾಣಿ' ಪತ್ರಿಕೆ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಇದ್ದರು.

24ರಂದು ಬಹುಭಾಷಾ ಕವಿಗೋಷ್ಠಿ

ಬೆಂಗಳೂರು: ಸೆಂಟರ್ ಆಫ್ ಆಲ್ ಇಂಡಿಯಾ ಟ್ರೇಡ್ ಯೂನಿಯನ್ (ಸಿಐಟಿಯು) 17ನೇ ಅಖಿಲ ಭಾರತ ಸಮ್ಮೇಳನವನ್ನು–2023ರ ಜನವರಿ 18ರಿಂದ 22ರ ವರೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿದೆ. ಸಂಘಟನೆಯ ಧ್ಯೇಯ–ಧೋರಣೆಗಳನ್ನು ಸಾಮಾನ್ಯ ಜನರಿಗೆ ತಿಳಿಸಲು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದೆ.

'ಡಿ. 24ರಂದು ಬಸವನಗುಡಿಯ ಬ್ಯೂಗಲ್ ರಾಕ್ ಆವರಣದ ಬಿಬಿಎಂಪಿ ಬಯಲು ಸಭಾಂಗಣದಲ್ಲಿ 'ಬಹುಭಾಷಾ ಕವಿಗೋಷ್ಠಿ' ನಡೆಯಲಿದೆ. ಕನ್ನಡ, ತಮಿಳು, ತೆಲುಗು, ಮಳಿಯಾಳಂ, ಹಿಂದಿ, ಉರ್ದು ಮತ್ತು ಇಂಗ್ಲಿಷ್ ಭಾಷೆಗಳ ಸಮಾಜಮುಖಿ ಮತ್ತು ಪ್ರಗತಿಪರ ಆಶಯಗಳ ಕುರಿತು ಕವನಗಳ ವಾಚನ ನಡೆಯಲಿದೆ' ಎಂದು ಕವಯಿತ್ರಿ ಹಾಗೂ ಮಹಿಳಾ ಹಕ್ಕುಗಳ ಹೋರಾಟಗಾರ್ತಿ ಕೆ. ಷರೀಫಾ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಸಂಧಾನ ಸಭೆ ಸಫಲ: ನಟ ಅನಿರುದ್ಧ ನಿರಾಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿರುತೆರೆ ನಿರ್ಮಾಪಕರ ಸಂಘ, ಟೆಲಿವಿಷನ್ ಅಸೋಸಿಯೇಷನ್ ಹಾಗೂ ನಟ ಅನಿರುದ್ಧ ಅವರ ನಡುವೆ ಶನಿವಾರ(ಡಿ.10) ನಡೆದ ಸಂಧಾನ ಸಭೆ ಸಫಲವಾಗಿದೆ. ಈ ಮೂಲಕ ಕಿರುತೆರೆಯಿಂದ ಅನಿರುದ್ಧ ಅವರನ್ನು ತಾತ್ಕಾಲಿಕವಾಗಿ ಬಹಿಷ್ಕರಿಸಬೇಕು ಎನ್ನುವ ಆಗ್ರಹದ ವಿವಾದ ಸುಖಾಂತ್ಯಗೊಂಡಿದೆ.



ಅನಿರುದ್ಧ

ನಿರ್ದೇಶಕ ಪಿ.ಶೇಷಾದ್ರಿ ಅವರ ಸಮ್ಮುಖದಲ್ಲಿ ಈ ಸಭೆ ನಡೆದಿತ್ತು. ಸಭೆಯ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅನಿರುದ್ಧ, 'ಸಂಬಂಧಗಳಿಗೆ ಬೆಲೆ ಕೊಡುವವನು ನಾನು. ಸಂಬಂಧ ಉಳಿದುಕೊಳ್ಳಬೇಕು ಎನ್ನುವುದೇ ನನ್ನ ಉದ್ದೇಶವಾಗಿತ್ತು. 'ಜೊತೆ ಜೊತೆಯಲಿ' ದಾಖಲೆ ಸೃಷ್ಟಿ ಮಾಡಿದ ಧಾರಾವಾಹಿ. ಆ ಧಾರಾವಾಹಿಗೆ ಹೀಗಾಗಬಾರದಿತ್ತು. ಈ ಧಾರಾವಾಹಿ ನಿರ್ದೇಶಕ ಆರೂರು ಜಗದೀಶ್ ಅವರ ಜೊತೆ ನಾನು ಮೂರು ವರ್ಷ ಎರಡು ತಿಂಗಳು ಕೆಲಸ ಮಾಡಿದ್ದೇನೆ. ಈ ಸಂಬಂಧ ಬಿರುಕು ಬಿಡಬಾರದಿತ್ತು. ಏನೋ ಕಾರಣದಿಂದ ಹಾಗೆ ಆಗಿಹೋಯಿತು. ಅದು ದುರಂತ. ನಾನು ಅಭಿಮಾನಿಗಳ ಬಳಿ ಕ್ಷಮೆ ಕೋರುತ್ತೇನೆ. ಝೀ ವಾಹಿನಿಗೆ ಒಳ್ಳೆಯದಾಗಲಿ. ಆರೂರು ಜಗದೀಶ್ ಅವರಿಗೆ ಒಳ್ಳೆಯದಾಗಲಿ' ಎಂದು ಜಗದೀಶ್ ಅವರನ್ನು ತಬ್ಬಿಕೊಂಡು ಭಾವುಕರಾದರು.

> **ಭಿನ್ನಾಭಿಪ್ರಾಯಗಳನ್ನು ಮರೆತು ಕೆಲಸ ಮಾಡಬೇಕು ಎನ್ನುವ ನಿರ್ಧಾರ ಮಾಡಲಾಗಿದೆ. ಯಾರು ಯಾರನ್ನೂ ಬಹಿಷ್ಕರಿಸಲು ಸಾಧ್ಯವಿಲ್ಲ. ಪ್ರಜಾಪ್ರಭುತ್ವದಲ್ಲಿ ನಮ್ಮ ಅನ್ನವನ್ನು ತಿನ್ನುವ ಹಕ್ಕು ನಮಗಿದೆ.**
> **ಪಿ.ಶೇಷಾದ್ರಿ,** ನಿರ್ದೇಶಕ

'ಉದಯ ವಾಹಿನಿಯಲ್ಲಿ ಪ್ರಸಾರವಾಗಲಿರುವ, ಎಸ್. ನಾರಾಯಣ್ ಅವರ ನಿರ್ದೇಶನದ ಹೊಸ ಧಾರಾವಾಹಿ 'ಸೂರ್ಯವಂಶ'ದಲ್ಲಿ ನಟಿಸುತ್ತಿದ್ದೇನೆ' ಎಂದು ಇದೇ ವೇಳೆ ಅವರು ಹೇಳಿದರು.

ನಿರ್ದೇಶಕ ಆರೂರು ಜಗದೀಶ್ ಮಾತನಾಡಿ, 'ಅನಿರುದ್ಧ ಅವರ ಮೇಲೆ ವೈಯಕ್ತಿಕವಾಗಿ ಯಾರಿಗೂ ಯಾವುದೇ ದ್ವೇಷವಿಲ್ಲ. ಹಿರಿಯರು ಕುಳಿತು ಹಳೆಯ ಘಟನೆಗಳಿಗೆ ಸುಖಾಂತ್ಯ ಹಾಡಿದ್ದಾರೆ. ಹಳೆಯ ಘಟನೆಗಳನ್ನು ಮರೆತು, ಎಲ್ಲರೂ ಒಳ್ಳೆಯ ದಾರಿಯಲ್ಲಿ, ಶಿಸ್ತಿನಿಂದ ಹೋದರೆ ಒಳ್ಳೆಯದು. ಅನಿರುದ್ಧ ಅವರ ಮುಂದಿನ ಬಣ್ಣದ ಪಯಣ ಒಳ್ಳೆಯದಾಗಲಿ' ಎಂದರು. 'ಜೊತೆ ಜೊತೆಯಲಿ' ಧಾರಾವಾಹಿಗೆ ಅನಿರುದ್ಧ ಅವರು ಮರಳುತ್ತಾರೆಯೇ ಎನ್ನುವ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಜಗದೀಶ್, 'ಮುಂದಿನ ದಿನಗಳಲ್ಲಿ ತೀರ್ಮಾನ ಮಾಡುತ್ತೇವೆ' ಎಂದಷ್ಟೇ ಹೇಳಿದರು.

ಈ ಸಭೆಗೂ ಮೊದಲು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ಅನಿರುದ್ಧ ಅವರು ಭೇಟಿ ನೀಡಿದ್ದರು. ಆ ಸಂದರ್ಭದಲ್ಲಿ ಮಾತನಾಡಿದ ಮಂಡಳಿಯ ಅಧ್ಯಕ್ಷ ಭಾ.ಮಾ.ಹರೀಶ್, 'ಅನಿರುದ್ಧ ಅವರಿಗೆ ಅನ್ಯಾಯ ಆಗಲು ವಾಣಿಜ್ಯ ಮಂಡಳಿ ಬಿಡುವುದಿಲ್ಲ. ಇಡೀ ಉದ್ಯಮ ಅನಿರುದ್ಧ ಅವರ ಜೊತೆಗೆ ಇರಲಿದೆ' ಎಂದಿದ್ದರು.

ಗಡಿನಾಡ ರಾಜ್ಯೋತ್ಸವ ಪ್ರಶಸ್ತಿಗೆ: 9 ಮಂದಿ ಆಯ್ಕೆ

ಬೆಂಗಳೂರು: ಕಾಸರಗೋಡಿನ ಗಡಿನಾಡ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿ ಕೊಡಮಾಡುವ 'ಗಡಿನಾಡ ಕನ್ನಡ ರಾಜ್ಯೋತ್ಸವ' ಪ್ರಶಸ್ತಿಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಸೇರಿ ವಿವಿಧ ಕ್ಷೇತ್ರಗಳ ಒಂಬತ್ತು ಸಾಧಕರು ಆಯ್ಕೆ ಆಗಿದ್ದಾರೆ.

ಆರತಿ ಕೃಷ್ಣ (ಸಮಾಜ ಸೇವೆ), ವೇದಮೂರ್ತಿ ಪಳ್ಳತಡ್ಕ ಪರಮೇಶ್ವರ ಭಟ್ಟ (ವೇದಾಧ್ಯಯನ), ಪಟ್ಲ ಸತೀಶ ಶೆಟ್ಟಿ (ಯಕ್ಷಗಾನ), ನಂದಳಿಕೆ ನಾರಾಯಣ ಶೆಟ್ಟಿ (ಸಾಹಿತ್ಯ), ಡಾ. ಜನಾರ್ದನ ನಾಯ್ಕ್ (ವೈದ್ಯಕೀಯ), ವಕೀಲ ಮೊಹ್ಮದ್ ಅಸ್ಗರ್ (ಕನ್ನಡ ಸೇವೆ), ಗಂಗಾಧರ ಆಳ್ವ, ಪೆರಡಾಲ (ಕೃಷಿ), ವಸಂತ ಆಳ್ವ, ತಲೆಕಳ (ಪರಿಸರ ಸಂರಕ್ಷಣೆ) ಮತ್ತು ಸಂಘ ಸಂಸ್ಥೆ ವಿಭಾಗದಲ್ಲಿ ಸೋಮೇಶ್ವರದ ಪಶ್ಚಿಮ್ ಚಾರಿಟಬಲ್ ಸಂಸ್ಥೆ ಪ್ರಶಸ್ತಿಗೆ ಆಯ್ಕೆಯಾಗಿದೆ.

ಪ್ರಶಸ್ತಿ ಪ್ರದಾನ ಸಮಾರಂಭ ಕಾಸರಗೋಡಿನಲ್ಲಿ ಭಾನುವಾರ (ಡಿ.11) ನಡೆಯಲಿದ್ದು, ಸಂಸದ ರಾಜಮೋಹನ ಉಣ್ಣಿತ್ತಾನ್, ಶಾಸಕರಾದ ಎನ್.ಎ. ನೆಲ್ಲಿಕುನ್ನು, ಸಿ.ಎಚ್. ಕುಂಞಂಬು, ಎ.ಕೆ. ಅಶ್ರಫ್, ಸಾಹಿತಿ ರಮಾನಂದ ಬನಾರಿ ಸೇರಿ ಪ್ರಮುಖರು ಭಾಗವಹಿಸಲಿದ್ದಾರೆ.

ಕವಿಗಳ ಸೃಷ್ಟಿಶೀಲ ಶಕ್ತಿಯೇ ಪತ್ನಿ: ಎಚ್.ಎಸ್.ವಿ

ಕೆ.ಎಸ್.ನರಸಿಂಹಸ್ವಾಮಿ ಟ್ರಸ್ಟ್ ವತಿಯಿಂದ ಕವಿ ಪತ್ನಿ ಗೌರವ 'ನಿನ್ನೊಲುಮೆಯಿಂದಲೇ' ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕವಿಗಳ ಮನಸ್ಸು ವಿಲಕ್ಷಣವಾದದ್ದು, ಅದು ಎಲ್ಲೆಲ್ಲೋ ಸಂಚರಿಸುತ್ತಿರುತ್ತದೆ. ಇಂತಹ ಉದ್ವಸ್ಥ ಮನಸ್ಸುಗಳನ್ನು ಸರಿದಾರಿಯಲ್ಲಿ ನಡೆಯುವಂತೆ ಮಾಡಿ ಸೃಷ್ಟಿಶೀಲ ಶಕ್ತಿ ತುಂಬುವ ಅವರ ಪತ್ನಿಯರ ಪಾತ್ರ ಬಹಳ ದೊಡ್ಡದು' ಎಂದು ಹಿರಿಯ ಕವಿ ಎಚ್.ಎಸ್. ವೆಂಕಟೇಶಮೂರ್ತಿ ಅಭಿಪ್ರಾಯಪಟ್ಟರು.

ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್ ವತಿಯಿಂದ ಕೆಎಸ್‌ನ ಪತ್ನಿ ವೆಂಕಮ್ಮನವರ ಸ್ಮರಣಾರ್ಥ ನೀಡಲಾಗುವ, 'ಕವಿ ಪತ್ನಿ ಗೌರವ ಪುರಸ್ಕಾರ'ವನ್ನು ಜೈನ್ ವಿಶ್ವವಿದ್ಯಾಲಯದ (ಡೀಮ್ಡ್ ಟು–ಬಿ) ಸ್ಕೂಲ್ ಆಫ್ ಹ್ಯೂಮ್ಯಾನಿಟಿ ಅಂಡ್ ಸೋಷಿಯಲ್ ಸೈನ್ಸ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಶನಿವಾರ ಜೈನ್ ವಿಶ್ವವಿದ್ಯಾಲಯದಲ್ಲಿ ಪ್ರದಾನ ಮಾಡಲಾಯಿತು.

ಗೌರವಕ್ಕೆ ಭಾಜನರಾದ ಸಮತಾ ಸತ್ಯಾನಂದ ಪಾತ್ರೋಟ ಹಾಗೂ ಗಿರಿಜಾ ಲಕ್ಷ್ಮಣರಾವ್ ಅವರನ್ನು ಪುರಸ್ಕರಿಸಿ ಮಾತನಾಡಿದ ಅವರು, 'ಕೆ.ಎಸ್.ನರಸಿಂಹ ಸ್ವಾಮಿ ಬರೆದ ಪ್ರೇಮ ಕವಿತೆಗಳೆಲ್ಲಾ ಅವರ ಪತ್ನಿಯ ಮೇಲಿನ ಪ್ರೇಮದಿಂದಲೇ ಬರೆದದ್ದಾಗಿದೆ. ಅವರು ಪ್ರೇಮ ಕವಿ ಅಲ್ಲ, ದಾಂಪತ್ಯ ಕವಿ. ಸಮಕಾಲೀನ ಬೇಂದ್ರೆ, ಪುತಿನ, ಬಿ.ಸಿ.ರಾಮಚಂದ್ರ ಶರ್ಮ, ಅಡಿಗರಿಗಿಂತಲೂ ಭಿನ್ನವಾಗಿ ಬರೆದವರು ಅವರು' ಎಂದರು.



'ನಿನ್ನೊಲುಮೆಯಿಂದಲೇ' ಕವಿ ಪತ್ನಿ ಗೌರವ ಪುರಸ್ಕಾರ ಸ್ವೀಕರಿಸಿದ ಸಮತಾ ಸತ್ಯಾನಂದ ಪಾತ್ರೋಟ, ಗಿರಿಜಾ ಲಕ್ಷ್ಮಣರಾವ್. ಹಿರಿಯ ಕವಿ ಎಚ್.ಎಸ್. ವೆಂಕಟೇಶಮೂರ್ತಿ, ಕೆಎಸ್‌ನ ಟ್ರಸ್ಟ್ ಆಡಳಿತಾಧಿಕಾರಿ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಬಿ.ಆರ್. ಲಕ್ಷ್ಮಣರಾವ್, ಸತ್ಯಾನಂದ ಪಾತ್ರೋಟ ಕೆ.ಎಸ್. ನರಸಿಂಹಸ್ವಾಮಿಯವರ ಪುತ್ರಿ ತುಂಗಭದ್ರಾ, ಹಾಗೂ ಮೇಖಲಾ ವೆಂಕಟೇಶ್, ಕಿಕ್ಕೇರಿ ಕೃಷ್ಣಮೂರ್ತಿ ಮತ್ತು ಇತರರು ಉಪಸ್ಥಿತರಿದ್ದರು. –ಪ್ರಜಾವಾಣಿ ಚಿತ್ರ

'ಗಂಡ–ಹೆಂಡತಿ ಜಗಳ ಫಲಪ್ರದವಾಗಿರಲಿ'

ಕವಿಗಳಿಗೆ ಪತ್ನಿಯರ ಸಹಕಾರ ಹೇಗಿರುತ್ತದೆ ಎಂಬುದನ್ನು ಉದಾಹರಿಸಿದ ಎಚ್.ಎಸ್. ವೆಂಕಟೇಶ ಮೂರ್ತಿ, 'ನನ್ನ ಸ್ನೇಹಿತರೊಬ್ಬರು ತುಂಬಾ ಉತ್ತಮವಾಗಿ ಕವಿತೆಗಳನ್ನು ಬರೆಯುತ್ತಿದ್ದರು. ಮದುವೆಯಾದ ಮೇಲೆ ಕವಿತೆ ಬರೆಯುವುದನ್ನೇ ನಿಲ್ಲಿಸಿಬಿಟ್ಟರು. ಅದೊಂದು ದಿನ ಸಿಕ್ಕಾಗ ಯಾಕೆ ಕವಿತೆ ಬರೆಯುತ್ತಿಲ್ಲ ಎಂದು ಕೇಳಿದೆ. ಅದಕ್ಕೆ ಅವರು, ನನ್ನ ಪತ್ನಿ 'ಸದಾ ಓದು, ಓದು, ಅವರಿವರು ಮನೆಗೆ ಬರುತ್ತಲೇ ಇರುತ್ತಾರೆ. ಅವರ ಜೊತೆಯೇ ನಿಮ್ಮ ಮಾತುಕತೆ, ನನ್ನೊಂದಿಗೆ ಮಾತನಾಡುವುದಿಲ್ಲ, ನಿಮ್ದು ಇದೇ ಆಗಿಹೋಯ್ತು. ಒಂದೋ ನೀವು ಇದನ್ನೆಲ್ಲಾ ಬಿಡಬೇಕು ಇಲ್ಲವೇ ನನ್ನನ್ನು ಬಿಡಬೇಕು' ಎಂದಳು. ನಾನು ಮೊದಲಿನದಕ್ಕೇ ಬದ್ಧನಾಗಿ ಉಳಿದಿದ್ದೇನೆ' ಎಂದು ವಿವರಿಸಿದ್ದನ್ನು ಸ್ಮರಿಸಿದರು.

'ಯಾವ ದಾಂಪತ್ಯವೂ ಅಸಮಾಧಾನಗಳಿಂದ ಹೊರತಾದುದಲ್ಲ, ಗಂಡ–ಹೆಂಡತಿ ಜಗಳ ಫಲಪ್ರದವಾಗಿರಬೇಕು. ಕೆಲವೊಮ್ಮೆ ಅನೇಕ ಕವಿಗಳ ಪತ್ನಿಯರು ತಮ್ಮ ಪತಿಯಂದಿರ ಕವಿಗನಸುಗಳನ್ನು ಹಿಸುಕಿ ಹಾಕುತ್ತಾರೆ' ಎಂದರು.

ಗೌರವ ಸ್ವೀಕರಿಸಿ ಮಾತನಾಡಿದ ಸಮತಾ, 'ನನ್ನ ಪತಿ ಸತ್ಯಾನಂದ ಪಾತ್ರೋಟ ಬರೆದಂತೆ ಬದುಕುತ್ತಿರುವ ಹಾಗೂ ಬದುಕಿದಂತೆ ಬರೆಯುತ್ತಿರುವ ಕವಿ. ಅವಮಾನವನ್ನು ಅವರೆಂದೂ ಸಹಿಸಿದವರಲ್ಲ. ಶೋಷಿತ ವರ್ಗದ ಕುಟುಂಬದಿಂದ ಬಂದಂತಹ ಕವಿ ಪತ್ನಿಗೆ ನೀಡುತ್ತಿರುವ ಈ ಗೌರವ ನನಗೆ ಸಂತಸ ಉಂಟುಮಾಡಿದೆ' ಎಂದರು.

ಬಿ.ಆರ್.ಲಕ್ಷ್ಮಣರಾವ್ ಪತ್ನಿ ಗಿರಿಜಾ, 'ನನಗಿದು ಬಯಸದೇ ಬಂದ ಭಾಗ್ಯ. ನಲವತ್ತೇಳು ವರ್ಷಗಳ ನಮ್ಮ ದಾಂಪತ್ಯದಲ್ಲಿ ನಾನು ನನ್ನ ಪತಿಗೆ ಯಾವ ಸಹಕಾರ ಮಾಡಿದ್ದೆನೊ ಗೊತ್ತಿಲ್ಲ. ಆದರೆ, ಎಂದೂ ತೊಂದರೆಯನ್ನಂತೂ ಉಂಟು ಮಾಡಿಲ್ಲ. ಅವರು 'ಇನ್ನಷ್ಟು ಬರೆಯಲಿ' ಎಂದು ಆಶಿಸಿದರು.

ಜೈನ್ ವಿವಿ ಉಪಕುಲಪತಿ ರಾಜ್ ಸಿಂಗ್, ರಜನಿ ಜೈರಾಮ್, ರೇಖಾ ಸಿನ್ಹಾ, ರಂಜನಿ ಪ್ರಭು, ಕವಿ ಎಚ್. ದುಂಡಿರಾಜ್, ವೆಂಕಟಗಿರಿ ದಳವಾಯಿ, ಎನ್.ಉದಯಕುಮಾರ್, ಇತರರು ಇದ್ದರು.

ಡಿ.14ಕ್ಕೆ ಉಚಿತ ಆರೋಗ್ಯ ತಪಾಸಣೆ

ಬೆಂಗಳೂರು: ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘವು ಲಯನ್ಸ್ ಕ್ಲಬ್ ಸಹಯೋಗದಲ್ಲಿ ಇದೇ 14ರಂದು ಬೆಳಿಗ್ಗೆ 10 ಗಂಟೆಗೆ ಕಬ್ಬನ್ ಉದ್ಯಾನದಲ್ಲಿರುವ ಸರ್ಕಾರಿ ನೌಕರರ ಭವನದ ಸಭಾಂಗಣದಲ್ಲಿ ಉಚಿತ ಆರೋಗ್ಯ ಹಾಗೂ ನೇತ್ರ ತಪಾಸಣೆ ಶಿಬಿರ ಹಮ್ಮಿಕೊಂಡಿದೆ ಎಂದು ಸಂಘದ ಅಧ್ಯಕ್ಷ ಎಲ್.ಭೈರಪ್ಪ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯ ಸರ್ಕಾರಿ ನಿವೃತ್ತ ನೌಕರರು ಹಾಗೂ ಅವರ ಕುಟುಂಬದ ಸದಸ್ಯರಿಗೆ ಕೂಡಲೇ ನಗದು ರಹಿತ ಆರೋಗ್ಯ ಭಾಗ್ಯ ಯೋಜನೆಯನ್ನು ಸರ್ಕಾರ ಜಾರಿಗೊಳಿಸಬೇಕು. ಇದು ಅನುಷ್ಠಾನವಾದರೆ, ರಾಜ್ಯದಲ್ಲಿರುವ 4.20 ಲಕ್ಷಕ್ಕೂ ಅಧಿಕ ನಿವೃತ್ತ ಪಿಂಚಣಿದಾರರು ಮತ್ತು ಅವರ ಕುಟುಂಬದವರಿಗೆ ಅನುಕೂಲವಾಗುತ್ತದೆ' ಎಂದರು.

ವಿಮಾನ ನಿಲ್ದಾಣಕ್ಕೆ ರೈಲು ಪ್ರಯಾಣಿಕರನ್ನು ಸೆಳೆಯಲು ನೈರುತ್ಯ ರೈಲ್ವೆ ಕಸರತ್ತು

ದೊಡ್ಡಜಾಲದಲ್ಲಿ ರೈಲು ನಿಲುಗಡೆಗೆ ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ರೈಲು ಪ್ರಯಾಣಿಕರನ್ನು ಸೆಳೆಯಲು ಕಸರತ್ತು ನಡೆಸುತ್ತಿರುವ ನೈರುತ್ಯ ರೈಲ್ವೆ, ದೊಡ್ಡಜಾಲ ಮತ್ತು ಬೆಟ್ಟಹಲಸೂರಿನಲ್ಲೂ ರೈಲುಗಳ ನಿಲುಗಡೆಗೆ ಚಿಂತನೆ ನಡೆಸಿದೆ.

ಸಿಟಿಜನ್ ಫಾರ್ ಸಿಟಿಜನ್(ಸಿ4ಸಿ) ಸಂಘಟನೆ ಇತ್ತೀಚೆಗೆ ನಡೆಸಿದ್ದ ಸರ್ವೆ ಪ್ರಕಾರ, ಈ ಮಾರ್ಗದಲ್ಲಿ ದಿನಕ್ಕೆ ಆರು ಮೆಮು ರೈಲುಗಳು ಸಂಚರಿಸುತ್ತಿದ್ದು, ಅಷ್ಟೂ ರೈಲುಗಳಲ್ಲಿ ದಿನಕ್ಕೆ ಸರಾಸರಿ 18 ಜನ ಪ್ರಯಾಣ ಮಾಡುತ್ತಿದ್ದಾರೆ ಎಂಬ ಅಂಶ ಬೆಳಕಿಗೆ ಬಂದಿತ್ತು.

ಪ್ರಯಾಣಿಕರ ಸಂಖ್ಯೆ ಹೆಚ್ಚಳ ಮಾಡಲು ಪ್ರಯಾಸ ಪಡುತ್ತಿರುವ ರೈಲ್ವೆ ಅಧಿಕಾರಿಗಳು, ದೊಡ್ಡಜಾಲ ಮತ್ತು ಬೆಟ್ಟಹಲಸೂರಿನಲ್ಲೂ ರೈಲುಗಳ ನಿಲುಗಡೆಗೆ ಉದ್ದೇಶಿಸಲಾಗಿದೆ ಎಂದು ತಿಳಿಸಿದ್ದಾರೆ.

'ಅಸ್ತಿತ್ವದಲ್ಲಿರುವ ರೈಲುಗಳ ಸೇವೆಗಳ ಆವರ್ತನ ಹೆಚ್ಚಳ ಮತ್ತು ವಿಮಾನ ನಿಲ್ದಾಣಕ್ಕೆ ರೈಲು ಸೇವೆ ವಿಸ್ತರಣೆ ಬಗ್ಗೆಯೂ ಪರಿಶೀಲಿಸಲಾಗುವುದು. ಇತರ ಸಾರಿಗೆ ವಿಧಾನಗಳಿಗೆ ಹೋಲಿಸಿದರೆ ಅಗ್ಗದ ದರದಲ್ಲಿ(₹30) ವಿಮಾನ ನಿಲ್ದಾಣ ತಲುಪಲು ಅವಕಾಶ ಇದೆ. ಈ ಸೇವೆಯನ್ನು ವಿಮಾನ ಪ್ರಯಾಣಿಕರು ಮತ್ತು ವಿಮಾನ ನಿಲ್ದಾಣದ ಉದ್ಯೋಗಿಗಳು ಬಳಸಿಕೊಳ್ಳಬೇಕು' ಎಂದು ಮನವಿ ಮಾಡಿದ್ದಾರೆ.



ವಿಮಾನ ನಿಲ್ದಾಣ ಬಳಿಯ ಹಾಲ್ಟ್ ಸ್ಟೇಷನ್

ಇದರ ನಡುವೆ ಈ ಮಾರ್ಗದ ರೈಲುಗಳ ವೇಗ ಹೆಚ್ಚಿಸಲೂ ಮುಂದಾಗಿದೆ. ಸದ್ಯ ಈ ಮಾರ್ಗದಲ್ಲಿ ಗಂಟೆಗೆ 80–90 ಕಿಲೋ ಮೀಟರ್ ವೇಗದಲ್ಲಿ ರೈಲುಗಳು ಸಂಚರಿಸುತ್ತಿವೆ. ಇದನ್ನು 100ರಿಂದ 110 ಕಿಲೋ ಮೀಟರ್‌ಗೆ ಹೆಚ್ಚಿಸಲು ಉದ್ದೇಶಿಸಲಾಗಿದೆ. ಚಿಕ್ಕಬಳ್ಳಾಪುರ- ಯಲಹಂಕ ನಡುವಿನ ರೈಲು ಹಳಿಗಳ ನವೀಕರಣ ಕಾರ್ಯ ನಡೆಯುತ್ತಿದೆ. ದೇವನಹಳ್ಳಿ–ಯಲಹಂಕ ನಡುವೆ ಎರಡೂವರೆ ಕಿ.ಮೀ ಕಾಮಗಾರಿ ಬಾಕಿ ಇದೆ ಎಂದು ನೈರುತ್ಯ ರೈಲ್ವೆ ಬೆಂಗಳೂರು ವಿಭಾಗೀಯ ಅಧಿಕಾರಿಗಳು ವಿವರಿಸಿದ್ದಾರೆ.

'ವಿಮಾನ ನಿಲ್ದಾಣದ ಬಳಿ ಇರುವ ಹಾಲ್ಟ್ ಸ್ಟೇಷನ್‌ನಲ್ಲಿ (ನಿಲಗಡೆ ತಾಣ) ನಿತ್ಯ ಎಂಟು ಡೆಮು ಮತ್ತು ಮೆಮು ರೈಲುಗಳ ನಿಲುಗಡೆಯಾಗುತ್ತಿವೆ. ಈ ಮಾರ್ಗದಲ್ಲಿ ಹಳಿಗಳ ನಿರ್ವಹಣೆ ಕಾರ್ಯ ನಡೆಯುತ್ತಿರುವುದರಿಂದ ಸಮಯದಲ್ಲಿ ಕೊಂಚ ವ್ಯತ್ಯಾಸ ಆಗುತ್ತಿದೆ. ಕಾಮಗಾರಿ ಪೂರ್ಣಗೊಂಡ ಬಳಿಕ ನಿಗದಿತ ವೇಳಾಪಟ್ಟಿಯಂತೆಯೇ ರೈಲುಗಳು ಕಾರ್ಯಾಚರಣೆ ಮಾಡಲಿವೆ' ಎಂದು ತಿಳಿಸಿದ್ದಾರೆ.

ಹಾಲ್ಟ್ ಸ್ಟೇಷನ್ ನಿರ್ವಹಣೆಗೆ ₹1 ಸಾವಿರ ಸಂಭಾವನೆ

ಹಾಲ್ಟ್ ಸ್ಟೇಷನ್(ಒಂದೇ ರೈಲು ನಿಲ್ಲಲು ಅವಕಾಶ ಇರುವ ನಿಲುಗಡೆ ತಾಣ) ನಿರ್ವಹಣೆ ಮಾಡಲು ತಿಂಗಳಿಗೆ ₹1 ಸಾವಿರದಿಂದ ₹1,500 ಸಂಭಾವನೆಯನ್ನು ನೈರುತ್ಯ ರೈಲ್ವೆ ನೀಡುತ್ತಿದೆ!

'ಬೆಳಿಗ್ಗೆ 6ರಿಂದ ರಾತ್ರಿ ಸುಮಾರು 8 ಗಂಟೆ ತನಕ ಕಾರ್ಯನಿರ್ವಹಿಸುವ ನೌಕರ, ದೇವನಹಳ್ಳಿ ನಿಲ್ದಾಣದಿಂದ ಟಿಕೆಟ್ ತಂದು ವಿತರಣೆ ಮಾಡುತ್ತಿದ್ದಾರೆ. ರೈಲು ಬಂದು ನಿಲುಗಡೆಯಾದ ಸಮಯ ದಾಖಲಿಸಿಕೊಳ್ಳುವುದು, ಟಿಕೆಟ್ ವಿತರಿಸುವುದೂ ಸೇರಿ ಸಂಪೂರ್ಣ ನಿರ್ವಹಣೆಯ ಹೊಣೆ ಅವರದ್ದೇ ಆಗಿದೆ. ತಿಂಗಳಿಗೆ ಇಷ್ಟು ಕಡಿಮೆ ಸಂಭಾವನೆ ದೊರೆತರೆ ಕೆಲಸ ಮಾಡಲು ಸಾಧ್ಯವೇ? ಹಾಲ್ಟ್ ಸ್ಟೇಷನ್‌ಗಳ ಸಂಖ್ಯೆ ಹೆಚ್ಚಿಸಲು ಇದು ಕೂಡ ತೊಡಕಾಗುತ್ತದೆ' ಎಂದು ಸಿಟಿಜನ್ ಫಾರ್ ಸಿಟಿಜನ್ ಸಂಸ್ಥಾಪಕ ರಾಜಕುಮಾರ್ ದುಗರ್ ಹೇಳಿದರು.

ಈ ಕುರಿತು ಪ್ರತಿಕ್ರಿಯಿಸಿದ ರೈಲ್ವೆ ಅಧಿಕಾರಿಗಳು, 'ಟಿಕೆಟ್ ಮಾರಾಟವನ್ನು ಅವರು ಕಮಿಷನ್ ಆಧಾರದಲ್ಲಿ ಮಾಡುತ್ತಾರೆ. ಹಾಗಾಗಿ ಸಂಭಾವನೆ ಕಡಿಮೆ ಇದೆ' ಎಂದರು. 'ವಿಮಾನ ನಿಲ್ದಾಣ ಬಳಿ ಹಾಲ್ಟ್ ಸ್ಟೇಷನ್‌ಗೆ ಜನರೇ ಬಾರದಾಗಿದ್ದು, ಟಿಕೆಟ್ ಮಾರಾಟದಿಂದ ಕಮಿಷನ್ ಬರುವುದು ಹೇಗೆ' ಎನ್ನುವುದು ರೈಲ್ವೆ ಹೋರಾಟಗಾರರ ಪ್ರಶ್ನೆ.

ಶಾಂತಿನಾಥ ದಿಬ್ಬದಗೆ 'ಶೆಟ್ಟರ್ ನುಡಿಗೌರವ'

ಬೆಂಗಳೂರು: ಅಭಿನವ ಪ್ರಕಾಶನ ನೀಡುವ 'ದೇವನಾಂಪ್ರಿಯ ಶೆಟ್ಟರ್ ನುಡಿಗೌರವ'ಕ್ಕೆ ವಿದ್ವಾಂಸ ಶಾಂತಿನಾಥ ದಿಬ್ಬದ ಆಯ್ಕೆಯಾಗಿದ್ದಾರೆ. ಈ ಪುರಸ್ಕಾರ ₹ 10 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ.



ಇತಿಹಾಸಕಾರ ಷ. ಶೆಟ್ಟರ್ ಅವರ ಸಾಂಸ್ಕೃತಿಕ ಧೀಮಂತಿಕೆಯನ್ನು ಗೌರವಿಸುವ ಸಲುವಾಗಿ ಅವರ ಜನ್ಮದಿನವನ್ನು 'ಕನ್ನಡ ಸಂಶೋಧನಾ ದಿನ'ವನ್ನಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಪ್ರಕಾಶನದ ಅಭಿನವ ರವಿಕುಮಾರ್ ತಿಳಿಸಿದ್ದಾರೆ.

ಇದೇ 11ರಂದು ಕನ್ನಡ ಸಂಶೋಧನಾ ದಿನಾಚರಣೆಯಂದು ಇತಿಹಾಸಕಾರ ಎಚ್.ಎಸ್. ಗೋಪಾಲರಾವ್ ಅವರು ನುಡಿಗೌರವವನ್ನು ಪ್ರದಾನ ಮಾಡಲಿದ್ದಾರೆ. ಇದೇ ವೇಳೆ ಷ. ಶೆಟ್ಟರ್ ಅವರ ಪ್ರಧಾನ ಸಂಪಾದಕತ್ವದ ಮತ್ತು ಎಸ್.ಎಲ್. ಶ್ರೀನಿವಾಸಮೂರ್ತಿ ಅವರು ಸಂಪಾದಿಸಿದ 'ಹಲ್ಮಿಡಿ ಶಾಸನ ಸಮಗ್ರ ಅಧ್ಯಯನ' ಕೃತಿ ಬಿಡುಗಡೆಯಾಗಲಿದೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ನಡುರಸ್ತೆಯಲ್ಲಿ ವಾಹನ ನಿಂತರೆ ಸಂಚಾರಕ್ಕೆ ತೊಂದರೆ • ಪ್ರಮುಖ ರಸ್ತೆ, ಜಂಕ್ಷನ್‌ಗಳಲ್ಲಿ ನಿತ್ಯದ ಗೋಳು

ಕೆಟ್ಟ ಭಾರಿ ವಾಹನ...ಸಂಚಾರ ವ್ಯವಸ್ಥೆ ಅಧ್ವಾನ

• ಸಂತೋಷ ಜಿಗಳಿಕೊಪ್ಪ



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಂಚಾರಕ್ಕೆ ಅನುಕೂಲ ಕಲ್ಪಿಸುವುದಕ್ಕಾಗಿ ಮೈಸೂರು ರಸ್ತೆಯಲ್ಲಿ ಶನಿವಾರ ಸಾರ್ವಜನಿಕರ ವಾಹನಗಳನ್ನು ಪೊಲೀಸರು ತಡೆದು ನಿಲ್ಲಿಸಿದ್ದರಿಂದ ಜೆ.ಸಿ. ರಸ್ತೆಯಲ್ಲಿ ವಿಪರೀತ ದಟ್ಟಣೆ ಉಂಟಾಯಿತು

– ಪ್ರಜಾವಾಣಿ ಚಿತ್ರ

ಬೆಂಗಳೂರು: ನಗರದ ಪ್ರಮುಖ ರಸ್ತೆ ಹಾಗೂ ಜಂಕ್ಷನ್‌ಗಳಲ್ಲಿ ಭಾರಿ ವಾಹನಗಳು ಹಲವು ಬಾರಿ ಕೆಟ್ಟು ನಿಲ್ಲುತ್ತಿದ್ದು, ಸಂಚಾರ ದಟ್ಟಣೆ ಸಮಸ್ಯೆ ಉಂಟಾಗುತ್ತಿದೆ. ತಾಂತ್ರಿಕ ಕಾರಣ ಹಾಗೂ ಡೀಸೆಲ್ ಖಾಲಿಯಾಗಿ ನಡುರಸ್ತೆಯಲ್ಲಿ ನಿಲ್ಲುವ ಭಾರಿ ವಾಹನಗಳಿಂದಾಗಿ ಜನರು ಕಿರಿಕಿರಿ ಅನುಭವಿಸುತ್ತಿದ್ದಾರೆ.

ನಗರದಲ್ಲಿ ಹೆಚ್ಚಿರುವ ದಟ್ಟಣೆ ನಿಯಂತ್ರಿಸುವ ಉದ್ದೇಶದಿಂದ ಭಾರಿ ವಾಹನಗಳ ಸಂಚಾರಕ್ಕೆ ಈಗಾಗಲೇ ನಿರ್ಬಂಧ ವಿಧಿಸಲಾಗಿದೆ. ಬೆಳಿಗ್ಗೆ 8ರಿಂದ 11 ಗಂಟೆವರೆಗೆ ಹಾಗೂ ಸಂಜೆ 4ರಿಂದ 8 ಗಂಟೆವರೆಗೆ ನಗರದಲ್ಲಿ ಸಂಚರಿಸದಂತೆ ಭಾರಿ ವಾಹನಗಳ ಮಾಲೀಕರಿಗೆ ವಿಶೇಷ ಕಮಿಷನರ್ ಎಂ.ಎ. ಸಲೀಂ ಎಚ್ಚರಿಕೆಯನ್ನೂ ನೀಡಿದ್ದಾರೆ.

ನಿರ್ಬಂಧಿತ ಅವಧಿ ಹೊರತುಪಡಿಸಿ ಉಳಿದ ಅವಧಿಯಲ್ಲಿ ಭಾರಿ ವಾಹನಗಳ ಸಂಚಾರ ಯಥಾಪ್ರಕಾರ ಮುಂದುವರಿದಿದೆ. ಸಂಚಾರಕ್ಕೆ ನಿಗದಿಪಡಿಸಿದ ಅವಧಿಯಲ್ಲೇ ಕೆಲವೆಡೆ ಭಾರಿ ವಾಹನಗಳು ಕೆಟ್ಟು ನಿಲ್ಲುತ್ತಿದ್ದು, ಇದು ಸಂಚಾರ ದಟ್ಟಣೆಗೆ ಕಾರಣವಾಗುತ್ತಿದೆ.

'ಮಲ್ಟಿ ಆಕ್ಸಲ್, ಆರ್ಟಿಕ್ಯುಲೇಟೆಡ್, ಟ್ರಕ್, ಲಾರಿಗಳು, ಬಸ್‌ಗಳು, ನಾಲ್ಕು ಚಕ್ರ ಹಾಗೂ ಮೂರು ಚಕ್ರ ಗೂಡ್ಸ್ ವಾಹನಗಳು ನಾನಾ ಕಾರಣಗಳಿಂದ ನಡುರಸ್ತೆಯಲ್ಲೇ ಬಂದ್ ಆಗಿ ನಿಲ್ಲುತ್ತಿವೆ. ಇವುಗಳ ತೆರವು ಕೆಲಸವೂ ತಡವಾಗುವುದರಿಂದ, ರಸ್ತೆಯಲ್ಲಿ ಸಾರ್ವಜನಿಕರ ವಾಹನಗಳು ಸಾಲುಗಟ್ಟಿ ನಿಲ್ಲಬೇಕಾದ ಸ್ಥಿತಿ ಇದೆ' ಎಂದು ಗೊರಗುಂಟೆಪಾಳ್ಯದ ಟೀ ಅಂಗಡಿ ಮಾಲೀಕ ಪ್ರಶಾಂತ್ ಹೇಳಿದರು.

ದೀಪಾಂಜಲಿನಗರದ ನಿವಾಸಿ ರಮೇಶ್, 'ಮೈಸೂರು ಕಡೆಯಿಂದ ಬರುವ ವಾಹನಗಳು, ಸ್ಯಾಟಲೈಟ್ ಬಸ್ ನಿಲ್ದಾಣ ಹಾಗೂ ವಿಜಯನಗರ ರಸ್ತೆ ಮೂಲಕ ಬೆಂಗಳೂರು ನಗರದೊಳಗೆ ಹೋಗುತ್ತದೆ. ಮಾರ್ಗಮಧ್ಯೆಯೇ ಕೆಲ ಭಾರಿ ವಾಹನಗಳು ಕೆಟ್ಟು ನಿಲ್ಲುತ್ತಿದ್ದು, ಅರ್ಧ ರಸ್ತೆಯನ್ನು ಆವರಿಸುತ್ತಿವೆ. ಇನ್ನರ್ಧ ರಸ್ತೆಯಲ್ಲಿ ಇತರೆ ವಾಹನಗಳು ಸಂಚರಿಸುತ್ತಿವೆ. ವಾಹನಗಳ ಸಂಖ್ಯೆ ಹೆಚ್ಚಿದ್ದರಿಂದ ಸಂಚಾರಕ್ಕೆ ತೊಂದರೆ ಆಗುತ್ತಿದೆ' ಎಂದರು.


'ಸರಕು ಸಾಗಣೆಯ ಭಾರಿ ವಾಹನಗಳು ಮಾತ್ರವಲ್ಲದೇ, ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ಬಸ್‌ಗಳೂ ಕೆಟ್ಟು ನಿಂತಿರುವ ಉದಾಹರಣೆಗಳಿವೆ. ಭಾರಿ ವಾಹನಗಳ ಸಂಚಾರವನ್ನು ಕೆಲ ಅವಧಿಯಲ್ಲಿ ನಿರ್ಬಂಧ ಮಾಡಿರುವುದು ಒಳ್ಳೆಯದು. ಆದರೆ, ನಿಗದಿತ ಅವಧಿಯಲ್ಲಿ ಸಂಚಾರದ ವೇಳೆ ಕೆಟ್ಟು ನಿಲ್ಲುವ ಭಾರಿ ವಾಹನಗಳ ಕಥೆ ಏನು? ಇಂಥ ವಾಹನಗಳನ್ನು ತ್ವರಿತವಾಗಿ ತೆರವು ಮಾಡುವ ಕೆಲಸವೂ ಆಗಬೇಕಿದೆ' ಎಂದು ಅವರು ಹೇಳಿದರು.

ಹೆದ್ದಾರಿ ಸಂಪರ್ಕಿಸುವ ರಸ್ತೆಯಲ್ಲಿ ಹೆಚ್ಚು ದಟ್ಟಣೆ: 'ತುಮಕೂರು ರಸ್ತೆ, ಮೈಸೂರು ರಸ್ತೆ, ಕನಕಪುರ ರಸ್ತೆ, ಮಾಗಡಿ ರಸ್ತೆ ಸೇರಿ ಬೆಂಗಳೂರಿಗೆ ಸಂಪರ್ಕ ಕಲ್ಪಿಸುವ ಎಲ್ಲ ಪ್ರಮುಖ ರಸ್ತೆಗಳಲ್ಲಿ ನಿತ್ಯವೂ ವಾಹನಗಳ ಓಡಾಟ ಹೆಚ್ಚಿರುತ್ತದೆ. ಇಂಥ ಅವಧಿಯಲ್ಲಿ ಭಾರಿ ವಾಹನಗಳು ಕೆಟ್ಟು ನಿಂತರೆ, ದಟ್ಟಣೆ ಸಮಸ್ಯೆ ವಿಪರೀತವಾಗುತ್ತದೆ' ಎಂದು ಸಂಚಾರ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ವಾಹನಗಳು ಗಾತ್ರದಲ್ಲಿ ದೊಡ್ಡದಾಗಿರುವುದರಿಂದ, ಅವುಗಳನ್ನು ತ್ವರಿತವಾಗಿ ರಸ್ತೆಯಿಂದ ತೆರವುಗೊಳಿಸಲು ಸಾಧ್ಯವಾಗುವುದಿಲ್ಲ. ಕ್ರೇನ್ ತರಬೇಕು. ಸಾಲುಗಟ್ಟಿ ನಿಲ್ಲುವ ವಾಹನಗಳ ನಡುವೆ ಸ್ಥಳಕ್ಕೆ ಕ್ರೇನ್ ವಾಹನ ತರಲು ಗಂಟೆಗಟ್ಟಲೇ ಸಮಯ ಬೇಕಾಗುತ್ತದೆ. ವಾಹನ ತೆರವು ಮಾಡುವವರೆಗೂ ದಟ್ಟಣೆ ಸಮಸ್ಯೆ ನಿವಾರಣೆಯಾಗುವುದಿಲ್ಲ. ಸಿಬ್ಬಂದಿ ಕೊರತೆ ಇದ್ದರಂತೂ ವಾಹನ ತೆರವು ಸಾಹಸವೇ ಸರಿ' ಎಂದು ತಿಳಿಸಿದರು.

'ನಿಗದಿತ ಅವಧಿಯಲ್ಲಿ ನಗರ ಪ್ರವೇಶಿಸುವ ಭಾರಿ ವಾಹನಗಳು, ಇದಕ್ಕಿದ್ದಂತೆ ಕೆಟ್ಟು ನಿಲ್ಲುತ್ತವೆ. ನಿರ್ಬಂಧಿತ ಅವಧಿಯಲ್ಲೂ ಅಂಥ ವಾಹನಗಳು ರಸ್ತೆ ಮೇಲೆಯೇ ಇರುತ್ತದೆ. ಈ ಸಂದರ್ಭದಲ್ಲಿ ಸಾರ್ವಜನಿಕರ ವಾಹನಗಳ ಓಡಾಟ ಹೆಚ್ಚಾಗುತ್ತದೆ. ಆಗ ದಟ್ಟಣೆ ಸಾಮಾನ್ಯವಾಗಿ, ಜನ ಸಂಚಾರಕ್ಕೆ ತೊಂದರೆ ಆಗುತ್ತದೆ' ಎಂದು ಹೇಳಿದರು.

'ಪ್ರತಿಯೊಂದು ಜಂಕ್ಷನ್ ಹಾಗೂ ಪ್ರಮುಖ ರಸ್ತೆಗಳಲ್ಲಿ ಕೆಟ್ಟು ನಿಲ್ಲುವ ಭಾರಿ ವಾಹನಗಳನ್ನು ತ್ವರಿತವಾಗಿ ತೆರವು ಮಾಡಲು ಒತ್ತು ನೀಡುವಂತೆ ಸಿಬ್ಬಂದಿಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ. ಆದರೆ, ಎಲ್ಲ ಕಡೆಯೂ ತ್ವರಿತವಾಗಿ ವಾಹನ ತೆರವು ಸಾಧ್ಯವಾಗುತ್ತಿಲ್ಲ' ಎಂದು ತಿಳಿಸಿದರು.



ಅಂಕಿ-ಅಂಶಗಳು



1.04 ಕೋಟಿ — ಬೆಂಗಳೂರಿನಲ್ಲಿ ನೋಂದಣಿಯಾದ ಒಟ್ಟು ವಾಹನಗಳು

2.15 ಲಕ್ಷ — ಬೆಂಗಳೂರಿನಲ್ಲಿ ನೋಂದಣಿಯಾದ ಭಾರಿ ವಾಹನಗಳು

2.84 ಕೋಟಿ — ಕರ್ನಾಟಕದಲ್ಲಿ ನೋಂದಣಿಯಾದ ಒಟ್ಟು ವಾಹನಗಳು

8.08 ಲಕ್ಷ — ಕರ್ನಾಟಕದಲ್ಲಿ ನೋಂದಣಿಯಾದ ಭಾರಿ ವಾಹನಗಳು

ಜನ ಅನುಭವಿಸಿದ ಕಿರಿಕಿರಿ

ಸಂಪಂಗಿರಾಮನಗರದಲ್ಲಿ ದಟ್ಟಣೆ ಸಮಸ್ಯೆ ಬಗೆಹರಿಸಿ

ಸಂಪಂಗಿರಾಮನಗರದಲ್ಲಿ ಅನಧಿಕೃತವಾಗಿ ಕೊರಿಯರ್ ಮಳಿಗೆಗಳು ಆರಂಭಗೊಂಡಿದ್ದು, ಮಳಿಗೆಗಳಿಗೆ ಬರುವವರು ತಮ್ಮ ವಾಹನಗಳನ್ನು ರಸ್ತೆಯಲ್ಲಿ ಅಡ್ಡಾದಿಡ್ಡಿಯಾಗಿ ನಿಲ್ಲಿಸುತ್ತಿದ್ದಾರೆ. ಕೊರಿಯರ್ ಬಾಕ್ಸ್‌ಗಳನ್ನು ತೆಗೆದುಕೊಂಡು ಹೋಗುವ ಗೂಡ್ಸ್ ವಾಹನಗಳನ್ನು ಸಹ ರಸ್ತೆಯ ಮಧ್ಯದಲ್ಲಿ ನಿಲ್ಲಿಸಲಾಗುತ್ತಿದೆ. ಇದರಿಂದಾಗಿ ಸ್ಥಳೀಯ ನಿವಾಸಿಗಳ ಸಂಚಾರಕ್ಕೆ ತೊಂದರೆ ಆಗುತ್ತಿದೆ. ದಟ್ಟಣೆ ಸಮಸ್ಯೆಯೂ ಉಲ್ಬಣಿಸಿದೆ. ಮಕ್ಕಳು, ವೃದ್ಧರು ಭಯದಲ್ಲಿ ಸಂಚರಿಸುವಂತಾಗಿದೆ. ಸಂಚಾರ ಸಮಸ್ಯೆ ಬಗ್ಗೆ ಪೊಲೀಸರಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ.

ಸಿ. ಗಣೇಶ್ ಬಾಬು, ಸಂಪಂಗಿರಾಮನಗರ

ಮೈಸೂರು ರಸ್ತೆ: ಅನಧಿಕೃತ ನಿಲುಗಡೆಯಿಂದ ದಟ್ಟಣೆ

ಮೈಸೂರು ರಸ್ತೆಯಲ್ಲಿ ದೀಪಾಂಜಲಿನಗರದಿಂದ ಸಿರ್ಸಿ ವೃತ್ತ ಮೇಲ್ಸೇತುವೆವರೆಗೂ ಲಾರಿ ಹಾಗೂ ಇತರೆ ಗೂಡ್ಸ್ ವಾಹನಗಳನ್ನು ಅಡ್ಡಾದಿಡ್ಡಿಯಾಗಿ ನಿಲ್ಲಿಸಲಾಗುತ್ತದೆ. ಇದರಿಂದಾಗಿ ಇತರೆ ವಾಹನಗಳ ಸಂಚಾರಕ್ಕೆ ತೊಂದರೆ ಆಗುತ್ತಿದ್ದು, ನಿತ್ಯವೂ ದಟ್ಟಣೆ ಉಂಟಾಗುತ್ತಿದೆ. ದೂಳು ಹಾಗೂ ವಾಹನಗಳ ಹೊಗೆಯಿಂದ ಸ್ಥಳೀಯರು ನಾನಾ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ರಸ್ತೆಯಲ್ಲಿ ಅನಧಿಕೃತವಾಗಿ ಭಾರಿ ವಾಹನಗಳನ್ನು ನಿಲ್ಲಿಸುವವರ ವಿರುದ್ಧ ಪೊಲೀಸರು ಕ್ರಮ ಜರುಗಿಸಬೇಕು.

ಆನಂದ್, ಸಪ್ತಗಿರಿ ನಗರ

ಸಂಚಾರ ಕಿರಿಕಿರಿ; ಸೂಚಿಸಿ ಪರಿಹಾರ

ಸಂಚಾರ ಕಿರಿಕಿರಿ ಹಾಗೂ ದಟ್ಟಣೆಯಲ್ಲಿ ಸಿಲುಕಿ ಗೋಳು ಅನುಭವಿಸುತ್ತಿದ್ದೀರಾ? ಹಾಗಿದ್ದರೆ ನಿಮ್ಮ ಸಮಸ್ಯೆ ಬರೆದು ಕಳುಹಿಸಿ. ಅದಕ್ಕೆ ಕ್ರಿಯಾತ್ಮಕ ಪರಿಹಾರವಿದ್ದಲ್ಲಿ ಅದನ್ನೂ ಸೂಚಿಸಿ. ನಿಮ್ಮ ಬರಹ 50 ಪದಗಳ ಮಿತಿಯಲ್ಲಿರಲಿ. ಯಾವ ಸ್ಥಳದಲ್ಲಿ ಸಮಸ್ಯೆ ಇದೆ ಎನ್ನುವುದನ್ನು ಸ್ಪಷ್ಟವಾಗಿ ನಮೂದಿಸಿ. ನಿಮ್ಮ ಹೆಸರು, ಪೂರ್ಣ ವಿಳಾಸವೂ ಇರಲಿ.

ವಾಟ್ಸ್‌ಆ್ಯಪ್ ನಂಬರ್:

9606038256

ಸುದ್ದಿ 2 ನಿಮಿಷ

ಸೌರ ಗೃಹ: 1,500 ಅರ್ಜಿ ಸಲ್ಲಿಕೆ

ಬೆಂಗಳೂರು: ಹಸಿರು ಇಂಧನ ಬಳಕೆಗೆ ಉತ್ತೇಜನ ನೀಡಲು ಕೇಂದ್ರ ಸರ್ಕಾರ ಜಾರಿಗೆ ತಂದಿರುವ 'ಸೋಲಾರ್ ರೂಫ್ ಟಾಪ್ ಹಂತ 2' ಯೋಜನೆಗೆ ಬೆಸ್ಕಾಂ ಚಾಲನೆ ನೀಡಿದೆ. ಗ್ರಾಹಕರು ತಮ್ಮ ಮನೆಯ ಚಾವಣಿಯಲ್ಲಿ ಸೋಲಾರ್ ಘಟಕಗಳ ಅಳವಡಿಕೆ ಮಾಡಿಕೊಳ್ಳಬಹುದು ಎಂದು ಬೆಸ್ಕಾಂ ಮಾಹಿತಿ ನೀಡಿದೆ.

ಸೋಲಾರ್ ಘಟಕಗಳನ್ನು ಅಳವಡಿಸಿಕೊಳ್ಳಲು ಬೆಸ್ಕಾಂಗೆ 1,500 ಅರ್ಜಿಗಳು ಸಲ್ಲಿಕೆಯಾಗಿವೆ. 'ಸೌರ ಗೃಹ' ಹೆಸರಿನಲ್ಲಿ ಬೆಸ್ಕಾಂ ವ್ಯಾಪ್ತಿಯಲ್ಲಿ ಯೋಜನೆ ಅನುಷ್ಠಾನವಾಗುತ್ತಿದೆ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

ಸೌರಗೃಹ ಯೋಜನೆಯ ಉಪಯೋಗ ಪಡೆಯುವ ಗ್ರಾಹಕರಿಗೆ ಗರಿಷ್ಠ 3 ಕಿಲೊ ವಾಟ್ ಸಾಮರ್ಥ್ಯದ ಸೋಲಾರ್ ಘಟಕಗಳಿಗೆ ಶೇ 40ರಷ್ಟು ಸಹಾಯಧನ, 10 ಕಿ.ವಾ. ಸಾಮರ್ಥ್ಯದವರೆಗಿನ ಸೋಲಾರ್ ಘಟಕಗಳಿಗೆ ಶೇ 40ರ ಜತೆಗೆ ಶೇ 20ರಷ್ಟು ಹೆಚ್ಚುವರಿ ಸಹಾಯಧನ ಕೇಂದ್ರ ಸರ್ಕಾರದಿಂದ ನೀಡಲಾಗುವುದು ಎಂದಿದ್ದಾರೆ.

ಸಮುಚ್ಚಯಗಳ ಚಾವಣಿಗಳ ಸಾಮಾನ್ಯ ಸೌಲಭ್ಯಗಳಾದ ಲಿಫ್ಟ್, ಮೋಟರ್ ಮತ್ತು ಲೈಟ್‌ಗಳಿಗೆ ಸೋಲಾರ್ ಘಟಕಗಳ ಸ್ಥಾಪನೆ ಸಾಮರ್ಥ್ಯವನ್ನು ಗರಿಷ್ಠ 500 ಕಿ.ವಾಗೆ ಸೀಮಿತಗೊಳಿಸಲಾಗಿದೆ ಎಂದಿದ್ದಾರೆ.

ಕಕ್ಷಿದಾರರಿಗೆ ಸಕಾಲದಲ್ಲಿ ನ್ಯಾಯ ಸಿಗಲಿ: ಸಂತೋಷ್ ಹೆಗ್ಡೆ



ಪೀಣ್ಯ ದಾಸರಹಳ್ಳಿ: ಕಕ್ಷಿದಾರರಿಗೆ ಸಕಾಲದಲ್ಲಿ ನ್ಯಾಯ ಒದಗಿಸಲು ನ್ಯಾಯಾಲಯಗಳು ಬದ್ಧತೆಯಿಂದ ಕಾರ್ಯನಿರ್ವಹಿಸಬೇಕು ಎಂದು ನಿವೃತ್ತ ಲೋಕಾಯುಕ್ತ ನ್ಯಾ. ಸಂತೋಷ್ ಹೆಗ್ಡೆ ಹೇಳಿದರು.

ಸಿಡೇದಹಳ್ಳಿಯ ಸೌಂದರ್ಯ ಕಾನೂನು ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ 'ನ್ಯಾಯಕ್ಕೆ ಸುಗಮ ಹಾದಿ' ಸಂವಾದದಲ್ಲಿ ಅವರು ಮಾತನಾಡಿದರು.

'ವಿಶ್ವದಲ್ಲೇ ಭಾರತೀಯ ನ್ಯಾಯಾಂಗ ವ್ಯವಸ್ಥೆ ಅತ್ಯುತ್ತಮವಾಗಿದೆ. ಆದರೆ ನಿಧಾನಗತಿಯ ನ್ಯಾಯದಾನದಿಂದ ಕಕ್ಷಿದಾರರು ಪರಿತಪಿಸುವಂತಾಗಿದೆ. ಸಾಮಾನ್ಯ ಪ್ರಕರಣಗಳಿಗೂ ಹತ್ತಾರು ವರ್ಷ ನ್ಯಾಯಾಲಯಗಳಿಗೆ ಅಲೆದಾಡುವ ಪರಿಸ್ಥಿತಿಯಿದೆ. ಇದನ್ನು ತಪ್ಪಿಸಲು ನ್ಯಾಯಾಲಯಗಳಲ್ಲಿ ಕಾರ್ಯನಿರ್ವಹಿಸುವವರು ಪ್ರಾಮಾಣಿಕವಾಗಿ ದುಡಿಯಬೇಕು. ಜತೆಗೆ ಸಣ್ಣಪುಟ್ಟ ವ್ಯಾಜ್ಯಗಳಿಗೆ ನ್ಯಾಯಾಲಯಗಳಲ್ಲಿ ದಾವೆ ಹೂಡುವುದನ್ನು ನಿಲ್ಲಿಸಿ, ನ್ಯಾಯಾಲಯಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡಬೇಕು' ಎಂದು ಸಲಹೆ ನೀಡಿದರು.

'ಸರ್ಕಾರಿ ಉದ್ಯೋಗಿಗಳು ನೈತಿಕ ಮೌಲ್ಯಗಳೊಂದಿಗೆ ಜನಸಾಮಾನ್ಯರಿಗೆ ಕೆಲಸ ಮಾಡಿಕೊಡಬೇಕು. ಅಭಿವೃದ್ಧಿಗೆ ಮಾರಕವಾಗಿರುವ ಭ್ರಷ್ಟಾಚಾರ ನಿರ್ಮೂಲನೆಗೆ ಯುವ ಸಮೂಹ ಪಣತೊಡಬೇಕು' ಎಂದರು.

ಚಿತ್ರಾವಳಿ



ಕರ್ನಾಟಕ ಸಾಬೂನು ಹಾಗೂ ಮಾರ್ಜಕ ಸಂಸ್ಥೆಯು 2021–22ನೇ ಸಾಲಿನಲ್ಲಿ ₹ 241 ಕೋಟಿ ಲಾಭ ಗಳಿಸಿದ್ದು, ₹ 41.36 ಕೋಟಿ ಲಾಭಾಂಶದ ಚೆಕ್ ಅನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಂಸ್ಥೆಯ ಅಧ್ಯಕ್ಷ ಕೆ. ಮಾಡಾಳ್ ವಿರೂಪಾಕ್ಷಪ್ಪ ಅವರು ಹಸ್ತಾಂತರಿಸಿದರು. ವ್ಯವಸ್ಥಾಪಕ ನಿರ್ದೇಶಕ ಡಾ.ಮಹೇಶ್, ಪ್ರಧಾನ ವ್ಯವಸ್ಥಾಪಕ (ಹಣಕಾಸು) ಅವಿನಾಶ್ ಹಾಜರಿದ್ದರು



ದೆಹಲಿ ಪಾಲಿಕೆ ಹಾಗೂ ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಎಎಪಿ ಅಭ್ಯರ್ಥಿಗಳು ಗೆಲುವು ಸಾಧಿಸಿರುವುದರಿಂದ ಕೆ.ಆರ್‌.ಪುರ ಸಮೀಪದ ಕಾಡುಗುಡಿಯಲ್ಲಿ ಮಹದೇವಪುರ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಪಿ.ಮುನೇಂದ್ರ, ಶೆಡ್ ವಾಸಿಗಳಿಗೆ ಸಿಹಿ, ಸೀರೆ ವಿತರಿಸಿದರು. ಜಂಟಿ ಕಾರ್ಯದರ್ಶಿ ಪಾರ್ಥಸಾರಥಿ, ಯುವ ಮುಖಂಡ ರಿಯಾಜ್, ಮಂಜುನಾಥ್ ಪಾಲ್ಗೊಂಡಿದ್ದರು

'ಕಲ್ಯಾಣ ಕ್ರಾಂತಿ'ಯಲ್ಲಿ ಕಾಂಗ್ರೆಸ್ ಶಕ್ತಿ ಪ್ರದರ್ಶನ

ಪ್ರಜಾವಾಣಿ ವಾರ್ತೆ



ಎಐಸಿಸಿ ನೂತನ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕಲಬುರಗಿಯಲ್ಲಿ ಅಭಿಮಾನಿಗಳತ್ತ ಕೈಬೀಸಿದರು. ಕೆ.ಎಚ್. ಮುನಿಯಪ್ಪ, ಬಿ.ಕೆ.ಹರಿಪ್ರಸಾದ್, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಎಂ.ಬಿ.ಪಾಟೀಲ ಇದ್ದರು –ಪ್ರಜಾವಾಣಿ ಚಿತ್ರ

ಕಲಬುರಗಿ: ಅಪಾರ ಜನಸ್ತೋಮದ ಸಮ್ಮುಖದಲ್ಲಿ ನಡೆದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಅಭಿನಂದನೆ ಸಮಾರಂಭವನ್ನು, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಒಗ್ಗಟ್ಟು ಮತ್ತು ಶಕ್ತಿ ಪ್ರದರ್ಶನದ ವೇದಿಕೆಯಾಗಿ ಪಕ್ಷದ ನಾಯಕರು ಯಶಸ್ವಿಯಾಗಿ ಬಳಸಿಕೊಂಡರು.

ಇಲ್ಲಿನ ನೂತನ ವಿದ್ಯಾಲಯ ಮೈದಾನದಲ್ಲಿ ಏರ್ಪಡಿಸಿದ್ದ 'ಕಲ್ಯಾಣ ಕ್ರಾಂತಿ' ಕಾರ್ಯಕ್ರಮದಲ್ಲಿ ನಡೆದ ಖರ್ಗೆ ಅವರ ಅಭಿನಂದನೆಗೆ ಅಸಂಖ್ಯ ಕಾರ್ಯಕರ್ತರು, ಜನರು ಸಾಕ್ಷಿಯಾದರು. ಸಮಾವೇಶಕ್ಕೆ ಖರ್ಗೆ ಅವರನ್ನು ಬೃಹತ್ ಮೆರವಣಿಗೆಯಲ್ಲಿ ಕರೆತರಲಾಯಿತು.

ತೆರೆದ ವಾಹನದಲ್ಲಿ ಖರ್ಗೆ ಅವರೊಂದಿಗೆ ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಶಾಸಕ ಡಾ.ಜಿ.ಪರಮೇಶ್ವರ, ಕೇಂದ್ರದ ಮಾಜಿ ಸಚಿವ ಕೆ.ಎಚ್.ಮುನಿಯಪ್ಪ, ವಿಧಾನ ಪರಿಷತ್ ವಿರೋಧಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್, ಪಕ್ಷದ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ ಸೇರಿದಂತೆ ಹಲವರು ಪಾಲ್ಗೊಂಡರು.

ಕಾರ್ಯಕರ್ತರು ಹಾಗೂ ಅಭಿಮಾನಿಗಳು ಮೆರವಣಿಗೆಯುದ್ದಕ್ಕೂ ಖರ್ಗೆ ಅವರಿಗೆ ಜಯಘೋಷ ಮೊಳಗಿಸಿದರು. ಮೆರವಣಿಗೆಯು ಚಾಲನೆಗೊಳ್ಳುವ ಸಂದರ್ಭದಲ್ಲಿ ಹೆಲಿಕಾಪ್ಟರ್ ಮೂಲಕ ಖರ್ಗೆ ಹಾಗೂ ಇತರ ಮುಖಂಡರ ಮೇಲೆ ಪುಷ್ಪವೃಷ್ಟಿಯಾಯಿತು. ಮೆರವಣಿಗೆಯು ಜಗತ್ ವೃತ್ತಕ್ಕೆ ತಲುಪಿದಾಗ ಕ್ರೇನ್‌ನಿಂದ ಬೃಹತ್ ಹಾರವನ್ನು ಮುಖಂಡರಿಗೆ ಹಾಕಲಾಯಿತು.

> **ಮೋದಿ, ಅಮಿತ್ ಶಾ ಜನರ ಬಳಿ ಹೋಗಿ ಮತ ಸೆಳೆಯುವ ಕೆಲಸ ಮಾಡುತ್ತಿದ್ದಾರೆ. ನಾವೂ ಜನರ ಬಳಿಗೆ ಹೋಗಬೇಕು. ಬಾಯಿಗೆ ಬಂದ ತುತ್ತನ್ನು ಕೈಗೆ ತೆಗೆದುಕೊಂಡು ಬಿಸಾಡಬಾರದು**
>
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

ಸಮಾವೇಶದಲ್ಲಿ ಮಾತನಾಡಿದ ಖರ್ಗೆ, 'ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರಾಜ್ಯದಲ್ಲಿ ಖಾಲಿ ಇರುವ ಎಲ್ಲ ಹುದ್ದೆಗಳನ್ನು ಭರ್ತಿ ಮಾಡಲಿದೆ. ಈ ಬೇಡಿಕೆಯನ್ನು ಈಡೇರಿಸದವರು ಮುಖ್ಯಮಂತ್ರಿಯಾಗಿ ಮುಂದುವರೆಯುವುದಿಲ್ಲ' ಎಂದು ಘೋಷಿಸಿದರು.

'ಸಿ.ಎಂ ಯಾರಾಗಬೇಕು ಎಂದು ಹೈಕಮಾಂಡ್ ನಿರ್ಧರಿಸಲಿದೆ. ನಾವು ಒಂದಾಗಿ ಕೆಲಸ ಮಾಡದಿದ್ದರೆ ಜನರಿಗೆ ಮೋಸ ಮಾಡಿದಂತಾಗುತ್ತದೆ. ಅವರು ಬೇಡ, ಇವರು ಬೇಡ ಎನ್ನುವುದಿಲ್ಲ. ನನಗೆ ಬೇಕಾಗಿದ್ದು ಕಾಂಗ್ರೆಸ್ ಪಕ್ಷದ ಸರ್ಕಾರ' ಎಂದರು.

ಸಂಕ್ಷಿಪ್ತ ಸುದ್ದಿ

ಬಸ್–ಕಾರು ಡಿಕ್ಕಿ ಬೆಂಗಳೂರಿನ ಮೂವರ ಸಾವು

ಮೂಡುಬಿದಿರೆ (ದಕ್ಷಿಣ ಕನ್ನಡ): ತಾಲ್ಲೂಕಿನ ನೆಲ್ಲಿಕಾರು ಮೈನೇರು ಬಳಿ ಶನಿವಾರ ಬೆಳಿಗ್ಗೆ ಕಾರು–ಬಸ್ ಮುಖಾಮುಖಿ ಡಿಕ್ಕಿ ಸಂಭವಿಸಿ, ಒಂದೂವರೆ ವರ್ಷದ ಮಗು ಸಹಿತ ಮೂವರು ಮೃತಪಟ್ಟಿದ್ದಾರೆ.

ಆಂಧ್ರಪ್ರದೇಶ ಮೂಲದ, ಬೆಂಗಳೂರಿನಲ್ಲಿ ವಾಸವಾಗಿದ್ದ ಶ್ರೀಕಾಂತ್ (42), ಅವರ ಪತ್ನಿ ಪೃಥ್ವಿಶಾ (35) ಹಾಗೂ ಒಂದೂವರೆ ವರ್ಷದ ಪುತ್ರಿ ಗಮ್ಯ ಮೃತಪಟ್ಟವರು. ದಂಪತಿ ಇಬ್ಬರೂ ಸಾಫ್ಟ್‌ವೇರ್ ಎಂಜಿನಿಯರ್‌ಗಳು. ಜಿಲ್ಲೆಯ ವಿವಿಧ ಧಾರ್ಮಿಕ ಕ್ಷೇತ್ರಗಳ ದರ್ಶನಕ್ಕೆ ಬಂದಿದ್ದರು ಎಂದು ತಿಳಿದುಬಂದಿದೆ.

ಶನಿವಾರ ಬೆಳಿಗ್ಗೆ ಬೆಳ್ತಂಗಡಿ–ಕಾರ್ಕಳ ಮಾರ್ಗವಾಗಿ ಉಡುಪಿ ಕಡೆ ಹೋಗುತ್ತಿದ್ದಾಗ ಅಪಘಾತ ಸಂಭವಿಸಿದೆ. ಅಪಘಾತದ ತೀವ್ರತೆಗೆ ಕಾರು ನಜ್ಜುಗುಜ್ಜಾಗಿದೆ.

ತಪಾಸಣಾ ಶಿಬಿರ

ಪೀಣ್ಯ ದಾಸರಹಳ್ಳಿ: ಶೆಟ್ಟಿಹಳ್ಳಿಯ ಲೇಕ್ ವ್ಯೂ ಡಿಫೆನ್ಸ್ ಕಾಲೊನಿಯಲ್ಲಿ ಮಾಜಿ ಶಾಸಕ ಎಸ್. ಮುನಿರಾಜು ಅವರ ನೇತೃತ್ವದಲ್ಲಿ ಡಿ.12ರಂದು ಬೆಳಿಗ್ಗೆ 9ರಿಂದ 3ರ ತನಕ ಆರೋಗ್ಯ ತಪಾಸಣೆ ಶಿಬಿರ ಹಾಗೂ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಆಯೋಜಿಸಲಾಗಿದೆ.

ಹೃದಯ ತಪಾಸಣೆ, ಕಣ್ಣಿನ ತಪಾಸಣೆ, ಶಸ್ತ್ರ ಚಿಕಿತ್ಸೆ, ವಾಕ್ ಮತ್ತು ಶ್ರವಣ ತಪಾಸಣೆ ಮತ್ತು ಚಿಕಿತ್ಸೆಯನ್ನು ನುರಿತ ವೈದ್ಯರಿಂದ ನಡೆಸಿ, ಉಚಿತ ಔಷಧ ವಿತರಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.



ಮಂಗಳೂರಿನ ಪಣಂಬೂರು ಕಡಲ ಕಿನಾರೆಯಲ್ಲಿ ಶನಿವಾರ ಏರ್ಪಡಿಸಿದ್ದ 'ವೇದ' ಸಿನಿಮಾದ ಬಿಡುಗಡೆ ಪೂರ್ವ ಕಾರ್ಯಕ್ರಮದಲ್ಲಿ ಚಿತ್ರ ನಟ ಶಿವರಾಜ್‌ಕುಮಾರ್ ಅವರು ಸಂಗಡಿಗರ ಜೊತೆ ನರ್ತಿಸಿದರು. ಹರ್ಷ ನಿರ್ದೇಶನದ 'ವೇದ' ಸಿನಿಮಾವು ಶಿವರಾಜ್‌ಕುಮಾರ್ ನಟನೆಯ 125ನೇ ಚಲನಚಿತ್ರವಾಗಿದ್ದು, ಇದೇ 23ರಂದು ಬಿಡುಗಡೆಯಾಗಲಿದೆ – ಪ್ರಜಾವಾಣಿ ಚಿತ್ರ/ ಫಕ್ರುದ್ದೀನ್ ಎಚ್.

ಮನುಷ್ಯನ ಕೃತಕ ಜೀವಕೋಶದ ಮೇಲೆ ಔಷಧಗಳ ಕ್ಲಿನಿಕಲ್ ಪರೀಕ್ಷೆ

ನವದೆಹಲಿ (ಪಿಟಿಐ): ಪ್ರಯೋಗಾಲಯದಲ್ಲಿ ಅಭಿವೃದ್ಧಿಪಡಿಸಲಾದ ಮನುಷ್ಯರ ಜೀವಕೋಶ ಹಾಗೂ ಅಂಗಾಂಶಗಳ ಮೇಲೆಯೂ ಔಷಧಗಳ ಪ್ರಾಯೋಗಿಕ ಪರೀಕ್ಷೆ (ಕ್ಲಿನಿಕಲ್ ಟ್ರಯಲ್) ಮಾಡುವ ಕುರಿತು ಕೇಂದ್ರ ಆರೋಗ್ಯ ಸಚಿವಾಲಯ ಕಾರ್ಯಪ್ರವೃತ್ತವಾಗಿದೆ.

ಈ ಸಂಬಂಧ, ನೂತನ ಔಷಧ ಮತ್ತು ಔಷಧಗಳ ಪ್ರಾಯೋಗಿಕ ಬಳಕೆ ನಿಯಮ, 2019ಕ್ಕೆ ತಿದ್ದುಪಡಿ ತರಲು ಇಲಾಖೆ ಚಿಂತನೆ ನಡೆಸಿದೆ. ಈ ಕುರಿತು ಕರಡು ಅಧಿಸೂಚನೆ ಸಿದ್ಧಪಡಿಸಲಾಗಿದೆ. ಈ ತಿದ್ದುಪಡಿಗೆ ಒಪ್ಪಿಗೆ ದೊರೆತರೆ ಭಾರತವು ಮಾನವನ ಜೀವಕೋಶ ಹಾಗೂ ಅಂಗಾಂಶಗಳ ಮೇಲೆ ಔಷಧ ಪ್ರಯೋಗ ಮಾಡುವ ವಿಶ್ವದ ಎರಡನೇ ದೇಶವಾಗಲಿದೆ. ಈಗ ಅಮೆರಿಕದಲ್ಲಿ ಈ ರೀತಿಯ ಪರೀಕ್ಷೆ ನಡೆಸಲಾಗುತ್ತಿದೆ.

ಯೋಜಿತ ಶಸ್ತ್ರಕ್ರಿಯೆಗಳ ಸಂದರ್ಭದಲ್ಲಿ ಸಂಗ್ರಹಿಸಲಾಗುವ ರಕ್ತ, ಜೀವಕೋಶ ಮತ್ತು ಮೂತ್ರದಂತಹ ಮಾದರಿಗಳನ್ನು ಸೂಕ್ತ ಸಮ್ಮತಿ ಪ್ರಕ್ರಿಯೆಗಳ ಮೂಲಕ ಪಡೆದುಕೊಳ್ಳಲಾಗುವುದು. ಇವುಗಳನ್ನು ಬಳಸಿ ಕೃತಕ ಜೀವಕೋಶಗಳನ್ನು ನಿರ್ಮಿಸಲಾಗುವುದು. ಇಂತಹ ಜೀವಕೋಶಗಳನ್ನು ಔಷಧಗಳ ಪ್ರಾಯೋಗಿಕ ಪರೀಕ್ಷೆಗೆ ಬಳಸಿಕೊಳ್ಳಲಾಗುವುದು ಎಂದು ಅಧಿಕೃತ ಮೂಲಗಳು ವಿವರಿಸಿವೆ.

'ಅತ್ಯಾಧುನಿಕ ತಂತ್ರಜ್ಞಾನದ ಬಳಕೆಯಿಂದಾಗಿ ಪ್ರಾಣಿಗಳ ಮೇಲೆ ನಡೆಸುವ ಪ್ರಯೋಗದ ಸಮಯಕ್ಕಿಂತ ಕಡಿಮೆ ಸಮಯ ಹಿಡಿಯಲಿದೆ. ಪ್ರಯೋಗದ ವೆಚ್ಚ ತಗ್ಗಲಿದೆ. ಈ ತಂತ್ರಜ್ಞಾನವು ಯಶಸ್ಸಿನ ಪ್ರಮಾಣವನ್ನು ಶೇ 70ರಿಂದ ಶೇ 80ರಷ್ಟು ಹೆಚ್ಚಿಸಲಿದೆ. ಪ್ರಾಣಿಗಳ ಮೇಲಿನ ಪ್ರಯೋಗದಲ್ಲಿ ವೈಫಲ್ಯ ಪ್ರಮಾಣವು ಶೇ 80ರಿಂದ ಶೇ 90ರಷ್ಟಿದೆ' ಎಂದು ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು

ಉಚಿತ ಆರೋಗ್ಯ ತಪಾಸಣಾ ಹಾಗೂ ಔಷಧ ವಿತರಣಾ ಶಿಬಿರ: ಆಯೋಜನೆ: ಆರ್. ಗುಂಡೂರಾವ್ ಫೌಂಡೇಷನ್, ಸ್ಥಳ: ವಾರ್ಡ್ ನಂ. 95, ಹನುಮಂತಪುರ, ಸನ್‌ರೈಸ್ ಸರ್ಕಲ್ ಹತ್ತಿರ, ಶ್ರೀರಾಮಪುರ, ಬೆಳಿಗ್ಗೆ 6.30

ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿ ಅನಾವರಣ: ಸಿದ್ದರಾಮಯ್ಯ, ಅತಿಥಿಗಳು: ತೋಳ್ ತಿರುಮಾಳವನ್, ಸಂದೇಶ್ ಅಶೋಕ್ ಅಂಬೇಡ್ಕರ್, ಡಿ.ಕೆ. ಸುರೇಶ್, ಎಂ. ಕೃಷ್ಣಪ್ಪ, ಮಳವಳ್ಳಿ ಶಿವಣ್ಣ, ಎಂ. ಜಯರಾಮ್, ಎಂ. ಪ್ರಿಯಾಂಕ್ ಖರ್ಗೆ, ಆರ್. ಮೋಹನರಾಜ್, ಬಿ.ಝಡ್. ಜಮೀರ್ ಅಹಮದ್ ಖಾನ್, ಆಯೋಜನೆ: ಮಹಾನಾಯಕ ಐಕ್ಯತಾ ವೇದಿಕೆ, ಸ್ಥಳ: ಕೊತ್ತನೂರು ದಿಣ್ಣೆ, ಜೆ.ಪಿ.ನಗರ, ಬೆಳಿಗ್ಗೆ 9

ಭರತನಾಟ್ಯ ರಂಗಪ್ರವೇಶ: **ಪ್ರಸ್ತುತಿ:** ಸಿರಿಶಾ ಶಶಿಕುಮಾರ್, **ಆಯೋಜನೆ:** ನೃತ್ಯ ಸಮರ್ಪಣಾ, **ಸ್ಥಳ:** ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30



ಸಿರಿಶಾ ಶಶಿಕುಮಾರ್

ವಾರ್ಷಿಕೋತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ: ಉದ್ಘಾಟನೆ: ಬಸವರಾಜ ಸಾದರ, ಅತಿಥಿಗಳು: ನಗಿನೆ ರಿಜ್ವಿ, ಸನ್ಮಾನಿತರು: ಶಿಲ್ಪಾ ಮುಡಬಿ, ಅಧ್ಯಕ್ಷತೆ: ಶಿದ್ರಾಮಪ್ಪ ಹಣಮಶೆಟ್ಟಿ, ಆಯೋಜನೆ: ಮೈಕೊ ಉತ್ತರ ಕರ್ನಾಟಕ ಗೆಳೆಯರ ಬಳಗ, ಸ್ಥಳ: ತೋಂಟದ ಸಿದ್ದಲಿಂಗೇಶ್ವರ ಸಮುದಾಯ ಭವನ, ಬಿಟಿಎಮ್ ಬಡಾವಣೆ 2ನೇ ಹಂತ, ಬೆಳಿಗ್ಗೆ 9


ದಶಮಾನೋತ್ಸವ ಸಮಾರಂಭ: ಸಾನ್ನಿಧ್ಯ: ವಿದ್ಯಾ ಪ್ರಸನ್ನತೀರ್ಥ ಸ್ವಾಮೀಜಿ, ಉದ್ಘಾಟನೆ: ಅರವಿಂದ ಬಿ.ಡಿ. ಜತ್ತಿ., ಅತಿಥಿಗಳು: ಧರ್ಮಸ್ಥಳ ಸುರೇಂದ್ರ ಕುಮಾರ್, ಕೆರಾಡಿ ಚಂದ್ರಶೇಖರ ಶೆಟ್ಟಿ, ಉದಯ್ ಕುಮಾರ್ ಶೆಟ್ಟಿ, ಆಯೋಜನೆ: ಅಖಿಲ ಕರ್ನಾಟಕ ಕೊಠಾರಿ ವೆಲ್‌ಫೇರ್ ಅಸೋಸಿಯೇಷನ್, ಸ್ಥಳ: ಅನುಭವ ಮಂಟಪ, ವಿಧಾನಸೌಧದ ಹತ್ತಿರ, ಬೆಳಿಗ್ಗೆ 9

ಮರಿಯ ನಿಕೇತನ ವಿದ್ಯಾಸಂಸ್ಥೆಗಳ ವಜ್ರ ಮಹೋತ್ಸವ: ಅತಿಥಿಗಳು: ಪುಟ್ಟಣ್ಣಯ್ಯ, ಆರ್. ನಾಗರಾಜ್ ಯಾಗವ್, ಎಂ.ಸಿ. ಶ್ರೀನಿವಾಸ್, ಆಯೋಜನೆ: ಮರಿಯ ನಿಕೇತನ ವಿದ್ಯಾ ಸಂಸ್ಥೆಗಳು, ಸ್ಥಳ: ಡಿ ಕೋಸ್ಟ ಲೇಔಟ್, ಸೇಂಟ್ ಮೇರಿ ಟೌನ್, ಬೆಳಿಗ್ಗೆ 9.30

ಪ್ರಥಮ ವರ್ಷದ ಬಿ.ಇ. ತರಗತಿಗಳ ಉದ್ಘಾಟನೆ: ಅತಿಥಿಗಳು: ಸ್ವಾಮಿ ವೀರೇಶಾನಂದ ಸರಸ್ವತಿ, ಆಯೋಜನೆ ಮತ್ತು ಸ್ಥಳ: ಬಿಎನ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬನಶಂಕರಿ 2ನೇ ಹಂತ, ಬೆಳಿಗ್ಗೆ 9.30

ವಾರ್ಷಿಕೋತ್ಸವ ಮತ್ತು 10 ಕೃತಿಗಳ ಬಿಡುಗಡೆ: ಆಯೋಜನೆ: ಸಾವಣ್ಣ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ವಾಡಿಯಾ ಸಭಾಂಗಣ, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 9.30

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ರೋಚನ ಸಿ., ಅತಿಥಿಗಳು: ಬಿ.ಎ. ಬಸವರಾಜ್, ಡಿ. ಸರ್ವೋತ್ತಮ ಕಾಮತ್, ವೈ.ಕೆ. ಸಂಧ್ಯಾ ಶರ್ಮ, ಸುಧೀಂದ್ರ ರಾವ್, ಸರಸ್ವತಿ ರವಿತೇಶ್, ಆಯೋಜನೆ: ನಾಟ್ಯ ಕುಸುಮಾಂಜಲಿ ಸಾಂಸ್ಕೃತಿಕ ವೇದಿಕೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 9.30



ರೋಚನ ಸಿ.

ಸಮಾಜವಾದಿ ಧುರೀಣ ಶಾಂತವೇರಿ ಗೋಪಾಲಗೌಡ ಸ್ಮಾರಕ ಪ್ರಶಸ್ತಿ ಪ್ರದಾನ: ಎಚ್. ಎನ್. ನಾಗಮೋಹನದಾಸ, ಅಧ್ಯಕ್ಷತೆ: ಪದ್ಮಿನಿ ನಾಗರಾಜು, ಪ್ರಶಸ್ತಿ ಪುರಸ್ಕೃತರು: ಗುಡ್ಡದಹಳ್ಳಿ ಬಿ. ಕೃಷ್ಣಪ್ಪ, ಅತಿಥಿಗಳು: ಎಸ್. ಶ್ರೀನಾಥ್, ಬಿ.ಪಿ. ಅನಿಲ್ ಕುಮಾರ್, ಪ್ರಾಸ್ತಾವಿಕ ನುಡಿ: ಎಂ. ಪ್ರಕಾಶಮೂರ್ತಿ, ಉಪಸ್ಥಿತಿ: ಕೆ.ಎಸ್. ಶ್ರೀರಾಮತೀರ್ಥ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೈಕೊ ಕನ್ನಡ ಬಳಗ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10

ಪದಕ ಪ್ರದಾನ ಸಮಾರಂಭ: ಪದಕ ಪ್ರದಾನ: ಥಾವರಚಂದ್ ಗೆಹಲೋತ್, ಅತಿಥಿಗಳು: ಬಸವರಾಜ ಬೊಮ್ಮಾಯಿ, ಆರಗ ಜ್ಞಾನೇಂದ್ರ, ಆಯೋಜನೆ: ಕರ್ನಾಟಕ ರಾಜ್ಯ ಪೊಲೀಸ್, ಸ್ಥಳ: ರಾಜಭವನ, ಬೆಳಿಗ್ಗೆ 10

ತಾಳ ಮದ್ದಳೆ: ಶ್ರೀರಾಮ ವನಾಭಿಗಮನ: ವಿದ್ಯಾವಾಚಸ್ಪತಿ ಉಮಾಕಾಂತ ಭಟ್ಟ, ಅನಂತ ಪದ್ಮನಾಭ ಫಾಟಕ್, ಕೊಳಗಿ ಕೇಶವ ಹೆಗಡೆ, ವಾಸುದೇವ ರಂಗ ಭಟ್ಟ, ಸುಂಕದಗುಂಡಿ ಗಣಪತಿ ಭಟ್ಟ, ಶಶಾಂಕ ಅರ್ನಾಡಿ, ಪ್ರಸನ್ನ ಹೆಗ್ಗಾರು, ಆಯೋಜನೆ: ಫಾಟಕ್ ಯಕ್ಷ ಸಂಸ್ಕೃತಿ ಟ್ರಸ್ಟ್, ಸ್ಥಳ: ರಂಗ ಶಂಕರ, ಜೆ.ಪಿ. ನಗರ, ಬೆಳಿಗ್ಗೆ 11

ಐಟಿ ಕನ್ನಡ ಗಣಕ ಸಮಾವೇಶ: ಉದ್ಘಾಟನೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಉಪಸ್ಥಿತಿ: ಕೆ. ಚಿದಾನಂದಗೌಡ, ಹಿ.ಚಿ. ಬೋರಲಿಂಗಯ್ಯ, ಅಧ್ಯಕ್ಷತೆ: ಸಿ. ಸೋಮಶೇಖರ್, ಅತಿಥಿಗಳು: ಕೆ.ಪಿ. ಪುತ್ತೂರಾಯ, ಕಾ.ವೆಂ. ಶ್ರೀನಿವಾಸಮೂರ್ತಿ, ಆಯೋಜನೆ: ಕನ್ನಡ ಗಣಕ ಉಚಿತ ತರಬೇತಿ ಕೇಂದ್ರ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಶಿವಾನಂದ ಸರ್ಕಲ್, ಬೆಳಿಗ್ಗೆ 11.30

ಕವಿಗೋಷ್ಠಿ–ಗೀತಗಾಯನ–ಪ್ರಶಸ್ತಿ ಪ್ರದಾನ: ಸಿ.ಕೆ. ರಾಮೇಗೌಡ, ಅಧ್ಯಕ್ಷತೆ: ಬಿ. ಶೃಂಗೇಶ್ವರ, ಅತಿಥಿಗಳು: ಚಂದ್ರಿಕಾ ಪುರಾಣಿಕ್, ತಾ.ಸಿ. ತಿಮ್ಮಯ್ಯ, ವಿ. ರೇಣುಕಾಪ್ರಸನ್ನ, ಉಪಸ್ಥಿತಿ: ಬಿ.ಎನ್. ಮಹದೇವ್, ಕುವರ ಯಲ್ಲಪ್ಪ, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಬಲಿಯೇಂದ್ರ ಹಬ್ಬ ಆಚರಣೆ ಮತ್ತು ಬಲಿಯೇಂದ್ರ ಪುರಸ್ಕಾರ ಪ್ರದಾನ ಸಮಾರಂಭ: ಆಯೋಜನೆ: ತುಳುಚೆರೆಂಕುಲು ಬೆಂಗಳೂರು, ಸ್ಥಳ: ಡಾ. ಉದಯ ಧರ್ಮಸ್ಥಳ ವೇದಿಕೆ, ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 3

ಕನ್ನಡ ರಾಜ್ಯೋತ್ಸವ, ಅಮೃತ ಭಾರತಿಗೆ ಕನ್ನಡದಾರತಿ: ಉದ್ಘಾಟನೆ: ಆರ್. ಚಂದ್ರಶೇಖರ್, ಅತಿಥಿಗಳು: ಪ್ರಭಾ ಇನಾಮ್ದಾರ್, ಅಧ್ಯಕ್ಷತೆ: ಗೋವಿಂದಗೌಡ, ಆಯೋಜನೆ: ಗಾನಮಾಧುರ್ಯ ಸಾಂಸ್ಕೃತಿಕ ಕಲಾ ಸಂಘ, ಸ್ಥಳ: ವಾಸುದೇವ ಸಭಾಂಗಣ, ಕನ್ಯಾಕುಮಾರಿ ಶಾಲೆ ಆವರಣ, ಬಾಲಗಂಗಾಧರನಗರ, ಮಲ್ಲತ್ತಹಳ್ಳಿ, ಮಧ್ಯಾಹ್ನ 3

ಶ್ರೀರಾಮ ಪಟ್ಟಾಭಿಷೇಕ ಪೌರಾಣಿಕ ಯಕ್ಷಗಾನ ಪ್ರದರ್ಶನ: ಆಯೋಜನೆ: ಯಕ್ಷಗಾನ ತಪಸ್ಸಂಘ, ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಮಧ್ಯಾಹ್ನ 3, ಫೋಟೊ ಇದೆ

ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯಗಳ ಹಾಕಿ ಸ್ಪರ್ಧೆ: ಉದ್ಘಾಟನೆ: ಲಿಂಗರಾಜ ಗಾಂಧಿ, ಅತಿಥಿಗಳು: ವಿ. ರಘುನಾಥ್, ಉಮರ್ ಇಸ್ಮಾಯಿಲ್ ಖಾನ್, ಲೋಕೇಶ್ ವಿ., ಪಿ. ಮಹಮ್ಮದ್ ಇಲಿಯಾಸ್, ಆರ್. ಶ್ರೀಕಾಂತ್, ಅಧ್ಯಕ್ಷತೆ: ಸಿ.ಎನ್. ಶ್ರೀಧರ್, ಆಯೋಜನೆ: ಅಸೋಸಿಯೇಷನ್ ಆಫ್ ಇಂಡಿಯನ್ ಯೂನಿವರ್ಸಿಟೀಸ್, ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಕರ್ನಾಟಕ ಹಾಕಿ ಕ್ರೀಡಾಂಗಣ, ಅಕ್ಕಿತಿಮ್ಮನಹಳ್ಳಿ, ಶಾಂತಿನಗರ, ಸಂಜೆ 4

ಪ್ರಮೋದ್ ಶ್ರೀಪಾದರಾವ್ ಕುಲಕರ್ಣಿ ಅವರ ಮಾತಾಪಿತೃಗಳ ಕೊಡುಗೆ ಪುಸ್ತಕ ಬಿಡುಗಡೆ: ಮಹೇಶ ಜೋಷಿ, ಅಧ್ಯಕ್ಷತೆ: ಕೆ.ಇ. ರಾಧಾಕೃಷ್ಣ, ಕೃತಿ ಕುರಿತು: ಕವಿತಾ ಕೃಷ್ಣ, ಅತಿಥಿಗಳು: ಅಶೋಕ್ ಎಸ್. ಪರ್ವತಿ, ಎಂ.ಕೆ. ರಂಗಪ್ಪ ಮಾದಲಗೆರೆ, ಉಪಸ್ಥಿತಿ: ಪ್ರಮೋದ್‌ರಾವ್ ಕುಲಕರ್ಣಿ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4.30

ಬನ್ನಂಜೆ ಗೋವಿಂದಾಚಾರ್ಯರ ಆರಾಧನೆ, ಪುರಸ್ಕಾರ ನುಡಿ ನಮನ: ಎಂ.ಎ. ಆಳ್ವಾರ್, ನುಡಿ ನಮನ: ಪಿ. ಆರ್. ಮುಕುಂದ್, ಕೃತಿಗಳ ಅನಾವರಣ: ಎಚ್.ವೈ. ವಿರೂಪಾಕ್ಷ ಶಾಸ್ತ್ರಿ, ಆಯೋಜನೆ: ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನ, ಸ್ಥಳ: ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 4.30

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ನಿಹಾರಿಕಾ ಮೋಹನ್, ಅತಿಥಿಗಳು: ಉಷಾ ದಾತಾರ್, ವೈಜಯಂತಿ ಕಾಶಿ, ಆಯೋಜನೆ: ದಿ ಸ್ಟ್ರಕ್ಚರ್ಲ್ ಸ್ಕೂಲ್ ಆಫ್ ಫೈನ್ ಆರ್ಟ್ಸ್, ಸ್ಥಳ: ಜ್ಞಾನ ಸೌಧ, ಕಲ್ಯಾಣನಗರ, ನಾಗರಭಾವಿ, ಸಂಜೆ 6



ನಿಹಾರಿಕಾ ಮೋಹನ್

ತಿಂಗಳ ಕಾರ್ಯಕ್ರಮ–17: ವಿಷಯ: ಊರು ಕೇರಿ ರಂಗಾನುಭವ, ಸಂಪನ್ಮೂಲ ವ್ಯಕ್ತಿ: ಗಣೇಶ.ಎಂ. ಹೆಗ್ಗೋಡು, ನಿರ್ವಹಣೆ: ಎಚ್. ಲಕ್ಷ್ಮೀನಾರಾಯಣಸ್ವಾಮಿ, ಆಯೋಜನೆ: ನಾಡೋಜ ಡಾ. ಸಿದ್ದಲಿಂಗಯ್ಯ ಸ್ಮಾರಕ ಪ್ರತಿಷ್ಠಾನ, ಸಂಜೆ 7 (ಆನ್‌ಲೈನ್ ಕಾರ್ಯಕ್ರಮ)

'ಅಸಂಗತಗಳು' ನಾಟಕ ಪ್ರದರ್ಶನ: ರಚನೆ: ಚಂದ್ರಶೇಖರ ಪಾಟೀಲ, ನಿರ್ದೇಶನ: ಬಸವರಾಜ ಎಮ್ಮಿಯವರ, ಸಂಗೀತ: ಸತ್ಯ ರಾಧಾಕೃಷ್ಣ, ಪ್ರಚಾರ ಕಲೆ: ಮೇಘ ಜೆ. ಶೆಟ್ಟಿ, ಆಯೋಜನೆ: ಕಲಾವಿಲಾಸಿ, ಸ್ಥಳ: ಕೆ.ಇ.ಎ ಪ್ರಭಾತ್ ರಂಗಮಂದಿರ, ಕಮಲಾನಗರ, ಸಂಜೆ 7.30

67ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಒಂದೇ ವೇದಿಕೆಯಲ್ಲಿ 67 ಬರಹಗಾರರ ಕೃತಿಗಳ ಬಿಡುಗಡೆ

‘ಮೂಲ ಕೃತಿಯೊಂದಿಗೆ ಅನುಸಂಧಾನ ಕಡಿಮೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೂಲ ಕೃತಿಗಳ ಜೊತೆಗೆ ಅನುಸಂಧಾನ ನಡೆಸುವುದನ್ನು ಹೊಸ ತಲೆಮಾರಿನ ಬರಹಗಾರರು ಸೇರಿ ಅನೇಕರು ಕಡಿಮೆ ಮಾಡಿದ್ದಾರೆ’ ಎಂದು ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ ಬೇಸರ ವ್ಯಕ್ತಪಡಿಸಿದರು.

ನಗರದಲ್ಲಿ ಶನಿವಾರ 67ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಸಪ್ನ ಬುಕ್ ಹೌಸ್ ಹೊರತಂದಿದ್ದ 67 ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ‘ಕೃತಿ ವಿಸ್ತಾರ...’ ಕುರಿತು ಮಾತನಾಡಿದರು. ‘ಲೌಕಿಕ ಹಾಗೂ ಆಗಮಿಕ ಪರಿಕಲ್ಪನೆ ಅಡಿ ರಚಿತವಾದ ಕಾವ್ಯಗಳ ಓದುಗರ ಸಂಖ್ಯೆ ಸಹ ಕಡಿಮೆಯಾಗಿದೆ’ ಎಂದು ಹೇಳಿದರು.

‘ರಾಜ್ಯದ ಸಮಸ್ತ ಲೇಖಕ ಸಮೂಹ ಒಳಗೊಂಡಂತೆ ಕೃತಿ ಪ್ರಕಟಿಸಲಾಗಿದೆ. ಕಥೆ, ಕಾದಂಬರಿ, ಕೃಷಿ, ಅನುವಾದ, ಧರ್ಮ ದರ್ಶನ, ಅಂಕಣ ಬರಹ, ಏಕೀಕರಣಕ್ಕೆ ದುಡಿದ ಮಹನೀಯರ ಮಾಹಿತಿ, ಅನುಭವ ಕಥನ, ವೈದ್ಯಕೀಯ ಬರಹ, ಹಾಸ್ಯ ಬರಹ, ಅರಣ್ಯನಾಶ, ತಂತ್ರಜ್ಞಾನ, ಮಕ್ಕಳ ಕಥೆ ಕುರಿತು ರಚಿತವಾದ ಕೃತಿಗಳು ಈ ವೇದಿಕೆಯಲ್ಲಿ ಬಿಡುಗಡೆಗೊಂಡಿವೆ. ಕೃತಿಗಳು ವೈವಿಧ್ಯಮವಾಗಿವೆ. 21ನೇ ಶತಮಾನವು ಎಲ್ಲ ಪ್ರಕಾರದ ಬರಹಕ್ಕೆ ತೆರೆದುಕೊಂಡಿದೆ’ ಎಂದು ಸಂತಸ ವ್ಯಕ್ತಪಡಿಸಿದರು.

‘ಮಕ್ಕಳ ಸಾಹಿತ್ಯದಲ್ಲಿ ನೈತಿಕತೆ ಹಾಗೂ ತಾತ್ವಿಕತೆ ಅಡಕವಾಗಿದೆ. ವಿದ್ವತ್ ವಲಯ ಓದುವ ಹಾಗೂ ಕನ್ನಡದ ಸಮಗ್ರತೆ ಪರಿಚಯಿಸುವ ಕೃತಿಗಳು ಇವಾಗಿವೆ’ ಎಂದು ಬಣ್ಣಿಸಿದರು.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ‘ಸಾಹಿತ್ಯದ ಓದಿನಿಂದ ಮನಸ್ಸು ಶುದ್ಧವಾಗಲಿದೆ. ಕಲ್ಮಶ ದೂರವಾಗಲಿದೆ. ಸಾಹಿತ್ಯ ಓದಿನಿಂದ ಬದಲಾವಣೆಗಳು ನಡೆಯಲಿವೆ. ಸ್ಫಟಿಕದಂತಹ ಬರಹಗಳ ಓದು ಚಿಂತನೆಗೆ ಹಚ್ಚಲಿದೆ. ಕಾವ್ಯಕ್ಕೆ ಕವಿಯೇ ವಾರಸುದಾರರ. ಬರಹಗಾರರ ಅನುಭವಗಳು ಬೇರೆಯವರಲ್ಲೂ ಅರಿವು ಮೂಡಿಸಲಿ’ ಎಂದರು.


ನಗರದಲ್ಲಿ ಶನಿವಾರ ಸಪ್ನ ಬುಕ್ ಹೌಸ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಲೇಖಕರ 67 ಕೃತಿಗಳನ್ನು ಬಿಡುಗಡೆ ಮಾಡಿದ ನಿರ್ಮಲಾನಂದನಾಥ ಸ್ವಾಮೀಜಿ ಅವರು ಕೃತಿಯೊಂದನ್ನು ಇನ್ಫೊಸಿಸ್ ಪ್ರತಿಷ್ಠಾನದ ಸಂಸ್ಥಾಪಕಿ ಡಾ.ಸುಧಾಮೂರ್ತಿ ಅವರಿಗೆ ನೀಡಿದರು. (ಎಡದಿಂದ) ಪ್ರೊ.ಮಲ್ಲೇಪುರ ಜಿ. ವೆಂಕಟೇಶ, ನಿತಿನ್ ಷಾ ಹಾಗೂ ಸಾಹಿತಿ ದೊಡ್ಡರಂಗೇಗೌಡ ಹಾಜರಿದ್ದರು

ಮುಖ್ಯಾಂಶಗಳು
- ಮುತ್ತಿನಂತಹ ಕೃತಿಗಳ ಬಿಡುಗಡೆ: ಗಣ್ಯರ ಬಣ್ಣನೆ
- ಬರಹಗಾರರ ನೋವು, ನಲಿವು, ತುಡಿತ ಅನಾವರಣ
- ವಿಭಿನ್ನ ವಿಷಯಗಳ ಕೃತಿಗಳ ಬಿಡುಗಡೆ

‘ಆರು ತಿಂಗಳ ಪರಿಶ್ರಮದಿಂದ 67 ಶ್ರೇಷ್ಠ ಕೃತಿಗಳು ಹೊರಬಂದಿವೆ. ಒಂದಕ್ಕಿಂತ ಒಂದು ಕೃತಿ ಭಿನ್ನವಾಗಿದೆ. ವಿದ್ವಾಂಸರ ರಾಜ್ಯ ನಮ್ಮದು. 68ನೇ ಕರ್ನಾಟಕ ರಾಜ್ಯೋತ್ಸವಕ್ಕೆ ಅಷ್ಟೇ ಸಂಖ್ಯೆಯ ಮೌಲ್ಯಯುತ ಕೃತಿಗಳು ಹೊರಬರುತ್ತವೆ. ಸಪ್ನ ಬುಕ್ ಹೌಸ್ ಅಂತಹ ಮಹತ್ವದ ಕಾರ್ಯದಲ್ಲಿ ತೊಡಗಿದೆ’ ಎಂದು ಇನ್ಫೊಸಿಸ್ ಪ್ರತಿಷ್ಠಾನದ ಸಂಸ್ಥಾಪಕಿ ಡಾ.ಸುಧಾ ಮೂರ್ತಿ ಆಶಿಸಿದರು.

ಸಾಹಿತಿ ಡಾ.ದೊಡ್ಡರಂಗೇಗೌಡ ಅವರು, ‘ನಾಲ್ಕರಿಂದ ಐದು ಕೃತಿಗಳ ಪ್ರಕಟಣೆ ಸಹಜ. ಒಂದೇ ವೇದಿಕೆಯಲ್ಲಿ 67 ಕೃತಿಗಳನ್ನು ಪ್ರಕಟಿಸುವುದು ಕನ್ನಡದ ಹೆಮ್ಮೆಯ ಕೆಲಸ. ಇದು ಸಾಹಿತ್ಯ ಜಾತ್ರೆಯಂತೆ ಭಾಸವಾಗುತ್ತಿದೆ. ಲೇಖಕರ ಆಯ್ಕೆ, ಪ್ರಕಟಣೆಯಲ್ಲಿ ಕರ್ತವ್ಯ ಪ್ರಜ್ಞೆ ತೋರಲಾಗಿದೆ. ಮುತ್ತಿನಂತಹ ಕೃತಿಗಳು ಪ್ರಕಟವಾಗಿವೆ’ ಎಂದು ಪ್ರತಿಪಾದಿಸಿದರು.

‘ಗ್ರಂಥಗಳು ಚಾರಿತ್ರಿಕ ಹೆಗ್ಗುರುತು ಗಳಿದ್ದಂತೆ. ಮೌಲಿಕ ನಡವಳಿಕೆಗಳ ಅನಾವರಣ ಈ ಕೃತಿಯಿಂದ ಸಾಧ್ಯವಾಗಿದೆ. ಈ ಎಲ್ಲ ಕೃತಿಗಳು ಸಾಂಸ್ಕೃತಿಕ ಶಿಖರವಾಗಿ ಜ್ಞಾನದ ತವನಿಧಿಗಳಂತೆ ಕಾಣಿಸಲಿವೆ. ಮುಂದಿನ ಪೀಳಿಗೆಗೆ ಮೌಲ್ಯಯುತ ಜೀವನಧಾರೆ ತೋರಿಸಲಿ. ಬರಹಗಾರರ ನೋವು, ನಲಿವು, ತುಡಿತ ಅನಾವರಣವಾಗಿವೆ. ಉತ್ಕೃಷ್ಟತೆಗೆ ಸಾಕ್ಷಿಯಾಗಿದೆ. ಕೃತಿಕಾರನ ಅನುಭವ ಕಟ್ಟಿಕೊಡಲಾಗಿದೆ. ದೇಶೀಯ ಸೊಗಡು ಅನಾವರಣಗೊಂಡಿದೆ’ ಎಂದು ಹೇಳಿದರು.

‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು ‘ಸಮಕಾಲೀನ ಪುಸ್ತಕ ಸಂಸ್ಕೃತಿ’ ಕುರಿತು ಮಾತನಾಡಿದರು. ಸಪ್ನ ಬುಕ್ ಹೌಸ್ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಷಾ ಸ್ವಾಗತಿಸಿದರು. ಕೃತಿಗಳ ಬಿಡುಗಡೆಗೂ ಮುನ್ನ ಸುಗಮ ಸಂಗೀತ ಕಾರ್ಯಕ್ರಮ ನಡೆಯಿತು. ಪುಸ್ತಕದ ಮಹೋತ್ಸವದಲ್ಲಿ ಎಲ್ಲ ಲೇಖಕರನ್ನು ಸನ್ಮಾನಿಸಲಾಯಿತು.

ಮುಂಬೈ ರೇಸ್

ಕಿಂಗ್ಸ್ ರಾನ್ಸಮ್ ಗೆಲ್ಲುವ ನಿರೀಕ್ಷೆ

ಬೆಟ್‌ವೇ ಇಂಡಿಯನ್ 1000 ಗಿನ್ನೀಸ್ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕಿಂಗ್ಸ್ ರಾನ್ಸಮ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 12.30ಕ್ಕೆ ಪ್ರಾರಂಭವಾಗಲಿರುವ ದಿನದ ಹತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಟೌಸಾಂಟ್ 6, ಅನೌಶ್ಕ 1, ಟ್ರೂತ್ ಅಂಡ್ ಡೇರ್ 11
2ನೇ ರೇಸ್: ನಾರ್ದರನ್ ಲೈಟ್ಸ್ 1, ಚಾಪಿನ್ 4
3ನೇ ರೇಸ್: ಲಜಾರಸ್ 3, ವೈಕಿಕಿ 8, ಮಿ ಏರಿಯನ್ 4
4ನೇ ರೇಸ್: ಮೊಜೆಲ್ 5, ಸೆಲ್ಲಿನಿ 3, ಮೆಲಿನಿ 2
5ನೇ ರೇಸ್: ಆಹಾ ಬೆಲ್ಲಾ 2, ಕೊಎರ್ ಡೆ ಲಯನ್ 1
6ನೇ ರೇಸ್: ಲಿಯೊಪಾರ್ಡ್ ರಾಕ್ 4, ಐರನ್ ಏಜ್ 2, ಜೋಕ್ವಿನ್ 3
7ನೇ ರೇಸ್: ಈಟಾನ್ ಸ್ಟೇರ್ 3, ನಿರ್ವಾಣ 6, ಐರಿಶ್ ಗೋಲ್ಡ್ 4
8ನೇ ರೇಸ್: ಕಿಂಗ್ಸ್ ರಾನ್ಸಮ್ 4, ಡೇಂಜರಸ್ 1, ಫೇತ್ 2
9ನೇ ರೇಸ್: ದೌಲತ್ ಮಾಯ್ 4, ಎಸ್ಪಿರ್ 2, ಇಂಟೆನ್ಸ್ ಬಿಲೀಫ್ 5
10ನೇ ರೇಸ್: ಟುಮಾರೊ ಡ್ರೀಮ್ಸ್ 1, ದಿಲ್‌ಬರ್ 2, ಸ್ಟಾರ್ಸ್ ಫಾರ್ ಯೂ 5

ಅತ್ಯುತ್ತಮ ಬೆಟ್: ನಾರ್ದರನ್ ಲೈಟ್ಸ್

1ನೇ ಜಾಕ್‌ಪಾಟ್	2ನೇ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
3,4,5,6,7	6,7,8,9,10	4,5,6	7,8,9	8,9,10

‘ರಕ್ತ ಚರಿತ್ರೆ’ ಸೇಡು: ಗುಂಡು ಹಾರಿಸಿದ್ದ ಮೂವರ ಸೆರೆ

ಪ್ರಜಾವಾಣಿ ಚಿತ್ರ

ಬೆಂಗಳೂರು: ಕೆ.ಆರ್. ಪುರ ಠಾಣೆ ವ್ಯಾಪ್ತಿಯಲ್ಲಿ ರೌಡಿ ಶಿವಶಂಕರ್ ರೆಡ್ಡಿ ಹಾಗೂ ಕಾರು ಚಾಲಕ ಅಶೋಕ ರೆಡ್ಡಿ ಮೇಲೆ ಗುಂಡಿನ ದಾಳಿ ಮಾಡಿದ್ದ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಆಂಧ್ರಪ್ರದೇಶದ ಜಯಪ್ರಕಾಶ್, ಮನೋಜ್ ಹಾಗೂ ಪ್ರವೀಣ್ ಬಂಧಿತರು. ಕೆ.ಆರ್.ಪುರದ ಸೀಗೇಹಳ್ಳಿ ಹ್ಯಾಪಿ ಗಾರ್ಡನ್‌ಗೆ ಡಿ. 8ರಂದು ಮಧ್ಯಾಹ್ನ ಬಂದಿದ್ದ ಮದನಪಲ್ಲಿ ರೌಡಿ ಶಿವಶಂಕರ್ ಹಾಗೂ ಕಾರು ಚಾಲಕ ಅಶೋಕ ರೆಡ್ಡಿ ಮೇಲೆ ದುಷ್ಕರ್ಮಿಗಳು ಗುಂಡು ಹಾರಿಸಿದ್ದರು. ಇಬ್ಬರೂ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಶಿವಶಂಕರ್ ಹಾಗೂ ಅಶೋಕ ಕಡೆಯಿಂದ ಹೇಳಿಕೆ ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ತನಿಖೆ ಕೈಗೊಂಡ ವಿಶೇಷ ತಂಡ, ಆಂಧ್ರಪ್ರದೇಶದ ಪ್ರಕಾಶಂ ಜಿಲ್ಲೆಯ ಮುಂಡ್ಲಮೂರು ಬಳಿ ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆತಂದಿದೆ. ಮತ್ತಷ್ಟು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ’ ಎಂದು ತಿಳಿಸಿದರು.

ರೌಡಿ ಕೃತ್ಯ, ರಕ್ತ ಚರಿತ್ರೆ ಸೇಡು: ‘ಚಿತ್ತೂರು ಜಿಲ್ಲೆಯ ತಂಬಲಪಲ್ಲಿ ಕುರುಬಲಕೋಟ ಮಂಡಲಂ ವನಮರೆಡ್ಡಿಗಾರುಪಲ್ಲಿ ಗ್ರಾಮದ ಶಿವಶಂಕರ್ ವಿರುದ್ಧ ಕೊಲೆ, ಹಲ್ಲೆ, ಜೀವ ಬೆದರಿಕೆ ಸೇರಿದಂತೆ ಒಂಬತ್ತು ಪ್ರಕರಣಗಳು ದಾಖಲಾಗಿದ್ದವು. ಮದನಪಲ್ಲಿ ಠಾಣೆಯ ರೌಡಿ ಪಟ್ಟಿಯಲ್ಲಿ ಈತನ ಹೆಸರಿತ್ತು’ ಎಂದು ಪೊಲೀಸರು ಹೇಳಿದರು.

‘ಶಿವಶಂಕರ್ ರೆಡ್ಡಿಯ ತಂದೆ ಜಯಚಂದ್ರ ಹಾಗೂ ಪಕ್ಕದ ಮನೆಯ ಮಾಲೀಕ ಬೈಯ್ಯರೆಡ್ಡಿ ನಡುವೆ ಆಗಾಗ ಗಲಾಟೆ ಆಗುತ್ತಿತ್ತು. ಎರಡೂ ಕುಟುಂಬಗಳ ನಡುವೆ ವೈಷಮ್ಯ ಬೆಳೆದಿತ್ತು. 2011ರಲ್ಲಿ ಶಿವಶಂಕರ್ ಹಾಗೂ ಜಯಚಂದ್ರ ಇಬ್ಬರೂ ಸೇರಿಕೊಂಡು ಬೈಯ್ಯರೆಡ್ಡಿ ಅವರನ್ನು ಕೊಲೆ ಮಾಡಿದ್ದರು. ಇದರ ಸೇಡು ತೀರಿಸಿಕೊಂಡಿದ್ದ ಬೈಯ್ಯರೆಡ್ಡಿ ಸಹಚರರು, ಜಯಚಂದ್ರನನ್ನೂ ಕೊಲೆ ಮಾಡಿದ್ದರು.’

‘ತಂದೆ ಜಯಚಂದ್ರ ಕೊಲೆ ಮಾಡಿರುವವರ ವಿರುದ್ಧ ಸೇಡು ತೀರಿಸಿಕೊಳ್ಳಲು ಶಿವಶಂಕರ್ ಸಂಚು ರೂಪಿಸುತ್ತಿದ್ದ. ಇದು ಗೊತ್ತಾಗುತ್ತಿದ್ದಂತೆ ಬೈಯರೆಡ್ಡಿ ಸಹಚರರು, ಶಿವಶಂಕರ್‌ನನ್ನೇ ಕೊಲೆ ಮಾಡಲು ತೀರ್ಮಾನಿಸಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಸೀಗೇಹಳ್ಳಿ ಹ್ಯಾಪಿ ಗಾರ್ಡನ್‌ನಲ್ಲಿ ಅಪಾರ್ಟ್‌ಮೆಂಟ್ ಸಮುಚ್ಚಯ ನಿರ್ಮಿಸುತ್ತಿದ್ದ ಶಿವಶಂಕರ್, ಕೆಲಸದ ಪರಿಶೀಲನೆಗೆಂದು ಚಾಲಕ ಅಶೋಕ ಜೊತೆ ಸ್ಥಳಕ್ಕೆ ಬಂದಿದ್ದ. ಇದೇ ಸಂದರ್ಭದಲ್ಲೇ ಬೈಕ್‌ನಲ್ಲಿ ಬಂದಿದ್ದ ಆರೋಪಿಗಳು, ಗುಂಡು ಹಾರಿಸಿ ಪರಾರಿಯಾಗಿದ್ದರು. ತನಿಖೆ ನಡೆಸಿದಾಗ, ಇದೊಂದು ರಕ್ತ ಚರಿತ್ರೆ ಸಿನಿಮಾ ಮಾದರಿಯ ಸೇಡು ಎಂಬುದು ಗೊತ್ತಾಯಿತು’ ಎಂದು ಪೊಲೀಸರು ಹೇಳಿದರು.

ತಂದೆ ಶ್ರೀಮಂತನೆಂದು ಹಣ, ಚಿನ್ನ ಕದ್ದು ತಂದುಕೊಟ್ಟಿದ್ದ ಬಾಲಕ ● 6 ಮಂದಿ ವಿರುದ್ಧ ಎಫ್‌ಐಆರ್

ಸಹಪಾಠಿಗಳಿಂದಲೇ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಕನಗರ ಶಾಲೆಯೊಂದರಲ್ಲಿ ಓದುತ್ತಿರುವ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಯೊಬ್ಬರನ್ನು ಬೆದರಿಸಿ ಹಣ ಹಾಗೂ ಚಿನ್ನಾಭರಣ ಸುಲಿಗೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಸಹಪಾಠಿಗಳು ಹಾಗೂ ಇತರರ ವಿರುದ್ಧ ಹೆಬ್ಬಾಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಭುವನೇಶ್ವರಿ ನಗರದ ಕೃಷ್ಣಪ್ಪ ಬಡಾವಣೆ ನಿವಾಸಿಯಾಗಿರುವ 42 ವರ್ಷದ ಉದ್ಯಮಿಯೊಬ್ಬರು ಕೃತ್ಯದ ಬಗ್ಗೆ ಗುರುವಾರ (ಡಿ. 8) ದೂರು ನೀಡಿದ್ದಾರೆ. ಎಸ್ಸೆಸ್ಸೆಲ್ಸಿ ಓದುತ್ತಿರುವ ಮೂವರು ವಿದ್ಯಾರ್ಥಿಗಳು, ಯುವಕರಾದ ಸೈಫ್, ಅರ್ಫತ್ ಹಾಗೂ ಮುಜ್ಜು ಎಂಬುವವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಉದ್ಯಮಿಯ ಮಗನಾದ 16 ವರ್ಷದ ಬಾಲಕ ಕನಕನಗರದ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಓದುತ್ತಿದ್ದಾನೆ. ಈತನ ವಿದ್ಯಾಭ್ಯಾಸ ಹಾಗೂ ಆನ್‌ಲೈನ್ ತರಗತಿಗೆ ಅನುಕೂಲವಾಗಲೆಂದು ತಂದೆ ಮೊಬೈಲ್ ಕೊಡಿಸಿದ್ದರು. ಒಂದೂವರೆ ವರ್ಷದಿಂದ ಮನೆಯಲ್ಲಿ ನಗದು ಹಾಗೂ ಚಿನ್ನಾಭರಣ ಕಳ್ಳತನವಾಗುತ್ತಿತ್ತು. ಯಾರು ಕಳ್ಳತನ ಮಾಡುತ್ತಿದ್ದಾರೆಂಬುದು ಉದ್ಯಮಿಗೆ ಗೊತ್ತಾಗಿರಲಿಲ್ಲ. ಇತ್ತೀಚೆಗೆ ಎರಡು ಚಿನ್ನದ ಉಂಗುರಗಳು ಕಳ್ಳತನವಾಗಿದ್ದವು. ಪರಿಶೀಲನೆ ನಡೆಸಿದಾಗ, ಮಗನೇ ಕೃತ್ಯ ಎಸಗಿದ್ದು ಗೊತ್ತಾಗಿತ್ತು. ಮಗನನ್ನು ವಿಚಾರಿಸಿದಾಗ, ಸಹಪಾಠಿಗಳ ಸುಲಿಗೆ ಪ್ರಕರಣ ಪತ್ತೆಯಾಗಿದೆ’ ಎಂದು ಮೂಲಗಳು ತಿಳಿಸಿವೆ.

ಆರಂಭದಲ್ಲಿ ₹ 2 ಸಾವಿರ ಕದ್ದು ಕೊಟ್ಟಿದ್ದ: ‘2021ರ ಆಗಸ್ಟ್‌ನಲ್ಲಿ ಸಹಪಾಠಿಗಳ ಜೊತೆ ಕಾಲ ಕಳೆಯುತ್ತಿದ್ದ ಬಾಲಕ, ‘ನನ್ನ ತಂದೆ ತುಂಬಾ ಶ್ರೀಮಂತ. ಕಾರು ಇದೆ. ಹಣವೂ ಹೆಚ್ಚಿದೆ’ ಎಂದಿದ್ದ. ಇದನ್ನು ತಿಳಿದ ಸಹಪಾಠಿಗಳು, ‘ನಮಗೆ ಮನೆಯಲ್ಲಿ ಕಷ್ಟವಿದೆ. ಸ್ವಲ್ಪ ಹಣ ತಂದುಕೊಡು’ ಎಂದಿದ್ದರು. ಅದಕ್ಕೆ ಒಪ್ಪಿದ್ದ ಬಾಲಕ, ಮನೆಯಲ್ಲಿದ್ದ ₹ 2 ಸಾವಿರ ಕದ್ದುಕೊಂಡು ಹೋಗಿ ಸಹಪಾಠಿಗಳಿಗೆ ನೀಡಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಪರಾಧ ಸುದ್ದಿ

‘ಒಂದು ಬಾರಿ ಹಣ ಪಡೆದಿದ್ದ ಸಹಪಾಠಿಗಳು, ಪುನಃ ಹಣಕ್ಕಾಗಿ ಬೇಡಿಕೆ ಇರಿಸಿದ್ದರು. ಹಣವಿಲ್ಲವೆಂದು ಬಾಲಕ ಹೇಳಿದ್ದಾಗ, ಕಪಾಳಕ್ಕೆ ಹೊಡೆದು ಹಲ್ಲೆ ಮಾಡಿದ್ದರು. ಜೀವ ಸಹಿತ ಬಿಡುವುದಿಲ್ಲವೆಂದು ಹೇಳಿ ಪುನಃ ಹಣ ತರಿಸಿಕೊಂಡಿದ್ದರು. ಯುವಕರಾದ ಸೈಫ್, ಅರ್ಫತ್ ಹಾಗೂ ಮುಜ್ಜುನನ್ನು ಪರಿಚಯಿಸಿದ್ದ ಸಹಪಾಠಿಗಳು, ‘ಇವರು ನಮ್ಮ ಪ್ರದೇಶದ ರೌಡಿಗಳು. ನೀನು ಇವರಿಗೂ ಹಣ ತಂದುಕೊಡಬೇಕು. ಇಲ್ಲದಿದ್ದರೆ, ನಿನ್ನನ್ನು ಹಾಗೂ ನಿನ್ನ ತಂದೆ–ತಾಯಿಯನ್ನು ಇವರು ಕೊಲೆ ಮಾಡುತ್ತಾರೆ’ ಎಂದು ಬೆದರಿಸಿದ್ದರು. ಇನ್‌ಸ್ಟಾಗ್ರಾಮ್ ಆ್ಯಪ್‌ನಲ್ಲೂ ಬೆದರಿಕೆ ಸಂದೇಶ ಕಳುಹಿಸುತ್ತಿದ್ದರು.’

‘ಕೊಲೆ ಬೆದರಿಕೆಗೆ ಹೆದರಿದ್ದ ಬಾಲಕ, ಮನೆಯಲ್ಲಿದ್ದ ಹಣ ಕದ್ದು ಯುವಕರಿಗೂ ಕೊಡಲಾರಂಭಿಸಿದ್ದ. ಇತ್ತೀಚೆಗೆ ಎರಡು ಚಿನ್ನದ ಉಂಗುರಗಳನ್ನೂ ಕದ್ದು ಆರೋಪಿಗಳಿಗೆ ಕೊಟ್ಟಿದ್ದ. ಈ ಬಗ್ಗೆ ತಂದೆ ಪ್ರಶ್ನಿಸಿದಾಗ ಬಾಲಕ ಬಾಯ್ಬಿಟ್ಟಿದ್ದ. ಪ್ರಕರಣ ಸಂಬಂಧ ಬಾಲಕನ ಹೇಳಿಕೆಯನ್ನೂ ಪಡೆಯಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಹಲ್ಲೆಗೆ ಸುಪಾರಿ ನೀಡಿದ್ದ ಟೀ ಅಂಗಡಿ ಮಾಲೀಕ

ಬೆಂಗಳೂರು: ಎಚ್‌ಎಎಲ್ ಠಾಣೆ ವ್ಯಾಪ್ತಿಯ ಕುಂದಲಹಳ್ಳಿ ಬಳಿ ಬೇಕರಿಯೊಂದಕ್ಕೆ ನುಗ್ಗಿ ವ್ಯಾಪಾರಿಗಳಿಬ್ಬರ ಮೇಲೆ ಹಲ್ಲೆ ಮಾಡಿದ್ದ ಪ್ರಕರಣದಲ್ಲಿ ಮತ್ತೊಬ್ಬ ಆರೋಪಿ ಮಂಜುನಾಥ್ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.


ಮಂಜುನಾಥ್

‘ಹೊಸಕೋಟೆಯ ಮಂಜುನಾಥ್, ಹಲವು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ. ಕುಂದಲಹಳ್ಳಿ ಬಳಿ ‘ತೇಜಸ್ ಟೀ ಅಂಗಡಿ’ ಇಟ್ಟುಕೊಂಡಿದ್ದ. ಪ್ರಕರಣ ಸಂಬಂಧ ಅಶ್ವಥ್‌ನಗರದ ಕಾರ್ತಿಕ್, ಸಲ್ಮಾನ್ ಹಾಗೂ ಮಾರತ್ತಹಳ್ಳಿಯ ಕಾರ್ತಿಕ್ ಎಂಬುವವರನ್ನು ಬಂಧಿಸಲಾಗಿತ್ತು. ಮೂವರು ನೀಡಿರುವ ಹೇಳಿಕೆ ಆಧರಿಸಿ ಇದೀಗ ಮಂಜುನಾಥ್‌ನನ್ನು ಸೆರೆಹಿಡಿಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬ್ರಹ್ಮಲಿಂಗೇಶ್ವರ ಜ್ಯೂಸ್ ಆ್ಯಂಡ್ ಕಾಂಡಿಮೆಂಡ್ಸ್ ಬೇಕರಿಗೆ ಗುರುವಾರ (ಡಿ. 8) ರಾತ್ರಿ ನುಗ್ಗಿದ್ದ ದುಷ್ಕರ್ಮಿಗಳು, ಬೇಕರಿಯಲ್ಲಿದ್ದ ನವೀನ್ ಶೆಟ್ಟಿ ಹಾಗೂ ಪ್ರಜ್ವಲ್ ಶೆಟ್ಟಿ ಮೇಲೆ ಹಲ್ಲೆ ಮಾಡಿ ಪರಾರಿಯಾಗಿದ್ದರು. ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯ ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿತ್ತು’ ಎಂದು ತಿಳಿಸಿವೆ.

ವ್ಯಾಪಾರ ಕಡಿಮೆಯಾಗಿದ್ದಕ್ಕೆ ಸುಪಾರಿ: ‘ಆರೋಪಿ ಮಂಜುನಾಥ್‌ನ ಟೀ ಅಂಗಡಿ ಪಕ್ಕದಲ್ಲೇ ನವೀನ್ ಶೆಟ್ಟಿ ಹಾಗೂ ಪ್ರಜ್ವಲ್ ಬೇಕರಿ ತೆರೆದಿದ್ದರು. ಟೀ ಸಹ ಸಿದ್ಧಪಡಿಸಿ ಮಾರುತ್ತಿದ್ದರು. ಹೆಚ್ಚಿನ ಗ್ರಾಹಕರು ಬೇಕರಿಗೆ ಹೋಗಿ ಟೀ ಕುಡಿಯುತ್ತಿದ್ದರು. ಇದರಿಂದಾಗಿ ಮಂಜುನಾಥ್ ಅಂಗಡಿಯಲ್ಲಿ ವ್ಯಾಪಾರ ಕಡಿಮೆಯಾಗಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ತನ್ನ ವ್ಯಾಪಾರ ಕಡಿಮೆಯಾಗಿದ್ದರಿಂದ ಸಿಟ್ಟಾದ ಮಂಜುನಾಥ್, ಸ್ಥಳೀಯ ಯುವಕರಿಗೆ ಸುಪಾರಿ ನೀಡಿ ಬೇಕರಿಗೆ ನುಗ್ಗುವಂತೆ ಮಾಡಿ ಹಲ್ಲೆ ಮಾಡಿಸಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ. ಪ್ರಕರಣದ ಮತ್ತಷ್ಟು ಆರೋಪಿಗಳನ್ನು ಬಂಧಿಸಬೇಕಿದೆ’ ಎಂದು ಮೂಲಗಳು ಹೇಳಿವೆ.

ಅನಧಿಕೃತ ಕ್ಯಾಸಿನೊ: ಸಿಸಿಬಿ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾನಗರದ 80 ಅಡಿ ರಸ್ತೆಯಲ್ಲಿ ಅನಧಿಕೃತವಾಗಿ ನಡೆಸುತ್ತಿದ್ದ ಕ್ಯಾಸಿನೊ ಕ್ಲಬ್‌ವೊಂದರ ಮೇಲೆ ಸಿಸಿಬಿ ಪೊಲೀಸರು ಶನಿವಾರ ರಾತ್ರಿ ದಾಳಿ ಮಾಡಿದ್ದು, 20 ಮಂದಿಯನ್ನು ವಶಕ್ಕೆ ಪಡೆದಿದ್ದಾರೆ.

‘ಅಪರಾಧ ಹಿನ್ನೆಲೆಯುಳ್ಳ ಕೆಲವರು ಕ್ಯಾಸಿನೊ ಕ್ಲಬ್ ತೆರೆದಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕ್ಲಬ್ ಮೇಲೆ ದಾಳಿ ಮಾಡಲಾಗಿದೆ’ ಎಂದು ಸಿಸಿಬಿ ಮೂಲಗಳು ಹೇಳಿವೆ. ‘ಕ್ಲಬ್ ಕೆಲಸಗಾರರೂ ಸೇರಿ 20 ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಕ್ಲಬ್ ಮಾಲೀಕರು ಯಾರು ಎಂಬುದನ್ನು ಪತ್ತೆ ಮಾಡಿ ಪ್ರಕರಣ ದಾಖಲಿಸಲಾಗುವುದು’ ಎಂದು ತಿಳಿಸಿವೆ.

ಪಿಎಸ್‌ಐ, ಎಎಸ್‌ಐ ಅಮಾನತು

ಬೆಂಗಳೂರು: ಚಿನ್ನದ ವ್ಯಾಪಾರಿಯೊಬ್ಬರನ್ನು ಅಕ್ರಮವಾಗಿ ಅಡ್ಡಗಟ್ಟಿ ಕರ್ತವ್ಯಲೋಪ ಎಸಗಿದ್ದ ಆರೋಪದಡಿ ಎಸ್.ಜೆ. ಪಾರ್ಕ್ ಠಾಣೆಯ ಪಿಎಸ್‌ಐ ಅಶೋಕ ಠಾಕೂರ್ ಹಾಗೂ ಎಎಸ್‌ಐ ರಮೇಶ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

‘ಅಶೋಕ ಮತ್ತು ರಮೇಶ್ ಅವರು ಅಕ್ರಮವಾಗಿ ಚಿನ್ನದ ವ್ಯಾಪಾರಿಯನ್ನು ವಿಚಾರಣೆ ಮಾಡಿದ್ದಾರೆ. ಠಾಣೆಯ ಹಿರಿಯ ಅಧಿಕಾರಿಗಳಿಗೆ ವಿಷಯ ತಿಳಿಸದೇ ಮುಚ್ಚಿಟ್ಟಿದ್ದಾರೆ. ಎಸಿಪಿ ಮೂಲಕ ಪ್ರಾಥಮಿಕ ತನಿಖೆ ನಡೆಸಿ, ಇಬ್ಬರನ್ನೂ ಅಮಾನತು ಮಾಡಲಾಗಿದೆ. ಇಲಾಖೆ ವಿಚಾರಣೆಗೆ ಆದೇಶಿಸಲಾಗಿದೆ’ ಎಂದು ಕೇಂದ್ರ ವಿಭಾಗದ ಡಿಸಿಪಿ ಶ್ರೀನಿವಾಸ್ ಗೌಡ ‘ಪ್ರಜಾವಾಣಿ’ಗೆ ತಿಳಿಸಿದರು.

ಮೂರೂವರೆ ಕೆ.ಜಿ ಚಿನ್ನವಿದ್ದ ಬ್ಯಾಗ್: ‘ಚಿನ್ನದ ವ್ಯಾಪಾರಿಯೊಬ್ಬರು ಮೂರೂವರೆ ಕೆ.ಜಿ ಚಿನ್ನವಿದ್ದ ಬ್ಯಾಗ್ ಹಿಡಿದುಕೊಂಡು ಡಿ. 3ರಂದು ಎಸ್.ಜೆ. ಪಾರ್ಕ್ ಠಾಣೆ ವ್ಯಾಪ್ತಿಯಲ್ಲಿ ಹೊರಟಿದ್ದರು. ಅವರನ್ನು ಅಡ್ಡಗಟ್ಟಿದ್ದ ಪಿಎಸ್‌ಐ ಹಾಗೂ ಎಎಸ್‌ಐ, ಬ್ಯಾಗ್ ಪಡೆದು ಪರಿಶೀಲಿಸಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬ್ಯಾಗ್‌ನಲ್ಲಿ ಚಿನ್ನವಿರುವುದನ್ನು ನೋಡಿದ್ದ ಪಿಎಸ್‌ಐ–ಎಎಸ್‌ಐ, ಅದರ ದಾಖಲೆಗಳನ್ನು ಕೇಳಿದ್ದರು. ವ್ಯಾಪಾರಿ ಸೂಕ್ತ ದಾಖಲೆಗಳನ್ನು ತೋರಿಸಿದ್ದರು. ಅಷ್ಟಕ್ಕೇ ಸುಮ್ಮನಾಗದ ಪಿಎಸ್‌ಐ–ಎಎಸ್‌ಐ, ‘ಚಿನ್ನಾಭರಣವನ್ನು ಜಪ್ತಿ ಮಾಡುತ್ತೇವೆ. ಈ ರೀತಿ ಮಾಡಬಾರದೆಂದರೆ, ಹಣ ನೀಡಬೇಕು’ ಎಂದು ಬೇಡಿಕೆ ಇಟ್ಟಿದ್ದರು.’

‘ಚಿನ್ನ ಜಪ್ತಿ ಮಾಡಿದರೆ ತೊಂದರೆಯಾಗುತ್ತದೆಂದು ತಿಳಿದ ವ್ಯಾಪಾರಿ, ಹಣ ನೀಡಿ ಬ್ಯಾಗ್ ವಾಪಸು ಪಡೆದುಕೊಂಡು ಹೋಗಿದ್ದರು. ವ್ಯಾಪಾರಿಯಿಂದ ಹಣ ಪಡೆದು ಬ್ಯಾಗ್ ನೀಡಿದ್ದ ಪಿಎಸ್‌ಐ–ಎಎಸ್‌ಐ, ಚಿನ್ನ ಪರಿಶೀಲನೆ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಯಾವುದೇ ಮಾಹಿತಿ ನೀಡಿರಲಿಲ್ಲ‘ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಕೆಲವು ದಿನಗಳ ನಂತರ ಸ್ನೇಹಿತರ ಬಳಿ ವಿಷಯ ತಿಳಿಸಿದ್ದ ವ್ಯಾಪಾರಿ, ‘ಎಲ್ಲ ದಾಖಲೆ ಇದ್ದರೂ ಪೊಲೀಸರು ಸುಖಾಸುಮ್ಮನೇ ಅಡ್ಡಗಟ್ಟಿ ಹಣ ಪಡೆದರು’ ಎಂದಿದ್ದರು. ಈ ವಿಷಯ ಡಿಸಿಪಿ ಗಮನಕ್ಕೆ ಬಂದಿತ್ತು. ಬಳಿಕವೇ ಎಸಿಪಿ ನೇತೃತ್ವದಲ್ಲಿ ವಿಚಾರಣೆಗೆ ಆದೇಶಿಸಿದ್ದರು’ ಎಂದು ಮೂಲಗಳು ಹೇಳಿವೆ.

ಜಯರಾಮ್ ರಾಯಪುರ ಅವರ ನಾಟಕ ಕೃತಿ ಬಿಡುಗಡೆ- ಹಂಪನಾ ಅಭಿಮತ

ಇತಿಹಾಸ ಕಟ್ಟಿಕೊಡುವ ‘ಚಾವುಂಡರಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಮಿತ ಪಾತ್ರಗಳ ಮೂಲಕ ಅಪರಿಮಿತ ಇತಿಹಾಸದ ಕೆನೆಪದರನ್ನು ಚಾವುಂಡರಾಯ ನಾಟಕ ಕಟ್ಟಿಕೊಡುತ್ತದೆ. ಸಾಹಿತ್ಯ ಸ್ವರೂಪದ ಕೃತಿಯನ್ನು ರಂಗದ ಮೇಲೆ ತಂದಾಗ ಆಶಯ ಪರಿಪೂರ್ಣಗೊಳ್ಳುತ್ತದೆ ಎಂದು ಸಾಹಿತಿ ಹಂಪ ನಾಗರಾಜಯ್ಯ ಹೇಳಿದರು.

ನಗರದಲ್ಲಿ ಶುಕ್ರವಾರ ಸಮಾಜ ಮುಖಿ ಪ್ರಕಾಶನ ಹಮ್ಮಿಕೊಂಡಿದ್ದ ಜಯರಾಮ್ ರಾಯಪುರ ಅವರ ‘ಚಾವುಂಡರಾಯ’ ನಾಟಕ ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಹಲವು ಯುದ್ಧಗಳಲ್ಲಿ ದಿಗ್ವಿಜಯ ಸಾಧಿಸಿದ ಚಾವುಂಡರಾಯ ಅಹಿಂಸೆಯ ಹಾದಿ ತುಳಿದದ್ದು, ಹಲವು ಶತಮಾನ ಆಳ್ವಿಕೆ ನಡೆಸಿದ ಗಂಗರ ಅವಸಾನ, ದೃಶ್ಯ ಸಂಕೀರ್ಣ ಸ್ವರೂಪ, ಕ್ಷೋಭೆ, ತಳಮಳ, ಬಿಕ್ಕಟ್ಟುಗಳನ್ನು ಕಣ್ಣಿಗೆ ಕಟ್ಟುವಂತೆ ಕೃತಿಯಲ್ಲಿ ಚಿತ್ರಿಸಲಾಗಿದೆ. ಇಡೀ ನಾಟಕ 10ನೇ ಶತಮಾನಕ್ಕೆ ತೆಗೆದುಕೊಂಡು ಹೋಗಿ, ವಾಸ್ತವದ ನೆಲೆಗಟ್ಟಿನಲ್ಲಿ ಮರುಚಿಂತನೆಗೆ ಹಚ್ಚುತ್ತದೆ ಎಂದು ವಿವರಿಸಿದರು.

ಚಾವುಂಡರಾಯ ಶಿಲ್ಪಕಲಾ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಜಗತ್ತು ಮರೆಯುವಂತಿಲ್ಲ. ಸಂಸ್ಕೃತದ 20 ಸಾವಿರ ಶ್ಲೋಕಗಳನ್ನು ಕನ್ನಡಕ್ಕೆ ಭಾಷಾಂತರಿಸಿದ ಶ್ರೇಯವೂ ಅವರಿಗೆ ಸಲ್ಲುತ್ತದೆ. ಜೀವ ಇರುವಾಗಲೇ ದೇಹತ್ಯಾಗ ಮಾಡುವ ಸಲ್ಲೇಖನ ವ್ರತ ಆತ್ಮಹತ್ಯೆಯಲ್ಲ ಎನ್ನುವುದೂ ನಿರೂಪಿತವಾಗಿದೆ ಎಂದರು.

ಕವಿ ಎಚ್.ಎಸ್.ಶಿವಪ್ರಕಾಶ್ ಮಾತನಾಡಿ, ಜೈನ ಧರ್ಮ ಭಾರತೀಯ ಸಂಸ್ಕೃತಿಗೆ ನೀಡಿದ ಪ್ರಮುಖ ಕೊಡುಗೆಗಳಲ್ಲಿ ಮೋಕ್ಷದ ಪುರುಷತತ್ವವನ್ನು ಕಾವ್ಯದಲ್ಲಿ ತಂದದ್ದು ಪ್ರಮುಖವಾದುದು. ನಾಟಕದಲ್ಲಿ ಶೃಂಗಾರದ ಕೊರತೆ ಇದೆ. ಆದರೆ, ಜೈನ ಧರ್ಮದ ಆಧ್ಯಾತ್ಮಿಕತೆ ಗಮನ ಸೆಳೆಯುತ್ತದೆ ಎಂದು ವಿಶ್ಲೇಷಿಸಿದರು.

ಗಂಗರ ಅಧ್ಯಯನಕ್ಕೆ ಪ್ರಾಧಿಕಾರ: ಸಿ.ಎಂ ಬೊಮ್ಮಾಯಿ

ತಲಕಾಡಿನ ಗಂಗರ ಇತಿಹಾಸದ ಅಧ್ಯಯನಕ್ಕೆ ಸಂಶೋಧನಾ ಪ್ರಾಧಿಕಾರ ರಚಿಸಲಾಗುವುದು. ಬರುವ ಬಜೆಟ್‌ನಲ್ಲೇ ಘೋಷಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಹಿಂದೂ ಧರ್ಮದಲ್ಲಿರುವ ನಿಷ್ಕ್ರಿಯತೆಯಿಂದ ಜೈನ ಧರ್ಮ ಹುಟ್ಟಿತ್ತು. ಜೈನ ಧರ್ಮದಿಂದ ಹಿಂದೂ ಧರ್ಮ ಪುನಃಶ್ಚೇತನಗೊಂಡಿದೆ. ಅಹಿಂಸೆ ಮತ್ತು ತ್ಯಾಗದ ಪ್ರತಿಪಾದನೆ ಪ್ರಬಲವಾಗಿದೆ.

ಗಂಗರು, ರಾಷ್ಟ್ರಕೂಟರು ವಿಶಿಷ್ಟ ಆಡಳಿತ ನೀಡಿದ್ದಾರೆ. ನಾಡಿನ ಭಾಷೆ, ಸಂಸ್ಕೃತಿ, ಕಲೆ ಎಲ್ಲವೂ ಆಳವಾಗಿ ಬೇರೂರಿದ ಅವರ ಇತಿಹಾಸವನ್ನು ಪ್ರತಿಯೊಬ್ಬರೂ ತಿಳಿಯಬೇಕು. ಆಗ ಮಾತ್ರ ಭವಿಷ್ಯದ ಸುಸಂಸ್ಕೃತ ನಾಡು ಕಟ್ಟಲು ಸಾಧ್ಯ ಎಂದರು.

ಶ್ರೇಷ್ಠ ಆಡಳಿತದ ಮಾದರಿಗಳನ್ನು ಮುಂದಿನ ಪೀಳಿಗೆಗೆ ತಿಳಿಸುವ ಕಾರ್ಯವಾಗಬೇಕು. ಐತಿಹಾಸಿಕ ಸಾಹಿತ್ಯವನ್ನು ವ್ಯಕ್ತಿತ್ವದ ಮೂಲಕ ಪ್ರತಿಬಿಂಬಿಸಿದರೆ ಸತ್ಯಾಂಶ ಬೆಳಕಿಗೆ ಬರುತ್ತದೆ. ಗಂಗರ ದಂಡ ನಾಯಕ ಚಾವುಂಡರಾಯನ ವ್ಯಕ್ತಿತ್ವವನ್ನು ಜಯರಾಮ್ ನಾಟಕದ ರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ. ಕನ್ನಡದ ಸಾಹಿತ್ಯದಲ್ಲಿ ಇದೊಂದು ಹೊಸ ಆಯಾಮ ಎಂದು ಬಣ್ಣಿಸಿದರು.

ಕೃತಿ ಕುರಿತು
ನಾಟಕ ಕೃತಿ: ಚಾವುಂಡರಾಯ
ಲೇಖಕ: ಜಯರಾಮ್ ರಾಯಪುರ
ಪ್ರಕಾಶನ: ಸಮಾಜಮುಖಿ
ಪುಟಗಳು: 80
ಬೆಲೆ: 100


ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ‘ಚಾವುಂಡರಾಯ’ ನಾಟಕ ಕೃತಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಿಡುಗಡೆ ಮಾಡಿದರು. ಜಯರಾಮ್ ರಾಯಪುರ, ನಿರ್ಮಲಾನಂದನಾಥ ಸ್ವಾಮೀಜಿ, ಹಂಪನಾ, ಎಚ್.ಎಸ್.ಶಿವಪ್ರಕಾಶ್ ಇದ್ದಾರೆ.

ಲೇಖಕ ಜಯರಾಮ್ ರಾಯಪುರ ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೃತಿ ಬಿಡುಗಡೆ ಮಾಡಿದರು. ಆದಿ ಚುಂಚನಗಿರಿ ಮಹಾಸಂಸ್ಥಾನ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಸಮಾಜಮುಖಿ ಪ್ರಕಾಶದ ಮಾಲೀಕ ಚಂದ್ರಕಾಂತ ವಡ್ಡು, ಶಶಿಧರ್ ಇದ್ದರು.

ರೇಷ್ಮೆ ಗೂಡು: ಸಿಗದ ವೈಜ್ಞಾನಿಕ ಬೆಲೆ

ಒಂದನೇ ಪುಟದಿಂದ..

ನುಣುಪಾಗದ ಜೀವನ: ಗೂಡಿನ ಬೆಲೆ ಏರುತ್ತಿದ್ದರೂ, ರೇಷ್ಮೆ ಬಟ್ಟೆಯಷ್ಟು ನುಣುಪಾದ ಜೀವನ ರೇಷ್ಮೆ ಕೃಷಿಕರದ್ದಲ್ಲ. ರೇಷ್ಮೆ ಮೊಟ್ಟೆಗಳನ್ನು ಚಾಕಿ ಮಾಡಿ, ಹುಳುಗಳನ್ನು ಬಿದಿರಿನ ತಟ್ಟೆಯಲ್ಲಿರಿಸಿ, ಹಿಪ್ಪುನೇರಳೆ ಸೊಪ್ಪು ಹಾಕಿ ಜೋಪಾನ ವಾಗಿ 3-4 ವಾರಗಳ ಕಾಲ ಬೆಳೆಸುವ ರೈತರ ಶ್ರಮವನ್ನೆಲ್ಲ ರೇಷ್ಮೆ ಮಾರುಕಟ್ಟೆ ಎಂಬ ವ್ಯವಸ್ಥೆ ಗಳಿಗೆಯಲ್ಲಿಯೇ ಹೊಸಕಿ ಹಾಕಿಬಿಡುತ್ತಿದೆ. ಮಾರುಕಟ್ಟೆಯಲ್ಲಿನ ವಿವಿಧ ಬಗೆಯ ಮೋಸದ ಜಾಲದಲ್ಲಿ ಸಿಲುಕಿ ರೇಷ್ಮೆ ಕೃಷಿಕರು ಒದ್ದಾಡುತ್ತಿದ್ದಾರೆ.

ರೈತರು ಮಾರುಕಟ್ಟೆಗೆ ತರುವ ರೇಷ್ಮೆ ಗೂಡಿನೊಳಗಿರುವ ಹುಳುಗಳು ಮೂರು ದಿನಗಳಲ್ಲಿ ಚಿಟ್ಟೆಯಾಗಿ, ಗೂಡನ್ನು ಒಡೆದು ಹೊರಬರುತ್ತವೆ. ಅಷ್ಟರೊಳಗೆ ಗೂಡುಗಳನ್ನು ಮಾರಬೇಕಾದ ಅನಿವಾರ್ಯತೆ ರೈತರದ್ದು. ಇದನ್ನು ಅರಿತಿರುವ ರೀಲರ್‌ಗಳು ಹರಾಜಿನ ಮೊದಲ ಸುತ್ತಿನಲ್ಲಿಯೇ ಕಡಿಮೆ ಬೆಲೆ ನಮೂದಿಸುತ್ತಿದ್ದಾರೆ ಎಂಬ ಆರೋಪಗಳಿವೆ. ಈ ಮೂಲಕ ರೈತರು ಎರಡು ಮತ್ತು ಮೂರನೇ ಸುತ್ತಿನ ಹರಾಜಿನಲ್ಲಿ ಪಾಲ್ಗೊಂಡು ಇನ್ನಷ್ಟು ಕಡಿಮೆ ಬೆಲೆಗೆ ಗೂಡನ್ನು ಮಾರಲಿ ಎಂಬುದು ಅವರ ಅಪೇಕ್ಷೆಯಾಗಿದೆ ಎಂಬುದು ರೇಷ್ಮೆ ಕೃಷಿಕರ ದೂರು.

ಮಾರುಕಟ್ಟೆಗಳಲ್ಲಿ ಗುಣಮಟ್ಟ ಆಧರಿಸಿ ಗೂಡಿನ ವರ್ಗೀಕರಣ ಮತ್ತು ಶ್ರೇಣೀಕರಣ ಆಗುತ್ತಿಲ್ಲ. ಬದಲಿಗೆ ಗೂಡಿನ ಆವಕವನ್ನು ಆಧರಿಸಿ ಹರಾಜಿನಲ್ಲಿ ಬೆಲೆ ನಮೂದಿಸಲಾಗುತ್ತಿದೆ. ರೇಷ್ಮೆ ಗೂಡಿಗೆ ವೈಜ್ಞಾನಿಕ ಬೆಲೆ ನಿಗದಿ ಮಾಡಬೇಕಾದ ಸರ್ಕಾರ ಮೌನವಾಗಿದೆ. ಇದರ ಪರಿಣಾಮ ರೈತರಿಗೆ ದಶಕಗಳಿಂದಲೂ ಅನ್ಯಾಯ ಮುಂದುವರಿದಿದೆ.

ಸದ್ಬಳಕೆಯಾಗದ ಪರೀಕ್ಷಾ ಕೇಂದ್ರಗಳು: ರಾಜ್ಯದ 55 ರೇಷ್ಮೆ ಗೂಡಿನ ಮಾರುಕಟ್ಟೆಗಳ ಪೈಕಿ ಆರು (ರಾಮನಗರ, ಶಿಡ್ಲಘಟ್ಟ, ಕನಕಪುರ, ಕೋಲಾರ, ಚನ್ನಪಟ್ಟಣ ಮತ್ತು ಚಿಂತಾಮಣಿ) ಮಾರುಕಟ್ಟೆಗಳಲ್ಲಿ ಮೂರು ವರ್ಷಗಳಿಂದ ರೇಷ್ಮೆ ಗೂಡಿನ ಪರೀಕ್ಷಾ ಕೇಂದ್ರಗಳು ಆರಂಭವಾಗಿವೆ. ಆದರೆ ಮಾರುಕಟ್ಟೆಗೆ ಬರುವ ರೈತರ ಎಲ್ಲಾ ರೇಷ್ಮೆ ಗೂಡುಗಳ ಗುಣಮಟ್ಟವನ್ನು ಈ ಕೇಂದ್ರಗಳಲ್ಲಿ ಪರೀಕ್ಷಿಸಲಾಗುತ್ತಿಲ್ಲ. ಇದರಿಂದಾಗಿ ವೈಜ್ಞಾನಿಕ ಬೆಲೆ ರೈತರ ಕೈಗೆಟುಕುತ್ತಿಲ್ಲ.

ಅಧಿಕಾರಿಗಳೇ ಹೇಳುವಂತೆ ರಾಮನಗರ ಮಾರುಕಟ್ಟೆಯಲ್ಲಿ ಕೇವಲ ಶೇ 20ರಿಂದ 25ರಷ್ಟು, ಚನ್ನಪಟ್ಟಣ, ಕನಕಪುರ ಮಾರುಕಟ್ಟೆಗಳಲ್ಲಿ ಶೇ 30ರಿಂದ 40ರಷ್ಟು, ಕೋಲಾರ ಮಾರುಕಟ್ಟೆಯಲ್ಲಿ ಶೇ 20ರಷ್ಟು ಲಾಟ್‌ಗಳಲ್ಲಿನ ಗೂಡುಗಳನ್ನು ಮಾತ್ರ ಪರೀಕ್ಷೆ ಮಾಡಲಾಗುತ್ತಿದೆ. ಶಿಡ್ಲಘಟ್ಟ ಮಾರುಕಟ್ಟೆಯಲ್ಲಿ ಪರೀಕ್ಷಾ ಕೇಂದ್ರ ಇದ್ದರೂ ಅದು ತೆರೆಯುವುದೇ ಅಪರೂಪ. ಚಿಂತಾಮಣಿ ಮಾರುಕಟ್ಟೆಯಲ್ಲಿ ಗೂಡು ಪರೀಕ್ಷೆಯೇ ಆಗುತ್ತಿಲ್ಲ. ಮತ್ತೊಂದು ಪ್ರಮುಖ ಮಾರುಕಟ್ಟೆಯಾದ ಕೊಳ್ಳೇಗಾಲದಲ್ಲಿ ಕೇಂದ್ರ ಇನ್ನೂ ಕಾರ್ಯಾರಂಭ ಮಾಡಿಲ್ಲ.

ಒಂದು ವೇಳೆ ಎಲ್ಲ ಮಾರುಕಟ್ಟೆಗಳಲ್ಲಿ ವೈಜ್ಞಾನಿಕವಾಗಿ ಗೂಡಿನ ಗುಣಮಟ್ಟ ಪರೀಕ್ಷೆ ನಡೆದರೆ, ಧಾರಣೆಯಲ್ಲಿ ಇನ್ನಷ್ಟು ಏರಿಕೆ ದಾಖಲಾಗಿ, ರೈತರಿಗೆ ಮತ್ತಷ್ಟು ಲಾಭವಾಗುವುದು ಖಚಿತ. ಆದರೆ ಈ ವ್ಯವಸ್ಥೆ ಅಳವಡಿಸಿಕೊಳ್ಳಲು ಸರ್ಕಾರ, ಅಧಿಕಾರಿಗಳು, ರೀಲರ್‌ಗಳಿಗೆ ಆಸಕ್ತಿ ಇದ್ದಂತಿಲ್ಲ ಎಂಬುದು ರೇಷ್ಮೆ ರೈತರ ಅಳಲು.

‘ವೈಜ್ಞಾನಿಕ ಬೆಲೆ ನಿಗದಿಗೆ ಬೇಕಾದ ಅಗತ್ಯ ಪರಿಕರಗಳು, ಪರೀಕ್ಷಾ ಕೇಂದ್ರಗಳು ರಾಜ್ಯದ ಕೆಲ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ 2020ರಿಂದ ಇದ್ದರೂ, ಅವುಗಳ ಸದ್ಬಳಕೆ ಆಗುತ್ತಿಲ್ಲ. ಗೂಡಿನಲ್ಲಿರುವ ಕಳಪೆ ಗೂಡುಗಳ (ಕಲೆಯುಳ್ಳ ಅಥವಾ ಊಜಿ ಬಾಧಿತ ಅಥವಾ ಕಾಯಿ ಗೂಡು) ಪ್ರಮಾಣ, ಗೂಡಿನ ತೂಕ, ಕವಚ ಮತ್ತು ತೇವಾಂಶದ ಪ್ರಮಾಣ, ಗೂಡಿನಲ್ಲಿರುವ ಪ್ಯೂಪಾ (ರೇಷ್ಮೆ ಹುಳು) ತೂಕ, ರೇಷ್ಮೆ ಗೂಡಿನ ನಿವ್ವಳ ತೂಕ, ಗೂಡಿನ ನೂಲು ಬಿಚ್ಚಾಣಿಕೆಯ ಸಾಮರ್ಥ್ಯವನ್ನು ಈ ಕೇಂದ್ರಗಳಲ್ಲಿ ಪರೀಕ್ಷಿಸಿ ತಿಳಿದುಕೊಳ್ಳಬಹುದು. ಈ ಮೂಲಕ ಗುಣಮಟ್ಟವನ್ನು ಗುರುತಿಸಿ ಎ, ಬಿ, ಸಿ, ಡಿ ಎಂದು ಶ್ರೇಣಿ ನೀಡಿ, ವೈಜ್ಞಾನಿಕ ಬೆಲೆ ದೊರೆಯುವಂತೆ ಮಾಡಬಹುದು. ಇದು ರಾಜ್ಯದ ರೇಷ್ಮೆ ಕೃಷಿಕರ ಬಹು ವರ್ಷಗಳ ಬೇಡಿಕೆ. ಆದರೆ ಸರ್ಕಾರ, ಅಧಿಕಾರಿಗಳ ಇಚ್ಛಾಶಕ್ತಿಯ ಕೊರತೆಯಿಂದ ಅನುಷ್ಠಾನ ಆಗುತ್ತಿಲ್ಲ’ ಎಂಬುದು ರಾಜ್ಯ ರೇಷ್ಮೆ ಬೆಳೆಗಾರರ ಹಿತರಕ್ಷಣಾ ಸಮಿತಿಯ ಸಂಚಾಲಕ ಸಿ. ಪುಟ್ಟಸ್ವಾಮಿ ಅವರ ಬೇಸರದ ನುಡಿ.

ರೇಷ್ಮೆ ಗೂಡನ್ನು ವೈಜ್ಞಾನಿಕವಾಗಿ ದೀರ್ಘಕಾಲ ಸಂರಕ್ಷಿಸಿಡಲು ಸಾಧ್ಯವಿರುವ ‘ಹಾಟ್ ಏರ್ ಡ್ರೈಯರ್’ಗಳೂ ರಾಜ್ಯದ ಯಾವುದೇ ಗೂಡಿನ ಮಾರುಕಟ್ಟೆಗಳಲ್ಲಿ ಇಲ್ಲವಾಗಿದೆ. ಈ ಡ್ರೈಯರ್‌ಗಳು ಇದ್ದರೆ, ಧಾರಣೆ ಕುಸಿದಾಗ ಗೂಡನ್ನು ಸಂರಕ್ಷಿಸಿ, ಹೆಚ್ಚು ಬೆಲೆ ಬಂದಾಗ ಮಾರಲು ಅನುಕೂಲವಾಗುತ್ತದೆ. ಆದರೆ ಈ ಸೌಲಭ್ಯ ಇಲ್ಲದ್ದರಿಂದ ರೈತರಿಗೆ ಅನ್ಯಾಯವಾಗುತ್ತಿದೆ. ಕೆಲ ವ್ಯಾಪಾರಿಗಳು ಈ ಸೌಲಭ್ಯವನ್ನು ಅಳವಡಿಸಿಕೊಂಡು ಗೂಡನ್ನು ಶೇಖರಿಸುತ್ತಿದ್ದಾರೆ. ಸರ್ಕಾರವೇ ಈ ಸವಲತ್ತನ್ನು ನೀಡಿದರೆ ರೇಷ್ಮೆ ಬೆಳೆಗಾರರಿಗೆ ಅನುಕೂಲವಾಗುತ್ತದೆ.

ಕಣ್ಣಳತೆ, ಕೈಯಳತೆಯಲ್ಲೇ ಲೆಕ್ಕಾಚಾರ: ಮಾರುಕಟ್ಟೆಗೆ ಬರುವ ಗೂಡುಗಳನ್ನು ರೀಲರ್‌ಗಳು ಅವೈಜ್ಞಾನಿಕವಾಗಿ ಕಣ್ಣಳತೆ, ಕೈಯಳತೆಯಲ್ಲಿಯೇ ಅಳೆದು, ಹರಾಜಿನಲ್ಲಿ ಬೆಲೆ ನಮೂದಿಸುತ್ತಿದ್ದಾರೆ. ಇದರಿಂದ ಗೂಡಿಗೆ ವೈಜ್ಞಾನಿಕ ಬೆಲೆ ದೊರೆಯದೆ, ರೈತರು ವಂಚನೆಗೆ ಒಳಗಾಗುತ್ತಿದ್ದಾರೆ.

‘ರೇಷ್ಮೆ ಗೂಡನ್ನು ಮುಟ್ಟಿ ನೋಡಿದರೆ ಸಾಕು ಅದರ ಗುಣಮಟ್ಟ ನಮಗೆ ಗೊತ್ತಾಗುತ್ತದೆ. ನಮ್ಮಜ್ಜರ ಕಾಲದಿಂದ ಇದು ಕರಗತವಾಗಿದೆ. ಏನೇ ಗ್ರೇಡಿಂಗ್ ನೀಡಿದರೂ ನಾವು ವೈಯಕ್ತಿಕವಾಗಿ ಪರಿಶೀಲಿಸಿಯೇ ಆ ಗೂಡು ಬೇಕೊ ಬೇಡವೊ ಎಂಬುದನ್ನು ನಿರ್ಧರಿಸಿ ಹರಾಜಿನಲ್ಲಿ ಬೆಲೆ ನಮೂದಿಸುತ್ತೇವೆ’ ಎನ್ನುತ್ತಾರೆ ಕನಕಪುರದ ರೀಲರ್ ದಸ್ತಗೀರ್ ಪಾಷಾ.

‘ರೇಷ್ಮೆ ಗೂಡುಗಳು ಮಾರುಕಟ್ಟೆಗೆ ಬಂದ ಬಳಿಕ ಅದರ ಗುಣಮಟ್ಟ ಪರೀಕ್ಷಿಸಿದರೆ ಏನು ಪ್ರಯೋಜನ. ಮಾರುಕಟ್ಟೆಗೆ ಬರುವ ಮೊದಲೇ ಅವು ಗುಣಮಟ್ಟದಿಂದ ಕೂಡಿರುವಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ರೇಷ್ಮೆ ಇಲಾಖೆ ಅಧಿಕಾರಿಗಳು ಮತ್ತು ರೈತರದ್ದು’ ಎಂಬುದು ರಾಮನಗರದ ರೀಲರ್ ಪರ್ವೀಜ್ ಪಾಷಾ ಅವರ ಪ್ರತಿಕ್ರಿಯೆ.

ನಿಲ್ಲದ ಗೂಡು ಕಳವು: ಮಾರುಕಟ್ಟೆಯಲ್ಲಿ ಗೂಡು ಕಳ್ಳತನ, ಮೋಸ, ‘ಲಾಭದ ಗೂಡು’ ಪಡೆಯುವುದು ಇನ್ನೂ ನಿಂತಿಲ್ಲ. ಸದ್ಯದ ಮಟ್ಟಿಗೆ ಉತ್ತಮ ಧಾರಣೆಯಿರುವ ಈ ಸಂದರ್ಭದಲ್ಲೂ ವಂಚನೆ ಮುಂದುವರಿದಿರುವುದು ರೈತರಿಗೆ ದೊಡ್ಡ ಪ್ರಮಾಣದಲ್ಲಿ ನಷ್ಟ ಉಂಟುಮಾಡುತ್ತಿದೆ.

ಇದೇ ಅಲ್ಲದೆ, ಹರಾಜಿನಲ್ಲಿ ಹೆಚ್ಚಿನ ದರ ನಮೂದಿಸಿ, ಬಳಿಕ ತಪ್ಪಾಗಿ ನಮೂದಿಸಿದ್ದೇನೆ ಎಂದು ಸಬೂಬು ಹೇಳಿ ರೈತರಿಗೆ ಕಡಿಮೆ ಹಣ ನೀಡುವ ರೀಲರ್‌ಗಳೂ ಇದ್ದಾರೆ. ಇದರಿಂದಾಗಿ ಮಾರುಕಟ್ಟೆಯಲ್ಲಿ ರೈತರು ಮತ್ತು ರೀಲರ್‌ಗಳ ನಡುವೆ ವಾಗ್ವಾದ, ಜಗಳಗಳು ನಡೆದು, ಹಲ್ಲೆ ಪ್ರಕರಣಗಳೂ ದಾಖಲಾಗಿವೆ.

ರೀಲರ್‌ಗಳೇ ಅಲ್ಲದೆ ಮಾರುಕಟ್ಟೆಯ ಅಧಿಕಾರಿ, ಸಿಬ್ಬಂದಿ ಸಹ ರೈತರನ್ನು ಶೋಷಿಸುತ್ತಿದ್ದಾರೆ. ಗೂಡು ಕಳವಿಗೆ ಇಲ್ಲಿನ ಕೆಲ ಸಿಬ್ಬಂದಿ ನೆರವಾಗುತ್ತಿದ್ದಾರೆ ಎಂಬ ಆರೋಪವೂ ಇದೆ. ಮಾರುಕಟ್ಟೆಯ ಕೆಲ ಹಿರಿಯ ಅಧಿಕಾರಿಗಳು ರೈತರಿಗೆ ಸಂದಾಯ ಆಗಬೇಕಾದ ಮೊತ್ತವನ್ನು ದುರ್ಬಳಕೆ ಮಾಡಿಕೊಂಡು ವಂಚಿಸಿರುವ ಪ್ರಕರಣಗಳೂ ನಡೆದಿವೆ. ರಾಮನಗರ ಗೂಡಿನ ಮಾರುಕಟ್ಟೆಯ ಉಪ ನಿರ್ದೇಶಕರಾಗಿದ್ದ ಮುನ್ಶಿಬಸಯ್ಯ ಅವರು ರೈತರಿಗೆ ಸಂದಾಯ ಆಗಬೇಕಿದ್ದ ₹ 2 ಕೋಟಿಯಷ್ಟು ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದರು. ಈ ಕುರಿತು ಅವರ ವಿರುದ್ಧ ಕ್ರಿಮಿನಲ್ ಪ್ರಕರಣವೂ ದಾಖಲಾಗಿದೆ.

‘ರೆಂಡಿಟ್ಟಾ’ ಸೌಕರ್ಯವೂ ಇಲ್ಲ: ಒಂದು ಕೆ.ಜಿ ರೇಷ್ಮೆ ನೂಲು ತೆಗೆಯಲು ಎಷ್ಟು ಕೆ.ಜಿ ರೇಷ್ಮೆ ಗೂಡು ಬೇಕಾಗುತ್ತದೆ ಎಂಬುದನ್ನು ತಿಳಿದುಕೊಳ್ಳುವ ವಿಧಾನವೇ ‘ರೆಂಡಿಟ್ಟಾ’. ಇದರ ನೆರವಿನಿಂದ ಖಚಿತ ಮತ್ತು ಕರಾರುವಕ್ಕಾಗಿ ರೇಷ್ಮೆಯ ಗುಣಮಟ್ಟವನ್ನು ನಿಗದಿಪಡಿಸಲು ಸಾಧ್ಯ.

ಇದಕ್ಕೆ ಮಾರುಕಟ್ಟೆಗಳಲ್ಲಿ ಪೂರಕ ತಾಂತ್ರಿಕ ಸವಲತ್ತುಗಳಿರಬೇಕು. ಗೂಡಿನಿಂದ ಉತ್ಪಾದನೆಯಾಗುವ ನೂಲಿನ ಪ್ರಮಾಣ, ಉದ್ದ, ಮೃದುತ್ವ, ಗಡಸುತನ, ಗಾತ್ರದ (ಡೀನಿಯರ್) ಬಗ್ಗೆ ‘ರೆಂಡಿಟ್ಟಾ’ದಿಂದ ಕರಾರುವಕ್ಕಾಗಿ ತಿಳಿದುಕೊಳ್ಳಬಹುದು. ಇದನ್ನು ಆಧರಿಸಿ ಯಾವ ಬಗೆಯ ವಸ್ತ್ರಕ್ಕೆ ಯಾವ ಗ್ರೇಡ್ ನೂಲಿನ ಅಗತ್ಯವಿದೆ ಎಂಬುದನ್ನು ಸುಲಭವಾಗಿ ನಿರ್ಧರಿಸಬಹುದು. ಆದರೆ ಆ ಸೌಲಭ್ಯ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಇಲ್ಲವಾಗಿದೆ.

ಸಹಕಾರ ಸಂಸ್ಥೆಗಳಿಲ್ಲ: ನಿತ್ಯ ಸಾವಿರಾರು ರೈತರು ಮಾರುಕಟ್ಟೆಗಳಲ್ಲಿ ರೇಷ್ಮೆ ಗೂಡುಗಳನ್ನು ಮಾರುತ್ತಿದ್ದಾರೆ. ರಾಮನಗರ ಮಾರುಕಟ್ಟೆಯಲ್ಲೇ 86 ಸಾವಿರ ನೋಂದಾಯಿತ ರೈತರಿದ್ದಾರೆ. ಆದರೆ ತಮ್ಮ ಹಿತ ಕಾಯ್ದುಕೊಳ್ಳುವುದಕ್ಕೆ ಇವರು ಇಲ್ಲಿಯವರೆಗೂ ಸಹಕಾರ ಸಂಘವನ್ನು ಕಟ್ಟಿಕೊಂಡಿಲ್ಲ. ಇದು ತುರ್ತಾಗಿ ಆಗಬೇಕು ಎಂಬ ಬೇಡಿಕೆಯೂ ಇದೆ. ಅಲ್ಲದೆ ಸರ್ಕಾರವು ರೈತ ಉತ್ಪಾದಕ ಸಂಸ್ಥೆ (ಎಫ್‌ಪಿಒ) ಯೋಜನೆಯನ್ನು ವಾಣಿಜ್ಯ ಬೆಳೆಯಾದ ರೇಷ್ಮೆಗೂ ವಿಸ್ತರಿಸಿದರೆ, ರೇಷ್ಮೆ ಕೃಷಿ ಬೆಳವಣಿಗೆಯ ಜತೆಗೆ ರೇಷ್ಮೆ ರೈತರ ಹಿತ ಕಾಯಲೂ ಸಾಧ್ಯವಾಗುತ್ತದೆ ಎನ್ನುತ್ತಾರೆ ಪುಟ್ಟಸ್ವಾಮಿ.

*** ಪೂರಕ ಮಾಹಿತಿ: ಆರ್. ಜಿತೇಂದ್ರ, ಡಿ.ಎಂ.ಕುರ್ಕೆ ಪ್ರಶಾಂತ್, ಕೆ.ಜೆ. ಮರಿಯಪ್ಪ, ಕೆ. ಓಂಕಾರ ಮೂರ್ತಿ, ಸೂರ್ಯನಾರಾಯಣ ವಿ.**



ರಾಮನಗರ ರೇಷ್ಮೆಗೂಡು ಮಾರುಕಟ್ಟೆಯ ಒಳಗೆ ಗೂಡು ಹರಾಜು ಪ್ರಕ್ರಿಯೆಯಲ್ಲಿ ತೊಡಗಿದ ರೈತರು ಹಾಗೂ ರೀಲರ್‌ಗಳು — ಪ್ರಜಾವಾಣಿ ಚಿತ್ರ: ಚಂದ್ರೇಗೌಡ

ಎಲ್ಲ ಲಾಟ್‌ನ ಶ್ರೇಣೀಕರಣ ಸದ್ಯಕ್ಕೆ ಕಷ್ಟ

‘ರಾಮನಗರ ಮಾರುಕಟ್ಟೆಗೆ, ನಿತ್ಯ ಅಂದಾಜು 40ರಿಂದ 50 ಟನ್‌ನಷ್ಟು ಗೂಡು ಬರುತ್ತದೆ. ಸುಮಾರು 400ರಿಂದ 500 ಲಾಟ್‌ಗಳಲ್ಲಿ ಅವುಗಳನ್ನು ಹರಡಲಾಗಿರುತ್ತದೆ. ಈ ಎಲ್ಲ ಲಾಟ್‌ಗಳಲ್ಲಿನ ರೇಷ್ಮೆ ಗೂಡನ್ನು ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸುವುದು ಕಷ್ಟ. ಬೆಳಿಗ್ಗೆ 10 ಗಂಟೆಗೆ ಹರಾಜು ಪ್ರಕ್ರಿಯೆ ಆರಂಭವಾಗುತ್ತದೆ. ಪರೀಕ್ಷಾ ಕೇಂದ್ರ ತೆರೆಯುವುದು ಬೆಳಿಗ್ಗೆ 8 ಗಂಟೆಗೆ. ಒಂದು ಲಾಟ್‌ನ ನಿರ್ದಿಷ್ಟ ಗೂಡಿನ ಗುಣಮಟ್ಟ ಪರಿಶೀಲನೆಗೆ 13 ನಿಮಿಷ ಬೇಕಾಗುತ್ತದೆ. ಅಲ್ಪಾವಧಿಯಲ್ಲಿ ಎಲ್ಲ ಲಾಟ್‌ಗಳಲ್ಲಿನ ಗೂಡುಗಳ ಪರೀಕ್ಷೆ ನಡೆಸಿ, ಗುಣಮಟ್ಟ ವರ್ಗೀಕರಿಸಿ, ಶ್ರೇಣಿಗಳನ್ನು ನೀಡುವುದು ಕಷ್ಟವಾಗುತ್ತದೆ’ ಎಂಬುದು ರೇಷ್ಮೆ ಇಲಾಖೆಯ ರಾಮನಗರ ಜಿಲ್ಲೆಯ ಉಪ ನಿರ್ದೇಶಕ ಸಿ.ಡಿ.ಬಸವರಾಜ್ ಅವರ ವಿವರಣೆ.

‘ಕನಕಪುರ ರೇಷ್ಮೆ ಮಾರುಕಟ್ಟೆಯಲ್ಲಿ ನಿತ್ಯ ಶೇ 40ರಷ್ಟು ರೈತರ ಗೂಡುಗಳನ್ನು ಪರೀಕ್ಷೆಗೊಳಪಡಿಸಿ ಗ್ರೇಡಿಂಗ್ ನೀಡುತ್ತಿದ್ದೇವೆ. ಹಂತ ಹಂತವಾಗಿ ಪೂರ್ಣ ಪ್ರಮಾಣದಲ್ಲಿ ಗ್ರೇಡಿಂಗ್ ವ್ಯವಸ್ಥೆಯನ್ನು ಜಾರಿಗೊಳಿಸುತ್ತೇವೆ’ ಎಂದು ಕನಕಪುರ ರೇಷ್ಮೆ ಗೂಡಿನ ಮಾರುಕಟ್ಟೆಯ ಉಪ ನಿರ್ದೇಶಕರಾದ ಎಂ. ನಾಗರಾಜ್ ಪ್ರತಿಕ್ರಿಯಿಸುತ್ತಾರೆ.

ರೇಷ್ಮೆ ಕೃಷಿಯತ್ತ ಸಾಫ್ಟ್‌ವೇರ್ ದಂಪತಿ



ಮಹೇಶ್ವರಿ



ಸುರೇಶ್


ಕೋವಿಡ್ ಸಮಯದಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಕೆಲಸ ಬಿಟ್ಟು, ಹಳ್ಳಿಯ ಕಡೆ ಮುಖ ಮಾಡಿದ ದಂಪತಿಗೆ ರೇಷ್ಮೆ ಕೃಷಿ ಆಸರೆಯಾಗಿದೆ. ತುಮಕೂರಿನ ಗಂಗನಾಳ ಗ್ರಾಮದ ಸುರೇಶ್ ಮತ್ತು ಮಹೇಶ್ವರಿ ದಂಪತಿ ಸಾಫ್ಟ್‌ವೇರ್ ಎಂಜಿನಿಯರುಗಳು. ಸುರೇಶ್ ನವದೆಹಲಿಯಲ್ಲಿ ಕೆಲಸ ಮಾಡಿ, ಅಲ್ಲಿಂದ ಬೆಂಗಳೂರಿಗೆ ವಾಪಸ್ ಬಂದು ಕರ್ತವ್ಯ ನಿರ್ವಹಿಸುತ್ತಿದ್ದರು. ಮಹೇಶ್ವರಿ ಅವರೂ ಬೆಂಗಳೂರಿನ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು.

ತಮ್ಮ ಒಂದೂವರೆ ಎಕರೆ ಪ್ರದೇಶದಲ್ಲಿ ಹಿಪ್ಪುನೇರಳೆ ಬೆಳೆದಿರುವ ಈ ದಂಪತಿ, ಜಮೀನಿನಲ್ಲಿಯೇ ರೇಷ್ಮೆ ಹುಳು ಸಾಕಾಣಿಕೆ ಶೆಡ್ ನಿರ್ಮಿಸಿದ್ದಾರೆ. ರೇಷ್ಮೆ ಕೃಷಿಯಿಂದ ತಿಂಗಳಿಗೆ ₹ 1 ಲಕ್ಷಕ್ಕೂ ಹೆಚ್ಚು ಆದಾಯ ಪಡೆಯುತ್ತಿದ್ದಾರೆ. ರೇಷ್ಮೆ ಕೃಷಿಯಿಂದ ನೆಮ್ಮದಿ ಮತ್ತು ಉತ್ತಮ ಆರೋಗ್ಯ ಸಿಕ್ಕಿದೆ ಎನ್ನುತ್ತಾರೆ ಈ ದಂಪತಿ.



ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಬಿಸಿಗಾಳಿಯ (ಹಾಟ್‌ಏರ್ ಡ್ರೈಯರ್) ಚೇಂಬರ್‌ಗಳನ್ನು ತುರ್ತಾಗಿ ಅಳವಡಿಸಿ, ರೈತರ ಹಿತ ಕಾಪಾಡಬೇಕು

ಗೌತಮ್ ಗೌಡ, ಅಧ್ಯಕ್ಷ, ರಾಜ್ಯ ರೇಷ್ಮೆ ಬೆಳೆಗಾರರ ಹಿತರಕ್ಷಣಾ ಸಮಿತಿ



ವಿದೇಶಿ ರೇಷ್ಮೆ ನೂಲು ಆಮದನ್ನು ಶಾಶ್ವತವಾಗಿ ನಿಷೇಧಿಸಬೇಕು. ರೇಷ್ಮೆ ಬೆಳೆ ಹೆಚ್ಚಿರುವ ತಾಲ್ಲೂಕುಗಳಲ್ಲಿ ರೇಷ್ಮೆ ಗೂಡಿನ ಮಾರುಕಟ್ಟೆ, ಎಆರ್‌ಎಂ ಘಟಕಗಳು ಇರುವಂತೆ ಸರ್ಕಾರ ನೋಡಿಕೊಳ್ಳಬೇಕು

ಸಿ. ಪುಟ್ಟಸ್ವಾಮಿ, ಸಂಚಾಲಕ, ರಾಜ್ಯ ರೇಷ್ಮೆ ಬೆಳೆಗಾರರ ಹಿತರಕ್ಷಣಾ ಸಮಿತಿ

‘ಲಾಭದ ಗೂಡು’ ಕೊಡಬೇಕು ಎಂದು ಕೆಲ ರೀಲರ್ ಗಳು, ದಲ್ಲಾಳಿಗಳು ಒತ್ತಾಯಿಸುವ ವ್ಯವಸ್ಥೆ ಇನ್ನೂ ಇದೆ. ಕೊಡದಿದ್ದರೆ ಗೂಡನ್ನು ತಡವಾಗಿ ತೂಕ ಮಾಡಲಾಗುತ್ತಿದೆ. ಈ ವ್ಯವಸ್ಥೆ ತೊಲಗಬೇಕು

ಪ್ರೇಮ್ ಕುಮಾರ್, ಮಳಮಾಚನಹಳ್ಳಿ, ಶಿಡ್ಲಘಟ್ಟ

ತಗ್ಗಿದ ಮ್ಯಾಂಡಸ್ ಪ್ರಭಾವ: 4 ಸಾವು

ಒಂದನೇ ಪುಟದಿಂದ

ಚೆನ್ನೈನಲ್ಲಿ 400ಕ್ಕೂ ಹೆಚ್ಚು ಮರಗಳು ಬುಡಮೇಲಾಗಿವೆ. 100 ವರ್ಷಕ್ಕೂ ಹಳೆಯದಾದ ಕೆಲವು ಮರಗಳು ಉರುಳಿವೆ. ಚೆನ್ನೈನ ನಾಲ್ಕು ಮೆಟ್ರೊ ನಿಲ್ದಾಣಗಳ ಛಾವಣಿ ಹಾನಿಗೊಂಡಿದೆ ಎಂದು ಮೆಟ್ರೊ ರೈಲು ನಿಗಮ ತಿಳಿಸಿದೆ. ಸುಮಾರು ₹3.50 ಕೋಟಿಯಷ್ಟು ಮೌಲ್ಯದ ಸೊತ್ತಿಗೆ ಹಾನಿ ಆಗಿದೆ ಎಂದು ಅಂದಾಜಿಸಲಾಗಿದೆ. 181 ಮನೆಗಳು ಹಾನಿಗೊಂಡಿವೆ. 98 ಜಾನುವಾರುಗಳು ಮೃತಪಟ್ಟಿವೆ. ಮುನ್ನೆಚ್ಚರಿಕೆ ಕ್ರಮವಾಗಿ 9 ಸಾವಿರಕ್ಕೂ ಹೆಚ್ಚು ಜನರನ್ನು 210 ಪರಿಹಾರ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿತ್ತು. 30 ವಿಮಾನಗಳ ಹಾರಾಟವನ್ನು ಶನಿವಾರ ಬೆಳಗಿನ ಜಾವ ರದ್ದುಪಡಿಸಲಾಗಿತ್ತು.

ವಿಪತ್ತು ಎದುರಿಸಲು ಸನ್ನದ್ಧವಾಗಿದ್ದ ಚೆನ್ನೈ ಬೃಹತ್ ಮಹಾನಗರ ಪಾಲಿಕೆ ಸಿಬ್ಬಂದಿ ಸಮರೋಪಾದಿಯಲ್ಲಿ ಕಾರ್ಯಾಚರಣೆ ನಡೆಸಿದರು. ಪಾಲಿಕೆ, ಪೊಲೀಸ್, ಎಸ್‌ಡಿಆರ್‌ಎಫ್ ಸೇರಿದಂತೆ 25,000 ಜನರನ್ನು ಪರಿಹಾರ ಕಾರ್ಯಕ್ಕೆ ನಿಯೋಜಿಸಲಾಗಿತ್ತು. ಭಾರಿ ಮಳೆ ಸುರಿದರೂ, ಚೆನ್ನೈನ ಮುಖ್ಯ ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ದೊಡ್ಡ ಅಡಚಣೆ ಉಂಟಾಗಿರಲಿಲ್ಲ. 100ಕ್ಕೂ ಹೆಚ್ಚು ಮರಗಳನ್ನು ಶನಿವಾರ ಮಧ್ಯಾಹ್ನದ ಒಳಗೆ ತೆರವು ಮಾಡಲಾಗಿತ್ತು. ನಗರದ ಎಲ್ಲ 22 ಕೆಳಸೇತುವೆಗಳು ಸಂಚಾರಕ್ಕೆ ಮುಕ್ತವಾದವು. ಮುನ್ನೆಚ್ಚರಿಕೆ ಕ್ರಮವಾಗಿ ಕಡಿತ ಮಾಡಲಾಗಿದ್ದ ವಿದ್ಯುತ್ ಸಂಪರ್ಕವನ್ನು ಮಧ್ಯಾಹ್ನದ ಹೊತ್ತಿಗೆ ಸರಿಪಡಿಸಲಾಯಿತು. ಅತ್ಯಂತ ವೇಗದಲ್ಲಿ ಪರಿಹಾರ ಕೆಲಸ ಮಾಡಿದ ಪಾಲಿಕೆಯನ್ನು ಜನರು ಪ್ರಶಂಸಿಸಿದ್ದಾರೆ.

ಚೆನ್ನೈನಲ್ಲಿ ತೀವ್ರ ತೊಂದರೆಗೆ ಒಳಗಾದ ಪ್ರದೇಶಗಳಿಗೆ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಭೇಟಿ ನೀಡಿ ಪರಿಶೀಲಿಸಿದರು. ಸಮರೋಪಾದಿಯಲ್ಲಿ ಪರಿಹಾರ ಕಾರ್ಯ ನಡೆಸಿದ ಸಿಬ್ಬಂದಿಯನ್ನು ಅವರು ಶ್ಲಾಘಿಸಿದ್ದಾರೆ.

ಶನಿವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ, ನುಂಗಂಬಾಕಂ ಮತ್ತು ಮೀನಂಬಾಕಂ ಹವಾಮಾನ ನಿಗಾ ಕೇಂದ್ರದಲ್ಲಿ 10 ಸೆಂ.ಮೀ. ಮಳೆ ದಾಖಲಾಗಿದೆ. ತಿರುವಣ್ಣಾಮಲೈನಲ್ಲಿ ಅತಿಹೆಚ್ಚು 25 ಸೆಂ.ಮೀ. ಮಳೆಯಾಗಿದ್ದು, ಬೆಳೆಹಾನಿ ಸಂಭವಿಸಿದೆ. ಆಂಧ್ರಪ್ರದೇಶದ ದಕ್ಷಿಣ ಕರಾವಳಿ ಹಾಗೂ ರಾಯಲಸೀಮಾ ಜಿಲ್ಲೆಗಳಲ್ಲೂ ವ್ಯಾಪಕ ಮಳೆಯಾಗಿದೆ. ತಿರುಪತಿ ಸಮೀಪದ ನಾಯ್ಡುಪೇಟ ಎಂಬಲ್ಲಿ ಅತ್ಯಧಿಕ 28 ಸೆಂ.ಮೀ. ಮಳೆಯಾಗಿದೆ.

ಅಗತ್ಯ ಪೂರ್ವಸಿದ್ಧತೆ ಮಾಡಿಕೊಂಡರೆ ಚಂಡಮಾರುತದಿಂದ ಆಗುವ ಅನಾಹುತವನ್ನು ತಗ್ಗಿಸಬಹುದು ಎಂಬುದನ್ನು ಸರ್ಕಾರ ಸಾಬೀತುಪಡಿಸಿದೆ

ಎಂ.ಕೆ. ಸ್ಟಾಲಿನ್, ತಮಿಳುನಾಡು ಮುಖ್ಯಮಂತ್ರಿ

ಮಳೆ ಮುಂದುವರಿಕೆ: ಚಳಿ ತೀವ್ರ

ಒಂದನೇ ಪುಟದಿಂದ

ಚಿತ್ರದುರ್ಗ, ಕೊಡಗು ಹಾಗೂ ಚಿಕ್ಕಮಗಳೂರು ಜಿಲ್ಲೆಗಳಿಗೆ ಭಾನುವಾರ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಜೋರು ಮಳೆ ಆಗುವ ಸಾಧ್ಯತೆಯಿದೆ. ಚಿಕ್ಕಬಳ್ಳಾಪುರ, ಹಾಸನ, ಕೋಲಾರ ಹಾಗೂ ಮೈಸೂರು ಜಿಲ್ಲೆಯಲ್ಲೂ ಸಾಧಾರಣ ಮಳೆ ಸುರಿಯಲಿದೆ. ಬೆಂಗಳೂರು ನಗರ, ಗ್ರಾಮಾಂತರ ಜಿಲ್ಲೆಯಲ್ಲಿ ಡಿ.14ರವರೆಗೆ ಮಳೆ ಮುಂದುವರಿಯಲಿದೆ ಎಂದು ಐಎಂಡಿ ತಿಳಿಸಿದೆ.

ಬೆಂಗಳೂರು ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಶನಿವಾರ ಕೂಡಾ ಮಳೆಯಾಗಿದೆ. ಕೊಯ್ಲಿಗೆ ಬಂದಿರುವ ಬೆಳೆಗಳು ಅಕಾಲಿಕ ಮಳೆಯಿಂದ ಹಾಳಾಗುತ್ತಿವೆ ಎಂದು ರೈತರು ಅಳಲು ತೋಡಿಕೊಂಡಿದ್ದಾರೆ.

ಹಲವು ಜಿಲ್ಲೆಗಳಲ್ಲಿ ತಾಪಮಾನ ಕುಸಿದಿದ್ದು, ಶನಿವಾರ ಚಳಿ ವಾತಾವರಣ ಇತ್ತು. ಬೆಂಗಳೂರಿನಲ್ಲಿ ಶನಿವಾರ ಕನಿಷ್ಠ ತಾಪಮಾನ 19 ಡಿಗ್ರಿ ಸೆಲ್ಸಿಯಸ್ ಹಾಗೂ ಗರಿಷ್ಠ ತಾಪಮಾನ 22 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು.



ಮ್ಯಾಂಡಸ್ ಚಂಡಮಾರುತದ ಹೊಡೆತದಿಂದ ಚೆನ್ನೈನ ಪಟ್ಟಿನಪಾಲಂ ಕಡಲತೀರದ ಮನೆಯೊಂದು ಹಾನಿಗೊಂಡಿತು —ಪಿಟಿಐ ಚಿತ್ರ

ಶಿರಾಡಿ ರಸ್ತೆ: ವಾರದಲ್ಲಿ ಸಭೆ

ಮಂಗಳೂರು: ‘ಶಿರಾಡಿಯಲ್ಲಿ ರಾಷ್ಟ್ರೀಯ ಹೆದ್ದಾರಿ ನಿರ್ಮಿಸುವುದಾಗಿ ಭಾರತೀಯ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ (ಎನ್‌ಎಚ್‌ಎಐ) ಹೇಳಿತ್ತು. ಈ ಬಗ್ಗೆ ವಾರದ ಒಳಗೆ ವಿಶೇಷ ಸಭೆ ಕರೆದು ಚರ್ಚಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

‘ಈ ಹೆದ್ದಾರಿ ಏಕೆ ಸಂಪೂರ್ಣ ಹದಗೆಟ್ಟಿದೆ. ಕಾಮಗಾರಿ ಏಕೆ ನಿಂತಿದೆ ಎಂಬ ಬಗ್ಗೆಯೂ ಚರ್ಚಿಸುತ್ತೇನೆ’ ಎಂದು ತಿಳಿಸಿದರು. ‘ಶಿರಾಡಿ ರಸ್ತೆಗೆ ತಾತ್ಕಾಲಿಕ ಡಾಂಬರೀಕರಣ ಮಾಡಿ, ವಾಹನ ಸಂಚಾರಕ್ಕೆ ಅನುವು ಮಾಡಿಕೊಡುವುದು. ಕೆಲವೆಡೆ ವೈಟ್‌ಟಾಪಿಂಗ್, ಇನ್ನು ಕೆಲವೆಡೆ ಸುರಂಗ ನಿರ್ಮಿಸುವ ಪ್ರಸ್ತಾವಗಳಿವೆ. ಈ ಬಗ್ಗೆಯೂ ಚರ್ಚೆನಡೆಯಲಿದೆ. ರಾಷ್ಟ್ರೀಯ ಹೆದ್ದಾರಿ ಯೋಜನಾ ನಿರ್ದೇಶಕರನ್ನೂ ಸಭೆಗೆ ಕರೆಸುತ್ತೇವೆ’ ಎಂದರು.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 11-12-1997

● ಸರ್ಕಾರಿ ಗೌರವದೊಡನೆ ಕಾರಂತ ಅಂತ್ಯಕ್ರಿಯೆ

ಕೋಟ, ಡಿಸೆಂಬರ್ 10– ಸುತ್ತಲೂ ಕವಿದ ಗಾಢವಾದ ಮೌನ, ಯಕ್ಷಗಾನದ ಗೆಜ್ಜೆಯ ತಾಳ ನಿಂತರ ತಲೆದೂಗದೆ ನಿಶ್ಚಲವಾಗಿ ನಿಂತ ತೆಂಗಿನ ಮರಗಳ ತೋಪಿನ ನಡುವೆ ನಿರ್ಮಿಸಿದ ಚಿತೆಯ ಮೇಲೆ ಇರಿಸಿದ ‘ಕಾರಂತ’ರ ಪಾರ್ಥಿವ ಶರೀರಕ್ಕೆ ಇಂದು ಮುಂಜಾನೆ 10.42ಕ್ಕೆ ಅವರ ಪುತ್ರ ಉಲ್ಲಾಸ ಕಾರಂತ ಅಗ್ನಿ ಸ್ಪರ್ಶ ಮಾಡುತ್ತಿದ್ದಂತೆಯೇ ನಿನ್ನೆ ಇಹಲೋಕ ತ್ಯಜಿಸಿದ ಕಾರಂತರ ಭೌತಿಕ ಕಾಯ ಪಂಚಭೂತಗಳಲ್ಲಿ ಲೀನವಾಯಿತು.

50 ವರ್ಷಗಳ ಹಿಂದೆ

ಸೋಮವಾರ, 11-12-1972

● ಚಂದ್ರನ ಕಕ್ಷೆಗೆ ಅಪೊಲೊ–17

ಹೌಸ್ಟನ್, ಡಿಸೆಂಬರ್ 10– ಕೊನೆಯ ಅಪೊಲೊ ಯಾತ್ರೆ ಪ್ರಾರಂಭಿಸಲಿ ಟಪೊಲೊ–17 ಇಂದು ಚಂದ್ರನ ಸುತ್ತ ಕಕ್ಷೆಗೆ ಜಿಗಿಯಿತು.

ಎಂಟುಗಂಟೆ ನಿದ್ರೆ: ನೌಕೆಯು ಚಂದ್ರನಿಂದ 27,760 ಕಿ.ಮೀ. ದೂರದಲ್ಲಿದ್ದಾಗ ಇಂದು ಸಂಜೆ 5.55ಕ್ಕೆ (ಭಾರತೀಯ ಕಾಲಮಾನ) ಗಗನ ಯಾತ್ರಿಗಳನ್ನು ಭೂ ನಿಯಂತ್ರಣ ಕೇಂದ್ರವು ನಿದ್ರೆಯಿಂದ ಎಚ್ಚರಿಸಿತು.

ಗಗನಯಾತ್ರಿಗಳು ಹೆಚ್ಚು ಕಡಿಮೆ ಎಂಟು ಗಂಟೆ ಕಾಲ (ನಿರ್ದಿಷ್ಟ ಅವಧಿಗಿಂತ 30 ನಿಮಿಷ ಕಾಲ ಹೆಚ್ಚಾಗಿ) ನಿದ್ರೆ ಮಾಡಿದ್ದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಡಿಸೆಂಬರ್ 11, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಕೃಷ್ಣ ತೃತೀಯ ಗಂ. 16-15 ನಕ್ಷತ್ರ: ಪುನರ್ವಸು ಗಂ. 20-36 ಯೋಗ: ಬ್ರಹ್ಮ ಗಂ. 29-14, ಕರಣ: ವಿಷ್ಟಿ ಗಂ. 16-15, ವೃಶ್ಚಿಕ ಮಾಸದ 24 ನೇ ದಿನ.
ರಾಹುಕಾಲ : ಸಾಯಂಕಾಲ 04-30–06-00
ಸೂರ್ಯೋದಯ : 06-47 ಸೂರ್ಯಾಸ್ತ : 06-00 ಮುಸ್ಲಿಂ ದಿನಾಂಕ : 16 ಜುಮಾದುಲ್ಲಾವಲ್ ದಿನ ವಿಶೇಷ : ಸಂಕಷ್ಟಹರ ಚತುರ್ಥಿ (ಚಂದ್ರೋದಯ ಗಂ. 08-42)
ಅದೃಷ್ಟ ಸಂಖ್ಯೆ : 5, 11

ಮೇಷ: ವೃತ್ತಿಯಲ್ಲಿ ಬದಲಾವಣೆ ಅನಿವಾರ್ಯವೆನಿಸಲಿದೆ, ಅಥವಾ ವೃತ್ತಿಯ ನಿಮಿತ್ತ ವಾಸ ಸ್ಥಳವನ್ನು ಬದಲಿಸಬೇಕಾದ ಅನಿವಾರ್ಯತೆ ಉಂಟಾಗುವುದು. ಹಲವು ದಿನಗಳ ಬಳಿಕ ಹಣಕಾಸು ಪರಿಸ್ಥಿತಿ ಸುಧಾರಣೆಗೊಳ್ಳುವುದು.

ವೃಷಭ: ನಿಮ್ಮ ಸಂಬಂಧಿಕರೆಲ್ಲ ಹತ್ತಿರದವರಾಗುತ್ತಾರೆ. ಮನೆಯ ಜವಾಬ್ದಾರಿ ಮಗನಿಗೆ ವಹಿಸುವ ಆಲೋಚನೆಗಳು ಬರುವುದು, ಆದರೆ ಯಾವುದೇ ತರಹದ ತೀರ್ಮಾನ ತೆಗೆದುಕೊಳ್ಳಬೇಡಿ. ಕಾಲು ನೋವು ನಿವಾರಣೆಗೆ ತೈಲ ಬಳಸಿ.

ಮಿಥುನ: ಗುರಿ ಮುಟ್ಟುವತ್ತ ನಿಮ್ಮ ಹಾದಿಯನ್ನು ಮತ್ತೊಮ್ಮೆ ಪರಿಶೀಲಿಸಿಕೊಂಡಲ್ಲಿ ನಿಮ್ಮ ಯೋಜನೆಗಳು ಆಲೋಚಿಸಿದಕ್ಕಿಂತಲೂ ಹೆಚ್ಚು ಪ್ರಾಯೋಗಿಕವಾಗಿರುವುದು. ಸತ್ಯದ ಹಾದಿಗೆ ಅಡೆತಡೆಗಳಿರುತ್ತವೆ ಎಂಬುದನ್ನು ಮರೆಯದಿರಿ.

ಕರ್ಕಾಟಕ: ಸಹವರ್ತಿಗಳು ನಿಮ್ಮ ಬೆಂಬಲಕ್ಕೆ ಬರುವರು. ವೃತ್ತಿ ಅಥವಾ ಕೆಲಸಗಳಲ್ಲಿ ಬದಲಾವಣೆ ಸನ್ನಿಹಿತವಾಗಲಿದೆ. ಕಾರ್ಖಾನೆ ಕೆಲಸಗಾರರ ಬೇಡಿಕೆಗಳು ಇತ್ಯರ್ಥವಾಗುತ್ತದೆ. ದೇವತಾಕಾರ್ಯಗಳಿಂದ ಮನಸ್ಸಿಗೆ ನೆಮ್ಮದಿ.

ಸಿಂಹ: ಉದ್ಯೋಗ ಸಿಗುವ ಸಮಯದಲ್ಲೇ ವೇತನದ ಬಗ್ಗೆ ಹೆಚ್ಚಿನ ಗಮನ ನೀಡುವುದು ಸರಿಯಲ್ಲ. ತಂದೆಯಾಗಲಿರುವ ಸುದ್ದಿ ಕೇಳಿ ಸಂಭ್ರಮಿಸುವಿರಿ. ಉದ್ಯೋಗಸ್ಥರಿಗೆ ಉತ್ತಮ ಧನಾಗಮನವಿದ್ದರೂ ಸಂತಸದ ಕೊರತೆ ಕಾಣಲಿದೆ.

ಕನ್ಯಾ: ಗುರಿ ಸಾಧಿಸಬೇಕೆಂಬ ಛಲ ಇಟ್ಟುಕೊಳ್ಳುವುದು ಉತ್ತಮವೇ ಹೊರತು, ಇನ್ನೊಬ್ಬರ ಹೋಲಿಕೆಯನ್ನು ಮನಸ್ಸಿಗೆ ಹಚ್ಚಿಕೊಳ್ಳುವುದು ಸರಿಯಲ್ಲ. ಆರೋಗ್ಯದಲ್ಲಿ ಜೀರ್ಣಕ್ರಿಯೆಗೆ ಸಂಬಂಧಿಸಿದಂತೆ ಕಿರಿಕಿರಿ ಎನಿಸಲಿದೆ.

ತುಲಾ: ಲೆಕ್ಕಾಚಾರಕ್ಕೆ ಸಂಬಂಧಿಸಿದ ಕಾಗದ-ಪತ್ರಗಳ ನಿರ್ವಹಣೆಯಲ್ಲಿ ಎಚ್ಚರಿಕೆ ಇರಲಿ. ಆರ್ಥಿಕ ಪರಿಸ್ಥಿತಿಯು ದಿನದಿಂದ ದಿನಕ್ಕೆ ಸುಧಾರಣೆಯಾಗುತ್ತದೆ. ಮನೆಯಲ್ಲಿ ಅಗ್ನಿಯಿಂದ ಅವಗಡಗಳು ಸಂಭವಿಸಬಹುದು ಎಚ್ಚರ ವಹಿಸಿ.

ವೃಶ್ಚಿಕ: ನಿಮ್ಮ ಕೆಲಸದ ಹೊರತಾಗಿ ದಿನದ ಕೆಲ ಸಮಯ ಇತರೆ ಸಂಗತಿಗಳ ಬಗ್ಗೆ ಗಮನ ಕೊಡುವುದರಿಂದ ಮಾನಸಿಕ ಒತ್ತಡ ಕಡಿಮೆಯಾಗುವುದು. ಕೌಟುಂಬಿಕ ಜೀವನ ನೆಮ್ಮದಿಯುಕ್ತವಾಗಿ ಉತ್ತಮವಾಗಿರುತ್ತದೆ.

ಧನು: ದಿನದ ಆರಂಭದಲ್ಲಿ ಕೆಲಸ ಕಾರ್ಯಗಳು ನಿರೀಕ್ಷಿತ ಹಾದಿಯಲ್ಲಿ ಸಾಗುವುದರಿಂದ ನಿಮ್ಮಲ್ಲಿ ನೈತಿಕ ಧೈರ್ಯ ಹೆಚ್ಚುತ್ತದೆ. ಆಸ್ತಿ ಕೊಳ್ಳುವ ನಿರ್ಧಾರದಲ್ಲಿ ಲಾಭ-ನಷ್ಟವನ್ನು ಪುನಃ ಇನ್ನೊಮ್ಮೆ ಯೋಚಿಸುವುದು ಉತ್ತಮ.

ಮಕರ: ಕಾರ್ಮಿಕ ವರ್ಗದವರ ಬಗ್ಗೆ ಗಮನವಿರಲಿ. ಜನಬಲದ ಕೊರತೆಯು ಇಂದಿನ ಯಶಸ್ಸಿಗೆ ಅಡ್ಡಿಯನ್ನು ಉಂಟುಮಾಡಲಿದೆ. ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಸ್ವಲ್ಪ ಮಟ್ಟಿನ ಹಿನ್ನಡೆ ಉಂಟಾಗಬಹುದು.

ಕುಂಭ: ನಿಮಗೆ ಎದುರಾಗಿರುವ ಸಮಸ್ಯೆಗೆ ಸಂಬಂಧಿಸಿದ ವ್ಯಕ್ತಿಯಲ್ಲಿ ಮಾತನಾಡುವುದರಿಂದ ಸಂಪೂರ್ಣವಾಗಿ ಉತ್ತರ ಸಿಗುವುದು. ಸಾಲ ಅಥವಾ ಷೇರು ವ್ಯವಹಾರದಲ್ಲಿ ಹಾಕಿದ ಹಣ ಕಳೆದುಕೊಳ್ಳುವ ಸ್ಥಿತಿ ಬರಬಹುದು.


ಮೀನ: ಉದ್ಯೋಗದಲ್ಲಿ ಮುಂಬಡ್ತಿಯ ವಿಚಾರವಾಗಿ ಹೋರಾಟ ನಡೆಸುವುದು ವ್ಯರ್ಥವಾಗುವುದು. ಸಣ್ಣ-ಪುಟ್ಟ ವಿಚಾರಗಳಿಗಾಗಿ ಪ್ರೇಮಿಗಳು ದೂರವಾಗುವ ಲಕ್ಷಣ. ಆದ್ದರಿಂದ ಮಾತು, ನಡೆನುಡಿಯಲ್ಲಿ ಎಚ್ಚರವಿರಲಿ.

ಪದಬಂಧ 5165

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತಿರುಗಿದ ವರನಿಗೆ ಕೇಳಿಸಿದ ಧ್ವನಿ (2)
3.ಪ್ರಯಾಸದಿಂದಾದ ಹೆರಿಗೆ (3)
6.ವಿಷಯಾಸಕ್ತ ಇಲ್ಲಿದ್ದಾನೆ (3)
8.ತೀಡಿ ತೀಡಿ ಮಾಡಿದ ಸುಧಾರಣೆ (4)
10.ವರ ನೀಡಿರುವ ವಿಸ್ತಾರವಾದ ಹೇಳಿಕೆ (3)
11.ಮರದ ಪಾದರಕ್ಷೆ (3)
12.ಕಲ್ಲಿನ ಆಯುಧಗಳು ಬಳಕೆಯಲ್ಲಿದ್ದ ಕಾಲ (4)
15.ಮರದ ಹತ್ತಿರವಿರುವ ಮೊಸಳೆ (3)
17.ಚೋರ ಇಲ್ಲಿಗೆ ಬಂದಿದ್ದಾನಲ್ಲಾ? (3)
18.ಜನನಿ ನುಡಿದ ಸತ್ಯ (2)

ಮೇಲಿಂದ ಕೆಳಕ್ಕೆ
2.ವರನ ನಡುವೆ ನುಸುಳಿ ತೋರಿದ ಬೆಡಗು! (3)
3.ಚಿಹ್ನೆ ಅಥವಾ ಪ್ರತಿಬಿಂಬ (3)
4.ಗತಿಸಿದ ಮಹಾಪುರುಷರ ಹುಟ್ಟುಹಬ್ಬ (3)
5.ಕೆಡುಕಾಗಲೆಂದು ಬಯಸಿ ಹೇಳುವ ಮಾತು (2)
7.ತಾರ ನುಡಿಸಿದ ತಂತಿ ವಾದ್ಯ (3)
9.ಕೊನೆಗೆ ತಾಪವಿದ್ದರೂ ತೋರಿದ ಬಾಹ್ಯ ಸೌಂದರ್ಯ (3)
10.ಬೇರೆ ದೇಶದಿಂದ ಬಂದವನು (3)
11.ನೇಯುವ ಸಾಧನ (3)
13.ಆನೆ ಕುದುರೆಗಳನ್ನು ಕಟ್ಟುವ ಜಾಗ (2)
14.ಅಗಣಿತ ಸಂಖ್ಯೆಗಳಿರುವ ಲೆಕ್ಕಶಾಸ್ತ್ರ (3)
15.ದ್ವೇಷ ಹೀಗೆ ಬಂದಿದೆ (3)
16.ರಜವಿದ್ದಾಗಿನ ಇರುಳು (3)



5164ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿದ್ಯಮಾನ 3.ಅಧರ 4.ವ್ಯವಧಾನ 6.ಒಮ್ಮತ 8.ನಕ್ತಂಚರ 9.ವಸ್ತುಕೋಶ 11.ಟಗರು 14.ಹನುಮಂತ 16.ಕಲಹ 17.ಮಹಾದ್ವಾರ

ಮೇಲಿಂದ ಕೆಳಕ್ಕೆ:
1.ವಿರಕ್ತ 2.ನವ್ಯ 3.ಅನುಮಾನ 5.ನಸ್ಯ 6.ಒರಟ 7.ತವರು 10.ಶಯ್ಯಾಗೃಹ 12.ದಾಹ 13.ಸಂಕರ 15.ತಮ

ಸುಡೊಕು 5551

	3		6		2		4	
6		2				8		
			3		9		1	
4		8			5		2	
				1		4		7
2		5	4				6	
	5		8		3		9	
7		3				6		5
	8		7		6		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5550 ಸುಡೊಕು

6	8	4	5	7	1	2	9	3
9	7	1	2	4	3	6	5	8
5	2	3	8	6	9	1	4	7
2	9	5	4	1	7	3	8	6
1	6	8	3	9	5	4	7	2
3	4	7	6	2	8	5	1	9
4	1	6	9	8	2	7	3	5
8	3	2	7	5	4	9	6	1
7	5	9	1	3	6	8	2	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬಹುರೂಪಿ ರಾಷ್ಟ್ರೀಯ ರಂಗೋತ್ಸವ ● ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಮತ

ಭಾರತೀಯತೆ ಆತ್ಮ ರಂಗಾಯಣ ಬಿಂಬಿಸಲಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ವೈಚಾರಿಕ ಸಂಘರ್ಷಗಳು ನಡೆಯಬೇಕು
- ಎಲ್ಲರನ್ನೂ ರಂಗಾಯಣ ಒಳಗೊಳ್ಳಲಿ
- ಹೃದಯ ಶುದ್ಧವಿದ್ದರೆ ಸತ್ಯ ಅಭಿವ್ಯಕ್ತ

> **ಸ್ವಾರ್ಥಕ್ಕಾಗಿ ಕೃತಕ ಬದುಕು ನಡೆಸಿದರೆ ಮುಗ್ಧತೆ ನಾಶವಾಗುತ್ತದೆ. ಆತ್ಮಸಾಕ್ಷಿಯಿಂದ ನಡೆದುಕೊಳ್ಳುವುದು ಕಷ್ಟ. ರಾಜಕಾರಣಿಗಳಿಗೆ ಇನ್ನೂ ಕಷ್ಟ**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಮೈಸೂರು: 'ರಂಗಾಯಣವು ಭಾರತೀಯತೆಯ ಆತ್ಮ ಪ್ರದರ್ಶಿಸಬೇಕು. ಮಾನವೀಯತೆ ಆಧಾರಿತ ರಂಗಪ್ರಯೋಗಗಳು ನಡೆಯಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟಿದ್ದಾರೆ.

ಇಲ್ಲಿನ ಕಲಾಮಂದಿರದಲ್ಲಿ ಶನಿವಾರ 'ಬಹುರೂಪಿ ರಾಷ್ಟ್ರೀಯ ರಂಗೋತ್ಸವ'ಕ್ಕೆ ಚಾಲನೆ ನೀಡಿದ ಅವರು, 'ವೈಚಾರಿಕ ಸಂಘರ್ಷವಿರದೆಡೆ ಹೊಸ ವಿಚಾರಗಳಿಗೆ ಜಾಗವಿರುವುದಿಲ್ಲ. ಚರ್ಚೆಗಳು ನಡೆಯಬೇಕು' ಎಂದು ಪ್ರತಿಪಾದಿಸಿದರು.

'ವಿಶ್ವವಿದ್ಯಾಲಯಗಳಲ್ಲಿ ವೈಚಾರಿಕ ಸಂಘರ್ಷಗಳು ನಡೆಯುತ್ತಿದ್ದವು. ರಂಗಾಯಣದಲ್ಲೂ ಸಂವಾದಕ್ಕೆ ಅವಕಾಶ ನೀಡುವ ನಾಟಕಗಳು ಬಂದಿವೆ. ರಂಗಾಯಣವು ಎಲ್ಲರನ್ನೂ ಒಳಗೊಂಡು ಸಮಾಜದ ಮುಖ್ಯವಾಹಿನಿಯಾಗಬೇಕು' ಎಂದರು.

'ಸಂಘರ್ಷಗಳಿಂದ ಪಾಠ ಕಲಿತು ಹೊಸ ಪೀಳಿಗೆಗೆ ಸತ್ಯವನ್ನು ಹೇಳಬೇಕು. ವೈಚಾರಿಕ ಗೊಂದಲಗಳ ಕುರಿತು, ಕಲಾವಿದರು ನಾಟಕಗಳ ಮೂಲಕ ಜನರಲ್ಲಿ ಸ್ಪಷ್ಟತೆ ಮೂಡಿಸಬೇಕು. ಕಲಾವಿದರು ಸೂಕ್ಷ್ಮ ಅಭಿನಯದಿಂದ ನೆಲದ ಸಂಸ್ಕೃತಿಯನ್ನು ಸಮಾಜಕ್ಕೆ ತಿಳಿಸಬೇಕು' ಎಂದರು.

ರಂಗಾಯಣ ನಿರ್ದೇಶಕರ ಮನವಿಗೆ ಸ್ಪಂದಿಸಿದ ಅವರು, 'ರಂಗಾಯಣಕ್ಕೆ ರಂಗಶಾಲೆ ನಡೆಸಲು ಭೂಮಿಯನ್ನು ನೀಡಲಾಗುವುದು. ರಾಜ್ಯದಾದ್ಯಂತ 'ಟಿಪ್ಪು ನಿಜಕನಸುಗಳು' ನಾಟಕ ಪ್ರದರ್ಶನಕ್ಕೂ ಅನುದಾನ ನೀಡಲಾಗುವುದು ಎಂದು ಮುಖ್ಯಮಂತ್ರಿ ಭರವಸೆ ನೀಡಿದರು.

ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವರು, 'ನಾನು ನಿರ್ದೇಶಕನಾಗಿ ಬಂದು ರಾಷ್ಟ್ರೀಯತೆ ಆಧಾರದ ಮೇಲೆ ರಂಗಾಯಣ ಕಟ್ಟಿದ್ದೇನೆ ರಂಗಾಯಣದಲ್ಲಿ ಹಿಂದೆ ಎಡಪಂಥೀಯರ ಆಧಿಪತ್ಯವಿತ್ತು. ಬಹುರೂಪಿ ಉತ್ಸವವನ್ನು ನಗರ ನಕ್ಸಲರೇ ಉದ್ಘಾಟಿಸುತ್ತಿದ್ದರು' ಎಂದರು.

'ನನಗೆ ಎಡಚರು ಕಿರುಕುಳ ಕೊಟ್ಟರು. ಪ್ರತಿಭಟಿಸಿದರು. ಅಂಥ ಮಜಾವಾದಿಗಳ ತೆಕ್ಕೆಗೆ ರಂಗಾಯಣ ಮತ್ತೆ ಹೋಗಬಾರದು' ಎಂದು ಅವರು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಚಲನಚಿತ್ರ ನಟ ರಮೇಶ್ ಅರವಿಂದ್ ಇದ್ದರು.



ಬಲಪ್ರದರ್ಶನ ಎಐಸಿಸಿ ಅಧ್ಯಕ್ಷರಾದ ಬಳಿಕ ಮೊದಲ ಬಾರಿಗೆ ಕಲಬುರಗಿಗೆ ಆಗಮಿಸಿದ ಮಲ್ಲಿಕಾರ್ಜುನ ಖರ್ಗೆ ಅವರ ಅಭಿನಂದನ ಕಾರ್ಯಕ್ರಮದ ನಿಮಿತ್ತ ಶನಿವಾರ ನಡೆದ ಮೆರವಣಿಗೆಯಲ್ಲಿ ಜನಸ್ತೋಮ ನೆರೆದಿತ್ತು –ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ಮಧ್ಯಸ್ಥಿಕೆ ತೀರ್ಮಾನಗಳಿಗೂ ತೀರ್ಪಿನ ಮಾನ್ಯತೆ- ಚಿಂತನೆ

ಪ್ರಜಾವಾಣಿ ವಾರ್ತೆ

ಕಾರವಾರ: 'ಹಳ್ಳಿಗಳಲ್ಲಿ ಗೌರವಾನ್ವಿತ, ತಿಳಿವಳಿಕೆಯಿರುವ ವ್ಯಕ್ತಿಗಳ ಸಮಕ್ಷಮದಲ್ಲಿ ಆಗುವ ನ್ಯಾಯ ತೀರ್ಮಾನಗಳಿಗೂ ಕಾನೂನು ಮಾನ್ಯತೆ ನೀಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಚಿಂತನೆ ನಡೆದಿದೆ' ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದರು.

ಅಂಕೋಲಾ ತಾಲ್ಲೂಕಿನ ಶೆಟಗೇರಿಯಲ್ಲಿ ಶನಿವಾರ ನಡೆದ ನೋಟರಿಗಳ ರಾಜ್ಯಮಟ್ಟದ 13ನೇ ಸಮ್ಮೇಳನದಲ್ಲಿ ಭಾಗವಹಿಸಿದ್ದ ಅವರು, 'ಕೆಲವು ದಿನಗಳ ಹಿಂದೆ ನಡೆದ ಅಖಿಲ ಭಾರತ ಕಾನೂನು ಸಚಿವರ ಸಮಾವೇಶದಲ್ಲಿ ಈ ಬಗ್ಗೆ ಚರ್ಚಿಸಲಾಗಿದೆ' ಎಂದರು.

'ನ್ಯಾಯಾಲಯದ ಸಮಯವನ್ನು ಉಳಿಸಲು ನ್ಯಾಯಾಂಗ ವ್ಯವಸ್ಥೆಯ ಡಿಜಿಟಲೀಕರಣ, ಕಾನೂನು ಮಧ್ಯಸ್ಥಿಕೆ ಬಲಗೊಳಿಸುವುದು, ಕೌನ್ಸೆಲಿಂಗ್ ಕೇಂದ್ರಗಳ ಆರಂಭ ಸೇರಿದಂತೆ ಆಧುನೀಕರಣ ಮಾಡಲಾಗುತ್ತದೆ' ಎಂದು ವಿವರಿಸಿದರು.

'ಆದಷ್ಟೂ ಕೋರ್ಟ್‌ನ ಹೊರಗೇ ಪ್ರಕರಣಗಳ ಇತ್ಯರ್ಥಕ್ಕೆ ಆದ್ಯತೆ ನೀಡಲು ಚರ್ಚಿಸಲಾಗಿದೆ. ಲೋಕ ಅದಾಲತ್ ನಿರ್ಧಾರಗಳನ್ನು ಮತ್ತೆ ಕೋರ್ಟ್‌ನಲ್ಲಿ ಪ್ರಶ್ನಿಸಲಾಗುತ್ತಿದೆ., ಅದಾಲತ್‌ನಲ್ಲಿ ತೀರ್ಮಾನಗಳಿಗೂ ತೀರ್ಪಿನ ಮಾನ್ಯತೆ ನೀಡುವ ಕುರಿತಂತೆ ನ್ಯಾಯಾಧೀಶರನ್ನೂ ಒಳಗೊಂಡು ಚರ್ಚಿಸಿ ತೀರ್ಮಾನಿಸಲಾಗುವುದು' ಎಂದು ತಿಳಿಸಿದರು.

ಕಾನೂನು ಅರಿವಿಗೆ ಕೋರ್ಸ್: 'ವಿದೇಶಗಳಿಗೆ ಉದ್ಯೋಗ, ವಿದ್ಯಾಭ್ಯಾಸಗಳಿಗೆ ಹೋಗುವವರ ಅಲ್ಲಿನ ಕಾನೂನು ತಿಳಿವಳಿಕೆ ಇಲ್ಲದೇ ಸಂಕಷ್ಟ ಅನುಭವಿಸುತ್ತಾರೆ. ಹೀಗಾಗಿ, ಕಾನೂನು ಜಾಗೃತಿ ಮೂಡಿಸಲು ಪ್ರತಿಷ್ಠಿತ ಕಾನೂನು ಕಾಲೇಜುಗಳಲ್ಲಿ ಮೂರು ತಿಂಗಳ ಕೋರ್ಸ್ ಆರಂಭಿಸಲು ಉದ್ದೇಶಿಸಲಾಗಿದೆ. ಆದಷ್ಟೂ ಆನ್‌ಲೈನ್ ಮೂಲಕವೇ ನಡೆಸಲು ಚಿಂತಿಸಲಾಗಿದೆ' ಎಂದು ಹೇಳಿದರು.

ಗಡಿ ವಿವಾದ: ಸಂಸದರಿಂದ ನಾಳೆ ಶಾ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಸಂಸದರ ನಿಯೋಗ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಸೋಮವಾರ (ಡಿ.12) ಭೇಟಿ ಮಾಡಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ನಾನು ಕೂಡ ಶಾ ಅವರ ಜೊತೆ ಮಾತನಾಡಿದ್ದೇನೆ. ಶಾ ಅವರ ಅಧ್ಯಕ್ಷತೆಯಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿಯ ಜೊತೆ ಡಿ. 14 ಅಥವಾ 15ರಂದು ಸಭೆ ನಡೆಯಲಿದೆ. ತಿಳಿಸಿದಾಗ ಬರುವಂತೆ ಅವರು ಹೇಳಿದ್ದಾರೆ' ಎಂದರು.

'ಶಾ ಅವರಿಗೆ ಕರ್ನಾಟಕದ ವಿಚಾರ, ನಿಲುವು, ವಾಸ್ತವಾಂಶವನ್ನು ಈಗಾಗಲೇ ತಿಳಿಸಲಾಗಿದೆ. ಹಲವು ವಿವರಗಳನ್ನೂ ನೀಡಲಾಗಿದೆ. ಭೇಟಿಯಾದ ಸಂದರ್ಭದಲ್ಲಿ ಕರ್ನಾಟಕದ ನಿಲುವನ್ನು ಅವರಿಗೆ ಸ್ಪಷ್ಟಪಡಿಸಲಾಗುವುದು' ಎಂದರು.

ಸರ್ವಪಕ್ಷ ಸಭೆ: 'ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರೊಂದಿಗೆ ಸರ್ವಪಕ್ಷದ ಸಭೆ ಬಗ್ಗೆ ಚರ್ಚಿಸಲಾಗಿದೆ. ಸಭೆ ನಿಗದಿಯಾದ ಕೂಡಲೇ ತಿಳಿಸಲಾಗುವುದು' ಎಂದೂ ಹೇಳಿದರು.

'ಮಹಾ' ಕನ್ನಡಿಗರ ಹಿತರಕ್ಷಣೆಗೆ ಬದ್ಧ- ಮುಖ್ಯಮಂತ್ರಿ

ಮಂಗಳೂರು: 'ಗಡಿ ವಿಚಾರದಲ್ಲಿ ರಾಜ್ಯದ ಹಿತರಕ್ಷಣೆಯನ್ನು ನೂರಕ್ಕೆ ನೂರು ಮಾಡುತ್ತೇವೆ. ಅಷ್ಟೇ ಅಲ್ಲ; ಮಹಾರಾಷ್ಟ್ರದಲ್ಲಿರುವ ಕನ್ನಡಿಗರ ಹಿತರಕ್ಷಣೆಯನ್ನೂ ಮಾಡುತ್ತೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಈಗ ಮಹಾರಾಷ್ಟ್ರ ಗಡಿಯ ಆಚೆಗೂ ರಾಜ್ಯದ ಬಸ್‌ಗಳು ಸಂಚರಿಸುತ್ತಿವೆ. ಅವುಗಳ ಭದ್ರತೆಗೆ ಇನ್ನಷ್ಟು ಕ್ರಮ ತೆಗೆದುಕೊಳ್ಳುವಂತೆ ಮಹಾರಾಷ್ಟ್ರ ಸರ್ಕಾರಕ್ಕೆ ಸೂಚನೆ ನೀಡಿದ್ದೇವೆ' ಎಂದರು.

'ವಿಧಾನ ಮಂಡಲದ ಚಳಿಗಾಲದ ಅಧಿವೇಶನ ನಡೆಸುವಾಗ ಬೆಳಗಾವಿಯಲ್ಲಿ ಪ್ರತಿಭಟನೆಗೆ ಎಂಇಎಸ್‌ನವರು ಸಮಾವೇಶ ನಡೆಸಲು ಪ್ರಯತ್ನಿಸುತ್ತಾರೆ. ಅದಕ್ಕೆ ಅವಕಾಶ ಕೊಟ್ಟಿಲ್ಲ. ಮುಂದೆಯೂ ಕೊಡುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

ನಿಲುವು ಸ್ಪಷ್ಟಪಡಿಸಲು ಪ್ರಧಾನಿಗೆ ಉದ್ಧವ್ ಠಾಕ್ರೆ ಒತ್ತಾಯ

ಜಲ್ನಾ, ಮಹಾರಾಷ್ಟ್ರ (ಪಿಟಿಐ): ಕರ್ನಾಟಕ ಮತ್ತು ಮಹಾರಾಷ್ಟ್ರದ ನಡುವಿನ ಗಡಿ ಸಮಸ್ಯೆ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಶಿವಸೇನಾದ ಮುಖ್ಯಸ್ಥ ಉದ್ಧವ್ ಠಾಕ್ರೆ ಶನಿವಾರ ಹೇಳಿದ್ದಾರೆ.

ಇಲ್ಲಿ ಮರಾಠವಾಡ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಪ್ರಧಾನಿ ಮೋದಿ ಅವರು ಭಾನುವಾರ ನಾಗ್ಪುರ-ಮುಂಬೈ ಎಕ್ಸ್‌ಪ್ರೆಸ್ ವೇ ಉದ್ಘಾಟನೆಗೆ ಬರುತ್ತಿದ್ದಾರೆ. ಅವರನ್ನು ನಾವು ಸ್ವಾಗತಿಸುತ್ತೇವೆ. ಭೇಟಿ ವೇಳೆ ಅವರು ಕರ್ನಾಟಕ- ಮಹಾರಾಷ್ಟ್ರ ನಡುವಿನ ಗಡಿಯ ಸಮಸ್ಯೆ ಬಗ್ಗೆ ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು' ಎಂದರು.

'ಮಹಾರಾಷ್ಟ್ರದ ಕೆಲವು ಹಳ್ಳಿಗಳ ಮೇಲೆ ಹಕ್ಕು ಸಾಧಿಸುತ್ತಿರುವ ಕರ್ನಾಟಕ ಮುಖ್ಯಮಂತ್ರಿಯ ಕುರಿತೂ ಪ್ರಧಾನಿ ಅವರು ಮಾತನಾಡಬೇಕು' ಎಂದು ಹೇಳಿದರು.

ಪಂಚರತ್ನ ರಥಯಾತ್ರೆ ಮುಂದಕ್ಕೆ

ಬೆಂಗಳೂರು: ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದಿಂದ ಭಾನುವಾರದಿಂದ (ಡಿ.11) ಮತ್ತೆ ಆರಂಭ ಆಗಬೇಕಿದ್ದ ಪಂಚರತ್ನ ರಥಯಾತ್ರೆಯನ್ನು ಮಳೆಯ ಕಾರಣ ನಾಲ್ಕು ದಿನಗಳು ಮುಂದೂಡಲಾಗಿದೆ.

ತುಮಕೂರು ಜಿಲ್ಲೆ ಸೇರಿದಂತೆ ರಾಜ್ಯದ ಒಳನಾಡಿನಲ್ಲಿ ಮಳೆ ಸುರಿಯುತ್ತಿದೆ. ಪೂರ್ವನಿಗದಿತ ವೇಳಾಪಟ್ಟಿಯಂತೆ ರಥಯಾತ್ರೆ ಚಿಕ್ಕನಾಯಕನಹಳ್ಳಿಯಿಂದ ಆರಂಭವಾಗಬೇಕಿತ್ತು. ನಂತರ ತುರುವೇಕೆರೆ, ತುಮಕೂರು ಗ್ರಾಮಾಂತರ, ಕುಣಿಗಲ್ ಕ್ಷೇತ್ರಗಳಲ್ಲಿ ಸಾಗಬೇಕಿತ್ತು. ತುಮಕೂರು ಜಿಲ್ಲೆಯಲ್ಲಿ ಯಲ್ಲೊ ಅಲರ್ಟ್ ಘೋಷಿಸಲಾಗಿದೆ. ಹೀಗಾಗಿ, ರಥಯಾತ್ರೆ ಮಾರ್ಗ, ವೇಳಾಪಟ್ಟಿಯನ್ನು ಪರಿಷ್ಕರಿಸಲಾಗಿದೆ.

ಡಿ.15ರಂದು ಮಾಗಡಿಯಲ್ಲಿ ರಥಯಾತ್ರೆ ನಡೆಯಲಿದೆ. 16ರಂದು ರಾಮನಗರ, 17ರಂದು ಹಾರೋಹಳ್ಳಿ, 18ರಂದು ಕನಕಪುರ, 19ರಂದು ಚನ್ನಪಟ್ಟಣ ಕ್ಷೇತ್ರ, 20ರಂದು ಮಂಡ್ಯ ಜಿಲ್ಲೆಗೆ ರಥಯಾತ್ರೆ ಪ್ರವೇಶ ಮಾಡಲಿದೆ. 20ರಂದು ಮಳವಳ್ಳಿ, 21ಕ್ಕೆ ಮದ್ದೂರು, 22ಕ್ಕೆ ಮಂಡ್ಯ, 23ಕ್ಕೆ ಶ್ರೀರಂಗಪಟ್ಟಣ, 24ಕ್ಕೆ ಪಾಂಡವಪುರ, 25ಕ್ಕೆ ಕೆ.ಆರ್. ಪೇಟೆ, 26ಕ್ಕೆ ನಾಗಮಂಗಲ ಕ್ಷೇತ್ರಗಳಲ್ಲಿ ಸಂಚರಿಸಲಿದೆ.

ಡಿ.27ರಂದು ಮತ್ತೆ ತುಮಕೂರು ಜಿಲ್ಲೆ ಪ್ರವೇಶಿಸಲಿದೆ. 27ರಂದು ತುರುವೇಕೆರೆ, 28ರಂದು ಚಿಕ್ಕನಾಯಕನಹಳ್ಳಿ, 29ರಂದು ತುಮಕೂರು ಗ್ರಾಮಾಂತರ, 30ರಂದು ಕುಣಿಗಲ್ ಕ್ಷೇತ್ರಗಳಲ್ಲಿ ಸಂಚರಿಸಲಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

18ರಂದು ಬಿಜೆಪಿ 'ಶಕ್ತಿ ಸಂಗಮ' ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯ 24 ಪ್ರಕೋಷ್ಠಗಳ ರಾಜ್ಯ ಸಮಾವೇಶ 'ಶಕ್ತಿ ಸಂಗಮ' ಬೆಂಗಳೂರಿನ ಅರಮನೆ ಮೈದಾನದ ಗಾಯಿತ್ರಿ ವಿಹಾರದಲ್ಲಿ ಡಿ. 18ರಂದು ನಡೆಯಲಿದೆ.

ಮಂಡಲ, ಜಿಲ್ಲೆ ಹಾಗೂ ರಾಜ್ಯ ಸಮಿತಿ ಸಂಚಾಲಕ, ಸಹ-ಸಂಚಾಲಕರು, ಜಿಲ್ಲಾ ಸಂಯೋಜಕರು, ಸಂಕುಲ ಪ್ರಮುಖರು ಸೇರಿದಂತೆ ಸುಮಾರು 18 ಸಾವಿರ ಕಾರ್ಯಕರ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಪ್ರಕೋಷ್ಠಗಳ ರಾಜ್ಯ ಸಂಯೋಜಕ ಎಂ.ಬಿ. ಭಾನುಪ್ರಕಾಶ್ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅಧ್ಯಕ್ಷತೆ ವಹಿಸುವರು. ರೈಲ್ವೆ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಸಮಾವೇಶ ಉದ್ಘಾಟಿಸುವರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಸಚಿವರು, ಶಾಸಕರು ಭಾಗವಹಿಸುವರು. ಸಮಾರೋಪ ಸಮಾರಂಭದಲ್ಲಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಮಾತನಾಡಲಿದ್ದಾರೆ ಎಂದು ವಿವರಿಸಿದರು.

'ಇದು ವೃತ್ತಿ ಆಧಾರಿತ ಕಾರ್ಯಕರ್ತರ ಸಮಾವೇಶ. ಹೀಗಾಗಿ, ಎಲ್ಲರೂ ವೈಶಿಷ್ಟ್ಯಪೂರ್ಣ, ವೈವಿಧ್ಯಮಯವಾಗಿ ಬರಲು ಸೂಚಿಸಲಾಗಿದೆ. 2023ರ ಚುನಾವಣೆಯಲ್ಲಿ 'ನಮ್ಮ ಬೂತ್ ನಮ್ಮ ಹೆಮ್ಮೆ' ಪ್ರತಿಜ್ಞೆ ಮಾಡಿ ಶೇ 50ಕ್ಕಿಂತ ಹೆಚ್ಚು ಮತ ಗಳಿಸುವತ್ತ ಕಾರ್ಯಪ್ರವೃತ್ತರಾಗಲಿದ್ದೇವೆ' ಎಂದರು.

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ಸಹ ಸಂಯೋಜಕ ಎ. ಎಚ್. ಶಿವಯೋಗಿಸ್ವಾಮಿ, ಜಯತೀರ್ಥ ಕಟ್ಟಿ ಇದ್ದರು.

15ಕ್ಕೆ ದಿನಕ್ಕೊಮ್ಮೆ ರಾಜ್ಯಕ್ಕೆ ಮೋದಿ ಭೇಟಿ

ತುಮಕೂರು: ಮುಂಬರುವ ರಾಜ್ಯ ವಿಧಾನಸಭೆ ಚುನಾವಣೆಗೆ ಬಿಜೆಪಿ ಸಜ್ಜಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಪ್ರತಿ ಹದಿನೈದು ದಿನಕ್ಕೊಮ್ಮೆ ರಾಜ್ಯಕ್ಕೆ ಬರಲಿದ್ದಾರೆ ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದ್ದಾರೆ.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗೃಹ ಸಚಿವ ಅಮಿತ್ ಶಾ ಅವರೂ ತಿಂಗಳಿಗೆ ನಾಲ್ಕು ಬಾರಿ ರಾಜ್ಯಕ್ಕೆ ಬರಲಿದ್ದಾರೆ ಎಂದು ತಿಳಿಸಿದರು.

ಗುಜರಾತ್ ವಿಧಾನಸಭೆ ಫಲಿತಾಂಶದ ನಂತರ ರಾಜ್ಯದಲ್ಲಿ ಕಾಂಗ್ರೆಸ್ ಗಂಟುಮೂಟೆ ಕಟ್ಟಿಕೊಂಡು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತುಕೊಳ್ಳಲು ಸಾಧ್ಯವಾಗದಷ್ಟು ಕೆಳಮಟ್ಟಕ್ಕೆ ಕಾಂಗ್ರೆಸ್ ತಲುಪಲಿದೆ ಎಂದು ಹೇಳಿದರು.

ಸಾಂಸ್ಕೃತಿಕ ಜಾಂಬೂರಿಗೆ ಹೆಚ್ಚುವರಿ ಅನುದಾನಕ್ಕೆ ಮೊರೆ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಸ್ಕೌಟ್ಸ್ ಮತ್ತು ಗೈಡ್ಸ್‌ನ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ ಇದೇ 21ರಿಂದ 27ರವರೆಗೆ ಇಲ್ಲಿ ನಡೆಯಲಿದೆ. ಇದಕ್ಕೆ ನಿಗದಿತ ಅನುದಾನನ್ನು ತಕ್ಷಣ ಬಿಡುಗಡೆ ಮಾಡುವುದರ ಜೊತೆಗೆ ಹೆಚ್ಚುವರಿ ಅನುದಾನವನ್ನು ನೀಡಬೇಕು ಎಂದು ಕಾರ್ಯಕ್ರಮದ ಸಂಘಟಕ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ಶನಿವಾರ ಕೋರಿದರು.

ಜಾಂಬೂರಿಗೆ ಅಂದಾಜು ₹35 ಕೋಟಿ ವೆಚ್ಚವಾಗಲಿದೆ. ರಾಜ್ಯ ಸರ್ಕಾರ ₹10 ಕೋಟಿ ಅನುದಾನ ನೀಡಲು ನಿರ್ಧರಿಸಿದೆ. ವಿವಿಧ ದೇಶ, ರಾಜ್ಯಗಳ 50 ಸಾವಿರ ಮಕ್ಕಳು, 10 ಸಾವಿರ ತರಬೇತುದಾರರು ಪಾಲ್ಗೊಳ್ಳಲಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ದೇಶದಲ್ಲಿ ನಡೆಯುತ್ತಿರುವ ಮೊದಲ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ ಇದಾಗಿದೆ. ಹಲವು ವಿಷಯಗಳಲ್ಲಿ ಇದು ಜಾಗತಿಕ ದಾಖಲೆಯನ್ನು ಬರೆಯಲಿದೆ. ಇದೇ ಮೊದಲ ಬಾರಿಗೆ ಜಾಂಬೂರಿಯಲ್ಲಿ ಭಾಗವಹಿಸುತ್ತಿರುವ ಎಲ್ಲರಿಗೂ ಹಾಸ್ಟೆಲ್‌ಗಳಲ್ಲಿಯೇ ವಸತಿ ಹಾಗೂ ಸಾಮೂಹಿಕ ಊಟೋಪಚಾರದ ವ್ಯವಸ್ಥೆ ಮಾಡಲಾಗುತ್ತಿದೆ' ಎಂದು ತಿಳಿಸಿದರು.

ವಿಶ್ವಸಂಸ್ಥೆಯ 'ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಕಾರ' ಕುರಿತು ಸಂಪನ್ಮೂಲ ವ್ಯಕ್ತಿಗಳಿಂದ ಬೋಧನೆ, ದೇಶದ ವಿವಿಧ ಭಾಗಗಳ ಶಾಸ್ತ್ರೀಯ ಜನಪದ ಕಲೆಯ ಪರಿಚಯ, ಜಂಗಲ್ ಟ್ರಯಲ್. ಸಾಹಿತ್ಯ ಚಟುವಟಿಕೆ, ಸಿಡಿಮದ್ದು ಪ್ರದರ್ಶನ, ಯೋಗಾಥಾನ್ ನಡೆಯಲಿದೆ. ಎಲ್ಲ ಮಕ್ಕಳಿಗೆ ₹750 ಮೌಲ್ಯದ ವೆಲ್‌ಕಂ ಕಿಟ್ ನೀಡಲಾಗುತ್ತಿದೆ ಎಂದು ತಿಳಿಸಿದರು.

ವಿಜ್ಞಾನ, ಆಹಾರ, ಕಲಾ, ಕೃಷಿ, ಪುಸ್ತಕ ಮೇಳಗಳನ್ನು ನಡೆಸಲಾಗುತ್ತಿದೆ. ಮೂಡುಬಿದಿರೆ ಸುತ್ತಮುತ್ತಲಿನ ವಿದ್ಯಾರ್ಥಿಗಳು ಹಾಗೂ ಸ್ಥಳೀಯರ ಸಹಯೋಗದಲ್ಲಿ ಸ್ವಚ್ಛತಾ ಅಭಿಯಾನ ನಡೆಸಲಾಗುವುದು ಎಂದು ವಿವರಿಸಿದರು.

ಸಂಕ್ಷಿಪ್ತ ಸುದ್ದಿ

ಜ. 6ರಿಂದ ಪ್ರಣವಾನಂದ ಪಾದಯಾತ್ರೆ

ಗಂಗಾವತಿ (ಕೊಪ್ಪಳ ಜಿಲ್ಲೆ): ಈಡಿಗ ಸಮುದಾಯವನ್ನು ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸಬೇಕು. ಸೇಂದಿ ಇಳಿಸಲು ಅವಕಾಶ ನೀಡಬೇಕು ಎಂಬುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮಂಗಳೂರಿನಿಂದ ಬೆಂಗಳೂರಿಗೆ ಜನವರಿ 6ರಿಂದ ಪಾದಯಾತ್ರೆ ನಡೆಸಲಿದ್ದೇವೆ ಎಂದು ಆರ್ಯ ಈಡಿಗ ರಾಷ್ಟ್ರೀಯ ಮಹಾಮಂಡಳದ ಅಧ್ಯಕ್ಷ ಪ್ರಣವಾನಂದ ಸ್ವಾಮೀಜಿ ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಅವರು, '658 ಕಿ.ಮೀ. ಪಾದಯಾತ್ರೆ ನಡೆಸಿ, ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಲಾಗುತ್ತದೆ ಎಂದರು.

ರಾಜ್ಯದಲ್ಲಿ ಈಡಿಗ ಸಮಾಜದ ಜನಸಂಖ್ಯೆ 70 ಲಕ್ಷ ಇದೆ. ಈಡಿಗ ಸಮಾಜದ 7 ಶಾಸಕರು, ಇಬ್ಬರು ಮಂತ್ರಿಗಳು ಇದ್ದರೂ ಅಭಿವೃದ್ಧಿಗೆ ನಿರ್ಲಕ್ಷ್ಯ ತೋರುತ್ತಿದ್ದಾರೆ. 2004ರಲ್ಲಿ ಈಡಿಗ ಸಮಾಜದ ಕಸುಬು ಕಸಿದುಕೊಂಡು ಪರ್ಯಾಯ ವ್ಯವಸ್ಥೆ ನೀಡದೆ, ಕತ್ತಲಲ್ಲಿ ಕವಿಯುವಂತೆ ಮಾಡಿದೆ ಎಂದು ದೂರಿದರು. ರಾಜ್ಯದಲ್ಲಿ ಪರವಾನಗಿ ಇಲ್ಲದೆ ಈಚಲು ಮರ ಕಡಿಯುವಂತಿಲ್ಲ. ಮಕ್ಕಳ ಶಿಕ್ಷಣಕ್ಕೆ ಸಾಲ ವ್ಯವಸ್ಥೆ ಇದೆ. ಕರ್ನಾಟಕದಲ್ಲಿ ಏಕೆ ಸೇಂದಿ ಇಳಿಕೆ ಸೌಲಭ್ಯವಿಲ್ಲ ಎಂದು ಅವರು ಪ್ರಶ್ನಿಸಿದರು.

ಕಲ್ಲಿದ್ದಲು ತೆರಿಗೆ ಹಗರಣ: ₹151 ಕೋಟಿ ಮೌಲ್ಯದ ಆಸ್ತಿ ಜಪ್ತಿ

ನವದೆಹಲಿ (ಪಿಟಿಐ): ಕಲ್ಲಿದ್ದಲು ತೆರಿಗೆ ಹಗರಣ ಕುರಿತ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಐಎಎಸ್ ಅಧಿಕಾರಿಗಳು, ಕಲ್ಲಿದ್ದಲು ವರ್ತಕರಿಗೆ ಸೇರಿದ ಒಟ್ಟು ₹ 152.31 ಕೋಟಿ ಮೌಲ್ಯದ ಆಸ್ತಿಗಳನ್ನು ಇ.ಡಿ ಜಪ್ತಿ ಮಾಡಿದೆ.

ಈಗ ಬಂಧನದಲ್ಲಿರುವ ಛತ್ತೀಸಗಢ ಮುಖ್ಯಮಂತ್ರಿಯ ಉಪ ಕಾರ್ಯದರ್ಶಿ ಸೌಮ್ಯಾ ಚೌರಾಸಿಯಾ, ಐಎಎಸ್ ಅಧಿಕಾರಿ ಸಮೀರ್ ವಿಷ್ಣೋಯಿ, ಕಲ್ಲಿದ್ದಲು ವರ್ತಕ, ಪ್ರಕರಣದ ಪ್ರಮುಖ ಆರೋಪಿ ಸೂರ್ಯಕಾಂತ್ ತಿವಾರಿ ಅವರಿಗೆ ಈ ಆಸ್ತಿಗಳು ಸೇರಿದ್ದಾಗಿವೆ.

ಸೌಮ್ಯಾ ಅವರ ಒಡೆತನದ ಫ್ಲ್ಯಾಟ್ ಸೇರಿದಂತೆ 21 ಆಸ್ತಿಗಳು, ತಿವಾರಿಗೆ ಸೇರಿದ್ದ ಕಲ್ಲಿದ್ದಲು ಸ್ಥಾವರದ ಪರಿಕರಗಳು, ಐಎಎಸ್ ಅಧಿಕಾರಿ ಸಮೀರ್ ವಿಷ್ಣೋಯಿ ಅವರಿಗೆ ಸೇರಿದ ಐದು ಆಸ್ತಿಗಳು ಜಪ್ತಿಯಾಗಿರುವುದರಲ್ಲಿ ಸೇರಿವೆ. ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ಒಟ್ಟು 91 ಸ್ಥಿರಾಸ್ತಿಗಳ ಜಪ್ತಿಗೆ ತನಿಖಾ ಸಂಸ್ಥೆಯು ಆದೇಶ ನೀಡಿತ್ತು.

ಸೌಮ್ಯಾ ಚೌರಾಸಿಯಾ ಅವರು ಛತ್ತೀಸಗಢ ರಾಜ್ಯಸೇವೆ ಅಧಿಕಾರಿಣಿ. ಮುಖ್ಯಮಂತ್ರಿಗಳ ಸಚಿವಾಲಯದಲ್ಲಿ ನಿಯೋಜನೆಗೊಂಡಿದ್ದ ಪ್ರಭಾವಿಯಾಗಿದ್ದರು. ಕಲ್ಲಿದ್ದಲು ಉದ್ಯಮಿ ಸುನಿಲ್ ಅಗರವಾಲ್ ಮತ್ತು ಇತರರಿಗೆ ಸೇರಿದ ಆಸ್ತಿಗಳನ್ನೂ ಜಪ್ತಿ ಮಾಡಲಾಗಿದೆ.

ಚಿರತೆ ದಾಳಿ: ಮೂವರಿಗೆ ಗಾಯ

ಕೊರಟಗೆರೆ (ತುಮಕೂರು): ತಾಲ್ಲೂಕಿನ ಇರಕಸಂದ್ರ ಕಾಲೊನಿಯ ಒಂಟಿ ಮನೆಯ ಬಳಿ ಶನಿವಾರ ಬೆಳಿಗ್ಗೆ ಮೂವರ ಮೇಲೆ ಚಿರತೆ ದಾಳಿ ನಡೆಸಿದೆ.

ಚೇತನ್ (15) ಮತ್ತು ಧನುಷ್ (13) ಸಹೋದರರು ಮತ್ತು ರಾಜು ಎಂಬವರ ಮೇಲೆ ದಾಳಿ ನಡೆಸಿದೆ. ಗಾಯಾಳುಗಳನ್ನು ಕೊರಟಗೆರೆ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಅರಣ್ಯ ಅಧಿಕಾರಿ ಎಚ್. ಎಂ.ಸುರೇಶ್ ಸ್ಥಳಕ್ಕೆ ಭೇಟಿ ನೀಡಿದ್ದರು. 'ಚಿರತೆ ಸಾಮಾನ್ಯವಾಗಿ ಕುತ್ತಿಗೆಗೆ ಬಾಯಿ ಹಾಕುತ್ತದೆ. ಆದರೆ ಇಲ್ಲಿ, ಬರಿ ಕಾಲುಗಳನ್ನು ಕಚ್ಚಿ, ಪರಚಿ ಗಾಯಗೊಳಿಸಿದೆ. ಬಹುಶಃ ಚಿರತೆಗೆ ಹುಚ್ಚು ಹಿಡಿದಿರುವ ಸಾಧ್ಯತೆ ಇದೆ' ಎಂದರು.

'ಘಟನೆ ನಡೆದ ಸ್ಥಳದ ಸುತ್ತಮುತ್ತಲ ಪ್ರದೇಶದಲ್ಲಿ ಚಿರತೆ ಸೆರೆಗೆ ನಾಲ್ಕು ಕಡೆ ಬೋನು ಇಡಲಾಗಿದೆ' ಎಂದು ತಿಳಿಸಿದರು.



ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಶ್ರೀರಾಮ ವಿದ್ಯಾಕೇಂದ್ರ ಟ್ರಸ್ಟ್‌ನ ಶಾಲೆಗಳ ವಿದ್ಯಾರ್ಥಿಗಳು ವಾರ್ಷಿಕ ಕ್ರೀಡೋತ್ಸವದ ಅಂಗವಾಗಿ ಶನಿವಾರ ರಾತ್ರಿ ಪ್ರದರ್ಶಿಸಿದ ಕಸರತ್ತುಗಳಲ್ಲಿ ಅರಳಿದ ಕಮಲ

'ಲೈಂಗಿಕ ದೌರ್ಜನ್ಯ: ಕುಟುಂಬದ ಮೌನ ಬೇಡ'

ನವದೆಹಲಿ (ಪಿಟಿಐ): ಮಕ್ಕಳ ಮೇಲೆ ಪರಿಚಿತರಿಂದಲೇ ಲೈಂಗಿಕ ದೌರ್ಜನ್ಯ ನಡೆದಾಗ ಅದನ್ನು ಬಹಿರಂಗಪಡಿಸುವ ಮನಸ್ಥಿತಿಯನ್ನು ಕುಟುಂಬದವರು ಬೆಳೆಸಿಕೊಳ್ಳಬೇಕು ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರು ಶನಿವಾರ ಹೇಳಿದರು.

ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆ ಕುರಿತ ಎರಡು ದಿನಗಳ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಪರಾಧ ನ್ಯಾಯ ವ್ಯವಸ್ಥೆಯು ಕೆಲವೊಮ್ಮೆ ಸಂತ್ರಸ್ತರ ಮಾನಸಿಕ ಆಘಾತ ಹೆಚ್ಚಿಸುವ ರೀತಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಆದ್ದರಿಂದ ಇದನ್ನು ತಡೆಯಲು ಕಾರ್ಯಾಂಗವು ನ್ಯಾಯಾಂಗದೊಂದಿಗೆ ಕೈಜೋಡಿಸಬೇಕು ಎಂದು ಹೇಳಿದರು.

'ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟುವುದು ಮತ್ತು ಕಾನೂನಿನಲ್ಲಿ ಲಭ್ಯವಿರುವ ಪರಿಹಾರದ ಬಗ್ಗೆ ಜಾಗೃತಿ ಮೂಡಿಸುವುದು ಅನಿವಾರ್ಯವಾಗಿದೆ. ಸುರಕ್ಷಿತ ಮತ್ತು ಅಸುರಕ್ಷಿತ ಸ್ಪರ್ಶದ ನಡುವಿನ ವ್ಯತ್ಯಾಸವನ್ನು ಮಕ್ಕಳಿಗೆ ಕಲಿಸಬೇಕು' ಎಂದರು.

ಎಲ್ಲಕ್ಕಿಂತ ಹೆಚ್ಚಾಗಿ, ಮಗುವಿನ ಉತ್ತಮ ಹಿತಾಸಕ್ತಿಗಿಂತ ಕುಟುಂಬದ ಗೌರವಕ್ಕೆ ಆದ್ಯತೆ ನೀಡದಂತೆ ನೋಡಿಕೊಳ್ಳುವ ತುರ್ತು ಅಗತ್ಯವಿದೆ. ಕುಟುಂಬ ಸದಸ್ಯರು ಇಂತಹ ಸಂದರ್ಭದಲ್ಲಿ ಮೌನವಹಿಸುವುದರಿಂದಲೇ ಮಕ್ಕಳ ಮೇಲಿನ ದೌರ್ಜನ್ಯಗಳು ಗೌಪ್ಯವಾಗಿ ಉಳಿಯುತ್ತವೆ. ಸರ್ಕಾರ ಈ ನಿಟ್ಟಿನಲ್ಲಿ ದೂರು ದಾಖಲಿಸಲು ಕುಟುಂಬಗಳಿಗೆ ಪ್ರೋತ್ಸಾಹಿಸಬೇಕು ಎಂದು ತಿಳಿಸಿದರು.

ಸಂತ್ರಸ್ತ ಕುಟುಂಬಗಳು ಪೊಲೀಸರಿಗೆ ದೂರು ನೀಡಲು ಹಿಂಜರಿಯುತ್ತಿವೆ. ಆದ್ದರಿಂದ ಪೊಲೀಸರಿಗೆ ಹೆಚ್ಚಿನ ಅಧಿಕಾರ ಹಸ್ತಾಂತರಿಸುವ ಬಗ್ಗೆ ಜಾಗರೂಕರಾಗಿರಬೇಕು ಎಂದು ಹೇಳಿದರು.

'ಗುಜರಾತ್ ಫಲಿತಾಂಶ 'ಭಾರತ್ ಜೋಡೊ' ಯಾತ್ರೆ ಮೇಲೆ ಪರಿಣಾಮ ಬೀರದು'

ಬುಂದಿ (ರಾಜಸ್ಥಾನ): ಗುಜರಾತ್ ವಿಧಾನಸಭಾ ಚುನಾವಣೆಯ ಫಲಿತಾಂಶವು 'ಭಾರತ್ ಜೋಡೊ' ಯಾತ್ರೆಯ ಮೇಲೆ ಯಾವುದೇ ರೀತಿಯ ಪರಿಣಾಮ ಬೀರದು. ಚುನಾವಣೆಯಲ್ಲಿ ಪಕ್ಷಕ್ಕೆ ಆಗಿರುವ ಹಿನ್ನಡೆಯ ಬಗ್ಗೆ ವಿಶ್ಲೇಷಿಸಿ, ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಜೈರಾಂ ರಮೇಶ್ ಹೇಳಿದರು.

'ಚುನಾವಣೆಯ ಸಮಯದಲ್ಲಿ ಗುಜರಾತ್‌ನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ಆಡಳಿತವನ್ನು ದುರುಪಯೋಗ ಪಡಿಸಿಕೊಂಡಿವೆ. ಬಿಜೆಪಿಯ ಚುನಾವಣಾ ಪ್ರಚಾರದಲ್ಲಿ ಬಾಲಕಿಯೊಬ್ಬಳನ್ನು ಬಳಸಿಕೊಂಡ ಬಗ್ಗೆ ಕಾಂಗ್ರೆಸ್ ನೀಡಿದ್ದ ದೂರಿನ ಬಗ್ಗೆಯೂ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದೂ ಅವರು ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

ಗುಜರಾತ್‌ನಲ್ಲಿ ಬಿಜೆಪಿ, ಎಎಪಿ ಮತ್ತು ಎಐಎಂಐಎಂ ಮೂವರು ಒಗ್ಗಟ್ಟಾಗಿ ಕಾಂಗ್ರೆಸ್‌ಗೆ ಅಡ್ಡಿಯನ್ನುಂಟು ಮಾಡಿದವು ಎಂದು ಹೇಳಿದ ಅವರು, ರಾಜ್ಯದಲ್ಲಿ ಪಕ್ಷ ಸಂಘಟನೆಯಲ್ಲಿ ಕೆಲವು ಲೋಪದೋಷಗಳಿವೆ ಎಂಬುದನ್ನೂ ಒಪ್ಪಿಕೊಂಡರು.

'ಈ ಸಂಬಂಧ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಹಿರಿಯ ನಾಯಕರಿಗೆ ಯಾವ ಕ್ರಮಕೈಗೊಳ್ಳಬೇಕೆಂಬುದು ಗೊತ್ತಿದೆ' ಎಂದರು.


ಇನ್ನೂ ಇರುವ ಅಸಮಾನತೆ, ಲಿಂಗತಾರತಮ್ಯ ● 'ಬೆಳ್ಳಿ ಬೆಳಗು' ಕಾರ್ಯಕ್ರಮಕ್ಕೆ ಸಿ.ಎಂ ಚಾಲನೆ

ಬಸವಭಕ್ತರ ಆತ್ಮಾವಲೋಕನ ಅಗತ್ಯ

ಪ್ರಜಾವಾಣಿ ವಾರ್ತೆ

ಮೈಸೂರು: 'ಸಮಸಮಾಜದ ನಿರ್ಮಾಣಕ್ಕಾಗಿ ಹೋರಾಡಿದ್ದ ಬಸವಣ್ಣನ ವಿಚಾರ ಒಂದು ಧರ್ಮಕ್ಕಷ್ಟೇ ಸೀಮಿತವಾದುದಲ್ಲ. ಸಮಾಜದಲ್ಲಿ ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಅಸಮಾನತೆ ಇಂದಿಗೂ ಇರುವುದೇಕೆ ಎಂದು ಎಲ್ಲ ಬಸವ ಭಕ್ತರು ಆತ್ಮಾವಲೋಕನ ಮಾಡಿಕೊಳ್ಳಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದ ಸುತ್ತೂರು ಶಾಖಾ ಮಠದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ, ವೀರಶೈವ ಲಿಂಗಾಯತ ಸಂಘ–ಸಂಸ್ಥೆಗಳು ಹಾಗೂ ಬಸವ ಬಳಗಗಳ ಒಕ್ಕೂಟದ ರಜತ ಮಹೋತ್ಸವ ನಿಮಿತ್ತ 'ಬೆಳ್ಳಿ ಬೆಳಗು' ಸಮಾರಂಭ ಉದ್ಘಾಟಿಸಿ ಶನಿವಾರ ಮಾತನಾಡಿದರು.



ಕಾರ್ಯಕ್ರಮವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ಮಂಗಳಾ ಸೋಮಶೇಖರ್, ಎಲ್.ನಾಗೇಂದ್ರ, ಎಲ್.ಎಸ್.ಮಹದೇವಸ್ವಾಮಿ, ಶಿವಕುಮಾರ್, ಡಾ.ಜಿ.ಸಿ.ಪ್ರಕಾಶ್, ಎಸ್.ಟಿ.ಸೋಮಶೇಖರ್ ಇದ್ದಾರೆ

'ಅಸಮಾನತೆ, ಮೂಢನಂಬಿಕೆ ಹಾಗೂ ಲಿಂಗ ತಾರತಮ್ಯದ ವಿರುದ್ಧ ಬಸವಣ್ಣ ಹೋರಾಡಿದ್ದರು. ಆ ಪದ್ಧತಿಗಳು ಇಂದಿಗೂ ಇವೆ. ಎಲ್ಲರಿಗೂ ಸಮಾನತೆ ದೊರೆತಿಲ್ಲ. ಮಹಿಳೆಯರ ಮೇಲಿನ ದೌರ್ಜನ್ಯ ನಿಂತಿಲ್ಲ. ಸಂಪತ್ತಿನ ಹಂಚಿಕೆಯಾಗಿಲ್ಲ. ಬಸವಣ್ಣ ಈಗಲೂ ಪ್ರಸ್ತುತವಾಗಬೇಕಾದ ಪರಿಸ್ಥಿತಿ ಬರಬೇಕಾಗಿತ್ತಾ' ಎಂದು ಅವರು ಪ್ರಶ್ನಿಸಿದರು.

'ಬಸವಣ್ಣನವರ ವಿಚಾರಗಳ

> **ಬದುಕಿನ ಎಲ್ಲ ಆಯಾಮಗಳಲ್ಲೂ ಬಸವಣ್ಣ ನಮಗೆ ದಾರಿ ತೋರಿದ್ದಾರೆ. ಆದರೆ, ಆ ದಾರಿಯಲ್ಲಿ ನಡೆಯುವ ಕೆಲಸವಾಗಿಲ್ಲ**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಸಮಾಜ ನಿರ್ಮಾಣಕ್ಕೆ ನಾವೆಲ್ಲರೂ ಸಂಕಲ್ಪ ತೊಡಬೇಕು. ಆರ್ಥಿಕ ಅಭಿವೃದ್ಧಿಯಲ್ಲಿ ಎಲ್ಲರಿಗೂ ಪಾಲು ಸಿಗದಿದ್ದರೆ ಸಮಗ್ರ ಅಭಿವೃದ್ಧಿ ಆಗುವುದಿಲ್ಲ' ಎಂದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ವೀರಶೈವ ಲಿಂಗಾಯತ ಸಂಘ–ಸಂಸ್ಥೆಗಳು ಹಾಗೂ ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಲ್.ಎಸ್.ಮಹದೇವಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.

ಪದವಿ ಶಿಕ್ಷಣದ ಅವಧಿ 4 ವರ್ಷ ಯುಜಿಸಿ ಹೊಸ ನಿಯಮ

ನವದೆಹಲಿ (ಪಿಟಿಐ): ವಿದ್ಯಾರ್ಥಿಗಳಿಗೆ 4 ವರ್ಷಗಳ ಶಿಕ್ಷಣ ಪೂರೈಸಿದ ನಂತರ 'ಪದವೀಧರ ಗೌರವ' ನೀಡುವಂತೆ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಕರಡು ನಿಯಮಾವಳಿ ರೂಪಿಸಿದೆ. ಈವರೆಗೆ ಪದವಿ ಶಿಕ್ಷಣದ ಅವಧಿ 3 ವರ್ಷವಾಗಿತ್ತು.

ರಾಷ್ಟ್ರೀಯ ಶಿಕ್ಷಣ ನೀತಿ ಯನುಸಾರ ರೂಪಿಸಿರುವ, ನಾಲ್ಕು ವರ್ಷದ ಪದವಿ ಶಿಕ್ಷಣದ ಪಠ್ಯಕ್ರಮ ಮತ್ತು ಶಿಕ್ಷಣದ ರೂಪುರೇಷೆ ಕುರಿತ ಕರಡು ನಿಯಮಾವಳಿಯ ಅಧಿಸೂಚನೆಯನ್ನು ಸೋಮವಾರ ಯುಜಿಸಿ ಹೊರಡಿಸುವ ಸಂಭವವಿದೆ.

ಮೂರು ವರ್ಷದ ಕಲಿಕೆ ಮತ್ತು 120 ಶ್ರೇಯಾಂಕದ (ಶೈಕ್ಷಣಿಕ ಅವಧಿ ಸಂಖ್ಯೆ ಆಧರಿಸಿ ನೀಡಲಾಗುತ್ತದೆ) ಬಳಿಕ ಪದವಿ ಶಿಕ್ಷಣ ಮುಗಿಯಲಿದೆ. ಪದವೀಧರ ಗೌರವ ನಾಲ್ಕು ವರ್ಷದ ಕಲಿಕೆ (160 ಶ್ರೇಯಾಂಕ) ಬಳಿಕ ಲಭ್ಯವಾಗಲಿದೆ ಎಂದು ಹೇಳಲಾಗಿದೆ.

ವಿದ್ಯಾರ್ಥಿಗಳು ಸಂಶೋಧನೆ ಮಾಡ ಬಯಸಿದಲ್ಲಿ, ಅದನ್ನೂ ನಾಲ್ಕು ವರ್ಷದ ಅವಧಿಯಲ್ಲೇ ಮಾಡಬೇಕು. ಇದರ ನಂತರ ನಿರ್ದಿಷ್ಟ ವಿಷಯದಲ್ಲಿ ಸಂಶೋಧನೆಗೆ ಸಂಬಂಧಿಸಿದಂತೆ ಪದವೀಧರ ಗೌರವ ದೊರೆಯಲಿದೆ ಎಂದು ಕರಡು ನಿಯಮದಲ್ಲಿ ವಿವರಿಸಲಾಗಿದೆ.

ಹಾಲಿ ನಿಯಮಗಳ ಪ್ರಕಾರ ಮೂರು ವರ್ಷದ ಪದವಿ ಶಿಕ್ಷಣಕ್ಕೆ ಹೆಸರು ನೋಂದಾಯಿಸಿರುವ ವಿದ್ಯಾರ್ಥಿಗಳೂ ನಾಲ್ಕು ವರ್ಷದ ಸ್ನಾತಕಪೂರ್ವ ಪದವಿ ಶಿಕ್ಷಣ ಪಡೆಯಲು ಅರ್ಹರು. ಇದಕ್ಕೆ ಪೂರಕವಾಗಿ ವಿಶ್ವವಿದ್ಯಾಲಯಗಳು ಆನ್‌ಲೈನ್ ಶಿಕ್ಷಣ ಸೇರಿದಂತೆ ಸೇತುಬಂಧ ಕಾರ್ಯಕ್ರಮಗಳನ್ನು ನಡೆಸಬಹುದು ಎಂದು ಯುಜಿಸಿ ತಿಳಿಸಿದೆ.

ಕವಿತಾ ವಿಚಾರಣೆ ಇಂದು

ಹೈದರಾಬಾದ್ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ಅವರ ಪುತ್ರಿ ಬಿಆರ್‌ಎಸ್‌ನ ವಿಧಾನ ಪರಿಷತ್‌ನ ಸದಸ್ಯೆ ಕೆ.ಕವಿತಾ ಅವರನ್ನು ಸಿಬಿಐ ಡಿಸೆಂಬರ್ 11ರಂದು ವಿಚಾರಣೆ ನಡೆಸಲಿದೆ.

ಭಾರಿ ಪೈಪೋಟಿ, ಶಕ್ತಿ ಪ್ರದರ್ಶನದ ಬಳಿಕ ಸರ್ವಾನುಮತದ ನಿರ್ಧಾರ ಕೈಗೊಂಡ ಕಾಂಗ್ರೆಸ್: ಇಂದು ಪ್ರಮಾಣವಚನ

ಹಿಮಾಚಲ ಮುಖ್ಯಮಂತ್ರಿ ಸುಖ್ವಿಂದರ್ ಸುಖ್ಖು

ಶಿಮ್ಲಾ (ಪಿಟಿಐ): ಹಿಮಾಚಲಪ್ರದೇಶದ ಮುಖ್ಯಮಂತ್ರಿ ಹುದ್ದೆಯ ಪೈಪೋಟಿ ಕೊನೆಗೊಂಡಿದೆ. ಹಿಮಾಚಲ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರಾಗಿದ್ದ ಸುಖ್ವಿಂದರ್ ಸಿಂಗ್ ಸುಖ್ಖು ಅವರು ಹೊಸ ಮುಖ್ಯಮಂತ್ರಿ ಆಗಲಿದ್ದಾರೆ ಎಂದು ಪಕ್ಷವು ಶನಿವಾರ ಘೋಷಿಸಿದೆ. ಈ ಹಿಂದಿನ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಮುಕೇಶ್ ಅಗ್ನಿಹೋತ್ರಿ ಅವರು ಉಪಮುಖ್ಯಮಂತ್ರಿ ಆಗಲಿದ್ದಾರೆ. ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯ ಬಳಿಕ ಈ ಹೆಸರುಗಳನ್ನು ಪ್ರಕಟಿಸಲಾಗಿದೆ. ಪ್ರಮಾಣವಚನವು ಭಾನುವಾರ ನಡೆಯಲಿದೆ.

ಶಾಸಕರ ಸಭೆಯನ್ನು ಶುಕ್ರವಾರವೇ ನಡೆಸಲಾಗಿತ್ತು. ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಅಧಿಕಾರವನ್ನು ಪಕ್ಷದ ಅಧ್ಯಕ್ಷರಿಗೆ ನೀಡುವ ನಿರ್ಣಯವನ್ನು ಆ ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಗಿತ್ತು.

68 ಸದಸ್ಯ ಬಲದ ವಿಧಾನಸಭೆಯ 40 ಕ್ಷೇತ್ರಗಳನ್ನು ಕಾಂಗ್ರೆಸ್ ಗೆದ್ದುಕೊಂಡು ಬಿಜೆಪಿಯನ್ನು ಅಧಿಕಾರದಿಂದ ಕೆಳಕ್ಕೆ ಇಳಿಸಿದೆ. ನವೆಂಬರ್ 12ರಂದು ಮತದಾನ ನಡೆದಿತ್ತು. ಫಲಿತಾಂಶವು ಗುರುವಾರ ಪ್ರಕಟವಾಗಿದೆ.

58 ವರ್ಷ ವಯಸ್ಸಿನ ಸುಖ್ಖು ಅವರು ಹಿಮಾಚಲ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದವರು. ಜೊತೆಗೆ, ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಸುಖ್ಖು ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಆಪ್ತರು ಎಂದೂ ಮೂಲಗಳು ಹೇಳಿವೆ.

ದಿವಂಗತ ವೀರಭದ್ರ ಸಿಂಗ್ ಅವರ ಹೆಂಡತಿ, ರಾಜ್ಯ ಘಟಕದ ಅಧ್ಯಕ್ಷೆಯಾಗಿರುವ ಪ್ರತಿಭಾ ಸಿಂಗ್, ಮುಕೇಶ್ ಅಗ್ನಿಹೋತ್ರಿ ಮತ್ತು ಸುಖ್ಖು ನಡುವೆ ಮುಖ್ಯಮಂತ್ರಿ ಸ್ಥಾನಕ್ಕೆ ತೀವ್ರ ಪೈಪೋಟಿ ನಡೆದಿತ್ತು. ಈ ನಾಯಕರ ಬೆಂಬಲಿಗರು ಘೋಷಣೆಗಳನ್ನು ಕೂಗಿ ಶಕ್ತಿ ಪ್ರದರ್ಶನವನ್ನೂ ನಡೆಸಿದ್ದರು.

ವೀರಭದ್ರ ಸಿಂಗ್ ಅವರು ಕಳೆದ ವರ್ಷ ಮೃತಪಟ್ಟರು. ಅಲ್ಲಿಯವರೆಗೆ ಸುಮಾರು ನಾಲ್ಕು ದಶಕಗಳ ಕಾಲ ಹಿಮಾಚಲ ಪ್ರದೇಶ ಕಾಂಗ್ರೆಸ್‌ನ ಮೇಲೆ ಅವರ ಬಿಗಿ ಹಿಡಿತ ಇತ್ತು.

ಚಾಲಕನ ಮಗ ಸಾರಥಿ

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶ ನೂತನ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿರುವ ಸುಖ್ವಿಂದರ್ ಸಿಂಗ್ ಸುಖ್ಖು ಅವರು ವಿದ್ಯಾರ್ಥಿ ನಾಯಕರಾಗಿ, ರಾಜ್ಯ ಕಾಂಗ್ರೆಸ್ ಸಾರಥಿಯಾಗಿ ಇದ್ದವರು. ಕಣಿವೆ ರಾಜ್ಯವನ್ನು ಐದು ದಶಕಗಳ ಕಾಲ ಬಿಗಿ ಹಿಡಿತದಲ್ಲಿ ಇಟ್ಟುಕೊಂಡಿದ್ದ ಮಾಜಿ ಮುಖ್ಯಮಂತ್ರಿ ವೀರಭದ್ರ ಸಿಂಗ್ ಅವರ ವಿರೋಧಿಯಾಗಿ ಗುರುತಿಸಿಕೊಂಡವರು.

ವೀರಭದ್ರ ಸಿಂಗ್ ಅವರ ನಿಧನದ ಬಳಿಕ, ಅವರ ಅನುಪಸ್ಥಿತಿಯಲ್ಲಿ ನಡೆದ ಮೊದಲ ಚುನಾವಣೆಯಲ್ಲಿ ಜಯಭೇರಿ ಬಾರಿಸಿರುವ ಕಾಂಗ್ರೆಸ್, ಸಿಂಗ್ ಅವರ ಪತ್ನಿ ಹಾಗೂ ರಾಜ್ಯ ಕಾಂಗ್ರೆಸ್ ಘಟಕದ ಮುಖ್ಯಸ್ಥೆಯೂ ಆಗಿರುವ ಪ್ರತಿಭಾ ಸಿಂಗ್ ಅವರ ಒತ್ತಡಕ್ಕೆ ಮಣಿಯದೇ ಸುಖ್ಖು ಅವರಿಗೆ ಮಣೆ ಹಾಕಿದೆ. ಈ ಬೆಳವಣಿಗೆಯು ಪಕ್ಷ ಮತ್ತೊಂದು ಹಂತಕ್ಕೆ ಮುನ್ನಡೆಯಲು ಸಿದ್ಧವಾಗಿದೆ ಎಂಬುದನ್ನು ಸೂಚಿಸುತ್ತದೆ ಎಂದು ವಿಶ್ಲೇಷಿಸಲಾಗಿದೆ.

ರಸ್ತೆ ಸಾರಿಗೆ ನಿಗಮದ ಚಾಲಕನ ಮಗ ಸುಖ್ಖು ಅವರು ತಮ್ಮ ಆರಂಭದ ದಿನಗಳಲ್ಲಿ ಶಿಮ್ಲಾದಲ್ಲಿ ಹಾಲು ಮಾರಾಟ ಮಳಿಗೆ ನಡೆಸುತ್ತಿದ್ದರು. ಎನ್‌ಎಸ್‌ಯುಐ ಅಧ್ಯಕ್ಷರಾಗಿದ್ದ ಅವರು ಕಾನೂನು ಪದವೀಧರರು. ಎರಡು ಬಾರಿ ಶಿಮ್ಲಾ ಪಾಲಿಕೆಯ ಸದಸ್ಯರಾಗಿದ್ದರು. 2003ರಲ್ಲಿ ಮೊದಲ ಬಾರಿಗೆ ನಾದೌನ್ ಕ್ಷೇತ್ರದ ಶಾಸಕರಾಗಿ ವಿಧಾನಸಭೆ ಪ್ರವೇಶಿಸಿದರು. 2012ರಲ್ಲಿ ಒಮ್ಮೆ ಸೋತಿದ್ದ ಅವರು ನಂತರದ ಎರಡು ಚುನಾವಣೆಗಳಲ್ಲಿ ಆರಿಸಿಬಂದರು.

ಹಂತಹಂತವಾಗಿ ಬೆಳೆದ ಅವರು ಪಟ್ಟುಬಿಡದ ಹೋರಾಟಗಾರ. ಮುಖ್ಯಮಂತ್ರಿ ವೀರಭದ್ರ ಸಿಂಗ್ ಅವರ ಜೊತೆ ಜಟಾಪಟಿ ನಡೆಸುತ್ತಲೇ, 2013ರಿಂದ 2019ರವರೆಗೆ ಆರು ವರ್ಷಗಳ ಕಾಲ ರಾಜ್ಯ ಘಟಕದ ಅಧ್ಯಕ್ಷರಾಗಿದ್ದರು. ಈ ಬಾರಿ ಬಿಜೆಪಿ ಕೈಯಿಂದ ಅಧಿಕಾರ ಕಿತ್ತುಕೊಳ್ಳುವಲ್ಲಿ ಯಶಸ್ವಿಯಾಗಿದ್ದರೂ, ವೀರಭದ್ರ ಸಿಂಗ್ ಅವರ ಪತ್ನಿ ಪ್ರತಿಭಾ ಸಿಂಗ್ ಅವರಿಂದ ಮತ್ತೆ ಪ್ರಬಲ ಸ್ಪರ್ಧೆ ಎದುರಾಯಿತು.

ಪ್ರೇಮ್‌ಕುಮಾರ್ ಧುಮಾಲ್ ಬಳಿಕ ಹಮೀರ್‌ಪುರ ಜಿಲ್ಲೆಯಿಂದ ಉನ್ನತ ಹುದ್ದೆಗೆ ಏರಿದ ಎರಡನೇ ವ್ಯಕ್ತಿಯಾಗಿದ್ದಾರೆ. ಪಕ್ಷದ ಸಂಘಟನೆಯನ್ನು ಬಲಪಡಿಸಿ, ಕಾರ್ಯಕರ್ತರ ಜೊತೆ ಒಳ್ಳೆಯ ಸಂಬಂಧ ಇರಿಸಿಕೊಂಡಿದ್ದರು. ಹೀಗಾಗಿಯೇ ಸಹಜವಾಗಿ ಅವರು ಮುಖ್ಯಮಂತ್ರಿ ಹುದ್ದೆಯ ಪ್ರಬಲ ಸ್ಪರ್ಧಿಯಾಗಿದ್ದರು.

ಕಾಂಗ್ರೆಸ್ ಪಕ್ಷವು ಈ ಬಾರಿ ವಂಶಾಡಳಿತಕ್ಕೆ ಮಣೆ ಹಾಕದೇ 40 ವರ್ಷದ ಸುದೀರ್ಘ ರಾಜಕಾರಣದ ಅನುಭವ ಇರುವ ನಾಯಕನನ್ನು ಉನ್ನತ ಹುದ್ದೆಗೆ ಆಯ್ಕೆ ಮಾಡಿದೆ. ಹಮೀರ್‌ಪುರ ಜಿಲ್ಲೆಯ ಐದು ಕ್ಷೇತ್ರಗಳ ಪೈಕಿ ನಾಲ್ಕು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲ್ಲುವಲ್ಲಿ ಸುಖ್ಖು ಅವರ ಪ್ರಭಾವ ಕೆಲಸ ಮಾಡಿದೆ. ಮಾಜಿ ಮುಖ್ಯಮಂತ್ರಿ ಪಿ.ಕೆ ಧುಮಾಲ್ ಹಾಗೂ ಅವರ ಮಗ ಹಾಗೂ ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರ ತವರು ಜಿಲ್ಲೆಯಲ್ಲಿ ಬಿಜೆಪಿ ಒಂದೂ ಕ್ಷೇತ್ರ ಗೆಲ್ಲದಂತೆ ನೋಡಿಕೊಂಡ ಹೆಗ್ಗಳಿಕೆಯೂ ಇವರದ್ದು.



ಸುಖ್ಖು ಅವರ ಆಯ್ಕೆಯಲ್ಲಿ ಜಾತಿ ಲೆಕ್ಕಾಚಾರವೂ ಕೆಲಸ ಮಾಡಿದೆ. ವೀರಭದ್ರ ಸಿಂಗ್ ಅವರು ರಾಜ್ಯದ ಪ್ರಬಲ ಸಮುದಾಯಗಳಲ್ಲೊಂದಾದ ಠಾಕೂರ್ ಸಮುದಾಯದವರು. ಸುಖ್ಖು ಅವರೂ ಇದೇ ಸಮುದಾಯಕ್ಕೆ ಸೇರಿದ ಕಾರಣಕ್ಕೆ ಅವರ ಆಯ್ಕೆ ಸುಲಭವಾಯಿತು. '2024ರ ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಎಲ್ಲವನ್ನೂ ತೂಗಿಸಿಕೊಂಡು ಹೋಗುವ ಸಾರಥಿ ಸ್ಥಾನಕ್ಕೆ ಸುಖ್ಖು ಅವರನ್ನು ಕಾಂಗ್ರೆಸ್ ಆಯ್ಕೆ ಮಾಡಿದೆ' ಎಂದು ಹಿಮಾಚಲ ಪ್ರದೇಶ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ರಾಮೇಶ್ ಸಿ. ಚೌಹಾಣ್ ಅಭಿಪ್ರಾಯಪಟ್ಟಿದ್ದಾರೆ.

ಗುಜರಾತ್: ಸರ್ಕಾರ ರಚನೆ ಹಕ್ಕು ಮಂಡಿಸಿದ ಭೂಪೇಂದ್ರ

ಗಾಂಧಿನಗರ (ಪಿಟಿಐ): ಗುಜರಾತ್‌ನ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರು ರಾಜ್ಯಪಾಲ ಆಚಾರ್ಯ ದೇವವ್ರತ ಅವರನ್ನು ಶನಿವಾರ ಸಂಜೆ ಭೇಟಿಯಾಗಿ ಹೊಸ ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದಾರೆ.

182 ಸದಸ್ಯ ಬಲದ ವಿಧಾನಸಭೆಯಲ್ಲಿ 156 ಕ್ಷೇತ್ರಗಳನ್ನು ಗೆದ್ದುಕೊಂಡ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಭೂಪೇಂದ್ರ ಅವರನ್ನು ಶನಿವಾರ ಆಯ್ಕೆ ಮಾಡಲಾಗಿದೆ. ಅದಾದ ಬಳಿಕ, ಭೂಪೇಂದ್ರ ಅವರು ರಾಜ್ಯಪಾಲರನ್ನು ಭೇಟಿಯಾದರು. ರಾಜ್ಯಭವನಕ್ಕೆ ಹೋಗುವಾಗ ಅವರ ಜೊತೆಗೆ, ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಸಿ.ಆರ್. ಪಾಟೀಲ್ ಅವರೂ ಇದ್ದರು.

ಭೂಪೇಂದ್ರ ಅವರು ಗುಜರಾತ್‌ನ 18ನೇ ಮುಖ್ಯಮಂತ್ರಿಯಾಗಿ ಸೋಮವಾರ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಪಕ್ಷದ ರಾಜ್ಯ ಘಟಕದ ಕಚೇರಿ 'ಕಮಲಂ'ನಲ್ಲಿ ಶಾಸಕಾಂಗ ಪಕ್ಷದ ಸಭೆ ನಡೆಯಿತು. ಭೂಪೇಂದ್ರ ಅವರು ಸರ್ವಾನುಮತದಿಂದ ಆಯ್ಕೆ ಆಗಿದ್ದಾರೆ ಎಂದು ಘೋಷಿಸಲಾಯಿತು.

ಬಿಜೆಪಿ ಮುಖಂಡರಾದ ರಾಜನಾಥ್ ಸಿಂಗ್, ಬಿ.ಎಸ್.ಯಡಿಯೂರಪ್ಪ ಮತ್ತು ಅರ್ಜುನ್ ಮುಂಡಾ ಅವರು ಕೇಂದ್ರದ ವೀಕ್ಷಕರಾಗಿ ಸಭೆಯಲ್ಲಿ ಭಾಗವಹಿಸಿದ್ದರು.

ಅಹಮದಾಬಾದ್‌ನ ಘಟ್ಲೋದಿಯಾ ವಿಧಾನಸಭಾ ಕ್ಷೇತ್ರದಿಂದ ಸತತ ಎರಡನೇ ಅವಧಿಗೆ ಭೂಪೇಂದ್ರ ಅವರು ಗೆದ್ದಿದ್ದಾರೆ. ಈ ಬಾರಿ ಅವರ ಗೆಲುವಿನ ಅಂತರ 1.92 ಲಕ್ಷ ಮತಗಳು. ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ವಿಜಯ್ ರೂಪಾಣಿ ಅವರ ಬದಲಿಗೆ ಭೂಪೇಂದ್ರ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದರು.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ಆಳ್ವಿಕೆ ಇರುವ ರಾಜ್ಯಗಳ ಮುಖ್ಯಮಂತ್ರಿಗಳು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ ಎಂದು ಬಿಜೆಪಿ ತಿಳಿಸಿದೆ. ಗಾಂಧಿನಗರದ ಹೆಲಿಪ್ಯಾಡ್ ಮೈದಾನದಲ್ಲಿ ಸಮಾರಂಭ ನಡೆಯಲಿದೆ.



ಭೂಪೇಂದ್ರ ಪಟೇಲ್ ಅವರು ರಾಜ್ಯಪಾಲ ಆಚಾರ್ಯ ದೇವವ್ರತ ಅವರನ್ನು ಭೇಟಿಯಾಗಿ ಹೊಸ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು –ಪಿಟಿಐ ಚಿತ್ರ

'ಶಾ ಹೇಳಿಕೆಯು ನೀತಿ ಸಂಹಿತೆ ಉಲ್ಲಂಘನೆಯಲ್ಲ'

ನವದೆಹಲಿ (ಪಿಟಿಐ): ಗುಜರಾತ್‌ನಲ್ಲಿ ಹಿಂಸಾ ಕೃತ್ಯಗಳನ್ನು ಎಸಗಿದವರಿಗೆ 2002ರಲ್ಲಿ 'ಪಾಠ ಕಲಿಸಲಾಗಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಚುನಾವಣಾ ಪ್ರಚಾರ ಸಂದರ್ಭದಲ್ಲಿ ಹೇಳಿದ್ದು ಮಾದರಿ ನೀತಿ ಸಂಹಿತೆಯ ಉಲ್ಲಂಘನೆ ಅಲ್ಲ ಎಂದು ಚುನಾವಣಾ ಆಯೋಗದ ಮೂಲಗಳು ಶನಿವಾರ ಹೇಳಿವೆ.

ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿಯಿಂದ ವರದಿ ಪಡೆದುಕೊಳ್ಳಲಾಗಿದೆ ಮತ್ತು ಕಾನೂನು ಸಲಹೆಯನ್ನೂ ಪಡೆಯಲಾಗಿದೆ. ದುಷ್ಕರ್ಮಿಗಳಿಗೆ ಪಾಠ ಕಲಿಸಲಾಗಿದೆ ಎಂಬುದು ನೀತಿ ಸಂಹಿತೆಯ ಉಲ್ಲಂಘನೆ ಆಗದು ಎಂಬ ನಿರ್ಧಾರಕ್ಕೆ ಬರಲಾಗಿದೆ ಎಂದು ಮೂಲಗಳು ತಿಳಿಸಿವೆ.

ಖೇಡಾ ಜಿಲ್ಲೆಯ ಮಹುಧಾ ಎಂಬಲ್ಲಿ ಕಳೆದ ತಿಂಗಳು ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಅಮಿತ್ ಶಾ ಅವರು ನೀಡಿದ್ದ ಈ ಹೇಳಿಕೆಯ ವಿರುದ್ಧ ನಿವೃತ್ತ ಅಧಿಕಾರಿಯೊಬ್ಬರು ಆಯೋಗಕ್ಕೆ ದೂರು ನೀಡಿದ್ದರು.

'ಗುಜರಾತ್‌ನಲ್ಲಿ ಕಾಂಗ್ರೆಸ್ ಆಳ್ವಿಕೆಯ ವೇಳೆ (1995ಕ್ಕೆ ಮೊದಲು) ಕೋಮು ಗಲಭೆಗಳು ಸಾಮಾನ್ಯವಾಗಿದ್ದವು. ವಿವಿಧ ಸಮುದಾಯಗಳು ಮತ್ತು ಜಾತಿಗಳ ಜನರಿಗೆ ಕಾಂಗ್ರೆಸ್ ಪಕ್ಷವು ಗಲಭೆ ನಡೆಸಲು ಕುಮ್ಮಕ್ಕು ನೀಡುತ್ತಿತ್ತು. ಇಂತಹ ಗಲಭೆಗಳ ಮೂಲಕ ಕಾಂಗ್ರೆಸ್ ತನ್ನ ಮತ ಬ್ಯಾಂಕ್ ಅನ್ನು ಗಟ್ಟಿಗೊಳಿಸಿತ್ತು. ಸಮಾಜದ ದೊಡ್ಡ ವರ್ಗಕ್ಕೆ ಅನ್ಯಾಯ ಮಾಡಿತ್ತು' ಎಂದು ಶಾ ಹೇಳಿದ್ದರು.

ಕಾಂಗ್ರೆಸ್‌ನಿಂದ ಸುದೀರ್ಘ ಕಾಲ ದೊರೆತ ಬೆಂಬಲದಿಂದಾಗಿ ದುಷ್ಕರ್ಮಿಗಳಿಗೆ ಗಲಭೆ ನಡೆಸುವುದು ಅಭ್ಯಾಸವೇ ಆಗಿ ಹೋಗಿತ್ತು. ಹಾಗಾಗಿಯೇ 2002ರಲ್ಲಿ ಗುಜರಾತ್‌ನಲ್ಲಿ ಗಲಭೆ ನಡೆಯಿತು. ಆದರೆ, 2002ರಲ್ಲಿ ಅವರಿಗೆ ಪಾಠ ಕಲಿಸಿದ ಬಳಿಕ ಈ ಜನರು ಹಿಂಸೆಯ ದಾರಿ ಬಿಟ್ಟರು. 2002ರಿಂದ 2022ರವರೆಗೆ ಅವರು ಹಿಂಸೆಗೆ ಇಳಿದಿಲ್ಲ. ಗುಜರಾತ್‌ನಲ್ಲಿ ಬಿಜೆಪಿ ಶಾಶ್ವತ ಶಾಂತಿ ಸ್ಥಾಪಿಸಿದೆ ಎಂದು ಶಾ ಅವರು ಹೇಳಿದ್ದರು.

ದೆಹಲಿ ಮಹಾನಗರ ಪಾಲಿಕೆ: ಬಿಜೆಪಿ– ಎಎಪಿ ಪರಸ್ಪರ ಆರೋಪ– ಪ್ರತ್ಯಾರೋಪ

ಸದಸ್ಯರ ಸೆಳೆಯಲು ಹಣದ ಆಮಿಷ

ನವದೆಹಲಿ: ದೆಹಲಿ ಮಹಾನಗರ ಪಾಲಿಕೆ (ಎಂಸಿಡಿ) ಚುನಾವಣೆಯ ಫಲಿತಾಂಶ ಪ್ರಕಟವಾದ ಮೂರು ದಿನಗಳಲ್ಲೇ ಪಾಲಿಕೆಯ ಸದಸ್ಯರಿಗೆ ಹಣದ ಆಮಿಷ ಒಡ್ಡಿ ಪಕ್ಷಾಂತರ ಮಾಡಲಾಗುತ್ತಿದೆ ಎಂದು ಬಿಜೆಪಿ ಮತ್ತು ಎಎಪಿ ಪರಸ್ಪರ ಆರೋಪ- ಪ್ರತ್ಯಾರೋಪದಲ್ಲಿ ತೊಡಗಿವೆ.

ಶನಿವಾರ ಇಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ನಾಯಕರು ಸೇರಿದಂತೆ ಪಕ್ಷದ ರಾಷ್ಟ್ರೀಯ ವಕ್ತಾರ ಷೆಹಜಾದ್ ಪೂನಾವಾಲಾ ಮತ್ತು ದೆಹಲಿ ಮಾಧ್ಯಮ ಘಟಕದ ಮುಖ್ಯಸ್ಥ ಹರೀಶ್ ಖುರಾನ ಅವರು, ನೂತನವಾಗಿ ಆಯ್ಕೆಯಾಗಿರುವ ನಮ್ಮ ಪಕ್ಷದ ಪಾಲಿಕೆ ಸದಸ್ಯರನ್ನು ಸೆಳೆಯಲು ಎಎಪಿಯು ಯತ್ನಿಸುತ್ತಿದೆ ಎಂದು ಆರೋಪಿಸಿದ್ದಾರೆ.

'ಏಜೆಂಟ್' ಕ್ರೇಜಿವಾಲ ಅವರು ಬಿಜೆಪಿಯ ಪಾಲಿಕೆ ಸದಸ್ಯರನ್ನು ಎಎಪಿಗೆ ಸೆಳೆಯಲು ಮನವೊಲಿಸುತ್ತಿದ್ದಾರೆ. ಈ ಬಗ್ಗೆ ತಮ್ಮ ಬಳಿ ಸಾಕ್ಷ್ಯ ಇದೆ' ಎಂದು ಹರೀಶ್ ಖುರಾನ ಹೇಳಿದ್ದಾರೆ.

'ಎಎಪಿ ಸದಸ್ಯರಿಗೆ ₹ 20ಲಕ್ಷ ಆಮಿಷ': ದೆಹಲಿ ಮುಖ್ಯಮಂತ್ರಿ ಹಾಗೂ ಎಎಪಿಯ ರಾಷ್ಟ್ರೀಯ ಸಂಚಾಲಕರೂ ಆಗಿರುವ ಅರವಿಂದ ಕೇಜ್ರಿವಾಲ್, 'ಎಎಪಿಯಿಂದ ಆಯ್ಕೆಯಾದ ಪಾಲಿಕೆಯ ನೂತನ ಸದಸ್ಯರಿಗೆ ಬಿಜೆಪಿ ದೂರವಾಣಿ ಕರೆ ಮಾಡಿ ತಲಾ ₹ 20 ಲಕ್ಷ ಹಣದ ಆಮಿಷ ಒಡ್ಡಿ ಖರೀದಿಸಲು ಯತ್ನಿಸುತ್ತಿದೆ' ಎಂದು ಆರೋಪಿಸಿದ್ದಾರೆ.

'ಈ ಸಲದ ಚುನಾವಣೆಯು ತುಂಬಾ ಕಠಿಣವಾಗಿತ್ತು. ಕೆಲವೇ ಜನರು ಮಾತ್ರ ಇದು ಸುಲಭದ ಚುನಾವಣೆ ಎಂದು ಹೇಳುತ್ತಾರೆ. ಆದರೆ, ಅದು ಹಾಗಲ್ಲ. ಎದುರಾಳಿಗಳು ನಮ್ಮ ವಿರುದ್ಧ ಮಾಡಿದ ಪಿತೂರಿ, ಆಡಳಿತ ಯಂತ್ರವನ್ನು ಬಳಸಿಕೊಂಡ ರೀತಿ ಇವೆಲ್ಲದರ ನಡುವೆಯೇ ನಾವು ಸ್ಪರ್ಧಿಸಿದ ಅತ್ಯಂತ ಕಠಿಣ ಚುನಾವಣೆ ಇದಾಗಿತ್ತು' ಎಂದು ಕೇಜ್ರಿವಾಲ್ ನೂತನವಾಗಿ ಆಯ್ಕೆಯಾದ ಸದಸ್ಯರನ್ನು ಉದ್ದೇಶಿಸಿ ಮಾಡಿದ ತಮ್ಮ ಭಾಷಣದಲ್ಲಿ ಹೇಳಿದ್ದಾರೆ.

'ಅವರು (ಬಿಜೆಪಿ) ನಿಮ್ಮಲ್ಲಿ ಹಲವರಿಗೆ ಕರೆ ಮಾಡಿದೆ. ಕೆಲವರಿಗೆ ₹ 10 ಲಕ್ಷ, ಕೆಲವರಿಗೆ ₹ 20 ಲಕ್ಷ ಹಣದ ಆಮಿಷ ಒಡ್ಡಿದೆ. ಆದರೆ, ನಿಮ್ಮಲ್ಲಿ ಯಾರೊಬ್ಬರೂ ಈ ಆಹ್ವಾನವನ್ನು ಒಪ್ಪಿಕೊಂಡಿಲ್ಲ ಎಂಬ ಬಗ್ಗೆ ನನಗೆ ನಂಬಿಕೆ ಇದೆ. ಆದರೂ ನಾವಿದನ್ನು ಬಹಿರಂಗಪಡಿಸಬೇಕಿದೆ. ಅವರಿಂದ ಯಾವಾಗಲಾದರೂ ಕರೆ ಬಂದರೆ, ನಿಮ್ಮ ಫೋನಿನಲ್ಲಿ ರೆಕಾರ್ಡ್ ಮಾಡಿಟ್ಟುಕೊಳ್ಳಿ' ಎಂದೂ ಕೇಜ್ರಿವಾಲ್ ಸಲಹೆ ನೀಡಿದ್ದಾರೆ.

ಎಎಪಿ ಸೇರಿದ ಕೆಲವೇ ಗಂಟೆಗಳಲ್ಲಿ ಕಾಂಗ್ರೆಸ್‌ಗೆ ವಾಪಸ್

ನವದೆಹಲಿ: ಶುಕ್ರವಾರ ಅಷ್ಟೇ ಆಮ್ ಆದ್ಮಿ ಪಕ್ಷ (ಎಎಪಿ) ಸೇರಿದ್ದ ಕಾಂಗ್ರೆಸ್ ನಾಯಕ ಅಲಿ ಮೆಹದಿ ಹಾಗೂ ದೆಹಲಿ ಮಹಾನಗರ ಪಾಲಿಕೆಯ ಇಬ್ಬರು ಸದಸ್ಯರು ಕೆಲವೇ ಗಂಟೆಗಳಲ್ಲಿ ಪಕ್ಷಕ್ಕೆ ವಾಪಸಾಗಿದ್ದಾರೆ. ಈ ಮೂವರೂ ಪಕ್ಷದ ಕ್ಷಮೆ ಕೋರಿದ್ದಾರೆ.

ಈ ಸಂಬಂಧ ಸಾಮಾಜಿಕ ಮಾಧ್ಯಮದಲ್ಲಿ ವಿಡಿಯೊ ಹಂಚಿಕೊಂಡಿರುವ ಮೆಹದಿ,'ನಾನು ದೊಡ್ಡ ತಪ್ಪು ಮಾಡಿದ್ದೇನೆ. ನನ್ನ ತಪ್ಪನ್ನು ಒಪ್ಪಿಕೊಂಡಿದ್ದೇನೆ. ಇದಕ್ಕಾಗಿ ನಾನು ಕೈಮುಗಿದು ರಾಹುಲ್ ಗಾಂಧಿ ಅವರ ಕ್ಷಮೆ ಯಾಚಿಸುತ್ತೇನೆ' ಎಂದು ವಿಡಿಯೊದಲ್ಲಿ ಹೇಳಿದ್ದಾರೆ.

ವಿಡಿಯೊಕ್ಕೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ ಇಮ್ರಾನ್ ಪ್ರತಾಪ್‌ಘರಿ, 'ಕಾಂಗ್ರೆಸ್ ಚಿಹ್ನೆಯಡಿ ಮುಸ್ತಫಾಬಾದ್‌ನಿಂದ ಗೆದ್ದಿದ್ದ ಪಾಲಿಕೆಯ ಸದಸ್ಯರೊಬ್ಬರು ಪಕ್ಷಕ್ಕೆ ಮರಳಿದ್ದಾರೆ. ಅವರನ್ನು ಎಎಪಿಗೆ ಸೇರಿಕೊಳ್ಳುವಂತೆ ತಂತ್ರ ಮಾಡಲಾಗಿತ್ತು. ಆದರೆ, ಕೆಲವೇ ಗಂಟೆಗಳಲ್ಲಿ ಸದಸ್ಯರಿಗೆ ತಮ್ಮ ತಪ್ಪಿನ ಅರಿವಾಗಿ ಮತ್ತೆ ಕಾಂಗ್ರೆಸ್‌ಗೆ ಮರಳಿದ್ದಾರೆ' ಎಂದು ಟ್ವೀಟ್ ಮಾಡಿದ್ದಾರೆ.

ಮೆಹದಿ ಹಾಗೂ ಪಾಲಿಕೆ ಸದಸ್ಯರಾಗಿ ಆಯ್ಕೆಯಾಗಿದ್ದ ಸಬಿಲಾ ಬೇಗಂ ಮತ್ತು ನಾಜಿಯಾ ಖಾತೂನ್ ಶುಕ್ರವಾರ ಆಮ್ ಆದ್ಮಿ ಪಕ್ಷಕ್ಕೆ ಸೇರ್ಪಡೆಗೊಂಡಿದ್ದರು.

ಪಾಕಿಸ್ತಾನ ಮೂಲದ ದುಷ್ಕರ್ಮಿಗಳ ಕೈವಾಡ ಶಂಕೆ

ಠಾಣೆ ಗುರಿಯಾಗಿಸಿ ಗ್ರೆನೇಡ್ ದಾಳಿ

ತರನ್ ತಾರನ್ (ಪಿಟಿಐ): ಪಂಜಾಬ್‌ನ ಗಡಿ ಜಿಲ್ಲೆ ತರನ್ ತಾರನ್‌ನ ಪೊಲೀಸ್ ಠಾಣೆಯನ್ನು ಗುರಿಯಾಗಿಸಿ ಶನಿವಾರ ದುಷ್ಕರ್ಮಿಗಳು ರಾಕೆಟ್ ಬಳಸಿ ಗ್ರೆನೇಡ್ (ಆರ್‌ಪಿಜಿ) ದಾಳಿ ನಡೆಸಿದ್ದಾರೆ. ಅದೃಷ್ಟವಶಾತ್ ಪ್ರಾಣಹಾನಿ ಸಂಭವಿಸಿಲ್ಲ.

'ಗ್ರೆನೇಡ್ ಸೇನೆ ದರ್ಜೆಯದು. ಗಡಿಯಾಚೆಯಿಂದ ಕಳ್ಳಸಾಗಣೆ ಆಗಿರುವ ಸಾಧ್ಯತೆಗಳಿವೆ. ನೆರೆ ದೇಶವು ಭಾರತದಲ್ಲಿ ಅಶಾಂತಿ ಮೂಡಿಸಲು ಸಂಚು ನಡೆಸಿರುವುದಕ್ಕೆ ಇದು ನಿದರ್ಶನ' ಎಂದು ಡಿಜಿಪಿ ಗೌರವ್ ಯಾದವ್ ತಿಳಿಸಿದ್ದಾರೆ.

ಅಮೃತಸರ ಹೆದ್ದಾರಿಯಲ್ಲಿ ಶುಕ್ರವಾರ ರಾತ್ರಿ ಗಡಿ ಭಾಗದಲ್ಲಿರುವ ಸರ್ಹಾಲಿ ಠಾಣೆ ಮತ್ತು ಅದಕ್ಕೆ ಹೊಂದಿಕೊಂಡಂತಿರುವ ಸುವಿಧಾ ಕೇಂದ್ರವನ್ನು ಗುರಿಯಾಗಿಸಿ ದಾಳಿ ನಡೆದಿದೆ. ಯುಎಪಿಎ ಅನ್ವಯ ಪ್ರಕರಣ ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ.

'ರಾಕೆಟ್ ಉಡಾವಣಾ ವಾಹಕ ವಶಕ್ಕೆ ಪಡೆಯಲಾಗಿದೆ. ತಾಂತ್ರಿಕ ಅಂಶಗಳ ಕುರಿತು ತನಿಖೆ ನಡೆದಿದೆ. ಕೃತ್ಯದ ಸ್ವರೂಪ ಅಂದಾಜಿಸಲು ಅಪರಾಧದ ಮರುಸೃಷ್ಟಿ ಮಾಡಿದ್ದು, ಸಾಕ್ಷ್ಯಗಳ ಸಂಗ್ರಹ ನಡೆದಿದೆ' ಎಂದು ಹೇಳಿದರು.

ಮೊಹಾಲಿಯಲ್ಲಿರುವ ಪಂಜಾಬ್ ಪೊಲೀಸ್ ಗುಪ್ತದಳದ ಮುಖ್ಯ ಕಚೇರಿಯನ್ನು ಗುರಿಯಾಗಿಸಿ ಮೇ ತಿಂಗಳಲ್ಲಿ ನಡೆದಿದ್ದ ಆರ್‌ಪಿಜಿ ದಾಳಿಗೂ ಇದಕ್ಕೂ ಸಾಮ್ಯತೆ ಇದೆ ಎಂದು ತಿಳಿಸಿದರು.

ಗ್ರೆನೇಡ್ ಮೊದಲು ಪೊಲೀಸ್ ಠಾಣೆ ಗೇಟ್‌ಗೆ ಬಡಿದು, ಬಳಿಕ ಸುವಿಧಾ ಕೇಂದ್ರದ ಮೇಲೆ ಅಪ್ಪಳಿಸಿದೆ. ಕೇಂದ್ರದ ಕಿಟಕಿ ಗಾಜುಗಳು ಜಖಂಗೊಂಡಿವೆ. ದಾಳಿ ನಡೆದಾಗ ಠಾಣೆಯಲ್ಲಿ ಕೆಲ ಸಿಬ್ಬಂದಿ ಇದ್ದರು ಎಂದು ತಿಳಿಸಿದರು.

ಹೇಡಿತನದ ಕೃತ್ಯ –ಡಿಜಿಪಿ: ಇದು ಹೇಡಿತನದ ಕೃತ್ಯ. ಡ್ರೋನ್ ಬಳಸಿ ಸಾಗಿಸುತ್ತಿದ್ದ ದೊಡ್ಡ ಪ್ರಮಾಣದಲ್ಲಿ ಮಾದಕ ವಸ್ತು, ಶಸ್ತ್ರಾಸ್ತ್ರಗಳ ಜಪ್ತಿ ಬಳಿಕ ಶತ್ರು ದೇಶವು ನಲುಗಿದೆ ಎಂದು ಡಿಜಿಪಿ ಗೌರವ್ ಯಾದವ್ ಹೇಳಿದರು.

ಕಳೆದ ಒಂದು ತಿಂಗಳಲ್ಲಿಯೇ ಗಡಿ ದಾಟಿ 200ಕ್ಕೂ ಹೆಚ್ಚು ಡ್ರೋನ್‌ಗಳು ಬಂದಿವೆ. ಹಲವು ಡ್ರೋನ್‌ಗಳಿಂದ ಮಾದಕವಸ್ತು, ಶಸ್ತ್ರಾಸ್ತ್ರ, ಸ್ಫೋಟಕ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಅವರ ಹೇಳಿದರು.

ಜೆಇಎಂ ಉಗ್ರನ ಮನೆ ನೆಲಸಮ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಜಿಲ್ಲೆಯಲ್ಲಿ ಇದ್ದ ಜೈಷ್ ಇ ಮೊಹಮ್ಮದ್ (ಜೆಇಎಂ) ಉಗ್ರ ಸಂಘಟನೆಯ ಕಮಾಂಡರ್ ಆಶಿಕ್ ನೆಂಗ್ರೂ ಮನೆಯನ್ನು ನೆಲಸಮ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜಪೋರಾದ ನ್ಯೂ ಕಾಲೋನಿಯಲ್ಲಿ ಸರ್ಕಾರಿ ಭೂಮಿಯಲ್ಲಿ ನಿರ್ಮಿಸಿದ್ದ 2 ಅಂತಸ್ತಿನ ಮನೆಯನ್ನು ಪೊಲೀಸರ ಸಮ್ಮುಖದಲ್ಲಿ ಜಿಲ್ಲಾಡಳಿತ ನೆಲಸಮಗೊಳಿಸಿತು. 2019ರ ಪುಲ್ವಾಮಾ ದಾಳಿಯಲ್ಲಿ ಸಿಆರ್‌ಪಿಎಫ್‌ನ 40 ಯೋಧರು ಹುತಾತ್ಮರಾದ ಪ್ರಕರಣದಲ್ಲಿ ನೆಂಗ್ರೂ ಆರೋಪಿಯಾಗಿದ್ದಾನೆ.

ಕಾಶ್ಮೀರದಲ್ಲಿ ಶೀಘ್ರ ಪಂಚಾಯತ್ ಚುನಾವಣೆ

ಶ್ರೀನಗರ: ಜಮ್ಮು– ಕಾಶ್ಮೀರದಲ್ಲಿ ಮುಂದಿನ ವರ್ಷ ಪಂಚಾಯತ್ ಚುನಾವಣೆ ನಡೆಯುವ ಸಾಧ್ಯತೆ ಇದ್ದು, ಮತದಾರರ ಪಟ್ಟಿ ಪರಿಷ್ಕರಣೆ ಮಾಡಲು ರಾಜ್ಯ ಚುನಾವಣಾ ಆಯೋಗ ಅಧಿಕಾರಿಗಳಿಗೆ ಸೂಚಿಸಿದೆ. ಆದರೆ, ಕೇಂದ್ರಾಡಳಿತ ಪ್ರದೇಶದಲ್ಲಿ ವಿಧಾನಸಭಾ ಚುನಾವಣೆ ನಡೆಸಲು ಕೇಂದ್ರ ಸರ್ಕಾರ ಆತುರಪಡುತ್ತಿಲ್ಲ ಎನ್ನಲಾಗಿದೆ.

5 ತಿಂಗಳ ಕಾಲ ನಡೆದ ಮತದಾರರ ಪಟ್ಟಿ ಪರಿಷ್ಕರಣೆ ನಂತರ ಅಂತಿಮ ಪಟ್ಟಿಯನ್ನು ಈಚೆಗೆ ಪ್ರಕಟಿಸಲಾಗಿದ್ದು, ಒಟ್ಟು 7,72,872 ಮಂದಿಯ ಹೆಸರು ಮತದಾರರ ಪಟ್ಟಿಯಲ್ಲಿ ಇದೆ. ಮುಂಬರುವ ಏಪ್ರಿಲ್ ಅಥವಾ ಮೇನಲ್ಲಿ ಪಂಚಾಯತ್ ಚುನಾವಣೆ ನಡೆಯುವ ಸಾಧ್ಯತೆ ಇದ್ದು, ಮತ್ತೊಮ್ಮೆ ಪಟ್ಟಿ ನವೀಕರಿಸಲು ಆಯೋಗ ಸೂಚಿಸಿದೆ.

2019ರಲ್ಲಿ ಸಂವಿಧಾನದ 370ನೇ ವಿಧಿ ರದ್ದಾದ ನಂತರ ಕ್ಷೇತ್ರಗಳ ಮರುವಿಂಗಡಣೆ ಪ್ರಕ್ರಿಯೆ ನಡೆದಿತ್ತು. ಈಗ ಮತದಾರರ ಪಟ್ಟಿ ಪರಿಷ್ಕರಣೆಯಾಗುತ್ತಿದ್ದು, ಇದರ ಆಧಾರದ ಮೇಲೆ ಪಂಚಾಯತ್ ಚುನಾವಣೆ ನಡೆಯಲಿದೆ. ಆದರೆ, ವಿಧಾನಸಭಾ ಚುನಾವಣೆ ಯಾವಾಗ ನಡೆಯಲಿದೆ ಎಂಬುದು ಇನ್ನೂ ಖಚಿತವಾಗಿಲ್ಲ.

13ಕ್ಕೆ ಬಿಲ್ಕಿಸ್ ಬಾನೊ ಅರ್ಜಿ ವಿಚಾರಣೆ

ನವದೆಹಲಿ (ಪಿಟಿಐ): ತಮ್ಮ ಮೇಲೆ ಅತ್ಯಾಚಾರ ಎಸಗಿದ ಅಪರಾಧಿಗಳನ್ನು ಬಿಡುಗಡೆ ಮಾಡಿರುವ ಗುಜರಾತ್ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಬಿಲ್ಕಿಸ್ ಬಾನೊ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಡಿಸೆಂಬರ್ 13ರಂದು ನಡೆಸಲು ಸುಪ್ರೀಂ ಕೋರ್ಟ್ ನಿರ್ಧರಿಸಿದೆ.

ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಮತ್ತು ಬೇಲಾ ಎಂ. ತ್ರಿವೇದಿ ಅವರನ್ನು ಒಳಗೊಂಡ ನ್ಯಾಯಪೀಠವು ಈ ಅರ್ಜಿಯ ವಿಚಾರಣೆ ನಡೆಸುವ ಸಾಧ್ಯತೆ ಇದೆ.

2002ರ ಗುಜರಾತ್ ಹಿಂಸಾಚಾರದ ವೇಳೆ ಬಿಲ್ಕಿಸ್ ಬಾನೊ ಅವರ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿತ್ತು ಮತ್ತು ಅವರ ಕುಟುಂಬದ ಏಳು ಸದಸ್ಯರನ್ನು ಹತ್ಯೆಗೈಯಲಾಗಿತ್ತು.

ವಿಮಾನದಲ್ಲಿ ಹಾವು ಪತ್ತೆ!

ನವದೆಹಲಿ (ಪಿಟಿಐ): ಕೇರಳದಿಂದ ದುಬೈಗೆ ತೆರಳಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನದಲ್ಲಿ ಸರಕು ಇಡುವ ಜಾಗದಲ್ಲಿ ಶನಿವಾರ ಹಾವೊಂದು ಪತ್ತೆಯಾಗಿದ್ದು ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ (ಡಿಜಿಸಿಎ) ಈ ಬಗ್ಗೆ ತನಿಖೆ ನಡೆಸುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಬಿ737-800 ವಿಮಾನವು ದುಬೈ ವಿಮಾನ ನಿಲ್ದಾಣದಲ್ಲಿ ಇಳಿಯುತ್ತಿದ್ದಂತೆಯೇ ಹಾವು ಇರುವುದು ತಿಳಿದುಬಂದಿದೆ. ಪ್ರಯಾಣಿಕರನ್ನು ಸುರಕ್ಷಿತವಾಗಿ ವಿಮಾನದಿಂದ ಕೆಳಗೆ ಇಳಿಸಲಾಗಿದೆ. ಘಟನೆ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಅವರು ತಿಳಿಸಿದ್ದಾರೆ.

ಇಶಾನ್ ಕಿಶನ್ ದ್ವಿಶತಕದ ಅಬ್ಬರ

ವಿರಾಟ್ ಶತಕ; ಬಾಂಗ್ಲಾ ವಿರುದ್ಧ ಭಾರತಕ್ಕೆ ಭರ್ಜರಿ ಜಯದ ಸಮಾಧಾನ

ಚಿತ್ತಗಾಂಗ್ (ಪಿಟಿಐ): ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್ ಇತಿಹಾಸದಲ್ಲಿಯೇ 'ಶರವೇಗದ ದ್ವಿಶತಕ' ಬಾರಿಸಿದ ಇಶಾನ್ ಕಿಶನ್ ಅಬ್ಬರಕ್ಕೆ ಬಾಂಗ್ಲಾದೇಶ ತಂಡ ಬೆಚ್ಚಿಬಿದ್ದಿತು.

ಸರಣಿಯ ಮೊದಲೆರಡು ಪಂದ್ಯಗಳಲ್ಲಿ ಜಯಿಸಿ, ಮೂರನೇಯದ್ದರಲ್ಲಿ ಗೆದ್ದು ಕ್ಲೀನ್‌ಸ್ವೀಪ್ ಮಾಡುವ ಆತಿಥೇಯರ ಆಸೆಯು ರನ್‌ಗಳ ಹೊಳೆಯಲ್ಲಿ ಕೊಚ್ಚಿಹೋಯಿತು. ಭಾರತ 227 ರನ್‌ಗಳ ಅಂತರದಿಂದ ಗೆದ್ದಿತು.

ಏಕದಿನ ಕ್ರಿಕೆಟ್‌ನಲ್ಲಿ ಮೂರು ದ್ವಿಶತಕಗಳನ್ನು ಹೊಡೆದಿರುವ ಬ್ಯಾಟರ್ ಮತ್ತು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಕಳೆದ ಪಂದ್ಯದಲ್ಲಿ ಗಾಯಗೊಂಡಿದ್ದರಿಂದ ತವರಿಗೆ ಮರಳಿದ್ದಾರೆ. ಅದರಿಂದಾಗಿ ತೆರವಾದ ಸ್ಥಾನದಲ್ಲಿ ಆಡಲು ಅವಕಾಶ ಪಡೆದ 24 ವರ್ಷದ, ಎಡಗೈ ಬ್ಯಾಟರ್ ಇಶಾನ್ 'ವಿಶ್ವದಾಖಲೆ' ಬರೆದರು.

ಇಶಾನ್ (210; 131ಎಸೆತ) ಮತ್ತು ವಿರಾಟ್ ಕೊಹ್ಲಿ (113; 91ಎ) ಎರಡನೇ ವಿಕೆಟ್ ಜೊತೆಯಾಟದಲ್ಲಿ ಸೇರಿಸಿದ 290 ರನ್‌ಗಳಿಂದಾಗಿ ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 409 ರನ್ ಗಳಿಸಿತು. ಅದಕ್ಕುತ್ತರವಾಗಿ ಬಾಂಗ್ಲಾದೇಶ ತಂಡವು 34 ಓವರ್‌ಗಳಲ್ಲಿ 182 ರನ್ ಗಳಿಸಿ ಶರಣಾಯಿತು. ಆದರೆ ಬಾಂಗ್ಲಾ ತಂಡವು 2–1ರಿಂದ ಸರಣಿ ಜಯ ದಾಖಲಿಸಿತು.

ಬೌಂಡರಿ, ಸಿಕ್ಸರ್‌ಗಳಿಂದ 156!: ಬಾಂಗ್ಲಾದೇಶ ಎದುರಿನ ಕಳೆದ ಎರಡೂ ಪಂದ್ಯಗಳಲ್ಲಿ ಭಾರತ ತಂಡದ ಸೋಲನ್ನು ಬೆಂಚ್‌ನಲ್ಲಿ ಕುಳಿತು ನೋಡಿದ್ದ ಇಶಾನ್ ತಮಗೆ ಸಿಕ್ಕ ಅವಕಾಶವನ್ನು ಭರ್ಜರಿಯಾಗಿ ಬಳಸಿಕೊಂಡರು. ಶಿಖರ್ ಧವನ್ ಜೊತೆ ಇನಿಂಗ್ಸ್ ಆರಂಭಿಸಿದರು. ಆದರೆ ಶಿಖರ್ ಬೇಗನೇ ಔಟಾದರು. ಈ ಹಂತದಲ್ಲಿ ಜೊತೆಗೂಡಿದ ವಿರಾಟ್ ಕೊಹ್ಲಿಯೊಂದಿಗೆ ಇನಿಂಗ್ಸ್‌ಗೆ ಬಲ ತುಂಬಿದರು. ಕೇವಲ 85 ಎಸೆತಗಳಲ್ಲಿ ವೃತ್ತಿಜೀವನದ ಚೊಚ್ಚಲ ಶತಕ ಪೂರೈಸಿದರು. ನಂತರ ಎದುರಿಸಿದ 41 ಎಸೆತಗಳಲ್ಲಿ ನೂರು ರನ್ ಗಳಿಸಿದರು.

ಕೇವಲ 126 ಎಸೆತಗಳಲ್ಲಿ 200 ರನ್‌ಗಳ ಗಡಿ ಮುಟ್ಟಿದ ಅವರು, ಕ್ರಿಸ್‌ಗೇಲ್ (138ಎಸೆತ) ದಾಖಲೆಯನ್ನು ಮುರಿದರು. 10 ಸಿಕ್ಸರ್ ಮತ್ತು 24 ಬೌಂಡರಿಗಳ ಮೂಲಕವೇ 156 ರನ್‌ಗಳನ್ನು ಗಳಿಸಿದರು.

ಇಶಾನ್ ಆಡಿದ 10ನೇ ಏಕದಿನ ಪಂದ್ಯ ಇದು. ಈ ಮಾದರಿಯಲ್ಲಿ ತಮ್ಮ ಚೊಚ್ಚಲ ಶತಕವನ್ನೇ ದ್ವಿಶತಕವನ್ನಾಗಿ ಪರಿವರ್ತಿಸಿದ ಏಕೈಕ ಬ್ಯಾಟರ್ ಎಂಬ ಶ್ರೇಯವೂ ಅವರದ್ದಾಗಿದೆ. ಇನಿಂಗ್ಸ್‌ನ 36ನೇ ಓವರ್‌ನಲ್ಲಿ ತಸ್ಕಿನ್ ಅಹಮದ್ ಎಸೆತದಲ್ಲಿ ಲಿಟನ್ ದಾಸ್ ಪಡೆದ ಕ್ಯಾಚ್‌ನಿಂದಾಗಿ ಇಶಾನ್ ಆಟಕ್ಕೆ ತೆರೆಬಿತ್ತು. ಆಗ ವಿರಾಟ್ ಕೊಹ್ಲಿ 85 ರನ್ ಗಳಿಸಿ ಕ್ರೀಸ್‌ನಲ್ಲಿದ್ದರು.


ವಿರಾಟ್ ಕೊಹ್ಲಿ ಶತಕ ಸಂಭ್ರಮ


ಇಶಾನ್ ಕಿಶನ್ ಬ್ಯಾಟಿಂಗ್ ವೈಖರಿ

ಏಕದಿನ ಕ್ರಿಕೆಟ್‌ನಲ್ಲಿ ದ್ವಿಶತಕ

ಆಟಗಾರ	ತಂಡ	ರನ್	ಎದುರಾಳಿ	ತಾಣ	ವರ್ಷ
ಸಚಿನ್ ತೆಂಡೂಲ್ಕರ್	ಭಾರತ	200*	ದ.ಆಫ್ರಿಕಾ	ಗ್ವಾಲಿಯರ್	2010
ವೀರೇಂದ್ರ ಸೆಹ್ವಾಗ್	ಭಾರತ	219	ವೆಸ್ಟ್ ಇಂಡೀಸ್	ಇಂದೋರ್	2011
ರೋಹಿತ್ ಶರ್ಮಾ	ಭಾರತ	209	ಆಸ್ಟ್ರೇಲಿಯಾ	ಬೆಂಗಳೂರು	2013
ರೋಹಿತ್ ಶರ್ಮಾ	ಭಾರತ	264	ಶ್ರೀಲಂಕಾ	ಕೋಲ್ಕತ್ತ	2014
ಮಾರ್ಟಿನ್ ಗಪ್ಟಿಲ್	ನ್ಯೂಜಿಲೆಂಡ್	237*	ವೆಸ್ಟ್ ಇಂಡೀಸ್	ವೆಲ್ಲಿಂಗ್ಟನ್	2015
ಕ್ರಿಸ್ ಗೇಲ್	ವೆಸ್ಟ್ ಇಂಡೀಸ್	215	ಜಿಂಬಾಬ್ವೆ	ಕ್ಯಾನ್‌ಬೆರಾ	2015
ರೋಹಿತ್ ಶರ್ಮಾ	ಭಾರತ	208*	ಶ್ರೀಲಂಕಾ	ಮೊಹಾಲಿ	2017
ಫಕರ್ ಜಮಾನ್	ಪಾಕಿಸ್ತಾನ	210*	ಜಿಂಬಾಬ್ವೆ	ಬುಲವಾಯೊ	2018
ಇಶಾನ್ ಕಿಶನ್	ಭಾರತ	210	ಬಾಂಗ್ಲಾದೇಶ	ಚಿತ್ತಗಾಂಗ್	2022

ಪ್ರಮುಖ ದಾಖಲೆಗಳು

9 ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ ದಾಖಲಾದ ದ್ವಿಶತಕಗಳ ಸಂಖ್ಯೆ. ಏಳನೇ ಬ್ಯಾಟರ್

126 ಎಸೆತ ಇದು ವೇಗದ ದ್ವಿಶತಕ. ಈ ಹಿಂದೆ ವೆಸ್ಟ್ ಇಂಡೀಸ್‌ನ ಕ್ರಿಸ್ ಗೇಲ್ 138 ಎಸೆತಗಳಲ್ಲಿ ಮಾಡಿದ್ದ ದಾಖಲೆಯನ್ನು ಇಶಾನ್ ಮೀರಿದರು

1 ಹೊರದೇಶದಲ್ಲಿ ದ್ವಿಶತಕ ಹೊಡೆದ ಭಾರತದ ಮೊದಲ ಬ್ಯಾಟರ್

1 ಬಾಂಗ್ಲಾದೇಶದಲ್ಲಿ ಗರಿಷ್ಠ ಮೊತ್ತದ ವೈಯಕ್ತಿಕ ಸ್ಕೋರ್ ದಾಖಲಿಸಿದ ಪ್ರವಾಸಿ ತಂಡದ ಬ್ಯಾಟರ್. 2011ರಲ್ಲಿ ಆಸ್ಟ್ರೇಲಿಯಾದ ಶೇನ್ ವಾಟ್ಸನ್ ಅಜೇಯ 185 ರನ್ ಇದುವರೆಗಿನ ದಾಖಲೆಯಾಗಿತ್ತು.

ವಿರಾಟ್ ಚೆಂದದ ಶತಕ: ಇಶಾನ್ 200ರ ಗಡಿ ಮುಟ್ಟಿದಾಗ ಜಿಗಿದು ಸಂಭ್ರಮಿಸಿದ ವಿರಾಟ್ ಕೊಹ್ಲಿ ಕೂಡ ಚೆಂದದ ಶತಕ ದಾಖಲಿಸಿದರು. 264ನೇ ಏಕದಿನ ಪಂದ್ಯವಾಡಿದ ವಿರಾಟ್ 43ನೇ ಶತಕ ದಾಖಲಿಸಿದರು. ಒಟ್ಟಾರೆ ಇದು ಅವರ 72ನೇ ಶತಕ.

ಇಶಾನ್ ಕಿಶನ್‌ಗೆ ಹೆಚ್ಚು ಸಮಯ ಬ್ಯಾಟಿಂಗ್ ಮಾಡಲು ಅವಕಾಶ ನೀಡಿದ ವಿರಾಟ್ ಅವಕಾಶ ಸಿಕ್ಕಾಗ ಬೌಂಡರಿ ಮತ್ತು ಸಿಕ್ಸರ್ ಗಳಿಸಿ ತಂಡದ ಮೊತ್ತ ಹೆಚ್ಚಿಸಿದರು.

ಸಂಕ್ಷಿಪ್ತ ಸ್ಕೋರ್: ಭಾರತ 50 ಓವರ್‌ಗಳಲ್ಲಿ 8 ವಿಕೆಟ್‌ಗೆ 409 (ಇಶಾನ್ ಕಿಶನ್ 210, ವಿರಾಟ್ ಕೊಹ್ಲಿ 113, ವಾಷಿಂಗ್ಟನ್ ಸುಂದರ್ 37, ಅಕ್ಷರ್ ಪಟೇಲ್ 20, ಶಕೀಬ್ ಅಲ್ ಹಸನ್ 68ಕ್ಕೆ 2, ಇಬಾದತ್ ಹೊಸೇನ್ 80ಕ್ಕೆ 2, ತಸ್ಕಿನ್ ಅಹಮದ್ 89ಕ್ಕೆ 2)

ಬಾಂಗ್ಲಾದೇಶ 34 ಓವರ್‌ಗಳಲ್ಲಿ 182 (ಲಿಟನ್ ದಾಸ್ 29, ಶಕೀಬ್ ಅಲ್ ಹಸನ್ 43, ಯಾಸಿರ್ ಅಲಿ 25, ಮಹಮೂದುಲ್ಲಾ 20, ಶಾರ್ದೂಲ್ ಠಾಕೂರ್ 30ಕ್ಕೆ 3, ಅಕ್ಷರ್ ಪಟೇಲ್ 22ಕ್ಕೆ 2, ಉಮ್ರನ್ ಮಲಿಕ್ 43ಕ್ಕೆ 2)

ಫಲಿತಾಂಶ: ಭಾರತಕ್ಕೆ 227 ರನ್ ಗೆಲುವು; ಪಂದ್ಯಶ್ರೇಷ್ಠ: ಇಶಾನ್ ಕಿಶನ್; ಸರಣಿಶ್ರೇಷ್ಠ: ಮೆಹ್ದಿ ಹಸನ್ ಮಿರಾಜ್

'ಪಯ್ಯೋಳಿ ಎಕ್ಸ್‌ಪ್ರೆಸ್' ಉಷಾ ಈಗ ಐಒಎ ಅಧ್ಯಕ್ಷೆ

ನವದೆಹಲಿ (ಪಿಟಿಐ): ದಿಗ್ಗಜ ಅಥ್ಲೀಟ್ ಪಿ.ಟಿ. ಉಷಾ ಅವರು ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಮೊದಲ ಅಧ್ಯಕ್ಷೆಯಾಗಿ ಶನಿವಾರ ಆಯ್ಕೆಯಾದರು.

ಸುಪ್ರೀಂ ಕೋರ್ಟ್ ನೇಮಕ ಮಾಡಿದ್ದ ನಿವೃತ್ತ ನ್ಯಾಯಮೂರ್ತಿ ಎಲ್. ನಾಗೇಶ್ವರ್ ರಾವ್ ಅವರ ಮೇಲ್ವಿಚಾರಣೆಯಲ್ಲಿ ಚುನಾವಣೆ ನಡೆಯಿತು. ಅಧ್ಯಕ್ಷ ಹುದ್ದೆಗೆ 58 ವರ್ಷದ ಉಷಾ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧವಾಗಿ ಆಯ್ಕೆ ನಡೆಯಿತು.

ಉಷಾ ಅವರ ಆಯ್ಕೆಯೊಂದಿಗೆ ಐಒಎನ ಹಲವು ದಿನಗಳ ಬಿಕ್ಕಟ್ಟಿಗೆ ತೆರೆಬಿದ್ದಿದೆ. ಈ ತಿಂಗಳು ಚುನಾವಣೆ ನಡೆಸದಿದ್ದರೆ ಸಂಸ್ಥೆಯನ್ನು ಅಮಾನತು ಮಾಡುವುದಾಗಿ ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸಂಸ್ಥೆ (ಐಒಸಿ) ಎಚ್ಚರಿಕೆ ನೀಡಿತ್ತು.

ಐಒಎ ಚುನಾವಣೆ 2021ರ ಡಿಸೆಂಬರ್‌ನಲ್ಲಿಯೇ ನಡೆಯಬೇಕಿತ್ತು.

'ಪಯ್ಯೋಳಿ ಎಕ್ಸ್‌ಪ್ರೆಸ್' ಖ್ಯಾತಿಯ ಕೇರಳದ ಉಷಾ ಅವರು ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಜಯಿಸಿದ್ದರು. 1984ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನ 400 ಮೀ. ಹರ್ಡಲ್ಸ್‌ನಲ್ಲಿ 3ನೇ ಸ್ಥಾನ ಗಳಿಸಿದ್ದರು. ಎರಡು ದಶಕಗಳ ಕಾಲ ಭಾರತ ಮತ್ತು ಏಷ್ಯಾ ಅಥ್ಲೆಟಿಕ್ಸ್‌ನಲ್ಲಿ ಮಿಂಚಿದ್ದ ಅವರು 2000ನೇ ಇಸ್ವಿಯಲ್ಲಿ ಹಲವು ಪದಕಗಳೊಂದಿಗೆ ನಿವೃತ್ತರಾಗಿದ್ದರು.


ಪಿ.ಟಿ. ಉಷಾ– ಪಿಟಿಐ ಚಿತ್ರ

ರಾಷ್ಟ್ರೀಯ ರೈಫಲ್ ಸಂಸ್ಥೆಯ ಅಜಯ್ ಪಟೇಲ್ ಹಿರಿಯ ಉಪಾಧ್ಯಕ್ಷರಾಗಿ, ಶೂಟರ್ ಗಗನ್ ನಾರಂಗ್ ಮತ್ತು ಭಾರತ ರೋಯಿಂಗ್ ಫೆಡರೇಷನ್ ಅಧ್ಯಕ್ಷೆ ರಾಜಲಕ್ಷ್ಮಿ ಸಿಂಗ್ ಉಪಾಧ್ಯಕ್ಷರುಗಳಾಗಿ, ಸಹದೇವ್ ಯಾದವ್ ಖಜಾಂಚಿಯಾಗಿ, ಕಲ್ಯಾಣ್ ಚೌಬೆ ಜಂಟಿ ಕಾರ್ಯದರ್ಶಿಯಾಗಿ ಅವಿರೋಧ ಆಯ್ಕೆಯಾದರು. ಅಲಕಾನಂದ ಅಶೋಕ್ ಮಹಿಳಾ ಜಂಟಿ ಕಾರ್ಯದರ್ಶಿಯಾಗಿ ಚುನಾಯಿತರಾದರು.

ಚೆಸ್: ಅಗ್ರಸ್ಥಾನದಲ್ಲಿ ಕರ್ನಾಟಕದ ಇಶಾ ಶರ್ಮಾ

ಪ್ರಜಾವಾಣಿ ವಾರ್ತೆ

ಮಂಗಳೂರು: ಅಗ್ರ ಶ್ರೇಯಾಂಕದ ರಿತ್ವಿಜ್ ಪರಬ್, ಕರ್ನಾಟಕದ ಇಶಾ ಶರ್ಮಾ ಸೇರಿದಂತೆ ಆರು ಆಟಗಾರರು ಕೆಐಒಸಿಎಲ್ ಆಯೋಜಿಸಿರುವ ಕುದುರೆಮುಖ ಟ್ರೋಫಿ ಫಿಡೆ ರೇಟೆಡ್ ಅಖಿಲ ಭಾರತ ಚೆಸ್ ಟೂರ್ನಿಯ ಮೊದಲ ದಿನ ಅಗ್ರಸ್ಥಾನ ಗಳಿಸಿದರು.

ನಗರದ ಕಾವೂರಿನ ಕೆಐಒಸಿಎಲ್ ಟೌನ್‌ಷಿಪ್‌ನ ನೆಹರು ಭವನದಲ್ಲಿ ನಡೆಯುತ್ತಿರುವ, ಒಟ್ಟು ₹ 3 ಲಕ್ಷ ಬಹುಮಾನ ಮೊತ್ತದ ಟೂರ್ನಿಯಲ್ಲಿ ಇಶಾ ಶರ್ಮಾ, ರಿತ್ವಿಜ್, ಸೈಯದ್ ಅನ್ವರ್ ಶಝುಲಿ, ಜ್ಯೋತಿಲಾಲ್ ಎನ್, ಮಣಿಕಂಠನ್ ಎಸ್.ಎಸ್ ಮತ್ತು ಕೊಲ್ಯಾಕೊ ರುಬೆನ್ ತಲಾ ಐದು ಪಾಯಿಂಟ್ ಗಳಿಸಿದರು.

ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿಯ ಆಟಗಾರ್ತಿ, ಮಹಿಳಾ ಅಂತರರಾಷ್ಟ್ರೀಯ ಮಾಸ್ಟರ್ ಇಶಾ (2138 ಎಲೊ ರೇಟಿಂಗ್) ಕೊನೆಯ ಸುತ್ತಿನಲ್ಲಿ ತಮಿಳುನಾಡಿನ ಸುಬ್ರಮಣಿಯನ್ ಆರ್.ಎಂ ವಿರುದ್ಧ ಜಯ ಗಳಿಸಿದರು. 2237 ಎಲೊ ರೇಟಿಂಗ್ ಹೊಂದಿರುವ ಗೋವಾ ಆಟಗಾರ, ಫಿಡೆ ಮಾಸ್ಟರ್ ರಿತ್ವಿಜ್ ಕೊನೆಯ ಸುತ್ತಿನಲ್ಲಿ ಕರ್ನಾಟಕದ ಬಾಲಕಿಶನ್ ವಿರುದ್ಧ ಗೆದ್ದರು.

1636 ಎಲೊ ರೇಟಿಂಗ್‌ನ ಗೋವಾದ ಕೊಲ್ಯಾಕೊ ರೂಬೆನ್ ತಮಗಿಂತ ಹೆಚ್ಚಿನ ರೇಟಿಂಗ್ ಆಟಗಾರ ಕೇರಳದ ಜಾಯ್ ಲಾಜರ್ (1934) ಅವರನ್ನು ಸೋಲಿಸಿ ಅಗ್ರ ಆರರಲ್ಲಿ ಸ್ಥಾನ ಗಳಿಸಿದರು. ಕೇರಳದ ಜ್ಯೋತಿಲಾಲ್ ದಕ್ಷಿಣ ಕನ್ನಡದ ಲಕ್ಷಿತ್ ಎಸ್.ಸಾಲ್ಯಾನ್ ವಿರುದ್ಧ ಜಯ ಗಳಿಸಿದರು. ಕರ್ನಾಟಕದ ನವೀನ್ ಹೆಗ್ಡೆ ವಿರುದ್ಧ ಇಂಡಿಯನ್ ಕೋಚ್ ಫ್ಯಾಕ್ಟರಿಯ ಸೈಯದ್ ಅನ್ವರ್ ಗೆದ್ದರು. ತಮಿಳುನಾಡಿನ ಮಣಿಕಂಠನ್ ದಕ್ಷಿಣ ಕನ್ನಡದ ಹರ್ಮನ್ ಡಯಾನ್ ಸಲ್ದಾನ ಅವರನ್ನು ಮಣಿಸಿದರು.


ಇಶಾ ಶರ್ಮಾ

ದಕ್ಷಿಣ ರೈಲ್ವೆಯ ಆಟಗಾರ, ಇಂಟರ್‌ನ್ಯಾಷನಲ್ ಮಾಸ್ಟರ್ (2235) ರತ್ನಾಕರನ್ ಕೆ ಮತ್ತು ಫಿಡೆ ಮಾಸ್ಟರ್, ಮಂಗಳೂರಿನ ಶರಣ್ ರಾವ್ (2250) ಅವರಿಗೆ ಮೊದಲ ದಿನ ಕ್ರಮವಾಗಿ 4.5 ಮತ್ತು 4 ಪಾಯಿಂಟ್ ಗಳಿಸಲಷ್ಟೇ ಸಾಧ್ಯವಾಯಿತು.

ಕ್ರಿಕೆಟ್: ಭಾರತ ಟೆಸ್ಟ್ ತಂಡಕ್ಕೆ ಜೈದೇವ್ ಉನದ್ಕತ್

ನವದೆಹಲಿ (ಪಿಟಿಐ): ಅನುಭವಿ ಎಡಗೈ ಮಧ್ಯಮವೇಗಿ ಜೈದೇವ್ ಉನದ್ಕತ್ ಅವರನ್ನು ಬಾಂಗ್ಲಾದೇಶ ಎದುರಿನ ಟೆಸ್ಟ್ ಸರಣಿಯಲ್ಲಿ ಆಡಲಿರುವ ಭಾರತ ತಂಡಕ್ಕೆ ಆಯ್ಕೆ ಮಾಡಲಾಗಿದೆ.

ಮೊಹಮ್ಮದ್ ಶಮಿ ಕೈಗೆ ಗಾಯವಾಗಿರುವುದರಿಂದ ವಿಶ್ರಾಂತಿ ನೀಡಲಾಗಿದೆ. ಅವರ ಸ್ಥಾನಕ್ಕೆ ಸೌರಾಷ್ಟ್ರದ ಜೈದೇವ್ ಆಯ್ಕೆಯಾಗಿದ್ದಾರೆ. ಈ ಸರಣಿಯಲ್ಲಿ ಎರಡು ಟೆಸ್ಟ್‌ಗಳು ನಡೆಯಲಿವೆ.

31 ವರ್ಷದ ಜೈದೇವ್ 2010ರಲ್ಲಿ ಸೆಂಚುರಿಯನ್‌ನಲ್ಲಿ ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್ ಪಂದ್ಯದಲ್ಲಿ ಆಡಿದ್ದರು. 7 ಏಕದಿನ ಮತ್ತು 10 ಟಿ20 ಪಂದ್ಯಗಳಲ್ಲಿ ಅವರು ಭಾರತ ತಂಡವನ್ನು ಪ್ರತಿನಿಧಿಸಿದ್ದಾರೆ.

ವಿದೇಶ ಸುದ್ದಿ

ನಿಹಾರ್ ಮಾಳವೀಯ ಪೆಂಗ್ವಿನ್ ಮಧ್ಯಂತರ ಸಿಇಒ

ನ್ಯೂಯಾರ್ಕ್ (ಪಿಟಿಐ): ಭಾರತ ಮೂಲದ ನಿಹಾರ್ ಮಾಳವೀಯ (48) ಅವರು ನ್ಯೂಯಾರ್ಕ್ ಮೂಲದ ಅಂತರರಾಷ್ಟ್ರೀಯ ಮಟ್ಟದ ಪ್ರಕಾಶಕ ಸಂಸ್ಥೆ ಪೆಂಗ್ವಿನ್ ರಾಂಡಮ್ ಹೌಸ್‌ನ ಮಧ್ಯಂತರ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಆಗಿ ನೇಮಕ ರಾಗಿದ್ದಾರೆ.

ಅವರು 2023ರ ಜನವರಿ 1ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ಪೆಂಗ್ವಿನ್ ಸಂಸ್ಥೆಯ ಮಾತೃಸಂಸ್ಥೆಯಾದ ಬರ್ಟಲ್ಸ್‌ಮನ್ ಪ್ರಕಟಣೆಯಲ್ಲಿ ತಿಳಿಸಿದೆ.

ಹಸೀನಾ ಸರ್ಕಾರದ ವಿರುದ್ಧ ಪ್ರತಿಭಟನೆ

ಢಾಕಾ (ಎಎಫ್‌ಪಿ): ಹೊಸದಾಗಿ ಚುನಾವಣೆ ನಡೆಸುವಂತೆ ಒತ್ತಾಯಿಸಿ ಬಾಂಗ್ಲಾದೇಶದ ಪ್ರಮುಖ ವಿರೋಧ ಪಕ್ಷದ ಸಾವಿರಾರು ಬೆಂಬಲಿಗರು ಢಾಕಾದಲ್ಲಿ ಶನಿವಾರ ಪ್ರಧಾನಿ ಶೇಖ್ ಹಸೀನಾ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು.

ಹಸೀನಾ ಅವರ ಸರ್ಕಾರದ ವಿರುದ್ಧ ಪ್ರತಿಭಟಿಸಲು ಬಿಎನ್‌ಪಿಯ ಏಳು ಮಂದಿ ಜನಪ್ರತಿನಿಧಿಗಳು ರಾಜೀನಾಮೆ ಘೋಷಿಸಿದ್ದಾರೆ.

'ಹುಚ್ಚುತನದಿಂದ ಕೂಡಿದ ಯುದ್ಧ'

ಒಸ್ಲೊ, ನಾರ್ವೆ (ಎಪಿಎಫ್): ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಉಕ್ರೇನ್ ಮೇಲೆ ನಡೆಸಿದ ಯುದ್ಧವನ್ನು 'ಹುಚ್ಚುತನ ಮತ್ತು ಅಪರಾಧ'ದಿಂದ ಕೂಡಿದ ಕೃತ್ಯ ಎಂದು ನೊಬೆಲ್ ಶಾಂತಿ ಪ್ರಶಸ್ತಿಗೆ ಭಾಜನರಾದ ರಷ್ಯಾ ಪ್ರಜೆ ಯಾನ್ ರಚಿನ್‌ಸ್ಕಿ ಅವರು ಕರೆದಿದ್ದಾರೆ.

ಇಲ್ಲಿ ನಡೆದ ಸಮಾರಂಭದಲ್ಲಿ ನೊಬೆಲ್ ಪ್ರಶಸ್ತಿ ಸ್ವೀಕರಿಸಿ ಅವರು ಹೀಗೆ ಹೇಳಿದ್ದಾರೆ.

ಪಾಕ್ ಧರ್ಮಗುರು ಸೇರಿ 30 ಮಂದಿ ವಿರುದ್ಧ ನಿರ್ಬಂಧ

ಲಂಡನ್ (ಪಿಟಿಐ): ಹಿಂದೂಗಳು ಸೇರಿ ಅಲ್ಪಸಂಖ್ಯಾತ ಸಮುದಾಯದ ಹೆಣ್ಣು ಮಕ್ಕಳನ್ನು ಬಲವಂತವಾಗಿ ಮತಾಂತರಿಸಿ, ವಿವಾಹ ಮಾಡುತ್ತಿದ್ದ ಆರೋಪ ಎದುರಿಸುತ್ತಿರುವ ಪಾಕಿಸ್ತಾನದ ಧರ್ಮಗುರು ಮೈನ್ ಅಬ್ದುಲ್ ಹಾಕ್ ಸೇರಿ 30 ಜನರು ಮತ್ತು ಸಂಸ್ಥೆಗಳ ಮೇಲೆ ಬ್ರಿಟನ್ ಸರ್ಕಾರ ನಿರ್ಬಂಧ ವಿಧಿಸಿದೆ.

ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ನಿರ್ಬಂಧಿತರ ಪಟ್ಟಿ ಬಿಡುಗಡೆ ಮಾಡಿದ್ದಾರೆ. ಈ ಪಟ್ಟಿಯಲ್ಲಿರುವವರು ಪ್ರವಾಸ ತೆರಳಲು, ಉದ್ಯಮ ಆರಂಭಿಸಲು ನಿರ್ಬಂಧ ವಿಧಿಸಲಾಗುತ್ತದೆ.

ಅಳಿವಿನಂಚಿನಲ್ಲಿವೆ ಭಾರತದ 29 ತಳಿಗಳು

ಮಾಂಟ್ರಿಯಲ್ (ಪಿಟಿಐ): ಭಾರತದಲ್ಲಿ ಕಾಣಸಿಗುವ ಬಿಳಿಗೆನ್ನೆಯ ನರ್ತಿಸುವ ಕಪ್ಪೆ, ಅಂಡಮಾನ್ ಸ್ಮೂತ್‌ಹೌಂಡ್ ಶಾರ್ಕ್, ಹಿಮಾಯಲದ ಹಳದಿ ಬಣ್ಣದ ಪತಂಗ ಸೇರಿ 29 ತಳಿಗಳನ್ನು ನಿಸರ್ಗ ಸಂರಕ್ಷಣೆಯ ಅಂತರರಾಷ್ಟ್ರೀಯ ಒಕ್ಕೂಟದ (ಐಯುಸಿಎನ್) ಅಳಿವಿನಂಚಿನಲ್ಲಿರುವ ತಳಿಗಳ ಪಟ್ಟಿಗೆ ಹೊಸದಾಗಿ ಸೇರಿಸಲಾಗಿದೆ.

ಕೆನಡಾದಲ್ಲಿ ನಡೆದ 'ಕಾಪ್ 15 ಜೀವವೈವಿಧ್ಯ ಸಮಾವೇಶ'ದಲ್ಲಿ ಈ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ.

ಇರಾನ್ ಮೇಲೆ ನಿರ್ಬಂಧ

ಪ್ಯಾರಿಸ್(ಎಪಿಎಫ್): ಇರಾನ್‌ನಲ್ಲಿ ಪ್ರತಿಭಟನಕಾರನಿಗೆ ಮರಣದಂಡನೆ ವಿಧಿಸಿದ ಬೆನ್ನಲ್ಲೇ ಅಲ್ಲಿನ ಜನರು ಹೊಸದಾಗಿ ಪ್ರತಿಭಟನೆಗೆ ಕರೆ ನೀಡಿದ್ದು, ಐರೋಪ್ಯ ಒಕ್ಕೂಟ (ಇಯು), ಬ್ರಿಟನ್, ಕೆನಡಾ, ಆಸ್ಟ್ರೇಲಿಯಾ ದೇಶಗಳು ಶುಕ್ರವಾರ ಇರಾನ್ ವಿರುದ್ಧ ನಿರ್ಬಂಧ ವಿಧಿಸಿವೆ.

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟಾಂಡರ್ಡ್ ಚಿನ್ನ 10ಗ್ರಾಂ	₹55,600
ಒಡವೆ ಚಿನ್ನ 1ಗ್ರಾಂ	₹5,115
ಬೆಳ್ಳಿ ಕೆ.ಜಿಗೆ	₹68,700

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹535
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹535

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1515 (1515)
ಸೋಯಾ (ರಿಫೈನ್ಡ್)	₹1225 (1235)
ಸೂರ್ಯಕಾಂತಿ (ರಿಫೈನ್ಡ್)	₹1350 (1360)
ಪಾಮೋಲಿನ್	₹930 (932)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹275-715
ದ್ವಿತಳಿ (ಬಿ.ವಿ)	₹589-812

ಷೇರುಪೇಟೆಯಲ್ಲಿ ಲಾಭ ಗಳಿಕೆಯತ್ತ ಹೂಡಿಕೆದಾರರ ಗಮನ

ಎಫ್‌ಐಐ: ₹4,306 ಕೋಟಿ ಹಿಂತೆಗೆತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಡಿಸೆಂಬರ್ ತಿಂಗಳಿನಲ್ಲಿ ದೇಶದ ಷೇರುಪೇಟೆಗಳಿಂದ ಬಂಡವಾಳ ಹಿಂದಕ್ಕೆ ಪಡೆಯಲು ಆರಂಭಿಸಿದ್ದಾರೆ.

ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ಡಿಸೆಂಬರ್ 9ಕ್ಕೆ ಕೊನೆಗೊಂಡ ವಾರದಲ್ಲಿ ₹4,306 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಇದಕ್ಕೂ ಹಿಂದಿನ ವಾರ ಅಂದರೆ, ನವೆಂಬರ್ 28ರಿಂದ ಡಿಸೆಂಬರ್ 2ರವರೆಗೆ ನಡೆದ ವಹಿವಾಟಿನಲ್ಲಿ ₹ 9,844 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದರು. ನವೆಂಬರ್ ತಿಂಗಳಿನಲ್ಲಿ ಎಫ್‌ಐಐ ಒಳಹರಿವು ₹22,546 ಕೋಟಿಯಷ್ಟು ಆಗಿತ್ತು.

ಎಫ್‌ಐಐ ಹೊರಹರಿವು (₹ಕೋಟಿಗಳಲ್ಲಿ)

ಡಿ.5	₹1,139
ಡಿ.6	₹635
ಡಿ.7	₹1,242
ಡಿ.8	₹1,132
ಡಿ.9	₹158

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ದೇಶದ ಷೇರುಪೇಟೆಗಳಲ್ಲಿ ಲಾಭ ಗಳಿಕೆಗೆ ಮುಂದಾಗಿದ್ದಾರೆ. ಹೀಗಾಗಿ ಷೇರುಗಳನ್ನು ಮಾರಾಟ ಮಾಡುತ್ತಿದ್ದಾರೆ. ಆದರೆ, ದೇಶಿ ಸಾಂಸ್ಥಿಕ ಹೂಡಿಕೆದಾರರು (ಡಿಐಐ) ವ್ಯವಸ್ಥಿತ ಹೂಡಿಕೆ ಯೋಜನೆಗಳ (ಎಸ್‌ಐಪಿ) ಮೂಲಕ ಬಂಡವಾಳ ತೊಡಗಿಸುತ್ತಿದ್ದಾರೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಡಿಸೆಂಬರ್‌ನಲ್ಲಿ ಈವರೆಗೆ ನಡೆದಿರುವ ವಹಿವಾಟಿನಲ್ಲಿ ಒಂದು ದಿನ ಹೊರತುಪಡಿಸಿ ಉಳಿದೆಲ್ಲಾ ದಿನಗಳಲ್ಲಿಯೂ ಎಫ್‌ಐಐ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ. ಒಟ್ಟು ₹ 5,500 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಷೇರುಪೇಟೆಯ ಮೇಲೆ ಒತ್ತಡ ಉಂಟಾಗಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವೀಸಸ್‌ನ ರಿಟೇಲ್ ರಿಸರ್ಚ್ ವಿಭಾಗದ ಮುಖ್ಯಸ್ಥ ಸಿದ್ಧಾರ್ಥ ಖೇಮ್ಕಾ ತಿಳಿಸಿದ್ದಾರೆ.

ಷೇರುಪೇಟೆಗಳ ವಾರದ ವಹಿವಾಟು ನಕಾರಾತ್ಮಕವಾಗಿ ಅಂತ್ಯವಾಗಿದೆ. ಬಿಎಸ್‌ಇ ಸೆನ್ಸೆಕ್ಸ್ 687 ಅಂಶ ಇಳಿಕೆ ಕಂಡರೆ, ಎನ್‌ಎಸ್‌ಇ ನಿಫ್ಟಿ 199 ಅಂಶ ಇಳಿಕೆ ಆಗಿದೆ.

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹139.50
ಆರ್‌ಎಸ್‌ಎಸ್-5	₹131.50
ಗುಡ್ ಲಾಟ್	₹124.50

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹12900
ಎಸಿ	₹6580
ಆರ್‌ಪಿ	₹8500
ಆರ್‌ಸಿ	₹4530

ಮುಂಬೈ ಧಾರಣೆ

ಶೇಂಗಾ

10–12–2022

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	9950-10050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1525 (1525)
ಒಂದು ವಾರದ ಡೆಲಿವರಿ	1520 (1520)
ಸೋಯಾ ಕಚ್ಚಾ	1140 (1125)
ಪಾಮ್ ವಾರದ ಡೆಲಿವರಿ	928 (930)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
53,875 (53,675)
ಬೆಳ್ಳಿ ಕೆ.ಜಿ 66.750 (66,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮೌಲ್ಯಯುತ ಕಂಪನಿ: ಭಾರತಕ್ಕೆ ಬಡ್ತಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಗತ್ತಿನ 500 ಅತ್ಯಂತ ಮೌಲ್ಯಯುತ ಕಂಪನಿಗಳ ಸಾಲಿನಲ್ಲಿ ಭಾರತದ 20 ಕಂಪನಿಗಳು ಸ್ಥಾನ ಪಡೆದುಕೊಂಡಿವೆ. ಈ ಮೂಲಕ ಅತಿ ಹೆಚ್ಚು ಮೌಲ್ಯಯುತ ಕಂಪನಿಗಳಿರುವ ದೇಶಗಳ ಪಟ್ಟಿಯಲ್ಲಿ ಭಾರತ ಐದನೇ ಸ್ಥಾನಕ್ಕೇರಿದೆ.

ಕಳೆದ ವರ್ಷ 500 ಕಂಪನಿಗಳ ಪಟ್ಟಿಯಲ್ಲಿ ಭಾರತದ 8 ಕಂಪನಿಗಳು ಸ್ಥಾನ ಪಡೆದಿದ್ದವು. ಇದರಿಂದಾಗಿ ಭಾರತವು 9ನೇ ಸ್ಥಾನದಲ್ಲಿತ್ತು.

2022ರ ಹುರೂನ್ ಗ್ಲೋಬಲ್ 500 ಪಟ್ಟಿಯ ಪ್ರಕಾರ, ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್) ಮಾರುಕಟ್ಟೆ ಮೌಲ್ಯವು ₹16.56 ಲಕ್ಷ ಕೋಟಿ ಆಗಿದ್ದು, ಭಾರತದ ಕಂಪನಿಗಳ ಪಟ್ಟಿಯಲ್ಲಿ ಮೊದಲ ಸ್ಥಾನ ಪಡೆದುಕೊಂಡಿದೆ. ಜಾಗತಿಕ ಮಟ್ಟದಲ್ಲಿ ಕಂಪನಿಯು 34ನೇ ಸ್ಥಾನದಲ್ಲಿದೆ.

ಭಾರತದ ಅತ್ಯಂತ ಮೌಲ್ಯಯುತ ಕಂಪನಿಗಳು (₹ ಲಕ್ಷ ಕೋಟಿಗಳಲ್ಲಿ)



₹11.39 ಲಕ್ಷ ಕೋಟಿ ಮಾರುಕಟ್ಟೆ ಮೌಲ್ಯ ಹೊಂದಿರುವ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ (ಟಿಸಿಎಸ್) ಕಂಪನಿಯು ಎರಡನೇ ಮತ್ತು ₹7.95 ಲಕ್ಷ ಕೋಟಿ ಮಾರುಕಟ್ಟೆ ಮೌಲ್ಯ ಹೊಂದಿರುವ ಎಚ್‌ಡಿಎಫ್‌ಸಿ ಬ್ಯಾಂಕ್ ಮೂರನೇ ಸ್ಥಾನ ಪಡೆದಿರುವ ಭಾರತದ ಕಂಪನಿಗಳಾಗಿವೆ.

ಅದಾನಿ ಪ್ರವೇಶ: 500 ಕಂಪನಿಗಳ ಪಟ್ಟಿಯಲ್ಲಿ ಅದಾನಿ ಸಮೂಹದ ಅದಾನಿ ಟ್ರಾನ್ಸ್‌ಮಿಷನ್, ಅದಾನಿ ಗ್ರೀನ್ ಎನರ್ಜಿ, ಅದಾನಿ ಎಂಟರ್‌ಪ್ರೈಸಸ್ ಮತ್ತು ಅದಾನಿ ಟೋಟಲ್ ಗ್ಯಾಸ್ ಕಂಪನಿಗಳು ಸ್ಥಾನ ಪಡೆದುಕೊಂಡಿವೆ. ಈ ಕಂಪನಿಗಳ ಒಟ್ಟು ಮೌಲ್ಯವು ₹14.18 ಲಕ್ಷ ಕೋಟಿಯಷ್ಟು ಇದೆ.

ವಿಪ್ರೊ, ಜೂಮ್, ಅಡಿಡಾಸ್, ಪಟ್ಟಿಯಲ್ಲಿ ಸ್ಥಾನ ಪಡೆಯದೇ ಇರುವ ಪ್ರಮುಖ ಕಂಪನಿಗಳಾಗಿವೆ.

ಅತ್ಯಂತ ಮೌಲ್ಯಯುತ ಕಂಪನಿಗಳ ಪಟ್ಟಿಯಲ್ಲಿ ಜಾಗತಿಕವಾಗಿ ಆ್ಯಪಲ್ ಮೊದಲ ಸ್ಥಾನ ಉಳಿಸಿಕೊಂಡಿದೆ. ಮೈಕ್ರೊಸಾಫ್ಟ್ ಎರಡನೇ ಸ್ಥಾನದಲ್ಲಿದೆ. ಅಮೆಜಾನ್ ಅನ್ನು ಹಿಂದಿಕ್ಕಿ ಆಲ್ಫಾಬೆಟ್ ಮೂರನೇ ಸ್ಥಾನಕ್ಕೇರಿದೆ.

ಮುಂದಿನ ವಾರ 3 ಕಂಪನಿಗಳ ಐಪಿಒ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ವಾರ ಮೂರು ಕಂಪನಿಗಳು ಆರಂಭಿಕ ಸಾರ್ವಜನಿಕ ಕೊಡುಗೆಯ (ಐಪಿಒ) ಮೂಲಕ ಷೇರುಪೇಟೆ ಪ್ರವೇಶಿಸಲಿದ್ದು, ಒಟ್ಟು ₹1,857 ಕೋಟಿ ಬಂಡವಾಳ ಸಂಗ್ರಹ ಮಾಡುವ ನಿರೀಕ್ಷೆ ಇಟ್ಟುಕೊಂಡಿವೆ.

ವೈನ್ ತಯಾರಿಸುವ ಪ್ರಮುಖ ಕಂಪನಿ 'ಸುಲಾ ವೈನ್‌ಯಾರ್ಡ್ಸ್ ಲಿಮಿಟೆಡ್'ನ ₹960 ಕೋಟಿ ಮೊತ್ತದ ಐಪಿಒ ಸೋಮವಾರ ಆರಂಭ ಆಗಲಿದ್ದು, ಬುಧವಾರದವರೆಗೆ ಬಿಡ್ ಸಲ್ಲಿಸಲು ಅವಕಾಶ ಇರಲಿದೆ.

ಹಣಕಾಸು ಸೇವೆಗಳನ್ನು ನೀಡುವ ಅಬಾನ್ಸ್ ಹೋಲ್ಡಿಂಗ್ಸ್ ಕಂಪನಿಯ ಐಪಿಒ ಸೋಮವಾರ ಆರಂಭ ಆಗಲಿದ್ದು, ಬುಧವಾರ ಮುಕ್ತಾಯ ಆಗಲಿದೆ. ₹345 ಕೋಟಿ ಬಂಡವಾಳ ಸಂಗ್ರಹಿಸುವ ನಿರೀಕ್ಷೆಯನ್ನು ಕಂಪನಿ ಇಟ್ಟುಕೊಂಡಿದೆ.


ಆಟೊಮೊಟಿವ್ ಕಂಪನಿ ಲ್ಯಾಂಡ್‌ಮಾರ್ಕ್ ಕಾರ್ಸ್‌ನ ಐಪಿಒ ಮಂಗಳವಾರ ಆರಂಭ ಆಗಲಿದ್ದು ಗುರುವಾರ ಅಂತ್ಯವಾಗಲಿದೆ. ₹552 ಕೋಟಿ ಬಂಡವಾಳ ಸಂಗ್ರಹಿಸುವ ನಿರೀಕ್ಷೆಯನ್ನು ಅದು ಹೊಂದಿದೆ.




ಬಗೆಬಗೆಯ ಅನುಭವಗಳ ಬನಾರಸ್ 9



ನೂರು ವಸಂತಗಳ ವೇಸ್ಟ್ ಲ್ಯಾಂಡ್ 10



ಅವರು ಇದ್ದಿದ್ದೇ ಹಾಡಿನಂತೆ... 11



ಪೆರೆಟೊ ಸೂತ್ರದ ಬೆನ್ನತ್ತಿ...


ಶೇ 20ರಷ್ಟು ಕ್ರಿಮಿನಲ್‌ಗಳಿಂದ ಶೇ 80ರಷ್ಟು ಅಪರಾಧ ಪ್ರಕರಣಗಳು ● ಶೇ 20ರಷ್ಟು ಚಾಲಕರಿಂದ ಶೇ 80ರಷ್ಟು ಅಪಘಾತಗಳು ● ಕೇವಲ ಶೇ 20ರಷ್ಟು ಉದ್ಯೋಗಿಗಳಿಂದ ಸಂಸ್ಥೆಯ ಶೇ 80ರಷ್ಟು ಕೆಲಸ ● ಶೇ 20ರಷ್ಟು ಬಗ್‌ಗಳಿಂದ ಶೇ 80ರಷ್ಟು ಸಾಫ್ಟ್‌ವೇರ್ ಸಮಸ್ಯೆ ಸೃಷ್ಟಿ ● ಶೇ 80ರಷ್ಟು ಹುಡುಕಾಟಗಳಿಗೆ ಶೇ 20ರಷ್ಟು ಕೀ ವರ್ಡ್‌ಗಳು ಬಳಕೆ ● ಶೇ 80ರಷ್ಟು ಸಂಪತ್ತು ಬರೀ ಶೇ 20ರಷ್ಟು ಜನರ ಬಳಿ

ಮುರುಗೇಶ್ ಹನಗೋಡಿಮಠ

80:20! ಅರೆರೆ, ಇದೆಂತಹ ಸೋಜಿಗದ ಸಮೀಕರಣ! ಎಂಬತ್ತಕ್ಕೆ ಹೆಂಗಪ್ಪ ಇಪ್ಪತ್ತು ತೊಡೆತಟ್ಟುವುದು? ಈ ಸಮೀಕರಣ ನನ್ನನ್ನು ಬೆರಗುಗೊಳಿಸಿದ ಹಾಗೆ ನ್ಯೂಟನ್‌ನ ಚಲನೆಯ ನಿಯಮವಾಗಲಿ, ಐನ್‌ಸ್ಟೀನ್‌ನ ಸಾಪೇಕ್ಷ ಸಿದ್ಧಾಂತವಾಗಲಿ ಸೋಜಿಗ ಉಂಟು ಮಾಡಿಲ್ಲ ನೋಡಿ. ನೀವು ಯಾವುದೇ ವಿಷಯ ತಗೊಳ್ಳಿ. ಈ 80:20ರ ಸಮೀಕರಣ ಧುತ್ತಂತ ಮೂಗು ತೂರಿಸುತ್ತದೆ. ಅಷ್ಟೊಂದು ಪ್ರಭಾವಿ ಇದು. ಈ ಸಮೀಕರಣ ಇಡೀ ಜಗತ್ತನ್ನೇ ವ್ಯಾಪಿಸಿ ನಿಂತಿರುವುದರ ಅರಿವು ನಿಮಗೂ ಆದೀತು. ಈ ಸೂತ್ರವನ್ನು ದೇಶದ ಆರ್ಥಿಕ ವ್ಯವಸ್ಥೆಯನ್ನು ಸರಿದಾರಿಗೆ ತರಲು ಮಾತ್ರವಲ್ಲ, ವ್ಯಕ್ತಿಯ ವೈಯಕ್ತಿಕ ಪ್ರಗತಿಗೂ ಕೀಲೆಣ್ಣೆಯಾಗಿ ಮಾಡಿಕೊಳ್ಳಬಹುದು ಎಂಬುದು ನಿಮಗೆ ಗೊತ್ತೆ?

ದೊಡ್ಡ ದೊಡ್ಡ ಕಂಪನಿಗಳ ಚಿಂತಕರ ಚಾವಡಿಯಲ್ಲಿ ಈ ಸೂತ್ರದಿಂದಲೇ ಹೊಸ ಹೊಸ ಮಾರುಕಟ್ಟೆ ತಂತ್ರ ಹೆಣೆಯುತ್ತಾರೆ. ಮಾನವ ಸಂಪನ್ಮೂಲದ ಮರುನಿಯೋಜನೆ ಮಾಡಲೂ ಈ ಸೂತ್ರ ನೆರವಿಗೆ ಬರುತ್ತದೆ. ಸರ್ಕಾರಗಳು ತೆರಿಗೆ ಲೆಕ್ಕಾಚಾರಕ್ಕೆ ಈ ಸಮೀಕರಣವನ್ನೇ ಆಧಾರವನ್ನಾಗಿ ಮಾಡಿಕೊಳ್ಳುವ ಪರಿಪಾಟ ಉಂಟು. ಹಾಗಾದರೆ 80:20ರ ಸಮೀಕರಣದ ಹಿಂದಿರುವ ಮಜಕೂರಾದರೂ ಏನು? ಮತ್ತೆ ಇದಕ್ಕೆ ಪೆರೆಟೊ ಸಿದ್ಧಾಂತವೆಂದು ಕರೆಯುವುದಾದರೂ ಏಕೆ?

ಇಟಲಿ ದೇಶದ ಪ್ರಸಿದ್ಧ ಅರ್ಥಶಾಸ್ತ್ರಜ್ಞ ವಿಲ್‌ಫ್ರೆಡ್ ಪೆರೆಟೊ. ಈತ ರೂಪಿಸಿಕೊಟ್ಟ ಆರ್ಥಿಕ ನೀತಿಗಳು ಆಗಿನ ಇಟಲಿ ಸರ್ಕಾರಕ್ಕೂ ಜನಸಮುದಾಯಕ್ಕೂ ಕ್ಷೇಮಕರವಾಗಿದ್ದವು. ಎಲ್ಲರೂ ಯಾವುದೇ ಪ್ರಯಾಸವಿಲ್ಲದೇ ತಮ್ಮ ಪಾಲಿನ ತೆರಿಗೆಗಳನ್ನು ಸಂದಾಯ ಮಾಡುತ್ತಿದ್ದರು. ಸರ್ಕಾರವೂ ಖಜಾನೆಯನ್ನು ಭರ್ತಿ ಮಾಡಿಕೊಂಡು ತನ್ನ ಹೊಣೆಗಾರಿಕೆಯನ್ನು, ಅಭಿವೃದ್ಧಿ ಕಾರ್ಯಗಳನ್ನು ಸುಗಮವಾಗಿ ನಡೆಸಿಕೊಂಡು ಹೊರಟಿತ್ತು.



ಅದೇ ಸಮಯದಲ್ಲಿ, ಪಕ್ಕದ ಇಂಗ್ಲೆಂಡ್‌ನಲ್ಲಿ ಭಾರಿ ಆರ್ಥಿಕ ಸಂಕಷ್ಟ ತಲೆದೋರಿತ್ತು. ಬೊಕ್ಕಸದಲ್ಲಿ ಸಾಕಷ್ಟು ಧನಸಂಗ್ರಹವಿಲ್ಲದೆ, ಸಾರ್ವಜನಿಕರ ಮೇಲೆ ಮತ್ತಷ್ಟು ಕರಭಾರ ಹೇರಲೂ ಸಾಧ್ಯವಾಗದೆ ಬ್ರಿಟಿಷ್ ಪ್ರಭುತ್ವ ಸಂದಿಗ್ಧ ಸ್ಥಿತಿಯಲ್ಲಿತ್ತು. ಹೀಗಾದರೆ ಮುಂದೆ ಗತಿಯೇನು ಎಂಬ ಮಿಲಿಯನ್ ಪೌಂಡ್ ಪ್ರಶ್ನೆ ಅದರ ಮುಂದೆ ಭೂತಾಕಾರವಾಗಿ ನಿಂತಿತ್ತು.

ಆಗ ಬ್ರಿಟಿಷ್ ದೇಶದ ಆರ್ಥಿಕ ವಿಶ್ಲೇಷಕರು ಇಟಲಿಯ ಅಭ್ಯುದಯವನ್ನು ನೋಡಿ ಪೆರೆಟೊ ಅವರನ್ನು ಇಂಗ್ಲೆಂಡ್‌ಗೆ ಕರೆಸಿ ಅವರ ಅಭಿಪ್ರಾಯವನ್ನೂ ಕೇಳುವಂತೆ ಆಗಿನ ಮಹಾರಾಣಿ ವಿಕ್ಟೋರಿಯಾ ಅವರಿಗೆ ಸಲಹೆಯಿತ್ತರು. ಪೆರೆಟೊ ಅವರಿಗೆ ಮಹಾರಾಣಿಯಿಂದ ಆಹ್ವಾನವೂ ಹೋಯಿತು. ಪೆರೆಟೊ ಬಂದಮೇಲೆ ಮಹಾರಾಣಿಯವರು ದೇಶದ ಆರ್ಥಿಕ ತಜ್ಞರನ್ನೂ ಕರೆಸಿ ಆರ್ಥಿಕ ಸಂಕಷ್ಟಗಳ ಕುರಿತು ಪೆರೆಟೊ ಅವರೊಂದಿಗೆ ಚರ್ಚಿಸಿದರು. ಪ್ರತಿಕೂಲ ಪರಿಸ್ಥಿತಿಯಿಂದ ಹೊರಬರಲು, ಮತ್ತೆ ಬೊಕ್ಕಸವು (Exchequer) ಮೊದಲಿನಂತೆಯೇ ಸಮೃದ್ಧಿ ಹೊಂದಲು ಸಾಧ್ಯವೇ ಎಂದು ಕೇಳಿದರು. ಆಗ ಇಟಲಿಯ ಆ ಆರ್ಥಿಕತಜ್ಞ ತುಸು ಕಾಲಾವಕಾಶ ಕೋರಿ, ವಸ್ತುಸ್ಥಿತಿಯನ್ನು ಕೂಲಂಕಷವಾಗಿ ಅಧ್ಯಯನ ಮಾಡಿದರು. ಬಳಿಕ ಇಂಗ್ಲೆಂಡ್‌ನ ಆರ್ಥಿಕ ಸಂಕಷ್ಟ ಪರಿಹರಿಸಲು ಈ ಕೆಳಗಿನ ಎರಡು ಅಂಶಗಳ ಸೂತ್ರವನ್ನು ಮಹಾರಾಣಿ ಮುಂದಿಟ್ಟರು.

ಮೊದಲಿಗೆ ಸಮಾಜದ ಎಲ್ಲ ವರ್ಗಗಳ ಮೇಲೆ ಸಮನಾದ ಕರಭಾರ ಹೇರಿದ್ದು ತಪ್ಪು. ಇದರಿಂದ ಬಡಮಧ್ಯಮ ವರ್ಗದ ಜನರು ಕೊಡುವ ಸಣ್ಣಮೊತ್ತದ ತೆರಿಗೆಯನ್ನಷ್ಟೇ ಸಿರಿವಂತರೂ ನೀಡುವಂತಾಗಿದೆ. ಆದರೆ ಸಿರಿವಂತರು ಉಳ್ಳವರು. ಇನ್ನೂ ಹೆಚ್ಚಿನ ಕರವನ್ನು ಭರಿಸಬಲ್ಲರು. ಆದ್ದರಿಂದ ಈ ಏಕರೂಪ ತೆರಿಗೆ ನೀತಿಯನ್ನು ಮೊದಲು ಹಿಂತೆಗೆದುಕೊಳ್ಳಬೇಕು. ಬಡಮಧ್ಯಮ ವರ್ಗದವರು ತಮ್ಮ ಆದಾಯಕ್ಕೆ ಅನುಗುಣವಾಗಿ ತೆರಿಗೆ ಸಂದಾಯ ಮಾಡುವಂತಹ ಹೊಸ ವ್ಯವಸ್ಥೆಯನ್ನು ರೂಪಿಸಬೇಕು. ಸಿರಿವಂತರು ಹೆಚ್ಚಿನ ತೆರಿಗೆ ನೀಡಲು ಶಕ್ತರು. ಅವರಿಗೆ ಇನ್ನಷ್ಟು ಕರ ವಿಧಿಸಬೇಕು. ಇದರಿಂದ ಅವರೂ ದೇಶ ಸೇವೆ ಮಾಡಲು ಅವಕಾಶ ಕಲ್ಪಿಸಿದಂತಾಗುತ್ತದೆ ಎಂಬ ವಾದವನ್ನು ಪೆರೆಟೊ ಮಂಡಿಸಿದರು.

ಇನ್ನು ಎರಡನೆಯದಾಗಿ ನಿಮ್ಮ ರಾಷ್ಟ್ರದಲ್ಲಿರುವ ಸಿರಿವಂತ, ಮಧ್ಯಮ ಮತ್ತು ಬಡವರ್ಗದ ಜನರನ್ನು ಗುರುತಿಸಿ ಶೇಕಡಾವಾರು ಪ್ರಮಾಣದಲ್ಲಿ ವಿಂಗಡಿಸಬೇಕು. ನಂತರ ರಾಷ್ಟ್ರದಲ್ಲಿ ಶೇಕಡ 20ರಷ್ಟು ಪ್ರಮಾಣದಲ್ಲಿರುವ ಸಿರಿವಂತರೆಲ್ಲ ಕೂಡಿಕೊಂಡು ಶೇಕಡ 80ರಷ್ಟು ಕರ ನೀಡುವಂತಹ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಮತ್ತೆ ಶೇಕಡ 80ರಷ್ಟು ಪ್ರಮಾಣ ಇರುವ ಬಡ ಮಧ್ಯಮ ವರ್ಗದ ಜನರೆಲ್ಲರೂ ಸೇರಿ ಶೇಕಡ 20ರಷ್ಟು ಕರ ನೀಡುವಂತಾಗಬೇಕು. ಇದರಿಂದ ರಾಷ್ಟ್ರದ ಬೊಕ್ಕಸಕ್ಕೆ ಬೇಕಾದ ಶೇಕಡ ನೂರು ಪೌಂಡು ಸಂಗ್ರಹವಾಗುತ್ತದೆ. ಈ ರೀತಿ ಕರ ಸಂಗ್ರಹವನ್ನು ಪ್ರಾಮಾಣಿಕವಾಗಿ ಅನುಷ್ಠಾನ ಮಾಡಿದಲ್ಲಿ ನೀವು ಆರ್ಥಿಕ ಸಂಕಷ್ಟಗಳಿಂದ ಪಾರಾಗುವುದಷ್ಟೆ ಅಲ್ಲ, ದೇಶವೂ ಸುಭಿಕ್ಷವಾಗುತ್ತದೆ ಮತ್ತು ಜನರೂ ನೆಮ್ಮದಿಯ ನಿಟ್ಟುಸಿರು ಬಿಡುತ್ತಾರೆ ಎಂದು ಪೆರೆಟೊ ಸಲಹೆ ನೀಡಿದ್ದರು.

ಈ ಎಲ್ಲ ವಿಶ್ಲೇಷಣೆಯನ್ನು ಕುತೂಹಲ ಆಸಕ್ತಿಯಿಂದ ಆಲಿಸಿದ ಮಹಾರಾಣಿಯು ತಮ್ಮ ಮಂತ್ರಿಮಂಡಲದ ಸದಸ್ಯರು ಮತ್ತು ಆರ್ಥಿಕ ತಜ್ಞರಿಗೆ ಈ ಹೊಸ ತೆರಿಗೆ ನೀತಿಯನ್ನು ಜಾರಿಗೆ ತರಬೇಕು ಎಂದು ಆಜ್ಞೆಯಿತ್ತರು. ಅದೇ ವರ್ಷದಿಂದ ಪೆರೆಟೊ ಹೇಳಿದ 80:20 ಸೂತ್ರದ ಕರ ಸಂಗ್ರಹ ನೀತಿ ಜಾರಿಗೆ ಬಂತು. ಈ ಸೂತ್ರ ನಿಜಕ್ಕೂ ಇಂಗ್ಲೆಂಡ್‌ನ ಹಲವು ಆರ್ಥಿಕ ಸಂಕಷ್ಟಗಳನ್ನು ನಿವಾರಿಸಿತು.

ಒಂದು ನೂರು ರೂಪಾಯಿ ತೆರಿಗೆ ಸಂಗ್ರಹ ಮಾಡಬೇಕೆಂದರೆ ಶ್ರೀಮಂತರು ಎಲ್ಲರೂ ಸೇರಿ ಎಂಬತ್ತು ರೂಪಾಯಿ ತೆರಿಗೆ ಕೊಡಬೇಕು. ಮತ್ತೆ ಇನ್ನುಳಿದ ಇಪ್ಪತ್ತು ರೂಪಾಯಿಯನ್ನು ಬಡ ಮಧ್ಯಮ ವರ್ಗದವರಿಂದ ಸಂಗ್ರಹಿಸಬೇಕು ಎನ್ನುವುದು ಈ ಸೂತ್ರ. ಹೀಗೆ ಸರ್ಕಾರದ ಬೊಕ್ಕಸಕ್ಕೆ ಅವಶ್ಯವಿರುವ ಒಟ್ಟು ನೂರು ರೂಪಾಯಿ ತೆರಿಗೆ ಎಲ್ಲ ವರ್ಗಗಳ ಜನರಿಂದ ಸಂಗ್ರಹವಾಗಬೇಕು ಎನ್ನುವುದು ಪೆರೆಟೊ ಅವರ ಲೆಕ್ಕಾಚಾರ.

ಭಾರತದ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಕೌಟಿಲ್ಯನ ಒಂದು ಮಾತನ್ನು ನಾವಿಲ್ಲಿ ನೆನೆಯಬೇಕು. ತೆರಿಗೆಯನ್ನು ಹೇಗೆ ಸಂಗ್ರಹ ಮಾಡಬೇಕೆಂದರೆ ದುಂಬಿಯು ಹೂವಿನಲ್ಲಿನ ಮಕರಂದ ಹೀರಿದಂತೆ ತೆರಿಗೆ ಆಕರಿಸಬೇಕು ಎಂಬುದೇ ಆತನ ಮಾತು. ಹೂವಿಗೆ ಒಂದಿನಿತೂ ನೋವು ಆಗದಂತೆ ದುಂಬಿ ಹೇಗೆ ಮಕರಂದವನ್ನು ಹೀರುವುದೋ ಹಾಗೆಯೇ ಪ್ರಜೆಗಳಿಗೂ ಈ ನೋವು ಆಗಬಾರದು ಎಂಬುದು ಕೌಟಿಲ್ಯನ ಇಂಗಿತ.

ಹೀಗೆ ಈ 80:20 ಸೂತ್ರವೇ ಇಟಲಿಯ ಅರ್ಥತಜ್ಞ ಪೆರೆಟೊ ಆರ್ಥಿಕ ಜಗತ್ತಿಗೆ ನೀಡಿದ ಅದ್ಭುತ ಮಂತ್ರವಾಗಿದೆ. ಇಪ್ಪತ್ತು ಹಾಗೂ ಇಪ್ಪತ್ತೊಂದನೆಯ ಶತಮಾನದಲ್ಲಿ ಪ್ರಪಂಚದ ಎಲ್ಲ ಕಾರ್ಪೊರೇಟ್ ಸಮುದಾಯಗಳು, ವಾಣಿಜ್ಯ ಸಮೂಹಗಳೆಲ್ಲವೂ ಈ ಸೂತ್ರವನ್ನು ಆಧರಿಸಿಯೇ ತಮ್ಮ ವಹಿವಾಟನ್ನು ಯಶಸ್ವಿಯಾಗಿ ನಡೆಸಿವೆ. ಸಾಫ್ಟ್‌ವೇರ್, ಆಟೊಮೊಬೈಲ್, ಎಲೆಕ್ಟ್ರಾನಿಕ್ಸ್, ಔಷಧಿ ಕಂಪನಿಗಳು ಹಾಗೂ ಸಾರ್ವಜನಿಕ ರಂಗದಲ್ಲಿರುವ ಉತ್ಪನ್ನಗಳ ಮಾರಾಟ ಕಂಪನಿಗಳು ಈ ಪೆರೆಟೊ ಸಮೀಕರಣವನ್ನು ಆಧರಿಸಿವೆ.

ತಾತ್ಪರ್ಯ ಇಷ್ಟೆ. ಎಲ್ಲ ಕಂಪನಿಗಳು ತಮ್ಮ ಶೇಕಡ 80ರಷ್ಟು ಉತ್ಪನ್ನಗಳನ್ನು ಮಾರಾಟ ಮಾಡಲು ತಮಗೆ ಅತ್ಯಂತ ನಿಷ್ಠರಾದ ಶೇಕಡ 20ರಷ್ಟು ಗ್ರಾಹಕರನ್ನು ಆಶ್ರಯಿಸುತ್ತವೆ. ಮತ್ತೆ ಇನ್ನುಳಿದ ಶೇಕಡ 20ರಷ್ಟು ವ್ಯಾಪಾರಕ್ಕೆ ಇತರ ಶೇ 80ರಷ್ಟು ಗ್ರಾಹಕರನ್ನು ಅವಲಂಬಿಸುತ್ತವೆ.

ಉದಾಹರಣೆಗೆ ಎಲೆಕ್ಟ್ರಾನಿಕ್ಸ್ ಮತ್ತು ಆಟೊಮೊಬೈಲ್ ಕ್ಷೇತ್ರಗಳಲ್ಲಿ ಅಗ್ರಸ್ಥಾನದಲ್ಲಿರುವ ಜಪಾನ್, ತನ್ನ ಶೇ 80ರಷ್ಟು ಮಾರಾಟದ ಗುರಿ ಸಾಧಿಸಲು ಅಮೆರಿಕ, ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳನ್ನು ಅವಲಂಬಿಸುತ್ತದೆ.

10ನೇ ಪುಟಕ್ಕೆ...

ಡಿಜಿಟಲ್ ಕರೆನ್ಸಿ

ಆದೀತೇ ಮತ್ತೊಂದು ಯುಪಿಐ?

ಡಿಜಿಟಲ್ ಕರೆನ್ಸಿ ಬಳಸಿ ವಹಿವಾಟು ನಡೆಸುವುದಕ್ಕೆ ಆರ್‌ಬಿಐ ಪ್ರಾಯೋಗಿಕವಾಗಿ ಚಾಲನೆ ನೀಡಿದೆ. ಡಿಜಿಟಲ್ ಆರ್ಥಿಕತೆಯಲ್ಲಿ ಯುಪಿಐ ನಂತರದ ಮಹತ್ವದ ಅನ್ವೇಷಣೆ ಇದಾಗಬಹುದೇ? ಕ್ರಿಪ್ಟೊಕರೆನ್ಸಿಗಳು ಸೃಷ್ಟಿಸಿದ ಆಕರ್ಷಣೆಯನ್ನು ಇವೂ ಸೃಷ್ಟಿಸುವವೇ? ಯುಪಿಐ ಹಾಗೂ ಡಿಜಿಟಲ್ ಕರೆನ್ಸಿಗೆ ಇರುವ ವ್ಯತ್ಯಾಸ ಏನು? ಇಲ್ಲಿದೆ ಒಂದು ಇಣುಕು ನೋಟ.

ವಿಜಯ್ ಜೋಷಿ

ಈಚಿನ ವರ್ಷಗಳಲ್ಲಿ ಜನರ ಬದುಕನ್ನು ಬಹುವಾಗಿ ಪ್ರಭಾವಿಸಿದ ಹಣಕಾಸು ತಂತ್ರಜ್ಞಾನ ಜಗತ್ತಿನ ಆವಿಷ್ಕಾರಗಳ ಪಟ್ಟಿಯಲ್ಲಿ ಮುಂಚೂಣಿಯಲ್ಲಿ ನಿಲ್ಲುವುದು ಏಕೀಕೃತ ಪಾವತಿ ವ್ಯವಸ್ಥೆ – ಅಥವಾ ಚುಟುಕಾಗಿ ಕರೆಯುವ ಯುಪಿಐ ವ್ಯವಸ್ಥೆ. ಬ್ಯಾಂಕ್ ಖಾತೆ ಹೊಂದಿರುವ ವ್ಯಕ್ತಿಗೆ ಸ್ಮಾರ್ಟ್‌ಫೋನ್, ನಂಬಿಕೊಳ್ಳಬಹುದಾದ ಇಂಟರ್ನೆಟ್ ಸಂಪರ್ಕ ಇದ್ದರೆ ಸಾಕು, ಈ ವ್ಯವಸ್ಥೆಯನ್ನು ಬಳಸಿ ಕ್ಷಣಾರ್ಧದಲ್ಲಿ ಹಣ ಪಾವತಿಸಬಹುದು. ಇಂಟರ್ನೆಟ್ ಬ್ಯಾಂಕಿಂಗ್‌ನ ಅ, ಆ, ಇ, ಈ ಗೊತ್ತಿಲ್ಲದವರು ಕೂಡ ತಮ್ಮ ಸ್ಮಾರ್ಟ್‌ಫೋನ್‌ಗಳಲ್ಲಿ ಯುಪಿಐ ಆ್ಯಪ್ ಹಾಕಿಕೊಂಡು, ದೈನಂದಿನ ಬದುಕಿಗೆ ಅಗತ್ಯವಿರುವ ಎಲ್ಲ ಬಗೆಯ ಪಾವತಿಗಳನ್ನೂ ಅದರ ಮೂಲಕವೇ ಮಾಡುವುದು ಸಾಧ್ಯ. ನಗದು ರಹಿತವಾಗಿ ಹಣಕಾಸಿನ ವಹಿವಾಟು ನಡೆಸುವುದನ್ನು ಜನಸಾಮಾನ್ಯರಿಗೆ ಸಾಧ್ಯವಾಗಿಸುವಲ್ಲಿ ಯುಪಿಐ ವ್ಯವಸ್ಥೆಗೆ ಬೇರೆ ಯಾವುದೂ ಸಾಟಿಯಲ್ಲ.



ಯುಪಿಐ ಜನಪ್ರಿಯತೆಯನ್ನು ಅಂಕಿ–ಅಂಶಗಳ ಮೂಲಕ ಹೇಳಬೇಕು ಎಂದಾದರೆ: ನವೆಂಬರ್ ತಿಂಗಳಲ್ಲಿ ಯುಪಿಐ ವ್ಯವಸ್ಥೆಯನ್ನು ಬಳಸಿ ದೇಶದಲ್ಲಿ ಒಟ್ಟು ₹ 11.90 ಲಕ್ಷ ಕೋಟಿ ಮೌಲ್ಯದ ವಹಿವಾಟುಗಳು ನಡೆದಿವೆ. ನವೆಂಬರ್ ವೇಳೆಗೆ ದೇಶದ ಒಟ್ಟು 376 ದೊಡ್ಡ, ಸಣ್ಣ, ಪುಟ್ಟ ಬ್ಯಾಂಕ್‌ಗಳು ಈ ವ್ಯವಸ್ಥೆಯನ್ನು ಅಳವಡಿಸಿಕೊಂಡಿವೆ. ನಗರ, ಪಟ್ಟಣಗಳ ಚಹಾ ಅಂಗಡಿಗಳಲ್ಲಿ ಬೈಟೂ ಚಹಾ ಕುಡಿದ ನಂತರ ಎಂಟು ರೂಪಾಯಿ ಅಥವಾ ಹತ್ತು ರೂಪಾಯಿ ಪಾವತಿಸುವುದರಿಂದ ಆರಂಭಿಸಿ, ದಿನಸಿ ಖರೀದಿಗೆ ಹಣ ಪಾವತಿಸುವುದರಿಂದ ತೊಡಗಿ, ಷೇರುಗಳ ಖರೀದಿಗೆ ಟ್ರೇಡಿಂಗ್ ಖಾತೆ ಹಣ ವರ್ಗಾವಣೆ ಮಾಡಿಕೊಳ್ಳುವಲ್ಲಿಯವರೆಗೆ ಯುಪಿಐ ವ್ಯವಸ್ಥೆಯು ನಮ್ಮ ಬದುಕಿನ ಭಾಗವಾಗಿದೆ. ದೇಶದಲ್ಲಿ ಯುಪಿಐ ಜನಪ್ರಿಯವಾಗುತ್ತ ಸಾಗಿದ ಅವಧಿಯಲ್ಲಿಯೇ ಷೇರು ಮಾರುಕಟ್ಟೆಗಳಲ್ಲಿ ಹಣ ಹೂಡಿಕೆ ಮಾಡುವವರ ಸಂಖ್ಯೆಯೂ ಹೆಚ್ಚುತ್ತ ಸಾಗಿದೆ. 2016ರ ಸೆಪ್ಟೆಂಬರ್ ತಿಂಗಳಲ್ಲಿ ಒಟ್ಟು 25 ಬ್ಯಾಂಕ್‌ಗಳು ಯುಪಿಐ ವ್ಯವಸ್ಥೆಯ ಭಾಗವಾಗಿದ್ದವು, ಆ ತಿಂಗಳಲ್ಲಿ ಯುಪಿಐ ಬಳಸಿ ಒಟ್ಟು ₹ 32.64 ಕೋಟಿ ಮೌಲ್ಯದ ವಹಿವಾಟು ನಡೆದಿತ್ತು. ಅದೇ ತಿಂಗಳಲ್ಲಿ ಮ್ಯೂಚುವಲ್ ಫಂಡ್ ಖಾತೆಗಳ ಒಟ್ಟು ಸಂಖ್ಯೆ 5.06 ಕೋಟಿ ಇತ್ತು. ಈಗ ಚಾಲ್ತಿಯಲ್ಲಿರುವ ಮ್ಯೂಚುವಲ್ ಫಂಡ್ ಖಾತೆಗಳ ಒಟ್ಟು ಸಂಖ್ಯೆ 13.81 ಕೋಟಿ. ಯುಪಿಐ ಈಗ ಬೆಳೆದಿರುವ ಪ್ರಮಾಣವನ್ನು ಈಗಾಗಲೇ ವಿವರಿಸಲಾಗಿದೆ. ಯುಪಿಐ ಮೂಲಕ, ಯಾವುದೇ ಶುಲ್ಕವಿಲ್ಲದೆ ಅತ್ಯಂತ ಸಣ್ಣ ಮೊತ್ತವನ್ನೂ ಮ್ಯೂಚುವಲ್ ಫಂಡ್ ಖಾತೆಗಳಿಗೆ ವರ್ಗಾವಣೆ ಮಾಡಲು ಸಾಧ್ಯವಾಗಿರುವುದು ಹಾಗೂ ಮ್ಯೂಚುವಲ್ ಫಂಡ್ ಕಂಪನಿಗಳು ಸಣ್ಣ ಮೊತ್ತ ಬಳಸಿ ಹೂಡಿಕೆ ಮಾಡುವುದನ್ನು ಸಾಧ್ಯವಾಗಿಸಿರುವುದು ಒಂದಕ್ಕೊಂದು ಪೂರಕವಾಗಿವೆ ಎಂಬ ಮಾತನ್ನು ತಜ್ಞರು ಹೇಳಿದ್ದಾರೆ.

ಯಾವ ಪ್ರಭುತ್ವದ ಬೆಂಬಲವೂ ಇಲ್ಲದ, ತಮ್ಮದೇ ಆದ ಯಾವ ಮೌಲ್ಯವೂ ಇಲ್ಲದ ಕ್ರಿಪ್ಟೊಕರೆನ್ಸಿಗಳ ಮೇಲೆ ಜನ ಹೂಡಿಕೆ ಮಾಡುವುದು ಈಚಿನ ವರ್ಷಗಳಲ್ಲಿ ಹೆಚ್ಚತೊಡಗಿತು. ಅವರು ಹೂಡಿಕೆ ಮಾಡಿದ್ದಾರೆ ಎಂದು ಇವರು ಹೂಡಿಕೆ ಮಾಡುವುದು, ಇವರು ಮಾಡಿದ್ದಾರೆ ಎಂದು ಅವರು ಹೂಡಿಕೆ ಮಾಡುವುದು ಶುರುವಾಯಿತು. ಕ್ರಿಪ್ಟೊಕರೆನ್ಸಿಗಳ 'ಮೌಲ್ಯ' ಹೆಚ್ಚಾಗತೊಡಗಿತು. ಹಣಕಾಸು ವ್ಯವಸ್ಥೆಯನ್ನು ರೂಪಿಸಿರುವುದು ಪ್ರಭುತ್ವ. ಆದರೆ, ಪ್ರಭುತ್ವದ ಬೆಂಬಲವೇ ಇಲ್ಲದ ಕ್ರಿಪ್ಟೊಕರೆನ್ಸಿಗಳು ದೇಶದ ಹಣಕಾಸು ವ್ಯವಸ್ಥೆಗೆ ಅಪಾಯ ಎಂಬುದರಲ್ಲಿ ಎರಡನೆಯ ಮಾತೇ ಇಲ್ಲ. ಬಹುಶಃ, ಕ್ರಿಪ್ಟೊಕರೆನ್ಸಿಗಳ ಮಾಯಾಲೋಕದಲ್ಲಿ ಸಾರ್ವಜನಿಕರು ಮೋಸಹೋಗದಿರಲಿ ಎಂದೂ, ಹಣವನ್ನು ಡಿಜಿಟಲ್ ರೂಪದಲ್ಲಿ ವಹಿವಾಟಿಗೆ ಬಳಸುವ ಅನುಭವ ಸಿಗಲಿ ಎಂದೂ ಕೇಂದ್ರೀಯ ಬ್ಯಾಂಕ್ (ಆರ್‌ಬಿಐ) ತಾನೂ ಒಂದು ಡಿಜಿಟಲ್ ಕರೆನ್ಸಿಯನ್ನು ಚಲಾವಣೆಗೆ ತರುವುದಾಗಿ ಹೇಳಿದ್ದಿರಬಹುದು. ಈಗ ಆರ್‌ಬಿಐ, ಡಿಜಿಟಲ್ ರೂಪಾಯಿಯ ಸಗಟು ಹಾಗೂ ಚಿಲ್ಲರೆ ವಹಿವಾಟುಗಳನ್ನು ಪ್ರಾಯೋಗಿಕವಾಗಿ ಶುರುಮಾಡಿದೆ.

11ನೇ ಪುಟಕ್ಕೆ...

ಇದೋ 'ಗುಜರಿ ಗ್ರಂಥಾಲಯ'

ಗಣೇಶ ಚಂದನಶಿವ

ಇವರ ಹೆಸರು ಇಸ್ಮಾಯಿಲ್ ಕಾಣಂತೂರು. ಶಾಲೆಗೆ ಹೋಗಿ ಓದಿದ್ದಕ್ಕಿಂತ ಬದುಕಿನ ಪಾಠಶಾಲೆಯಲ್ಲಿ ಕಲಿತಿದ್ದೇ ಹೆಚ್ಚು. ದಕ್ಷಿಣ ಕನ್ನಡ ಜಿಲ್ಲೆ ಮುಡಿಪು ಬಳಿಯ ಕಾಣಂತೂರು ಗ್ರಾಮ ಪಂಚಾಯಿತಿ ವಾಣಿಜ್ಯ ಸಂಕೀರ್ಣದಲ್ಲಿ ಗುಜರಿ ಅಂಗಡಿ ಹೊಂದಿದ್ದಾರೆ. ಅಲ್ಲಿಂದ 3 ಕಿ.ಮೀ. ಅಂತರದಲ್ಲಿ ಬಾಳೆಪುಣಿಯ ಹೂಹಾಕುವ ಕಲ್ಲು ಗ್ರಾಮದಲ್ಲಿ ಮನೆ ಇದೆ. ಎರಡೂ ಕಡೆ ಪುಟ್ಟ ಗ್ರಂಥಾಲಯ ರೂಪಿಸಿದ್ದಾರೆ ಈ ಗುಜರಿ ವ್ಯಾಪಾರಿ.

ಗುಜರಿಗೆ ಎಲ್ಲ ಬಗೆಯ ವಸ್ತುಗಳೂ ಬರುತ್ತವೆ. ಅವುಗಳಲ್ಲಿ ಪುಸ್ತಕಗಳೂ ಹೇರಳವಾಗಿರುತ್ತವೆ. ಗುಜರಿ ಅಂಗಡಿಯಲ್ಲಿ ಬಿದ್ದಿರುತ್ತಿದ್ದ ಪುಸ್ತಕಗಳನ್ನು ಕೊಡುವಂತೆ ಮಕ್ಕಳು ಬಂದು ಕೇಳುತ್ತಿದ್ದರಂತೆ. ಅವರಿಗೆ ಅನುಕೂಲವಾಗಲಿ ಎಂಬ ಕಾರಣಕ್ಕೆ ಇವರು, ಗುಜರಿಗೆ ಬರುವ ಪುಸ್ತಕಗಳನ್ನು ಎತ್ತಿಡಲು ಆರಂಭಿಸಿದರು. ಹತ್ತು ವರ್ಷಗಳಲ್ಲಿ ಎರಡು ಸಾವಿರಕ್ಕೂ ಹೆಚ್ಚು 'ಗುಜರಿ ಪುಸ್ತಕ'ಗಳು ಸಂಗ್ರಹವಾಗಿವೆ. ಈಗ ಅದು ಗ್ರಂಥಾಲಯಗಳ ರೂಪ ಪಡೆದುಕೊಂಡಿದೆ.

ಬಡ ಇಸ್ಮಾಯಿಲ್ ಅವರ ಬದುಕಿಗೆ ಗುಜರಿ ವ್ಯಾಪಾರ ಆಸರೆಯಾಗಿದ್ದರೆ, 'ಗುಜರಿ ಗ್ರಂಥಾಲಯ' ಅವರಿಗೆ ಕೀರ್ತಿಯನ್ನೂ ತಂದುಕೊಡುತ್ತಿದೆ.

'ನಮ್ಮದು ಬಡ ಕುಟುಂಬ. ಹಣ್ಣಿನ ವ್ಯಾಪಾರ ಮಾಡುತ್ತಿದ್ದೆ. ಉದ್ರಿ ಮಾರಾಟವೇ ಹೆಚ್ಚಾಗಿತ್ತು. ಕುಟುಂಬ ನಿರ್ವಹಣೆ ಕಷ್ಟವಾಗಿತ್ತು. ನಿತ್ಯ ನನ್ನ ಅಂಗಡಿಗೆ ಬರುತ್ತಿದ್ದ ಮುಡಿಪು ಶಾಲೆಯ ಪ್ರಾಚಾರ್ಯ ಬಸವರಾಜ ಪಲ್ಲಕ್ಕಿ, ಗುಜರಿ ವ್ಯಾಪಾರ ಆರಂಭಿಸುವಂತೆ ಸಲಹೆ ನೀಡಿದರು. ಹಣ್ಣಿನ ವ್ಯಾಪಾರ ಬಿಟ್ಟು ಗುಜರಿ ವ್ಯಾಪಾರ ಶುರುಮಾಡಿದೆ. ಇದರಿಂದ ನನ್ನ ಆರ್ಥಿಕ ಮಟ್ಟ ಸುಧಾರಿಸಿತು' ಎಂದು ಮೆಲುಕು ಹಾಕುವ ಅವರು, ತಮ್ಮ ಗ್ರಂಥಾಲಯ ಪ್ರೀತಿಯ ಬಗ್ಗೆ ಹೇಳುವುದು ಹೀಗೆ...



ತಮ್ಮ ಗುಜರಿ ಅಂಗಡಿಯಲ್ಲಿಯ ಪುಟ್ಟ ಗ್ರಂಥಾಲಯದಲ್ಲಿ ಇಸ್ಮಾಯಿಲ್ ಕಾಣಂತೂರು ಚಿತ್ರ: ಫಕ್ರುದ್ದೀನ್ ಎಚ್.

> ಗುಜರಿಗೆ ಬಂದ ಪುಸ್ತಕಗಳನ್ನು ಈ ಗಾಂಧಿವಾದಿ ಎತ್ತಿಡಲು ಆರಂಭಿಸಿದರು. ನೋಡ ನೋಡುತ್ತಿದ್ದಂತೆಯೇ 2,000 ಪುಸ್ತಕಗಳು ಸಂಗ್ರಹವಾದವು. ಅವುಗಳನ್ನು ಓದಲು ಮಕ್ಕಳೂ ಬಂದರು...

ಎರಡು ವರ್ಷಗಳಿಂದ ಗುಜರಿ ಅಂಗಡಿಯಲ್ಲಿ, ಒಂದು ವರ್ಷದಿಂದ ಮನೆಯಲ್ಲಿ ಪುಟ್ಟ ಗ್ರಂಥಾಲಯ ಆರಂಭಿಸಿದ್ದೇನೆ. ಪುಸ್ತಕ ಇಡಲು ಜಾಗ ಸಾಲುತ್ತಿಲ್ಲ. ಹೀಗಾಗಿ ಬಹಳಷ್ಟು ಪುಸ್ತಕಗಳನ್ನು ಗೋಣಿ ಚೀಲಗಳಲ್ಲಿ ತುಂಬಿ ಇಟ್ಟಿದ್ದೇನೆ. ಮಕ್ಕಳು ಕುಳಿತು ಓದಲು ಅನುಕೂಲವಾಗುವಂತೆ ಮನೆಯ ಆವರಣದಲ್ಲಿ ಚಪ್ಪರ ಹಾಕಿಸಿದ್ದೇನೆ. ಒಂದು ಟೇಬಲ್– ಕುರ್ಚಿ ಇಟ್ಟಿದ್ದೇನೆ. ನಿತ್ಯ 25–30 ಮಕ್ಕಳು ಬಂದು ಓದುತ್ತಾರೆ.

ಬಾಲ್ಯದಲ್ಲಿ ನಾನಂತೂ ಕಲಿಯಲಿಲ್ಲ. ಮಕ್ಕಳಾದರೂ ಕಲಿಯಲಿ ಎಂಬ ಕಾರಣಕ್ಕೆ ಇದನ್ನೆಲ್ಲ ಮಾಡುತ್ತಿದ್ದೇನೆ. ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಈ ಬಾರಿ ನಮ್ಮ ಮನೆಯ ಅಂಗಳದಲ್ಲೇ ಆಚರಿಸಿದೆವು. ನನಗೆ ಈ ವರೆಗೆ ಕರ್ನಾಟಕ, ಕೇರಳದಲ್ಲಿ 32 ಸನ್ಮಾನ ನಡೆದಿದ್ದು, ಅಲ್ಲಿ ಕೊಡುವ ಪುಸ್ತಕಗಳನ್ನೂ ತಂದು ಈ ಗ್ರಂಥಾಲಯಗಳಲ್ಲಿ ಇಡುತ್ತೇನೆ.

ಈ ಗ್ರಂಥಾಲಯಗಳಲ್ಲಿನ ಪುಸ್ತಕಗಳನ್ನು ಯಾರು ಬೇಕಾದರೂ ಎರವಲು ಪಡೆದುಕೊಂಡು ಹೋಗಬಹುದು. ತಮಗೆ ಇಷ್ಟವಾದ ಪುಸ್ತಕಗಳನ್ನು ಮಕ್ಕಳು ಶಾಶ್ವತವಾಗಿ ತಮ್ಮ ಬಳಿಯೇ ಇಟ್ಟುಕೊಳ್ಳಬಹುದು. ಇಲ್ಲಿ ನಿರ್ವಹಣೆ ಶುಲ್ಕ, ದಾಖಲಾತಿ ಯಾವುದೂ ಇಲ್ಲ.

ಗಾಂಧಿ ತತ್ವದಲ್ಲಿ ವ್ಯಾಪಾರ ಮಾಡುವ ಕಾರಣ ನನ್ನನ್ನು ಊರಿನ ಜನ 'ಗಾಂಧಿವಾದಿ ಇಸ್ಮಾಯಿಲ್' ಎಂದೇ ಕರೆಯುತ್ತಾರೆ. ಇದು ನನಗೆ ಖುಷಿ ಕೊಡುತ್ತದೆ ಎಂದು ಮುಗುಳ್ನಕ್ಕರು 50 ವರ್ಷ ವಯಸ್ಸಿನ ಇಸ್ಮಾಯಿಲ್.

ಇವರಿಗೆ ಮೂವರು ಗಂಡು, ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ಒಬ್ಬ ಮಗ ದುಬೈನಲ್ಲಿ ಕೆಲಸ ಮಾಡುತ್ತಿದ್ದಾರೆ. ಇಬ್ಬರೂ ಪುತ್ರಿಯರಿಗೆ ವಿವಾಹ ಆಗಿದೆ. ಪತ್ನಿ ಜಮೀಲಾ, ಇಬ್ಬರು ಪುತ್ರರು ತಮ್ಮ ಸೇವೆಗೆ ಕೈಜೋಡಿಸಿದ್ದಾಗಿ ಇವರು ಹೇಳುತ್ತಾರೆ.

ನಮ್ಮ ಹಾಗೆ ಬಡ ಮಕ್ಕಳೂ ಇದ್ದಾರೆ. ಅವರ ಜ್ಞಾನದ ಪರಿಧಿ ಬೆಳೆಯಲಿ. ಅವರು ಓದಿ ಉತ್ತಮ ಬದುಕು ರೂಪಿಸಿಕೊಳ್ಳಲಿ ಎಂಬ ಕಾರಣಕ್ಕೆ ಈ ಸಣ್ಣ ಸೇವೆಯಲ್ಲಿ ತೊಡಗಿದ್ದೇನೆ. ಬಡ ಮಕ್ಕಳಿಗೆ ಶಾಲಾ ಪುಸ್ತಕ ಕೊಡಿಸಿದ್ದೂ ಇದೆ. ಈಗ ಕೆಲ ದಾನಿಗಳು ಹಣ ಕೊಟ್ಟು ತಮ್ಮ ಲೆಕ್ಕದಲ್ಲಿ ಮಕ್ಕಳಿಗೆ ಪುಸ್ತಕ ಕೊಡುವಂತೆ ಹೇಳುತ್ತಿದ್ದಾರೆ. ದಾನಿಗಳ ನೆರವನ್ನು ಬಡ ಮಕ್ಕಳಿಗೆ ತಲುಪಿಸುತ್ತಿದ್ದೇನೆ; ಇದಕ್ಕೆ ಸಂಘ–ಸಂಸ್ಥೆಗಳೂ ಕೈಜೋಡಿಸಿವೆ ಎಂದು ವಿನಮ್ರರಾಗಿ ಹೇಳುತ್ತಾರೆ ಅವರು.

ಇಸ್ಮಾಯಿಲ್ ಅವರ ಸಂಪರ್ಕ ಸಂಖ್ಯೆ:
99641 57505

ಬಗೆಬಗೆಯ ಅನುಭವಗಳ ಬನಾರಸ್!

ಸುಪ್ರೀತಾ ಹೆಬ್ಬಾರ್

ಉತ್ತರ ಭಾರತದ ಪ್ರಸಿದ್ಧ ಯಾತ್ರಾ ಸ್ಥಳಗಳಲ್ಲಿ ಪ್ರಮುಖವಾದುದು ಕಾಶಿ-ವಾರಾಣಸಿ. ದೇವರ ನಾಡೆಂದೇ ಕರೆಸಿಕೊಳ್ಳುವ ಕಾಶಿ, ಹಿಂದೂಗಳಿಗೆ ಅತ್ಯಂತ ಪವಿತ್ರ ಯಾತ್ರಾ ಸ್ಥಳ. ಹಿಂದೆಲ್ಲಾ ಇಳಿವಯಸ್ಸಿನಲ್ಲಿ ಕಾಲ್ನಡಿಗೆಯಲ್ಲಿ ಕಾಶಿ ದರ್ಶನಕ್ಕೆ ಹೊರಡುವವರಲ್ಲಿ ಮರಳಿ ಬರುವುದಿಲ್ಲ ಎಂಬ ಮಾತು ಕೂಡ ಇತ್ತು. ಅಲ್ಲಿಗೆ ಸಾಗಲು ಸರಿಯಾದ ವ್ಯವಸ್ಥೆ ಇಲ್ಲದೇ ಇದ್ದಿದ್ದು ಇದಕ್ಕೆ ಕಾರಣವಾಗಿತ್ತು.

ಆದರೆ, ಕಾಶಿ ಈಗ ಹಿಂದೆಂದಿಗಿಂತಲೂ ವಿಸ್ತಾರವಾಗಿದೆ. ವ್ಯವಸ್ಥಿತ ಯಾತ್ರಾ ಸ್ಥಳವಾಗಿ ಬದಲಾಗಿದೆ. ಉತ್ತರದಲ್ಲಿ ವಾರಾಣಸಿ ಅಥವಾ ಬನಾರಸ್ ಎಂದು ಕರೆಸಿಕೊಳ್ಳುವ ಕಾಶಿ ಈಗ ಜನರಿಗೆ ಮೊದಲಿಗಿಂತಲೂ ಹತ್ತಿರವಾಗಿದೆ. ಕಿರಿದಾದ ರಸ್ತೆಗಳು, ಸಾಂಪ್ರದಾಯಿಕ ಜೀವನಶೈಲಿಯನ್ನು ಉಳಿಸಿಕೊಳ್ಳುತ್ತಲೇ ಹೊಸತನಕ್ಕೆ ತೆರೆದುಕೊಂಡಿದೆ. ಒಂದೆಡೆ ಚಿಕ್ಕ ಚಿಕ್ಕ ಗಲ್ಲಿಗಳಲ್ಲಿ ಕಿಕ್ಕಿರಿದು ಸಾಗುವ ಜನಸಾಗರವಿದ್ದರೆ, ಇನ್ನೊಂದೆಡೆ ಬೃಹತ್ ಮಾಲ್‌ಗಳು, ಅಂಗಡಿಗಳು ದೇಶ-ವಿದೇಶಗಳ ಪ್ರವಾಸಿಗರ ಬೇಡಿಕೆಗಳನ್ನು ಈಡೇರಿಸಲು ಸಜ್ಜಾಗಿವೆ. ಈಗ ಇಲ್ಲಿಗೆ ಭೇಟಿ ನೀಡುವವರು ಎರಡೂ ವಿಧದ ಬನಾರಸ್‌ನ ಅನುಭವ ಪಡೆಯಬಹುದು.

ಇಲ್ಲಿನ ಪುರಾತನ ಹಾಗೂ ಕಿರಿದಾದ ಗಲ್ಲಿಗಳಲ್ಲಿ ಸಾಗುತ್ತಾ ಅದರ ಇಕ್ಕೆಲಗಳಲ್ಲಿ ಇರುವ ಸಣ್ಣ ಅಂಗಡಿಗಳಲ್ಲಿ ಶಾಪಿಂಗ್‌ನ ವಿಶಿಷ್ಟ ಅನುಭವ ಪಡೆಯಬಹುದು. ಇಲ್ಲಿನ ಸಾಲುಸಾಲು ಅಂಗಡಿಗಳಲ್ಲಿ ಗ್ರಂಥಿಗೆ ಸಾಮಾನುಗಳ ಜತೆಗೆ ಬನಾರಸ್‌ನ ವಿಶೇಷ ಖಾದ್ಯಗಳು ದೊರೆಯುತ್ತವೆ. ರಬ್ಡಿ, ರಸ್‌ಮಲಾಯ್, ಹಾಲು, ವಿವಿಧ ಚಾಟ್‌ನ ಸವಿಯನ್ನು ಇಲ್ಲಿ ಸವಿಯುವ ಮಜವೇ ಬೇರೆ. ಗೂಡಿನ ಗಾತ್ರದ ಅಂಗಡಿಗಳಲ್ಲಿ ವ್ಯಾಪಾರ ಮಾಡುವ ಸಣ್ಣ ವ್ಯಾಪಾರಿಗಳು, ಹೆಚ್ಚಾಗಿ ಅದೇ ಕಟ್ಟಡದ ಮೇಲಂತಸ್ತುಗಳಲ್ಲಿ ವಾಸಿಸುತ್ತಾರೆ. ಹೊರಗಿನಿಂದ ಕಿರಿದಾಗಿ ಕಾಣಿಸುವ ಮನೆಗಳು ಒಳಗೆ ವಿಶಾಲವಾಗಿರುತ್ತವೆ.

ಪ್ರವಾಸ

ಇಲ್ಲಿನ ಲಸ್ಸಿ ಹಾಗೂ ಬಗೆಬಗೆಯ ಪಾನ್‌ಗಳನ್ನು ಸವಿಯಲು ಮರೆತರೆ ನೀವು ಕಾಶಿಯನ್ನು ಪೂರ್ಣವಾಗಿ ಆಸ್ವಾದಿಸಿಲ್ಲ ಎಂದೇ ಲೆಕ್ಕ. ಇಲ್ಲಿನ ಹೋಟೆಲ್‌ಗಳಲ್ಲಿ ಸಿಗುವ ಪೂರಿ, ಕಚೋರಿಯ ರುಚಿಯೂ ವಿಭಿನ್ನವಾಗಿರುತ್ತದೆ. ಇಲ್ಲಿನ ಗಲ್ಲಿ ರಸ್ತೆಗಳಲ್ಲಿ ಸಂಚರಿಸುವ ಅನುಭವವನ್ನು ಪ್ರವಾಸಿಗರು ಮಿಸ್ ಮಾಡಿಕೊಳ್ಳುವಂತಿಲ್ಲ.

ಕಾಶಿಗೆ ದೇವರ ನಾಡು ಎಂಬ ಹೆಸರು ದೊರಕಿರುವುದು ಸುಮ್ಮನೆ ಅಲ್ಲ. ಮುಖ್ಯ ಆಕರ್ಷಣೆಯಾದ ವಿಶ್ವನಾಥ ಮಂದಿರದ ಜೊತೆಗೆ, ಅದರ ಪಕ್ಕದಲ್ಲೇ ಇರುವ ಅನ್ನಪೂರ್ಣೇಶ್ವರಿ ದೇಗುಲ, ಕಾಶಿ ವಿಶಾಲಾಕ್ಷಿ ದೇಗುಲ, ಕಾಲ ಭೈರವ, ತ್ರಿದೇವ್, ದುರ್ಗಾ, ಹನುಮಾನ್ ಮಂದಿರ, ಶ್ರೀ ರಾಮಮಂದಿರ, ಸಂಕಟ ಮೋಚನ್ ಮಂದಿರ ಸೇರಿ ಹಲವು ದೇಗುಲಗಳಿಗೆ ನೀವು ಭೇಟಿ ನೀಡಬಹುದು.



ಕಾಶಿ ವಿಶ್ವನಾಥ ದೇಗುಲ ದೇಶದ 12 ಜ್ಯೋತಿರ್ಲಿಂಗಗಳಲ್ಲಿ ಒಂದು. ಇಲ್ಲಿಗೆ ದೇಶ-ವಿದೇಶಗಳಿಂದ ಜನ ಬರುತ್ತಾರೆ. ಇಲ್ಲಿನ ಪ್ರಮುಖ ದೇಗುಲವಾದ ಕಾಶಿ ವಿಶ್ವನಾಥ ದೇವರ ದರ್ಶನಕ್ಕೆ ಜನ ನಸುಕಿನ 2 ಗಂಟೆಯಿಂದಲೇ ಸರತಿಯಲ್ಲಿ ನಿಂತು ಕಾಯುತ್ತಾರೆ. ಸಂಪ್ರದಾಯದ ಪ್ರಕಾರ, ಕಾಶಿ ವಿಶ್ವನಾಥನ ದರ್ಶನ ಪಡೆದ ನಂತರ ಅಲ್ಲೇ ಸಮೀಪದಲ್ಲಿನ ಕಾಲಭೈರವ ದೇವರ ದರ್ಶನ ಪಡೆಯಬೇಕು. ಇಲ್ಲಿನ ಬನಾರಸ್ ವಿಶ್ವವಿದ್ಯಾಲಯದಲ್ಲಿ ಕೂಡ ಒಂದು ಪ್ರತ್ಯೇಕ ವಿಶ್ವನಾಥನ ದೇಗುಲವಿದೆ.

ಕಾಶಿಯ ಇನ್ನೊಂದು ಪ್ರಮುಖ ಆಕರ್ಷಣೆಯೆಂದರೆ ಗಂಗಾರತಿ. ಇಲ್ಲಿನ ಅಸ್ಸಿಘಾಟ್‌ನಲ್ಲಿ ಐದರಿಂದ ಏಳು ಪಂಡಿತರು ಪ್ರತೀ ಸಂಜೆ ಗಂಗಾನದಿಗೆ ಆರತಿ ಬೆಳಗುತ್ತಾರೆ. ಇದೊಂದು ಅಪರೂಪದ ದೃಶ್ಯ. ಮುಸ್ಸಂಜೆ ವೇಳೆಗೆ ಅಸ್ಸಿ ಘಾಟ್‌ಗೆ ಹೋದಲ್ಲಿ ಇದರ ಆನಂದ ಸವಿಯಬಹುದು. ಇಲ್ಲವೇ, ಎದುರಿನ ಘಾಟ್‌ಗಳಲ್ಲಿ ನಿಲ್ಲಿಸಿರುವ ದೋಣಿಗಳಲ್ಲಿ ಕುಳಿತು ಅದ್ದೂರಿ ಗಂಗಾರತಿಗೆ ಸಾಕ್ಷಿಯಾಗಬಹುದು.

ಆದರೆ, ಕಳೆದ ಕೆಲ ವಾರಗಳಲ್ಲಿ ಭಾರಿ ಮಳೆಯಾಗಿ ಘಾಟ್ ಒಳಗೆಲ್ಲಾ ನೀರು ನುಗ್ಗಿದ್ದರಿಂದ, ಗಂಗಾರತಿಯನ್ನು ಸ್ಥಗಿತಗೊಳಿಸಲಾಗಿತ್ತು. ಈಗ ಐದರ ಬದಲಿಗೆ, ಒಂದು ಅಥವಾ ಮೂರು ಆರತಿಗಳನ್ನು ಮಾಡಲಾಗುತ್ತದೆ. ಆದ್ದರಿಂದ ನೀವು ಕಾಶಿ ಪ್ರಯಾಣ ಬೆಳೆಸುವುದಾದರೆ, ಗಂಗಾರತಿ ನಡೆಯುತ್ತಿದೆಯೇ ಎಂಬುದನ್ನು ಖಾತರಿಪಡಿಸಿಕೊಂಡು ಹೋಗುವುದು ಉತ್ತಮ.



ಗಂಗಾರತಿಗೂ ಮೊದಲು ಅಲ್ಲಿನ ದೋಣಿ ವಿಹಾರಕ್ಕೆ ಅವಕಾಶವಿರುತ್ತದೆ. ಇದರಲ್ಲಿ ಕುಳಿತು ಅಸ್ಸಿ ಘಾಟ್, ರಾಜ ಹರಿಶ್ಚಂದ್ರ ಘಾಟ್, ಮಣಿಕರ್ಣಿಕಾ ಘಾಟ್ ಸೇರಿದಂತೆ ಹಲವು ಘಾಟ್‌ಗಳನ್ನು ವೀಕ್ಷಿಸಿ, ಅವುಗಳ ಆಸಕ್ತಿಕರ ಕತೆಗಳನ್ನು ಕೂಡ ಕೇಳಬಹುದು. ಇದೆಲ್ಲವೂ ಮುಗಿದ ಮೇಲೆ ಸಂಜೆ ಹೊತ್ತು ಅಲ್ಲಿನ ಹೋಲ್‌ಸೇಲ್ ಮಾರುಕಟ್ಟೆಗಳಲ್ಲಿ ತಿರುಗಾಡಿ ನಿಮಗಿಷ್ಟವಾದ ವಸ್ತುಗಳ ಶಾಪಿಂಗ್ ಮಾಡಬಹುದು. ಜೊತೆಗೆ, ಇಲ್ಲಿ ಬನಾರಸ್ ರೇಷ್ಮೆ ಕಾರ್ಖಾನೆಗಳಿದ್ದು, ಅಲ್ಲಿ ಕಡಿಮೆ ಬೆಲೆಗೆ ಉತ್ತಮ ಬನಾರಸ್ ದುಪಟ್ಟಾ, ಸೀರೆಗಳನ್ನು ಖರೀದಿಸಬಹುದು.

ಕಾಶಿಯ ಗಂಗಾನದಿಯಲ್ಲಿ ದೋಣಿ ವಿಹಾರಕ್ಕೆ ಕರೆದೊಯ್ಯುವ ವ್ಯಕ್ತಿ, ಅಲ್ಲಿನ ಘಾಟ್‌ಗಳನ್ನು ಪರಿಚಯಿಸುತ್ತಾ, ರಾಜಹರಿಶ್ಚಂದ್ರ ಘಾಟ್ ಬಳಿ, ಹರಿಶ್ಚಂದ್ರನ ಜೀವನ ಚರಿತ್ರೆಯ ವಿವರ ನೀಡಲು ಆರಂಭಿಸುತ್ತಾನೆ. ನಿಮಗೆ ಆ ಕಥೆ ತಿಳಿದಿದೆ ಎಂದರೂ ಆತ ಬಿಡುವುದಿಲ್ಲ. ಕೊನೆಗೆ, ಹರಿಶ್ಚಂದ್ರನ ಆಡಳಿತದಲ್ಲಿದ್ದ ಗುಪ್ತ ದಾನದ ವಿಷಯಕ್ಕೆ ಬಂದು ಮಾತು ನಿಲ್ಲುತ್ತದೆ. ಆಗ ಆತ, ದೋಣಿಯ ಮಾಲೀಕರಿಗೆ ತಿಳಿಯದಂತೆ ತಮಗೆ ಗುಪ್ತ ದಾನ ನೀಡುವುದಾದರೆ ನೀಡಬಹುದು ಎಂಬ ಪ್ರಸ್ತಾವ ಮುಂದಿಡುತ್ತಾನೆ!

ಇದು ಇಲ್ಲಿನ ಒಂದು ಉದಾಹರಣೆಯಷ್ಟೆ. ಇಲ್ಲಿ ಹೆಜ್ಜೆ ಹೆಜ್ಜೆಗೂ ಇಂತಹ ಅನುಭವಗಳು ದೊರೆಯುತ್ತವೆ. ದೇಶ ವಿದೇಶಗಳಿಂದ ಪ್ರತಿವರ್ಷ ಲಕ್ಷಾಂತರ ಜನರನ್ನು ಆಕರ್ಷಿಸುವ ಕಾಶಿ ಇಲ್ಲಿನ ಜನರ ದುರ್ವರ್ತನೆಗಳಿಂದಲೂ ಆಗಾಗ್ಗೆ ಸುದ್ದಿಯಾಗುತ್ತಲೇ ಇರುತ್ತದೆ. ಆಟೊ ಚಾಲಕರು ಒಂದು ಕಿ.ಮೀ. ದೂರದ ಪ್ರದೇಶಕ್ಕೂ 100 ರೂಪಾಯಿಗಿಂತ ಕಡಿಮೆಗೆ ಬರಲು ಒಪ್ಪುವುದಿಲ್ಲ. ನೀವು ದೇವರ ದರ್ಶನಕ್ಕೆಂದು ಮುಂಜಾನೆ ಎದ್ದು ದೇಗುಲದ ಹೊರಗೆಯೇ ಸರತಿಯಲ್ಲಿ ನಿಂತಿದ್ದರೆ, ಹಣೆಗೆ ನಾಮ, ಗಂಧ ಹಚ್ಚಿ ಹಣ ಕೇಳುವವರೂ ಇದ್ದಾರೆ!

ದೇಗುಲದ ಒಳಗೆ ಸರತಿಯಿಲ್ಲದೆ ಕಡಿಮೆ ದರದಲ್ಲಿ ನೇರ ದರ್ಶನ ಮಾಡಿಸುವ ಆಮಿಷವೊಡ್ಡುವ ಏಜೆಂಟರು ಸಿಗುತ್ತಾರೆ. ಆದರೆ, ಒಳಹೋದ ಮೇಲೆ, ಬೇರೊಂದು ಪೂಜೆ ಹೆಸರಲ್ಲಿ ಇಲ್ಲವೇ ಪಿತೃಪಕ್ಷದಲ್ಲಿ ಹಿರಿಯರಿಗೆ ದಾನ ಎಂಬಿತ್ಯಾದಿ ನೆಪ ಹೇಳಿ ₹5,000ದವರೆಗೆ ಬೇಡಿಕೆ ಇಡುತ್ತಾರೆ. ಎಲ್ಲೆಂದರಲ್ಲಿ ಅಡ್ಡ ಹಾಕಿ ಆಟೊ, ದೋಣಿ ಸವಾರಿ ಬೇಕೇ ಎಂದು ಕೇಳುವವರ ಬಗ್ಗೆಯೂ ಎಚ್ಚರದಿಂದ ಇರಬೇಕು.

ಕಾಶಿಯ ಹೊಸ ಆಕರ್ಷಣೆಯೆಂದರೆ ಇತ್ತೀಚೆಗೆ ಉದ್ಘಾಟನೆಗೊಂಡ ಕಾಶಿ ಕಾರಿಡಾರ್. ಇದು ಯಾತ್ರಿಕರಿಗೆ ನೇರವಾಗಿ ಗಂಗಾ ತಟದ ಘಾಟ್‌ನಿಂದ ವಿಶ್ವನಾಥ ದೇಗುಲ ಪ್ರವೇಶಿಸಲು ಅನುವು ಮಾಡಿಕೊಡುತ್ತದೆ. ಮೊದಲು ಗಲ್ಲಿಗಳನ್ನು ಬಳಸಿ ದೇಗುಲ ಪ್ರವೇಶಿಸಬೇಕಾಗಿತ್ತು. ಈಗ ಕೇವಲ ಘಾಟ್‌ನಿಂದ 400 ಮೀಟರ್ ಅಂತರದಲ್ಲಿ ದೇಗುಲದ ದ್ವಾರ ದೊರೆಯಲಿದೆ. ಈ ಕಾರಿಡಾರ್ ಯೋಜನೆಯ ಒಟ್ಟು ವೆಚ್ಚ ₹800 ಕೋಟಿ. ಈ ಸ್ಥಳದಲ್ಲಿದ್ದ 1,400 ಅಂಗಡಿಗಳು, ಬಾಡಿಗೆ ಕಟ್ಟಡಗಳು ಹಾಗೂ ಮನೆ ಮಾಲೀಕರಿಗೆ ಪುನರ್ವಸತಿ ಕಲ್ಪಿಸಲಾಗಿದೆ. ❖





ಭಂ..ಭಂ..ಬೋಲೆ...ಕಾಶಿಯಲ್ಲಿ ಹೀಗಿರುತ್ತದೆ ನಾಗಸಾಧುಗಳ ಲೋಕ(ಎಡಚಿತ್ರ). ಶಾರದಾದೇವಿಗೆ ಚಿನ್ನದ ಜರಿಯುಳ್ಳ ಬನಾರಸ್ ಸೀರೆ ಸಿದ್ಧಪಡಿಸುತ್ತಿರುವ ನೇಕಾರ

ಸಂಗೀತ ‘ಗಂಗೆ’ಯಲ್ಲಿ ಮಿಂದು...

ಶ್ರೀಮತಿ ದೇವಿ


‘ಅಭಿಜಾತ ಮ್ಯೂಸಿಕ್ ಫೋರಮ್’ ವಾರಾಣಸಿಯಲ್ಲಿ ಆಯೋಜಿಸಿದ ಮೂರು ದಿನಗಳ ನಿವಾಸಿ ಸಂಗೀತ ಕಾರ್ಯಕ್ರಮದ ವಿವರ ನೋಡಿದಾಗ ನನಗೂ ಹೋಗುವ ಆಸೆಯಾಗಿದ್ದು ಸುಳ್ಳಲ್ಲ. ಪ್ರತಿವರ್ಷ ಲೋನಾವಲಾದಲ್ಲಿ ‘ಖಂಡಾಲಾ ಲೋನಾವಲಾ ನಿವಾಸಿ ಸಂಗೀತ ಸಮ್ಮೇಳನ’ ನಡೆಸುತ್ತಿದ್ದ ಆಯೋಜಕರು ಈ ಬಾರಿ ದೂರದ ವಾರಾಣಸಿಯಲ್ಲಿ ‘ಕಾಶಿ ವಿಶ್ವನಾಥ ನಿವಾಸಿ ಸಂಗೀತ ಸಮ್ಮೇಳನ’ವನ್ನು ಆಯೋಜಿಸಿದ್ದರು.

ನನ್ನ ಸಂಗೀತ ಗುರುಗಳಾದ ಅಪೂರ್ವ ಗೋಖಲೆಯವರು ಅಲ್ಲಿ ಹಾಡುತ್ತಿದ್ದದ್ದು ನನಗೆ ಆಕರ್ಷಣೆಯ ಕೇಂದ್ರವಾಗಿತ್ತು. ಕಲಾವಿದರಾದ ಉಲ್ಲಾಸ್ ಕಶಾಲ್ಕರ್, ಸುರೇಶ್ ತಲವಾಲ್ಕರ್, ಅಶ್ವಿನಿ ಭಿಡೆ ದೇಶಪಾಂಡೆ, ಮಂಜಿರಿ ಅಸನಾರೆ, ನಂದಿನಿ ಭಿಡ್ಕರ್, ಭಾರತಿ ಪ್ರತಾಪ್, ಜಯತೀರ್ಥ ಮೇವುಂಡಿ ಅವರ ಗಾಯನ, ಕಥಕ್ ನೃತ್ಯ, ಸಂಗೀತದ ಕುರಿತ ಚರ್ಚೆ ಇವೆಲ್ಲವುಗಳು ಅಲ್ಲಿ ನಡೆಯಲಿದ್ದವು.

ಠಾಣೆಯಲ್ಲಿರುವ ಗುರುಗಳ ಮನೆ ತಲುಪಿ, ಮರುದಿನ ಅಲ್ಲಿಂದ ಗುರುಬಂಧು ಪ್ರಿಯಾಂಕ ಭಿಸೆ ಮತ್ತೆ ಇಬ್ಬರು ತಬಲಾ ಕಲಾವಿದರೊಂದಿಗೆ ರೈಲು ಪ್ರಯಾಣ ಮಾಡಿ ನಾವು ವಾರಾಣಸಿ ಸೇರಿದೆವು. ಕಾರ್ಯಕ್ರಮ ನಡೆಯುವ ಸ್ಥಳವಾದ ‘ಮಾರವಾರಿ ಸೇವಾ ಸಂಘ’ವನ್ನು ನಾವು ತಲುಪಿದಾಗ ಉದ್ಘಾಟನೆ ನಡೆದು, ವಾರಾಣಸಿಯ ಪ್ರಸಿದ್ಧ ತಬಲಾ ವಾದಕ ಪುಂಡಲೀಕ ಭಾಗವತ್ ಅವರಿಂದ ತಬಲಾ ವಾದನ ನಡೆಯುತಿತ್ತು.

ವಾರಾಣಸಿಯ ಸುಂದರವಾದ ಅಸ್ಸಿ ಘಾಟ್‌ನ ಸಮೀಪದಲ್ಲೇ ಇದ್ದ ಕಾರ್ಯಕ್ರಮದ ಸ್ಥಳದಿಂದ ನದಿ ತೀರಕ್ಕೆ ಹೋಗುವುದು ತುಂಬಾ ಸುಲಭವಾಗಿತ್ತು. ಇಲ್ಲಿ ಪ್ರತಿದಿನ ಮುಂಜಾನೆ ಹಾಗೂ ಸಂಧ್ಯಾಕಾಲದಲ್ಲಿ ನಡೆಯುವ ಗಂಗಾರತಿಯ ಬಗ್ಗೆ ತುಂಬಾ ಕೇಳಿದ್ದೆ. ಆದರೆ ಅದನ್ನು ಇಷ್ಟು ಬೇಗ ನೋಡುತ್ತೇನೆ ಎಂದುಕೊಂಡಿರಲಿಲ್ಲ. ಎಷ್ಟು ಬೇಗ ಬೆಳಗಾಗುತ್ತದೋ ಎಂದುಕೊಂಡೇ ಮಲಗಿದ್ದ ಕಾರಣ, ಮುಂಜಾವಿನಲ್ಲಿ ಕೊರೆಯುವ ಚಳಿಯಿದ್ದರೂ ಎದ್ದು ಹೊರಡುವುದು ಕಷ್ಟವಾಗಲಿಲ್ಲ. ಸೂರ್ಯ ಮೂಡುವುದಕ್ಕಿಂತ ಮುಂಚೆ ನಡೆಯುವ ಗಂಗೆಗೆ ಆರತಿ ಮಾಡುವ ಆ ಭವ್ಯತೆಯನ್ನು ಅನುಭವಿಸಲು ಕಾತರಿಸಿದ್ದೆ. ಒಂದೇ ಬಗೆಯ ಸಾಂಪ್ರದಾಯಿಕ ಉಡುಗೆ ತೊಟ್ಟುಕೊಂಡು ದೊಡ್ಡ ಗಾತ್ರದ ಆರತಿ ಹಿಡಿದು ಆರತಿ ಮಾಡುತ್ತಿದ್ದರೆ, ಒಂದುಕ್ಷಣ ಪ್ರಕೃತಿಯೊಂದಿಗೆ ನೇರ ಸಂವಹನ ನಡೆಸಿದಂತೆ ಅನಿಸಿತು.

ಗಂಗಾಪೂಜೆ ಮುಗಿಯುತ್ತಿದ್ದಂತೆ ಪ್ರತಿನಿತ್ಯ ನಡೆಯುವ ‘ಸುಬಹ್-ಎ-ಬನಾರಸಿ’ ಎಂಬ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಅಲ್ಲೇ ಸಜ್ಜುಗೊಂಡಿದ್ದ ವೇದಿಕೆಯಲ್ಲಿ ಆರಂಭವಾಯಿತು. ನಮ್ಮ ಅದೃಷ್ಟವೋ ಎಂಬಂತೆ ಆ ದಿನ ಕಾರ್ಯಕ್ರಮ ನಡೆಸಿಕೊಟ್ಟವರು ಉಲ್ಲಾಸ್ ಕಶಾಲ್ಕರ್ ಅವರ ಹಿರಿಯ ಶಿಷ್ಯ ಪ್ರೊ.ಓಜಸ್ ಪ್ರತಾಪ್ ಸಿಂಗ್. ದೆಹಲಿ ಯುನಿವರ್ಸಿಟಿಯಲ್ಲಿ ಸಂಗೀತದ ಪ್ರಾಧ್ಯಾಪಕರಾದ ಅವರು ಉತ್ತಮ ಚಿಂತನಶೀಲ ಗಾಯಕರು. ಅವರು ಹಾಡಿದ ರಾಗ ರಾಮಕಲಿಯ ಸ್ವರಗಳು ಸೂರ್ಯೋದಯದ ಬಣ್ಣಗಳೊಂದಿಗೆ ಸೇರಿ ವಾತಾವರಣದಲ್ಲಿ ಹೊಸ ರಂಗನ್ನು ತಂದವು. ಘಾಟ್‌ನಿಂದ ಹೊರಬಂದಂತೆ ಎದುರಾದ ಅಂಗಡಿಯಲ್ಲಿ ಮಣ್ಣಿನ ಕುಡಿಕೆಯ ಚಹಾ ಕುಡಿದು ಹೊರಟೆವು.



ಸಮ್ಮೇಳನದಲ್ಲಿ ಅಪೂರ್ವ ಗೋಖಲೆಯವರ ಸಂಗೀತ ಲಹರಿ

ಕಾರ್ಯಕ್ರಮದ ಮೊದಲ ಗಾಯನ ನಡೆಸಿಕೊಟ್ಟವರು ನಿಶಾದ್ ಬಾಕ್ರೆ. ರಾಗ ಭೈರವ್ ಮತ್ತು ಶುಕ್ಲ ಬಿಲಾವಲ್ ಅನ್ನು ಹಾಡಿದರು. ಆ ನಂತರ ವೇದಿಕೆಯೇರಿದ ಜಯತೀರ್ಥ ಮೇವುಂಡಿಯವರು ರಾಗ ಲಲತ್ ಮತ್ತು ಬೈರಾಗಿ ಭೈರವ್ ಹಾಡಿದರು. ಮೇವುಂಡಿಯವರ ಗಾಯನದಲ್ಲಿನ ತೀವ್ರತೆ, ತಾನ್ ಗಾಯನದಲ್ಲಿನ ವೇಗ ಕೇಳುಗರನ್ನು ಬಹು ಬೇಗ ತನ್ನ ತೆಕ್ಕೆಗೆ ಕರೆದುಕೊಂಡಿತು. ನಂತರದಲ್ಲಿ ಕೃಷ್ಣ ಸಾಳುಂಕೆ ಮತ್ತು ರೋಹಿತ್ ಕವಳೆ ಅವರು ಪಖಾವಾಜ್ ವಾದನವನ್ನು ಪ್ರಸ್ತುತ ಪಡಿಸಿದರು. ಪಖವಾಜ್ ವಾದ್ಯದ ಸ್ವತಂತ್ರ ವಾದನ ಕೇಳಲು ಸಿಗುವುದು ತುಂಬಾ ಅಪರೂಪ. ಕೃಷ್ಣ ಅವರು ಬಾಯಿಯಲ್ಲಿ ಬೋಲ್ ಹೇಳುತ್ತಾ ಪಡಂತ್ ಮಾಡುವ ಕೌಶಲ ಕಂಡು ನಾನು ಬೆರಗಾಗಿರುವೆ.

ಸಂಗೀತ

ಹಿರಿಯ ಕಲಾವಿದ ವಿಶ್ವನಾಥ ಕಾನ್ಹಾರೆ ಅವರ ಹಾರ್ಮೋನಿಯಂ ಸೋಲೋ ಮನಸೂರೆಗೊಂಡಿತು. ತಮ್ಮ ವಾದ್ಯದಲ್ಲಿ ಅವರು ಹೊರತಂದ ಮಧುವಂತಿ ರಾಗದ ಸೂಕ್ಷ್ಮಾತಿಸೂಕ್ಷ್ಮ ಚಲನೆಗಳಿಗೆ ಕೇಳುಗರಲ್ಲಿ ‘ವಾಹ್, ಕ್ಯಾ ಬಾತ್’ ಎಂಬ ಉದ್ಗಾರಗಳೊಂದಿಗೆ ಹೊರಬರುತ್ತಿದ್ದವು.

ಮೊದಲ ದಿನದ ಕೊನೆಯ ಕಾರ್ಯಕ್ರಮ ಉಲ್ಲಾಸ್ ಕಶಾಲ್ಕರ್ ಅವರ ಗಾಯನ. ಬಹು ನಿರೀಕ್ಷೆಯಿಂದ ಕಾದು ಕುಳಿತಿದ್ದ ಈ ಗಾಯನ ಎಂದೂ ನಿರಾಸೆಗೊಳಿಸುವಂಥದ್ದೇ ಅಲ್ಲ. ಕಲಿಯುವ ವಿದ್ಯಾರ್ಥಿಗಳಿಗೆ ವಿದ್ಯೆಯ ಧಾರೆಯೇ ಇವರ ಗಾಯನದಲ್ಲಿರುತ್ತದೆ. ಇವರು ಹಾಡಿದ ರಾಗ ಜೈಜೈವಂತಿ ಮತ್ತು ಪರಜ್‌ಗಳು ಯಾವತ್ತೂ ನೆನಪಲ್ಲುಳಿಯುವಂಥವು.

ಎರಡನೆಯ ದಿನ ನಂದಿನಿ ಭಿಡ್‌ಕರ್ ಅವರ ಗಾಯನದಲ್ಲಿ ಬಹಾದ್ದೂರಿ ತೋಡಿ ಮತ್ತು ದೇವಗಿರಿ ಬಿಲಾವಲ್ ಸಾದರಗೊಂಡಿತ್ತು. ಆ ನಂತರ ನಡೆದದ್ದು ಅಭಿಷೇಕ್ ಲಾಹಿರಿ ಅವರ ಸರೋದ್. ಬೆಂಗಳೂರಿನವರಾದ ಆಗ್ರಾ ಘರಾಣೆಯ ಹಾಡುಗಾರ್ತಿ ಭಾರತಿ ಪ್ರತಾಪ್ ಅವರನ್ನು ಅಲ್ಲಿ ನೋಡಿದಾಗ ತುಂಬಾ ಸಂತೋಷವಾಗಿತ್ತು. ರಾಗ ಜೋನ್‌ಪುರಿ ಮತ್ತು ವೃಂದಾವನಿ ಸಾರಂಗ ರಾಗಗಳನ್ನು ತಮ್ಮ ಶೈಲಿಯ ವೈಶಿಷ್ಟ್ಯವಾದ ನೋಂತೋಂ ಆಲಾಪದೊಂದಿಗೆ ಹಾಡಿದ್ದರು.

ಮಧ್ಯಾಹ್ನ ಊಟದ ವಿರಾಮದ ಬಳಿಕ ಶ್ರುತಿ ವಿಶ್ವಕರ್ಮಾ ಅವರ ಗಾಯನದಲ್ಲಿ ಭೀಂಪಲಾಸ್ ಅನ್ನು ಕೇಳುವ ಅವಕಾಶವಾಯಿತು. ಆ ನಂತರ ರುತುಜಾ ಲಾಡ್ ಮತ್ತು ಧನಶ್ರೀ ಘೈಸಿಸ್ ಅವರ ಗಾಯನದಲ್ಲಿ ರಾಗ ಮುಲ್ತಾನಿ ಮತ್ತು ದಾದ್ರಾಗಳ ಪ್ರಸ್ತುತಿಯಾಗಿತ್ತು. ತಮ್ಮ ಗುರುಗಳು ರಚಿಸಿದ ಬಂದಿಶ್‌ಗಳನ್ನು ತಾವು ಪಡೆದ ಗಟ್ಟಿ ತರಬೇತಿಯಲ್ಲಿ ಪಳಗಿ ಸುಶ್ರಾವ್ಯವಾಗಿ ಮೂಡಿ ಬಂದ ಗಾಯನವದು.

ಸಂಗೀತ ಕಾರ್ಯಕ್ರಮಗಳು ಮುಗಿದು, ಮತ್ತೆ ಅದರ ಬಗ್ಗೆ ಚರ್ಚಿಸುತ್ತಾ, ಕಣ್ಣು ಮುಚ್ಚಿದರೂ ಮತ್ತೆ ಅಲ್ಲೇ ಸುಳಿವ ನಾದದ ಗುಂಗಿನಿಂದಾಗಿ ಪ್ರತಿದಿನ ರಾತ್ರಿ ಮಲಗುವುದು 1 ಗಂಟೆ ದಾಟಿದರೂ ಬೆಳಿಗ್ಗೆ ಮತ್ತೆ ಐದಕ್ಕೆದ್ದು ಚಳಿಯಲ್ಲಿ ಬೆಚ್ಚಗೆ ಹೊದ್ದುಕೊಂಡು ನದಿ ತಟದಲ್ಲಿ ‘ಸುಬಹ್-ಎ-ಬನಾರಸಿ’ ಕಾರ್ಯಕ್ರಮ ಕೇಳುವ ತವಕ ಮೂರು ದಿನಗಳಲ್ಲೂ ಕಡಿಮೆಯಾಗಿರಲಿಲ್ಲ. ಮರುದಿನದ ಬೆಳಗ್ಗಿನ ಗಂಗಾತೀರದ ಕಾರ್ಯಕ್ರಮದಲ್ಲಿ ಮಂಜರಿ ಅಲೆಗಾಂವಕರ್ ಹಾಡಿದ್ದರು. ರಾಗ ಅಹೀರ್‌ಭೈರವದಲ್ಲಿ ಸ್ವರಗುಂಪುಗಳನ್ನು ಹಿಂಜುತ್ತಾ ರಾಗವನ್ನು ಅವರು ಬಿಡಿಸಿಡುತ್ತಿದ್ದರೆ, ದೂರದಲ್ಲಿ ಉದಯಿಸುತ್ತಿದ್ದ ಸೂರ್ಯ ಮೇಲೇರುತ್ತಿದ್ದ.

ಸಂಗೀತದ ಕುರಿತು ತುಂಬಾ ಆಸಕ್ತಿದಾಯಕವಾದ ಮಾತುಕತೆಯೂ ಸಮ್ಮೇಳನದಲ್ಲಿ ನಡೆಯಿತು. ‘ಇಂದಿನ ಕಾಲಮಾನದಲ್ಲಿ ಸಾಂಪ್ರದಾಯಿಕ ರಾಗ ಸಂಗೀತ’ ಎಂಬ ವಿಷಯದ ಕುರಿತು ಸುರೇಶ್ ತಲವಾಲ್ಕರ್, ಓಜಸ್ ಪ್ರತಾಪ್ ಸಿಂಗ್, ಪುಂಡಲೀಕ ಭಾಗವತ್ ಮುಂತಾದ ಹಿರಿಯ ಕಲಾವಿದರು ಸಂವಾದ ನಡೆಸಿಕೊಟ್ಟರು.

ವಿರಾಮದ ನಂತರ ಬಹಳ ಅಪರೂಪದ ‘ಶಂಕರ್ ಗಿಟಾರ್’ ವಾದನ ಕಾರ್ಯಕ್ರಮವಿತ್ತು. ಇದನ್ನು ಅಭಿವೃದ್ಧಿ ಪಡಿಸಿದವರು ಅಪರೂಪದ ಕಲಾವಿದೆ ಕಮಲಾ ಶಂಕರ್ ಅವರು. ಇವರ ವಾದನದಲ್ಲಿ ರಾಗ ಮಧುವಂತಿ ತುಂಬಾ ಸುಶ್ರಾವ್ಯವಾಗಿ ಮೂಡಿಬಂತು. ರಾಮದಾಸ್ ಪಳ್ಸುಳೆ ಅವರ ತಬಲಾ ಸೋಲೋ ಬಳಿಕ ಅಪೂರ್ವ ಗೋಖಲೆ ಅವರ ಗಾಯನ ನಡೆಯಿತು. ರಾಗ ಮಾರವಾ ಮತ್ತು ಶಾಮ್ ಕಲ್ಯಾಣ್‌ಗಳನ್ನು ತಮ್ಮ ಎಂದಿನ ಶಿಸ್ತುಬದ್ಧವಾದ ಶೈಲಿಯಲ್ಲಿ ಹಾಡಿದ ಅಪೂರ್ವ ಅವರ ಹಿಂದೆ ಕುಳಿತು ತಂಬೂರ ನುಡಿಸುವ ಅವಕಾಶ ನನಗಾಯಿತು.

ಮೂರು ದಿನಗಳ ಈ ಕಾರ್ಯಕ್ರಮದ ಕೊನೆಯ ಕಾರ್ಯಕ್ರಮಗಳಾಗಿ ನಡೆದದ್ದು ಪುಶ್ಕರ್ ಭಾಗವತ್ ಅವರ ವಯೋಲಿನ್ ವಾದನ ಮತ್ತು ಡಾ.ಅಶ್ವಿನಿ ಭಿಡೆ ಅವರ ಗಾಯನ. ರಾತ್ರಿ 11 ಗಂಟೆಗೆ ಹಿಂದಿರುಗುವ ಟ್ರೈನ್ ಹತ್ತಬೇಕಿದ್ದ ನಾನು ವಯೋಲಿನ್ ಕೇಳಿಕೊಂಡು ಆಟೊ ಹಿಡಿಯಲು ಪರದಾಡಿಕೊಂಡು ಹೇಗೋ ಸ್ಟೇಷನ್ ತಲುಪಿದರೆ, ಫೋನ್‌ನಲ್ಲಿ ಅಶ್ವಿನಿ ಭಿಡೆಯವರ ಗಾಯನದಲ್ಲಿ ರಾಗ ಸಾವನಿಯ 10-10 ನಿಮಿಷಗಳ ರೆಕಾರ್ಡಿಂಗ್ ಅಪೂರ್ವ ಮೇಡಂ ಫೋನ್‌ನಿಂದ ಬಂದು ತಲುಪುತ್ತಿತ್ತು. ಇಯರ್ ಫೋನ್ ಕಿವಿಗೇರಿಸಿದ್ದೆ.

ಗಾಯನ-ವಾದನದಲ್ಲಿ ಒಳ್ಳೊಳ್ಳೆಯ ಜಾಗ ಬಂದ ಕೂಡಲೇ ಅದನ್ನು ಗುರುತಿಸಿ-ಅನುಭವಿಸಿ-ಪ್ರಶಂಸಿಸುವ ಶ್ರೋತೃಗಳ ದಂಡು ಅಲ್ಲಿತ್ತು. ವೇದಿಕೆಯ ಮುಂಭಾಗದಲ್ಲಿ ಹಾಸಿದ ಜಮಖಾನೆಗಳು ತುಂಬುವಷ್ಟು ಸಂಖ್ಯೆಯ ಯುವ ಕಲಾವಿದರು ಸಂಗೀತ ಕೇಳಲು ನೆರೆದಿದ್ದರು. ಹಾಡಲು ಬಂದಿದ್ದ ಯುವ ಗಾಯಕ/ಗಾಯಕಿಯರು ತಮ್ಮ ಹಿಂದಿನ ಪೀಳಿಗೆಯ ಗುರುಜನರಷ್ಟೇ ತಾವೂ ಬದ್ಧತೆಯುಳ್ಳವರಾಗಿದ್ದರು. ಪರಂಪರೆಯ ಉತ್ತಮಾಂಶಗಳನ್ನು ಕೈಬಿಡದೆ, ಆಧುನಿಕ ಕಾಲದಲ್ಲಿ ಜೈಸಬಲ್ಲವರಾಗಿದ್ದರು. ಕಲಾವಿದರು, ವಿದ್ಯಾರ್ಥಿಗಳು, ಶ್ರೋತೃಗಳ ಮಧ್ಯೆ ಏರ್ಪಟ್ಟ ಆತ್ಮೀಯತೆಯನ್ನು ಅನುಭವಿಸುವ ಸಂತೋಷವಿತ್ತು.

ಸಂಗೀತದ ನಡುವಿನಲ್ಲಿ ಸಿಕ್ಕಿದ ಸಣ್ಣಪುಟ್ಟ ಬ್ರೇಕ್‌ಗಳಲ್ಲೇ ನಗರ ಸುತ್ತಾಡುವ ಅವಕಾಶವನ್ನು ನಾವು ಎಲ್ಲಿಯೂ ಬಿಟ್ಟುಕೊಡಲಿಲ್ಲ. ವಿಶೇಷವೆಂದರೆ ಬನಾರಸ್ ಸಿಟಿಯಲ್ಲಿ ಸಾರ್ವಜನಿಕ ಸಾರಿಗೆಯ ವ್ಯವಸ್ಥೆಯೇ ಇಲ್ಲದಿರುವುದು. ಅಲ್ಲಿ ಇಲ್ಲಿ ಎಲ್ಲ ಕಡೆಯಲ್ಲೂ ಸಿಗುವ ಎಲೆಕ್ಟ್ರಿಕ್ ಆಟೊ ಹತ್ತಿ ಗುರುಗಳ ಜೊತೆಯಲ್ಲಿ ಕಾಶಿ ವಿಶ್ವೇಶ್ವರನ ದರ್ಶನ ಮಾಡಿದೆವು, ಬನಾರಸ್ ಸೀರೆ ಅಂಗಡಿಗಳನ್ನು ತಿರುಗಿದೆವು, ಕೈ ಬೀಸಿ ಕರೆಯುತ್ತಿದ್ದ ದಾರಿ ಬದಿಯ ಲಸ್ಸಿ ಅಂಗಡಿಗಳಿಗೆ ಭೇಟಿ ಕೊಟ್ಟೆವು. ಕುಡಿಕೆಗಟ್ಟಲೆ ಟೀ ಕುಡಿಯುತ್ತಾ ಕಛೇರಿಗಳ ವಿಮರ್ಶೆ ಮಾಡಿದೆವು. ಸದಾಕಾಲ ನೆನಪಿನಲ್ಲುಳಿಯುವ ಈ ಕಾರ್ಯಕ್ರಮದಿಂದ ಪಡೆದ ಅನುಭವ ತುಂಬಾ ದೊಡ್ಡದು. ❖

ಮುನ್ನೋಟ 11-12-2022 ರಿಂದ 17-12-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ನಿಮ್ಮ ನಡವಳಿಕೆಯಿಂದ ನೀವು ಮಾಡುವ ಕೆಲಸಗಳಲ್ಲಿ ಹೆಜ್ಜೆಹೆಜ್ಜೆಗೂ ಸಮಸ್ಯೆಗಳು ಬರಬಹುದು. ಅನವಶ್ಯಕ ಚಿಂತೆಗಳಿಂದ ಆರೋಗ್ಯದಲ್ಲಿ ವ್ಯತ್ಯಾಸ ಆಗಬಹುದು. ನಿಮ್ಮ ಕೆಲವು ಯೋಜನೆಗಳು ಖರ್ಚಿಗೆ ದಾರಿಯಾದರೂ ಮುಂದೆ ಫಲವಿರುತ್ತದೆ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ವಿದ್ಯಾರ್ಥಿಗಳಿಗೆ ಅಧ್ಯಯನ ಮಾಡುವ ಉತ್ಸಾಹ ಇರುತ್ತದೆ. ಮಕ್ಕಳಿಂದ ಹಣದ ಸಮಸ್ಯೆ ಬರಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಒಡಹುಟ್ಟಿದವರಿಂದ ನಿಮಗೆ ಸಹಕಾರ ದೊರೆಯುತ್ತದೆ. ಎಲ್ಲರೆದುರಿಗೆ ಮನೋಭಿಲಾಷೆಯನ್ನು ವ್ಯಕ್ತಪಡಿಸುವುದು ಒಳ್ಳೆಯದು. ಅವಿವಾಹಿತರಿಗೆ ವಿವಾಹ ಸಂಬಂಧ ಒದಗುವ ಸಾಧ್ಯತೆ ಇದೆ. ಉದ್ಯೋಗ ಬದಲಾವಣೆ ಮಾಡುವವರು ಸಾಕಷ್ಟು ಆಲೋಚನೆ ಮಾಡುವುದು ಒಳಿತು. ನಿಮ್ಮ ಮಹತ್ವದ ಯೋಜನೆಗಳ ಜಾರಿಗೆ ಕಾದುನೋಡುವ ತಂತ್ರ ಬಳಸಿರಿ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಅಭಿವೃದ್ಧಿಯಲ್ಲಿ ಕೆಲವು ಎಡರುತೊಡರುಗಳು ಬಂದರೂ ಅಭಿವೃದ್ಧಿ ಸಾಗುತ್ತದೆ. ಸದಾಕಾಲ ನಿಮ್ಮ ಪಕ್ಕದಲ್ಲಿ ಇರುವವರು ನಿಮ್ಮನ್ನು ವಂಚಿಸಬಹುದು ಎಚ್ಚರ. ಗೃಹ ನಿರ್ಮಾಣದ ಯೋಜನೆಗೆ ಆಲೋಚನೆ ಮಾಡುವಿರಿ. ಹಿತಶತ್ರುಗಳ ಕಾಟ ಕಡಿಮೆಯಾಗುವ ಸಂದರ್ಭವಿದೆ. ಬಟ್ಟೆ ವ್ಯಾಪಾರ ಮಾಡುವವರಿಗೆ ಸ್ವಲ್ಪ ಆದಾಯ ಹೆಚ್ಚುತ್ತದೆ. ಮಕ್ಕಳಿಗಾಗಿ ಧಾರ್ಮಿಕ ಆಚರಣೆಯನ್ನು ಕೈಗೊಳ್ಳುವಿರಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಅಪರಿಚಿತರೊಡನೆ ನಿಮ್ಮ ಯಾವುದೇ ವಿಷಯಗಳನ್ನು ಹಂಚಿಕೊಳ್ಳಬೇಡಿರಿ, ಇದು ನಷ್ಟಕ್ಕೆ ಕಾರಣವಾಗಬಹುದು. ಹೊಸ ಜವಾಬ್ದಾರಿಗಳು ನಿಮ್ಮ ಹೆಗಲೇರಬಹುದು. ಸ್ಥಿರಾಸ್ತಿ ವಿಷಯದಲ್ಲಿ ಮುಂದುವರಿಯುವುದು ಬೇಡ. ಕೆಲವು ರಾಜಕೀಯ ನಾಯಕರಿಗೆ ವರಿಷ್ಠರ ಸಂಪರ್ಕ ದೊರೆಯಬಹುದು. ನಿಮ್ಮ ತಾಯಿಯ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆಯನ್ನು ಕಾಣಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಕೆಲಸಗಳಲ್ಲಿ ತಾಂತ್ರಿಕವಾಗಿ ತಪ್ಪಾಗದಂತೆ ಎಚ್ಚರವಹಿಸಿರಿ. ಸ್ವಲ್ಪ ತಿರುಗಾಟ ಹೆಚ್ಚಾಗಬಹುದು. ಸರ್ಕಾರಿ ಸವಲತ್ತುಗಳು ಈಗ ಸಿಗಲಾರಂಭಿಸುತ್ತವೆ. ವಿದ್ಯಾರ್ಥಿಗಳಿಗೆ ಉತ್ತಮ ಯಶಸ್ಸು ಇರುತ್ತದೆ. ಮೂಳೆ ತೊಂದರೆ ಅಥವಾ ಅಜೀರ್ಣ ಪ್ರಕ್ರಿಯೆ ಸಾಕಷ್ಟು ಬಾಧಿಸಬಹುದು. ಷೇರುಪೇಟೆ ವ್ಯವಹಾರಗಳು ಅಷ್ಟು ಒಳಿತಲ್ಲ. ನಿವೇಶನ ಖರೀದಿ ಮಾಡಬಹುದು. ಮಾನಸಿಕ ಒತ್ತಡ ಹೆಚ್ಚಾಗುವ ಸಾಧ್ಯತೆ ಇದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಅತ್ಯಧಿಕ ಆತ್ಮವಿಶ್ವಾಸದಿಂದ ಸಾಮರ್ಥ್ಯಕ್ಕಿಂತ ಹೆಚ್ಚಿನ ಕೆಲಸ ಮಾಡಲು ಹೋಗುವುದು ಸರಿಯಲ್ಲ. ಮಧ್ಯವರ್ತಿಗಳ ಸಹಾಯದಿಂದ ವಿವಾಹದ ವಿಷಯದಲ್ಲಿ ಮುನ್ನಡೆ ಸಾಧಿಸುವಿರಿ. ಪ್ರಾಚಾರ್ಯರು ಮತ್ತು ಉಪನ್ಯಾಸಕರಿಗೆ ಉನ್ನತ ಹುದ್ದೆಗೆ ಏರುವ ಸಾಧ್ಯತೆಗಳಿವೆ. ವ್ಯಾಪಾರ ವ್ಯವಹಾರಗಳ ವಿಷಯದಲ್ಲಿ ಸಿಕ್ಕ ಅವಕಾಶಗಳನ್ನು ಸದುಪಯೋಗ ಮಾಡಿಕೊಳ್ಳಿ. ಮಕ್ಕಳ ವಿಷಯದಲ್ಲಿ ಎಚ್ಚರಿಕೆ ಇರಲಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಬಂಧು ಮಿತ್ರರ ಸಲಹೆಗೆ ಗಮನ ಕೊಡುವುದು ಒಳಿತು. ಕೃಷಿಕರಿಗೆ ಅವರ ಬೆಳೆಯ ಮೂಲಕ ಹೆಚ್ಚಿನ ಲಾಭ ಬರುತ್ತದೆ. ಕಾರ್ಮಿಕರಿಗೆ ಹೆಚ್ಚು ಕೆಲಸ ದೊರೆತು ಹೆಚ್ಚು ಸಂಪಾದನೆಯಾಗುತ್ತದೆ. ಸರ್ಕಾರಿ ಕಚೇರಿ ಕೆಲಸಗಳಲ್ಲಿ ನಿರಾಳತೆಯನ್ನು ಕಾಣಬಹುದು. ಧನಾದಾಯವು ಸಾಮಾನ್ಯವಾಗಿರುತ್ತದೆ. ನಿಮ್ಮ ಒಣ ಪ್ರತಿಷ್ಠೆ ಮತ್ತು ದಡ್ಡತನದ ತೀರ್ಮಾನಗಳಿಂದ ನಷ್ಟ ಅನುಭವಿಸುವಿರಿ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಭ್ರಾತೃವರ್ಗದವರೂ ನಿಮ್ಮೊಡನೆ ಹೊಂದಾಣಿಕೆಗೆ ಬರುವರು. ಮಕ್ಕಳಿಗೆ ವಿದ್ಯಾಭ್ಯಾಸ ಅಥವಾ ಉದ್ಯೋಗದಲ್ಲಿ ಅನುಕೂಲವಿರಲಿದೆ. ಧನದಾಯವು ಉತ್ತಮವಾಗಿರುತ್ತದೆ. ಹಳೆಯ ಸಾಲ ಈಗ ವಾಪಸ್ ಬರುವ ಸಾಧ್ಯತೆ ಇದೆ. ವೃತ್ತಿಯಲ್ಲಿ ಕೆಲಸದ ಒತ್ತಡ ಹೆಚ್ಚಾಗಬಹುದು. ತಾಯಿಯು ನಿಮ್ಮ ಮೇಲೆ ಮುನಿಸಿಕೊಳ್ಳಬಹುದು.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಹೆಚ್ಚು ತಿರುಗಾಟದಿಂದ ಆಯಾಸವಾಗಬಹುದು. ನಿಮ್ಮ ಕೆಲವು ಸಮಸ್ಯೆಗಳು ನಿಧಾನವಾಗಿ ಕರಗುತ್ತವೆ. ಬೇಕರಿ ಪದಾರ್ಥಗಳನ್ನು ತಯಾರಿಸಿ ಮಾರುವವರಿಗೆ ಹೆಚ್ಚಿನ ಲಾಭವಿರುತ್ತದೆ. ಹಣದ ಒಳಹರಿವು ಸಾಮಾನ್ಯ ಗತಿಯಲ್ಲಿರುತ್ತದೆ. ನಿಮ್ಮ ಬಗ್ಗೆ ಮಾತನಾಡುವವರನ್ನು ಉಪೇಕ್ಷಿಸಿ ಮುನ್ನಡೆಯುವುದು ಉತ್ತಮ. ಆಪ್ತರ ಕಷ್ಟಕ್ಕೆ ಸಹಾಯ ಮಾಡುವಿರಿ. ಕೃಷಿ ಕಾರ್ಯಗಳಲ್ಲಿ ಹೆಚ್ಚಿನ ಆಸಕ್ತಿ ತೋರುವಿರಿ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಸಾಮಾಜಿಕವಾಗಿ ಬದುಕಿನಲ್ಲಿ ಹೊಸ ಉತ್ಸಾಹ, ಹುರುಪು ಮೂಡುತ್ತದೆ. ಕಾನೂನಿನ ಸಮಸ್ಯೆಗಳು ಸರಾಗವಾಗಿ ಬಗೆಹರಿದು ಮನಸ್ಸಿಗೆ ನಿರಾಳವೆನಿಸುತ್ತದೆ. ಗುತ್ತಿಗೆದಾರರು ಕೈಗೆತ್ತಿಕೊಂಡ ಕೆಲಸಗಳನ್ನು ಮಾಡಿ ಮುಗಿಸುವುದರಿಂದ ಹೊಸ ಗುತ್ತಿಗೆಗಳು ದೊರೆಯುವ ಸಾಧ್ಯತೆ ಇದೆ. ಇಂಧನ ಮಾರಾಟಗಾರರಿಗೆ ಸಾಕಷ್ಟು ಲಾಭ ದೊರೆಯುತ್ತದೆ. ತಾಯಿಯ ಹತ್ತಿರ ಧನಸಹಾಯ ಪಡೆಯುವಿರಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಅನಗತ್ಯ ಖರ್ಚುಗಳಿಗೆ ಕಡಿವಾಣ ಹಾಕುವುದರಿಂದ ಅರ್ಧ ಆರ್ಥಿಕ ಸಂಕಷ್ಟ ನೀಗುತ್ತದೆ. ಕುಟುಂಬದವರಲ್ಲಿ ಭಿನ್ನಾಭಿಪ್ರಾಯಗಳಂತಹ ಸನ್ನಿವೇಶ ಕಂಡುಬಂದು ಮನಸ್ಸಿಗೆ ನೋವಾಗುತ್ತದೆ. ಬಹುದಿನಗಳಿಂದ ಮುಂದೂಡಲ್ಪಟ್ಟಿದ್ದ ದೂರ ಪ್ರಯಾಣ ಈಗ ಸಾಕಾರವಾಗುತ್ತದೆ. ಉದ್ದಿಮೆದಾರರಿಗೆ ಸಾಲ ಸೌಲಭ್ಯ ದೊರೆಯುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಪೂರ್ವನಿಯೋಜಿತ ಕೆಲಸಗಳು ಕೆಲವರ ಸಹಕಾರದಿಂದ ಮಂದಗತಿಯಲ್ಲಿ ಆಗುತ್ತದೆ. ನಿಮ್ಮ ನಕಾರಾತ್ಮಕ ನಡವಳಿಕೆಯಿಂದ ಜನರೆದುರು ಮುಜುಗರಕ್ಕೆ ಒಳಗಾಗುವಿರಿ. ಪಾಲುದಾರಿಕೆ ವ್ಯವಹಾರಗಳಲ್ಲಿ ನಿಮ್ಮ ಪಾಲು ಕಡಿಮೆಯಾಗಬಹುದು. ಐಶಾರಾಮಿ ಖರ್ಚುಗಳ ಬಗ್ಗೆ ಜಾಗೃತೆ ವಹಿಸುವುದು ಒಳ್ಳೆಯದು. ವಿದ್ಯಾರ್ಥಿಗಳಿಗೆ ಅವರ ಅಧ್ಯಯನದಲ್ಲಿ ಪ್ರಗತಿ ಇರುತ್ತದೆ.

ಪದಬಂಧ 2767



ಮೇಲಿನಿಂದ ಕೆಳಕ್ಕೆ
1. ಅಣೆಕಟ್ಟಿನಿಂದ ನಿಂತ ನೀರಿಂದ ರೈತನ ಆಸೆ ಪೂರೈಕೆ 4
2. ಒಂಭತ್ತು ಸಮುದ್ರಗಳಿಂದ ದೊರೆತ ಲೋಹವೇ ಇದು 5
3. ಕಳೆದು ಹೋದದನ್ನು ಮೆಲುಕು ಹಾಕಿದಾಗ ನಾಲಿಗೆಗೆ ರುಚಿ 5
4. ಮನಸ್ಸನ್ನು ತುಂಬಿಕೊಂಡ ಲಕ್ಷ್ಮಿ 4
6. ರಸಾನುಭವಿ 3
8. ಹಾಡಿಗೆ ಚಲನೆ ನೀಡುವ ಪಾದ 3
9. ಪರಸ್ಪರ ಒಲಿದು ನಲಿದು ಸೇರುವಿಕೆ 5
11. ರಾಮಮಂತ್ರವನ್ನು ತನ್ನ ಹೆಸರಲ್ಲಿ ಪಡೆದ ದಾನವ ಕಾರ್ತಿಕೇಯನಿಂದ ಹತನಾದ 5
13. ಮದುವೆ ಮನೆಯಲ್ಲಿ ಪರಸ್ಪರ ಬೀಗುವ ಗಂಡು ಹೆಣ್ಣಿನ ತಾಯಿ 3
15. ತಾಯಿಯಿಂದ ಬಂದ ಕರ್ಣ ನಾಮ 3
16. ಹೊಸದಾಗಿ ಚಿಗುರಿದ್ದು 3
17. ‘ವಿಶ್ವ ಪಥದಲ್ಲಿ ಸಾಗಲಿ ಮಾನವ ಕುಲ’ ಎಂಬುದು ಕುವೆಂಪು ಆಶಯ 5
18. ನೇರವಾಗಿ ಹೇಳುವುದಕ್ಕೆ ಇಷ್ಟೊಂದು ಸುತ್ತೇಕೆ? 5
19. ಕಮಲ ಅರಳುವ ರಾಡಿ 3
21. ಸಮಾಜದಲ್ಲಿ ಬದಲಾವಣೆ ತರುವ ಹರಿಕಾರ ಅಮೃತ ಪ್ರಿಯ 4
23. ಈಶಾನ್ಯ ರಾಜ್ಯಗಳಲ್ಲಿ ಹೊಳೆಯುವ ಪೂಸಿನಂತಹ ಪಟ್ಟಣ 4

ಎಡದಿಂದ ಬಲಕ್ಕೆ
1. ನಮ್ಮ ರಾಷ್ಟ್ರಗೀತೆಯಲ್ಲಿನ ಮಂದಿಯ ಮನಸ್ಸು 4
3. ಷಡ್ಜದಿಂದ ಮಧ್ಯಮದವರೆಗೆ ಸಂಗೀತದ ಸ್ವರಗಳು 4
5. ವೇಗವಾಗಿ ಬರುವ ಅಂಬು 2
7. ಹಿಡಿದ ಕೆಲಸವನ್ನು ಪೂರೈಸಿ ಫಲವನ್ನು ಪಡೆದ ಹಿರಿಮೆ 3
8. ಇದು ಸ್ಥಿರವಾದುದಲ್ಲ, ಚಲಿಸುವಂತದ್ದು 2
9. ಪ್ರೇಮಿಗೆ ಪ್ರೀತಿ ಪಾತ್ರಳು 3
10. ದೇವರ ಪಾತ್ರೆಗೆ ಬಳಕೆಯಾಗುವ ಕೆಂಪು ಲೋಹ ವಿರಳವಾಗಿ ಹಿಂದುಮುಂದು 3
12. ದೋಹೆಗಳ ಸಂತ 3
14. ಪುರಾತನ ಪುಣ್ಯಕತೆ 3
16. ಕಡೆಯದಾಗಿ ಕೊನೆಯದು 3
18. ಬಸರಿ ಹೆಣ್ಣಿನ ಆಸೆ 3
20. ಕತ್ತಲೆಯ ಪರದೆ ಜಾರಿ ಬೆಳಕು ಮೂಡುವ ಹೊತ್ತು 3
22. ಸಮನಾಗಿ ನಿಂತು ಮಾಡುವ ಯುದ್ಧ 3
24. ಒಂದೇ ಸಮನೆ ಸುರಿವಂತದ್ದು 2
25. ಗೆಲುವನ್ನು ಸಾಧಿಸು 3
26. ರುಕ್ಮಿಣಿ, ರುದ್ರಾಣಿಯಲ್ಲಿ ಅಡಗಿರುವ ಸಾಲಗಾರ 2
27. ಇತ್ತೀಚೆಗೆ ಗಾಳಿ, ನೀರು, ಆಹಾರ ಎಲ್ಲವೂ ಬೆರಕೆ, ಶುದ್ಧವಲ್ಲದ್ದು 4
28. ಕೈಯಲ್ಲಿ ತಕ್ಕಡಿ ಹಿಡಿಯುವ ವರ್ತಕ ರಾಶಿ ಪುರುಷ 4

ಪದಬಂಧ ಉತ್ತರ -2766

ಮೇಲಿಂದ ಕೆಳಕ್ಕೆ
1. ಜಗಜ್ಜನನೀ 2.ವಸನ 3.ತಂಗಾಳಿ 4.ನಗರತರ 5.ಸರಸಂ 6.ಕವಿತೆ 7.ಗಾಯಕ 10.ಹಿತೈಷಿ 12.ನಗದು 13.ಮಹಿಮಾನ್ವಿತ 14.ಣಿರಸ 15.ಕುಸಿತ 16.ರೆಕ್ಕಿಗ 17.ಖರದೂಷಣ 20.ಲಾಯರು 22.ರಂಜನಿ

ಎಡದಿಂದ ಬಲಕ್ಕೆ
1. ಜಯದೇವ 3.ತಂತ್ರಜ್ಞಾನ 5.ಸನಕ 7.ಗಾಳಿಗೋಪುರ 8.ವಿದಾಯ 9.ನೀತಿಸಂಹಿತೆ 11.ಕನಕಾಂಬರ 13.ಮಧುಭಾಷಿಣಿ 15.ಕುದುರೆಮುಖ 18.ರಕ್ಕಸಿ 19.ಮಾಯಾವಿಲಾಸ 21.ತರಂಗ 23.ತಕರಾರು 24.ನಿಜಗುಣ

ನೂರು ವಸಂತಗಳ ವೇಸ್ಟ್ ಲ್ಯಾಂಡ್


ಟಿ.ಎಸ್. ಎಲಿಯಟ್

ಆರ್. ಲಕ್ಷ್ಮೀನಾರಾಯಣ


ಮೆಲುಕು

ಹೌದು, ಜಗತ್ತಿನ ಎಲ್ಲ ಭಾಷೆಗಳ ಸಮಕಾಲೀನ ಕಾವ್ಯದ ಮೇಲೆ ಇನ್ನಿಲ್ಲದಂತೆ ಪ್ರಭಾವ ಬೀರಿದ, ಹೊಸ ಕಾಲದ ಮಹಾಕಾವ್ಯವೆಂಬಂಥ ಮಹಾನ್ ಕವಿತೆ ಎಲಿಯಟ್‌ನ 'ವೇಸ್ಟ್ ಲ್ಯಾಂಡ್' ಪ್ರಕಟವಾಗಿ ಇದೀಗ ನೂರು ವರ್ಷ (1922 ಡಿಸೆಂಬರ್). ಅದು ಇಂಗ್ಲೆಂಡಿನ ಕಾವ್ಯಲೋಕದಲ್ಲಿ ಒಂದು ಕ್ರಾಂತಿಯನ್ನೇ ಉಂಟುಮಾಡಿದ ಕವಿತೆ. ಅಷ್ಟೇ ಅಲ್ಲ; ಆಗತಾನೆ ಆರಂಭವಾಗಿದ್ದ ಯೂರೋಪಿನ modernist ಪಂಥಕ್ಕೆ ತುಂಬು ಕಸುವು ತುಂಬಿದ ಕವಿತೆ. ಅದರಲ್ಲೂ ಕನ್ನಡದಲ್ಲಿ ನವ್ಯ ಕವಿತೆಯ ಹುಟ್ಟಿಗೆ ಪ್ರೇರಕವಾದ ಕವಿತೆಯೆಂದರೆ 'ವೇಸ್ಟ್ ಲ್ಯಾಂಡ್' ಎಂಬುದು ಸಾಹಿತ್ಯ ಜಗತ್ತಿನಲ್ಲಿ ಚಿರಪರಿಚಿತವಾಗಿರುವ ಸಂಗತಿ.

ಈ ಕವಿತೆಯ ಪ್ರಕಟಣೆ ಮೂಲಕ ಎಲಿಯಟ್ ಅಜರಾಮರವಾದ ಕೀರ್ತಿಗೆ ಭಾಜನನಾದ. ಆಧುನಿಕ ನಾಗರಿಕತೆಯ ಭ್ರಷ್ಟತೆ, ಕುರೂಪ ಮತ್ತು ಬಂಜೆತನಗಳನ್ನು ಸಂಕೀರ್ಣವಾಗಿ ಚಿತ್ರಿಸುವ ಕವಿತೆಯಾಗಿ ಇದು ಒಂದು ಮೈಲಿಗಲ್ಲೆನಿಸಿತು. ಅಷ್ಟೇ ಅಲ್ಲದೆ, ಮೊದಲನೇ ಮಹಾಯುದ್ಧದ ನಂತರ ಪಾಶ್ಚಾತ್ಯ ಜಗತ್ತಿನಲ್ಲಿ ಸಂಸ್ಕೃತಿ, ಆಧ್ಯಾತ್ಮಿಕ ಮೌಲ್ಯಗಳು ನಾಶಗೊಂಡು, ಹತಾಶೆ, ಆತಂಕ, ಭಯಗಳು ಆವರಿಸಿಕೊಂಡು, ದೈನಂದಿನ ಬದುಕು ಅರ್ಥ ಕಳೆದುಕೊಂಡಿರುವ ಚಿತ್ರಣ ನೀಡುವುದರ ಜೊತೆಜೊತೆಗೇ ಭಾರತೀಯ ಆಧ್ಯಾತ್ಮಿಕ ಮೌಲ್ಯಗಳನ್ನು ಅರ್ಥೈಸಿಕೊಂಡು ಆಚರಿಸುವುದರಲ್ಲಿಯೇ ಜಗತ್ತಿಗೆ ನೆಮ್ಮದಿ ಎಂಬುದನ್ನು ಎಲಿಯಟ್ ಇದರಲ್ಲಿ ಸಾರಿಹೇಳಿದ್ದಾನೆ.

ಕಾವ್ಯಕ್ಕೆ ನೊಬೆಲ್ ಪ್ರಶಸ್ತಿ ಗಳಿಸಿದ ಎಲಿಯಟ್ ಅಮೆರಿಕದಲ್ಲಿ ಹುಟ್ಟಿ (1888), ವಿದ್ಯಾಭ್ಯಾಸದ ನಂತರ ಇಂಗ್ಲೆಂಡಿನಲ್ಲಿ ನೆಲೆಸಿದವನು. ಕ್ರಿಶ್ಚಿಯನ್ ಧರ್ಮದಲ್ಲಿ ಗಾಢವಾದ ಶ್ರದ್ಧೆ, ನಂಬಿಕೆ ಹೊಂದಿದ್ದವನು. ಹೆಂಡತಿಯ ಅನಾರೋಗ್ಯದಿಂದಾಗಿ ಸಾಂಸಾರಿಕ ಜೀವನದ ಸಂಕಷ್ಟಗಳು ತಂದೊಡ್ಡಿದ ಚಿಂತೆಗಳು, ಮೊದಲನೇ ಮಹಾಯುದ್ಧದ ಪರಿಣಾಮವಾಗಿ ಇಂಗ್ಲೆಂಡ್ ಎದುರಿಸಬೇಕಾಗಿ ಬಂದ ಆರ್ಥಿಕ ಬಿಕ್ಕಟ್ಟು, ಆಗಿನ ಜಾಗತಿಕ ವಿದ್ಯಮಾನ, ಎಲ್ಲೆಡೆ ಕಂಡುಬಂದ ಹತಾಶೆ, ನೈರಾಶ್ಯ, ಒಂಟಿತನಗಳು ಅವನ ಕಾವ್ಯವನ್ನು ಚೆನ್ನಾಗಿಯೇ ಪ್ರಭಾವಿಸಿದುವೆಂದು ಹೇಳಲಾಗುತ್ತದೆ.

ನಾಗರಿಕತೆಯ ಅವನತಿಯನ್ನು ಚಿತ್ರಿಸುವುದನ್ನು ಉದ್ದೇಶವಾಗುಳ್ಳ 'ವೇಸ್ಟ್ ಲ್ಯಾಂಡ್' ಸೇರಿದಂತೆ ಅವನ ಇನ್ನಿತರ ಕವಿತೆಗಳಾದ Love song of alfred j. prufroc, The portrait of a lady gerontionಗಳಲ್ಲೂ ಮನುಷ್ಯ ಬದುಕಿನ ಪೊಳ್ಳುತನ, ಅರಾಜಕತೆ, ಮೌಲ್ಯರಾಹಿತ್ಯ, ಹತಾಶೆ ಮತ್ತು ಏಕಾಂಗಿತನಗಳ ಚಿತ್ರಗಳೇ ಮುನ್ನೆಲೆಯಲ್ಲಿವೆ. ಇದನ್ನೆಲ್ಲ ಚಿತ್ರಿಸಲು ಎಲಿಯಟ್ ಅಳವಡಿಸಿಕೊಂಡ ಕಾವ್ಯಮಾರ್ಗ ಅದುವರೆಗಿನ ಕಾವ್ಯಮಾರ್ಗಕ್ಕಿಂತ ವಿಭಿನ್ನವಾದದ್ದು. ಅದೆಂದರೆ ಚಿರಪರಿಚಿತ ಶಬ್ದಗಳಿಂದ ಕೂಡಿದ ಸರಳ ಭಾಷೆಯೇ ಆದರೂ ಒಂದಕ್ಕೊಂದು ಸಂಬಂಧವೇ ಇಲ್ಲದಂಥ ಸಾಲುಗಳಿಂದ, ಪ್ರತಿಮೆಗಳಿಂದ ಇಡಿಕಿರಿದ ಕಾವ್ಯದ ಹಾದಿ. ಒಂದು ರೀತಿಯಲ್ಲಿ ಮಾಂಟಾಜ್ ತಂತ್ರವನ್ನು ಹೋಲುವಂಥದು. ಇನ್ನು ಭಾಷೆಯಾದರೋ ತಾನು ಹೇಳಬೇಕೆಂದಿದ್ದನ್ನು ಹೇಳುವ ಸಲುವಾಗಿ ಛಿದ್ರೀಕರಿಸಿದಂಥ ಭಾಷೆ. ಜೊತೆಗೆ ಬೇರೊಬ್ಬ ಪ್ರಸಿದ್ಧ ಕವಿಯ ಯಾವುದೋ ಕವಿತೆಯ ಸಾಲನ್ನು ಇಲ್ಲವೆ ಪ್ರಸಿದ್ಧ ಗ್ರಂಥದ ಸಾಲನ್ನು ನಡು ನಡುವೆ ಉದ್ಧರಿಸಿ ಕೊಡುವುದು. ಇನ್ನು ಲಯವಂತೂ ಪರಿಚಿತವಾದ ಲಯಗಳಿಗಿಂತ ತೀರ ಬೇರೆಯದೇ ಆದ ಲಯ. ಈ ಕಾವ್ಯವಿಧಾನದ ಮೂಲಕ modernist ಎಂದು ಕರೆಯಲಾಗುವ ಕಾವ್ಯಮಾರ್ಗದ ಉದ್ಘಾಟನೆಯಾಯಿತು.



ದಿ ವೇಸ್ಟ್ ಲ್ಯಾಂಡ್ (ಬಂಜರು ಭೂಮಿ ಅಥವಾ ಪಾಳುಭೂಮಿ) ಎಂಬುದು 'ಬರಿಯಲ್ ಆಫ್ ದಿ ಡೆಡ್', 'ಎ ಗೇಮ್ ಆಫ್ ಚೆಸ್', 'ದಿ ಫೈರ್ ಸರ್ಮನ್', 'ಡೆತ್ ಬೈ ವಾಟರ್' ಮತ್ತು 'ವಾಟ್ ದಿ ಥಂಡರ್ ಸೇಡ್' ಎಂಬ ಐದು ಭಾಗಗಳಲ್ಲಿ ಹರಡಿಕೊಂಡು 433 ಸಾಲುಗಳನ್ನು ಒಳಗೊಂಡಿರುವ ನೀಳ್ಗವಿತೆ.

ಯುದ್ಧದಿಂದ ಉಧ್ವಸ್ತಗೊಂಡ ಯುರೋಪ್‌ನ ನಗರ ಜೀವನದಲ್ಲಿ ಎಲಿಯಟ್ ಕಣ್ಣಿಗೆ ಕಂಡದ್ದು ಸೃಜನಶೀಲತೆ, ಫಲವಂತಿಕೆಗಳು ಮಾಯವಾಗಿ ಜೀವಪೋಷಕ ಮೌಲ್ಯಗಳನ್ನು ನೀಗಿಕೊಂಡು ಹೊಸದಾಗಿ ಏನನ್ನೂ ಬಿತ್ತಿ ಬೆಳೆಯಲಾರದ ಒಂದು ರೀತಿಯ ಬಂಜೆ ಬದುಕು. ಎಲ್ಲೆಲ್ಲೂ ನಿರಾಶೆ, ಅತೃಪ್ತಿ, ಭಯವೇ ವ್ಯಾಪಿಸಿದೆ ಎನಿಸಿತು.

ಎಲಿಯಟ್ ಇದರಲ್ಲಿ ಮುಂದಿಡುವುದು ನಗರ ನಾಗರಿಕತೆಯ ಇಂಥ ಸತ್ವಹೀನವೂ ನಿರರ್ಥಕವೂ ಆದ ಅವನತಿಯ ಸ್ಥಿತಿಯನ್ನು. ಈ ಸ್ಥಿತಿಯನ್ನು ಹಲವಾರು ಮಿಥ್‌ಗಳು, ಬೈಬಲ್‌ನ ದರ್ಶನ, ಜನಪದ/ದಂತ ಕಥೆಗಳು, ಪುರಾಣಗಳು ಇವುಗಳ ಚಿತ್ರಣಗಳ ಮೂಲಕ ಪ್ರಸ್ತುತಪಡಿಸುತ್ತ ಹೋಗುತ್ತಾನೆ. ದಿ ವೇಸ್ಟ್ ಲ್ಯಾಂಡ್‌ನ ಆರಂಭವೇ ವಸಂತಾಗಮನ ಸಾರುವ ಏಪ್ರಿಲ್‌ಅನ್ನು ಕ್ರೂರಿ ತಿಂಗಳೆಂದು ಘೋಷಿಸುವ ಮೂಲಕ-

'April is the cruellest month, breeding
lilacs ant of the dead of the land, mixing
memory and desire stirring
dull roots with spring rain...'

ಇದು ಸತ್ತವರ ಭೂಮಿಯಾಗಿ, ಪುನಶ್ಚೇತನದ ಯಾವ ಚಿಹ್ನೆಯೂ ಇಲ್ಲದ ಬಂಜರು ಭೂಮಿಯಾಗಿದೆ. ಇಲ್ಲಿನ ಮರವೂ ಮೃತಿಹೊಂದಿದ, ನೆರಳೀಯದ ಮರ. ಫಲವತ್ತಾದ ಬೆಳೆಯನ್ನು ಆಶಿಸಿ ದೇವರುಗಳ ನಕಲಿ ಶವಗಳನ್ನು ನೆಲದಲ್ಲಿ ಹೂಳುತ್ತಿದ್ದ ಒಂದು ಕಾಲದ ಈಜಿಪ್ಷಿಯನ್ನರ ಆಚರಣೆಯನ್ನು ಹೇಳಿ, ಅದು ಮೊಳೆತು ಅರಳುವುದೆ? ಎಂಬ ಭೀತಿಸೂಚಕ ಮಾತಿನಿಂದ ಮುಗಿಯುತ್ತದೆ.

'ಚದುರಂಗದ ಆಟ'ವೆಂಬ ಎರಡನೇ ಭಾಗದಲ್ಲಿ ಮೇಲುವರ್ಗದ ಮತ್ತು ಕೆಳವರ್ಗದ ಹೆಂಗಸರ ಎರಡು ಚಿತ್ರಗಳಿವೆ. ಮೊದಲ ಭಾಗದಲ್ಲಿ ಡ್ರೆಸ್ಸಿಂಗ್ ರೂಮ್‌ನಲ್ಲಿ ಅಲಂಕರಿಸಿಕೊಳ್ಳುತ್ತ ಸುಗಂಧ ದ್ರವ್ಯಗಳನ್ನು ಪೂಸಿಕೊಳ್ಳುತ್ತಿರುವ ಹೆಣ್ಣಿನ ಚಿತ್ರಣವಿದೆ. ಪರಸ್ಪರ ಸಂಭಾಷಣೆಯಲ್ಲಿ ತೊಡಗಿರುವ ಗಂಡ ಹೆಂಡತಿ ತಮ್ಮ ಭಾವನೆಗಳನ್ನು ಸರಿಯಾಗಿ ಸಂವಹನ ಮಾಡುವಲ್ಲಿ ಸೋಲುತ್ತಾರೆ. ಇಲ್ಲಿಂದ ಮುಂದಕ್ಕೆ ಪಬ್ ಒಂದರಲ್ಲಿ ಲವ್ ಎಂಬುವವಳು ತನ್ನ ಕೆಲ ಗೆಳತಿಯರೊಂದಿಗೆ ಲಿಲ್ ಎಂಬ ಗೆಳತಿಯ ಬಗ್ಗೆ ಹರಟುತ್ತಿರುವ ಚಿತ್ರವಿದೆ. ಹಲವು ಗರ್ಭದಾರಣೆ ಮತ್ತು ಗರ್ಭಪಾತಗಳ ಫಲವಾದ ಅಕಾಲ ವಾರ್ಧಕ್ಯದ ಚಿತ್ರವೂ ಇದೆ. ಇದು ಯಾಂತ್ರಿಕ ದಾಂಪತ್ಯ ಕಾಮ ಮತ್ತು ಅದರ ಸೋಲುಗಳನ್ನು ಸೂಚಿಸುತ್ತಿದೆ.

ಮೂರನೇ ಭಾಗವಾದ 'ಅಗ್ನಿ ಉಪದೇಶ'ದಲ್ಲಿಯೂ (ಫೈರ್ ಸರ್ಮನ್) ವಿವಾಹೇತರ ಲೈಂಗಿಕ ಸಂಬಂಧಗಳ ಚಿತ್ರಗಳು, ನಗರ ಜೀವನದ ಕೊಳಕುಗಳು ಎದ್ದುಕಾಣುತ್ತವೆ. ಥೇಮ್ಸ್ ನದಿಯ ದಡದಲ್ಲಿ ವೇಶ್ಯೆಯರ ಕಾಮಜೀವನದ ಚಿತ್ರಗಳು. ಹಟಾತ್ ಸಂಭೋಗ, ಒಂದು ರೀತಿಯ ಭಾವಶೂನ್ಯ ಸ್ಥಿತಿ ಇದೆ. ಇದರ ಅಂತ್ಯದಲ್ಲಿ ಬುದ್ಧ ಮತ್ತು ಕ್ರೈಸ್ತ ಸಂತ ಆಗಸ್ಟೀನ್ ಬರುತ್ತಾರೆ. ದುಃಖಕ್ಕೆ ಕಾರಣವಾದ ಅರಿಷಡ್ವರ್ಗಗಳ ಬೆಂಕಿಯಲ್ಲಿ ಬೇಯುತ್ತಿರುವವರ ಬಗ್ಗೆ ಹೇಳುತ್ತ ಸಕಲ ಬಯಕೆಗಳಿಂದ ಮುಕ್ತನಾದಾಗಲೇ ಮನುಷ್ಯನ ನಿಜವಾದ ಮೋಕ್ಷ ಎಂದು ಬುದ್ಧ ಉಪದೇಶಿಸುವ ಮತ್ತು ಸಂತ ಆಗಸ್ಟೀನ್ ತನ್ನ ಯೌವನದ ಲಂಪಟತನದ ಬಗ್ಗೆ ಕನ್ಫೆಷನ್ ಮಾಡಿಕೊಳ್ಳುತ್ತ ಪರಿಶುದ್ಧನಾಗುವ ಚಿತ್ರಗಳಿವೆ. ಒಟ್ಟಾರೆ ದುಃಖದ ಅನುಭವ ಮತ್ತು ಪಶ್ಚಾತ್ತಾಪಗಳ ಮೂಲಕ ಬಿಡುಗಡೆ ಎಂಬುದರ ಸೂಚನೆ ಇದೆ.

ನಾಲ್ಕನೆಯ ಭಾಗವಾದ 'ಡೆತ್ ಬೈ ವಾಟರ್' (ನೀರಿನ ಮೂಲಕ ಮೃತ್ಯು) ಕೇವಲ ಹತ್ತು ಸಾಲುಗಳ ಭಾವಗೀತೆಯ ರೀತಿಯದು. ಇದರಲ್ಲಿ ಮೊದಲ ಭಾಗದಲ್ಲಿ ಉಕ್ತವಾದ, ಸಮುದ್ರದಲ್ಲಿ ಮುಳುಗಿ ಸತ್ತ ಫ್ಲೆಬಾಸ್ ಎಂಬ ಫೀನಿಸ್ ವ್ಯಾಪಾರಿ ಮತ್ತಿನ್ನೊಂದೆರಡು ಪಾತ್ರಗಳು ಬರುತ್ತವೆ. ಜೀವದಾಯಕವೂ ಶುದ್ಧಿಕಾರಕವೂ ಆದ ನೀರು ಅದರ ವೈಪುಲ್ಯ ಮತ್ತು ಕೊರತೆಯಿಂದ ಮೃತ್ಯುವಿಗೂ ಕಾರಣವಾಗಬಹುದಾದ ವೈರುಧ್ಯದ ಸೂಚನೆ ಇಲ್ಲಿದೆ.

ಕವಿತೆಯ ಕೊನೆಯ ಭಾಗವಾದ 'ವಾಟ್ ದಿ ಥಂಡರ್ ಸೇಡ್' (ಗುಡುಗು ಹೇಳಿದ್ದು) ಮುಕ್ತ ಛಂದಸ್ಸಿನ ಪ್ರಾಸರಹಿತವಾಗಿ ಉದ್ದಕ್ಕೆ ಸಾಗುವ ಸಾಲುಗಳಿಂದ ಕೂಡಿದ ಭಾಗ. ನೀರಿಗಾಗಿ ಹಪಹಪಿಸುತ್ತ ಯಾತ್ರೆ ಹೊರಟಿರುವ ಮನುಷ್ಯ (ಎಮ್ಮಾವುಸ್) ನೀರು ದೊರೆಯುವ ಪವಿತ್ರ ಬೆಟ್ಟಲಿನ ಸ್ಥಳ ತಲುಪುವುದು ಮತ್ತು ಯುದ್ಧಾನಂತರದ ಯೂರೋಪಿನ ಅಧೋಗತಿ ಇಲ್ಲಿಯ ಮುಖ್ಯ ಚಿತ್ರ. ಜೀವದಾಯಕ ಜಲಕ್ಕಾಗಿ ಹಪಹಪಿಸುತ್ತಿರುವಾಗ ಹಿಮಾಲಯದ ಮೇಲೆ ಮೋಡಗಳು ಮಂದೈಸಿ

ದ.....ದ.....ದ.....

ದತ್ತ..... ದಯಧ್ವಂ..... ದಾಮ್ಯತ....

ಎಂದು ಗುಡುಗಿನ ದನಿ ಕೇಳಿಸುತ್ತದೆ. ಇವು ಬೃಹದಾರಣ್ಯಕೋಪನಿಷತ್ತಿನ ಶಬ್ದಗಳು. ಪ್ರಜಾಪತಿಯ ಮಕ್ಕಳಾದ ದೇವತೆಗಳು ಮನುಷ್ಯರು ಮತ್ತು ದಾನವರು ತಮಗೆ ಹಿತೋಪದೇಶ ಕೊಡು ಎಂದು ಕೇಳಿದಾಗ ಪ್ರಜಾಪತಿ ಅವರೆಲ್ಲರಿಗೂ 'ದ' 'ದ' 'ದ' ಎಂದು ಉಪದೇಶಿಸುತ್ತಾನೆ. 'ದ'ಗೆ ದೇವತೆಗಳು 'ದಮ' ಎಂದು, ಮನುಷ್ಯರು 'ದಾನ' ಎಂದು ಮತ್ತು ದಾನವರು 'ದಯೆ' ಎಂದು ಅರ್ಥಮಾಡಿಕೊಂಡರು. ಎಲಿಯಟ್ ಪದ್ಯದಲ್ಲಿ ಅದು ದಾನ, ದಯ ಮತ್ತು ದಮ ಎಂದು ಕ್ರಮ /ವಿಪರ್ಯಯವಾಗಿದೆ. ದಮ, ದಾನ, ಮತ್ತು ದಯೆ ಇಲ್ಲದ ಕಾರಣ ಅದು ವೇಸ್ಟ್ ಲ್ಯಾಂಡ್ ಎನಿಸಿದೆ. ಅದರ ನಂತರ 'ಶಾಂತಿಃ ಶಾಂತಿಃ ಶಾಂತಿಃ' ಎಂಬ ಉಪನಿಷತ್ತಿನ ಶಾಂತಿಮಂತ್ರದೊಂದಿಗೆ ಕವಿತೆ ಕೊನೆಗೊಳ್ಳುತ್ತದೆ.


ಕನ್ನಡದಲ್ಲಿ ಐತಿಹಾಸಿಕವಾಗಿ ನವ್ಯತೆಯನ್ನು ತಂದ ಗೋಕಾಕರು 1950ರಲ್ಲಿ 'ಎಲಿಯಟ್ಟನ ವೇಸ್ಟ್ ಲ್ಯಾಂಡ್' ಅನ್ನು ಹೆಸರಿಸಿ ಅದರಂತೆಯೇ ವಾಸ್ತವಿಕ ಪ್ರತಿಮೆಗಳು ಮತ್ತಿನ್ನಿತರ ತಂತ್ರಗಳನ್ನಳವಡಿಸಿಕೊಂಡ 'ನವ್ಯಕಾವ್ಯ'ವೇ ಕನ್ನಡ ಕಾವ್ಯದ ದಾರಿಯಾಗಬೇಕು ಎಂದು ಘೋಷಿಸುತ್ತಾರೆ. ಆದರೆ ಅಡಿಗರ ಕಾವ್ಯಮಾರ್ಗದಲ್ಲಿ ಮುನ್ನಡೆದ ಕನ್ನಡದ ನವ್ಯ ಕಾವ್ಯ ಅಡಿಗರೇ ಸೂಚಿಸಿದಂತೆ ಎಲಿಯಟ್ ಆಡೆನ್ ಮುಂತಾದವರಿಂದ ಸ್ಫೂರ್ತಿ ಪಡೆದಿದೆ.

ತಮ್ಮ 'ಚಂಡೆ ಮದ್ದಳೆ'ಯ 'ಹಿಮಗಿರಿಯ ಕಂದರ' ಮತ್ತು 'ಗೊಂದಲಪುರ'ಗಳಲ್ಲಿ ಎಲಿಯಟ್ಟನ 'ವೇಸ್ಟ್ ಲ್ಯಾಂಡ್'ನಲ್ಲಿಯ ತಂತ್ರ ಮತ್ತು ವಸ್ತುವಿನ್ಯಾಸವನ್ನು ಅಡಿಗರು ಅನುಸರಿಸಿದ್ದಾರೆ. 'ಹಿಮಗಿರಿಯ ಕಂದರ'ದ ಪ್ರಾರಂಭದಲ್ಲಿನ ಬೆಂಕಿಯ ವರ್ಣನೆ ವೇಸ್ಟ್ ಲ್ಯಾಂಡ್‌ನ ಮೂರನೇ ಭಾಗದ 'ದಿ ಫೈರ್ ಸರ್ಮನ್' ಅನ್ನು, ಮತ್ತು ಅದೇ 'ಹಿಮಗಿರಿಯ ಕಂದರ'ದ ಭಗ್ನ ಸೇತುವೆ. ಮತ್ತು ಗೊಂದಲಪುರದ ಫಿಷ್ ಪ್ಲೇಟ್ ಕಿತ್ತಿರುವ ರೈಲು ಮಾರ್ಗ ಎಲಿಯಟ್‌ನ 'ವೇಸ್ಟ್ ಲ್ಯಾಂಡ್' ನ ಲಂಡನ್ ಬ್ರಿಡ್ಜ್‌ನ ಪ್ರತಿಮೆಯನ್ನು (ಲಂಡನ್ ಬ್ರಿಡ್ಜ್ ಈಸ್ ಫಾಲಿಂಗ್ ಡೌನ್, ಫಾಲಿಂಗ್ ಡೌನ್, ಫಾಲಿಂಗ್ ಡೌನ್) ನೆನಪಿಸುತ್ತವೆ. ಇದರ ಜೊತೆಗೆ ಎಲಿಯಟ್‌ನ ವಿಮರ್ಶೆಯ ಪ್ರಭಾವ ನಮ್ಮ ವಿಮರ್ಶಕರು ಮತ್ತು ಕವಿಗಳ ಮೇಲೆ ಅಗಾಧವಾಗಿ ಅಗಿದೆ. ಹೀಗೆ ಕನ್ನಡ ನವ್ಯಕಾವ್ಯ ಮತ್ತು ವಿಮರ್ಶೆಯ ಮೇಲೆ 'ವೇಸ್ಟ್ ಲ್ಯಾಂಡ್' ಮತ್ತು ಅದರ ಕವಿಯ ಅಚ್ಚಳಿಯದ ಪ್ರಭಾವವಿದೆ.

ಅಸಾಮಾನ್ಯ ಮಹಿಳೆಯರ ಅನನ್ಯ ಕಥನ

ದೇವು ಪತ್ತಾರ

ವಿಮರ್ಶೆ



ಪದಗಳಿವೆ ಎದೆಯೊಳಗೆ
ದೇವದಾಸಿಯರ ಸಾಂಸ್ಕೃತಿಕ ಪಲ್ಲಟಗಳ ಕಥನ
ಲೇ: ಎನ್. ಜಗದೀಶ್ ಕೊಪ್ಪ
ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು
ಸಂ: 080-22161900
ಪು: 352 ₹390

ಹಿರಿಯ ಪತ್ರಕರ್ತ- ಲೇಖಕ ಜಗದೀಶ್ ಕೊಪ್ಪ ಅವರ 'ಪದಗಳಿವೆ ಎದೆಯೊಳಗೆ' ಒಂದು ಅಪರೂಪದ ಸಂಶೋಧನಾ ಕೃತಿ. ಅಧ್ಯಯನಕ್ಕೆ ಆಯ್ಕೆ ಮಾಡಿದ ವಸ್ತು-ವಿಷಯ ಹಾಗೂ ಅದನ್ನು ಗ್ರಹಿಸಿರುವ ರೀತಿ ಅನನ್ಯ. ದೇವರ ಹೆಸರಿನಲ್ಲಿ 'ದಾಸಿ'ಯರಾದ ತಳಸಮುದಾಯದ ಹೆಂಗಳೆಯರು ಸಾಮಾಜಿಕ ಕ್ಷೇತ್ರವೂ ಸೇರಿದಂತೆ ಸಂಗೀತ-ನೃತ್ಯಗಳನ್ನೊಳಗೊಂಡ ಸಾಂಸ್ಕೃತಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಸಾಧಾರಣ. ಇಲ್ಲಿನ ಅಧ್ಯಯನವು ಉಪಶೀರ್ಷಿಕೆಯೇ ಸೂಚಿಸುವಂತೆ 'ಸಾಂಸ್ಕೃತಿಕ ಪಲ್ಲಟಗಳ ಕಥನ'.

ಭಾರತವೂ ಸೇರಿದಂತೆ ವಿಶ್ವದ ಹಲವು ಸಂಸ್ಕೃತಿಗಳಲ್ಲಿ ದೇವರಿಗೆ ದಾಸಿಯರನ್ನಾಗಿ ಮಾಡುವ ಪದ್ಧತಿಯು ಹುಟ್ಟಿದ ಹಾಗೂ ಬೆಳೆದು ಬಂದ ಬಗೆಯನ್ನು ಲೇಖಕರು ವಿವರಿಸುತ್ತಾರೆ. ಚಾರಿತ್ರಿಕ ಘಟ್ಟ ಹಾಗೂ ಸಾಂಸ್ಕೃತಿಕ ಪಲ್ಲಟಗಳನ್ನು ಈ ಪುಸ್ತಕದಲ್ಲಿ ದಾಖಲಿಸಿದ್ದಾರೆ.

'ದೇವರ ಮಕ್ಕಳ ನೆಲೆ ಅರಸುತ್ತಾ' ಎಂಬ ಮೊದಲ ಅಧ್ಯಾಯದಲ್ಲಿ ಕೊಪ್ಪ ಅವರು ದೇಗುಲ ಸಂಸ್ಕೃತಿ ಹಾಗೂ ಕಲಾ ಪ್ರಕಾರಗಳಾದ ನೃತ್ಯ, ಸಂಗೀತ, ನಾಟ್ಯಶಿಲ್ಪಗಳಲ್ಲಿ ಬೆರೆತುಹೋಗಿರುವ 'ಅಸಾಮಾನ್ಯ' ಮಹಿಳೆಯರನ್ನು ಮರೆತು ಕೀಳಾಗಿ ಕಾಣುವ ಏಕಮುಖದ ಚರಿತ್ರೆಯ ಚೌಕಟ್ಟಿನಲ್ಲಿ ಬಂಧಿಸಿಡಲಾಗಿದೆ ಎಂದು ವಿಷಾದಿಸುತ್ತಾರೆ. ಹಿನ್ನೆಲೆ-ಉಗಮ-ಅದರ ಸ್ವರೂಪದ ತಾತ್ವಿಕತೆಯ ಕಟ್ಟಿಕೊಡುವ ಮೂಲಕ ವಿಷಯಕ್ಕೆ ಉತ್ತಮ ಪ್ರವೇಶವನ್ನೂ ಒದಗಿಸಿದ್ದಾರೆ.

ಹದಿನೈದು ಅಧ್ಯಾಯಗಳಲ್ಲಿ ಹರಡಿಕೊಂಡಿರುವ ಈ 'ಬೃಹತ್' ಗ್ರಂಥದ ವಿಷಯ-ಮಾಹಿತಿ ಸಂಗ್ರಹಕ್ಕಾಗಿ ಲೇಖಕರು ಪಟ್ಟ ಶ್ರಮ ಪ್ರತೀ ಪುಟದಲ್ಲಿಯೂ ಎದ್ದು ಕಾಣುತ್ತದೆ. ಪ್ರತಿಯೊಂದು ಸಂಗತಿಯನ್ನೂ ಆಧಾರ ನೀಡಿಯೇ ವಿವರಿಸುತ್ತಾರೆ. ಆಧಾರರಹಿತ-ತರ್ಕರಹಿತ ವಿವರ ಯಾವುದೂ ಈ ಗ್ರಂಥದಲ್ಲಿಲ್ಲ. ಸಂಶೋಧನಾ ಕೃತಿಯಲ್ಲಿ 'ಆಧಾರ'ದ ವಿವರ ಇರಬೇಕಾದದ್ದು ಸಹಜ ಹಾಗೂ ಅಪೇಕ್ಷಣೀಯ. ಓದಿಗೆ ಕಿರಿಕಿರಿಯುಂಟು ಮಾಡುವ ಅಡಿಟಿಪ್ಪಣಿಗೆ ಬದಲಾಗಿ ಕೊಪ್ಪ ಅವರು ಈ ಪುಸ್ತಕದಲ್ಲಿ ಪಠ್ಯದ ಸಾಲುಗಳ ಮಧ್ಯದಲ್ಲಿಯೇ ಆಕರದ ವಿವರವನ್ನೂ ನೀಡುತ್ತಾ ಹೋಗುತ್ತಾರೆ. ಇದುವರೆಗೆ ನಡೆದ ಅಧ್ಯಯನ-ಹುಡುಕಾಟಗಳನ್ನು ಗಮನಿಸಿ-ಅಧ್ಯಯನ ನಡೆಸಿ ಅವುಗಳ ಆಧಾರದ ಮೇಲೆ ಕಟ್ಟಲಾದ ಸ್ವಂತ ಕೃತಿಯಿದು. ಕನ್ನಡ ಮತ್ತು ಇಂಗ್ಲಿಷ್ ಭಾಷೆಯ ಹಲವು ಮೂಲ ಆಧಾರಗಳ ಪಟ್ಟಿಯೇ ಅಧ್ಯಯನದ ಗಾಂಭೀರ್ಯವನ್ನು ಸೂಚಿಸುತ್ತದೆ. ಈ ಪುಸ್ತಕದಲ್ಲಿ ನೀಡಲಾಗಿರುವ ಚಿತ್ರಗಳು ಕೂಡ ಲೇಖಕರ ವಿಷಯದ ಬಗೆಗಿನ ಆಸಕ್ತಿ-ಕಾಳಜಿಗಳಿಗೆ ಹಿಡಿದ ಕನ್ನಡಿಯಂತಿವೆ.

ಕಲೆ-ಸಾಂಸ್ಕೃತಿಕ-ಸಾಮಾಜಿಕ ಕ್ಷೇತ್ರಕ್ಕೆ ಈ ಮಹಿಳೆಯರು ನೀಡಿರುವ ಅಗಾಧ ಕೊಡುಗೆಯನ್ನು ಬೆರಗಾಗಿ ನೋಡುವ-ದಾಖಲಿಸುವ ಕೊಪ್ಪ ಅವರು ಅಲ್ಲಿಯೇ ಕಳೆದುಹೋಗುವುದಿಲ್ಲ. ಸಂಶೋಧಕನಿಗೆ ಈ ಬಗೆಯ ಆರಾಧನಾ ಭಾವವು ಬಹುತೇಕ ಸಂದರ್ಭದಲ್ಲಿ ಅಡ್ಡಿಯಾಗುವುದೇ ಹೆಚ್ಚು. ಕೊಪ್ಪ ಅವರು ಈ 'ಮಿತಿ'ಯನ್ನು ಮೀರಿದ್ದಾರೆ. ಅವರಿಗೆ ತಾವು ಕೈಗೊಂಡ ವಸ್ತುವಿನ ಬಗ್ಗೆ ಪ್ರೀತಿ-ಗೌರವ ಇದೆ. ಹಾಗೆಯೇ ಅದು ರೂಪುಗೊಂಡ ನಂತರ ಬೆಳೆದ ಸ್ವರೂಪದ ಬಗ್ಗೆ ಕಟುವಾದ ಅಭಿಪ್ರಾಯವೂ ಇದೆ.

ಇದೊಂದು ದೇವದಾಸಿ ಸಾಂಸ್ಕೃತಿಕ ಮಹತ್ವ ಸಾರುವ ಆಕರ ಗ್ರಂಥವಾಗುವಂತೆ ಅವರು ನೋಡಿಕೊಂಡಿದ್ದಾರೆ. ಆದರೆ, ಈ ಪುಸ್ತಕ ನಮಗೆ ಪ್ರಿಯವಾಗುವುದು ಅದು ಮಾಹಿತಿಗಳ ಕಣಜ ಆಗಿರುವ ಕಾರಣಕ್ಕೆ ಮಾತ್ರವಲ್ಲದೇ, ಕಟ್ಟಿಕೊಡುವ ನೋಟಕ್ರಮಕ್ಕಾಗಿ ಹಾಗೂ ತಳೆಯುವ ನಿಲುವು-ಅಭಿಪ್ರಾಯಕ್ಕಾಗಿ. ವಿವೇಕ-ವಿವೇಚನೆಗಳು ಪುಸ್ತಕದುದ್ದಕ್ಕೂ ಕೊಪ್ಪ ಅವರ ಕೈ ಹಿಡಿದಿವೆ.

ವಿಶೇಷ ಮಹಿಳೆಯರಿಗೆ ಇತಿಹಾಸದ ಪುಟಗಳಲ್ಲಿ ಆದ ಅನ್ಯಾಯದ ಬಗ್ಗೆ ದಾಖಲಿಸುತ್ತಲೇ ಅವರ ಔದಾರ್ಯ-ಔನ್ನತ್ಯಗಳ ಬಗೆಗೂ ವಿವರಿಸಲಾಗಿದೆ. ದೇಹದೊಂದಿಗೆ ಇರುವ ಹಾಗೂ ಸಮಾಜವು ಬೆಳೆಸುವ 'ಪುರುಷತ್ವದ ಅಹಂಕಾರ'ದ ಎಳೆಯೂ ಇಲ್ಲದೆ, ಜೀವಪರ-ಜನಪರ ಆಲೋಚನಾ ಕ್ರಮವು ರೂಪಿಸಿದ ಚಿಂತನೆಯ ಕ್ರಮವು ಮುಂಚೂಣಿಗೆ ಬಂದದ್ದು ಈ ಪುಸ್ತಕದ ಮಹತ್ವದ ಅಂಶ. ಕೊಪ್ಪ ಅವರಿಗೆ ಈ ಅಧ್ಯಯನ ವಸ್ತುವು 'ವಿಷಯ' ಮಾತ್ರವಲ್ಲ. ಅದರೊಳಗೇ ಸೇರಿಕೊಂಡು- ಅರಿತು ನಡೆಸುವ ಹುಡುಕಾಟ.

'ದಿವ್ಯಸ್ತ್ರೀಯರ ದುರಂತ' ಎನ್ನುವ ಶೀರ್ಷಿಕೆಯಲ್ಲಿ ಅಗ್ರಹಾರ ಕೃಷ್ಣಮೂರ್ತಿ ಅವರು ಬರೆದ ಮುನ್ನುಡಿಯು ಪುಸ್ತಕದ ಓದಿಗೆ ಒಳ್ಳೆಯ ಪ್ರವೇಶಿಕೆಯಾಗಿದೆ. ಅಧ್ಯಯನ ರೂಪುಗೊಂಡ ಬಗೆ ಹಾಗೂ ಅದರ ಮಹತ್ವವನ್ನು ಲೇಖಕರು ಮೊದಲ ಮಾತಿನಲ್ಲಿ ವಿವರಿಸಿದ್ದಾರೆ.

ಅಗಾಧ ಅಧ್ಯಯನದ ಮೂಲಕ ಆರಿಸಿ ತಂದ ಮಾಹಿತಿ ಹಾಗೂ ವಿವರಗಳನ್ನು ನಿಭಾಯಿಸಲು ಲೇಖಕರು ಹೆಣಗಾಡಿದ್ದಾರೆ. ಇಡಿಕಿರಿದ ವಿವರಗಳಲ್ಲಿ ಯಾವುದನ್ನು ಕೈಬಿಡಲೂ ಅವರಿಗೆ ಮನಸ್ಸಿಲ್ಲ. ಆದ್ದರಿಂದ ಬರವಣಿಗೆಯ ಶೈಲಿ ಶಿಥಿಲವಾಗಿದೆ. ಹಲವೆಡೆ ಪುನರುಕ್ತಿಯೂ ಆಗುತ್ತದೆ. ಆದರೆ, ಅವು ಆಭಾಸವುಂಟು ಮಾಡುವ ಹಾಗಿಲ್ಲ ಎನ್ನುವ ಅಂಶವೂ ಗಮನಾರ್ಹ.

ಮೊದಲ ಓದು

ವಾಗರ್ಥದಲ್ಲಿ ಅಡಗಿರುವ ಸತ್ಯಗಳು



ವಾಗರ್ಥ– ಸಾಹಿತ್ಯ, ಸಾಮಾಜಿಕ ವಿಮರ್ಶಾ ಲೇಖನ ಸಂಪುಟ
ಲೇ: ಡಿ.ಎ. ಶಂಕರ್
ಪ್ರ: ಸಂವಹನ, ಮೈಸೂರು
ಸಂ: 082-2476019
ಪು: 572 ₹575

ವಿಮರ್ಶಕ, ನಾಟಕಕಾರ ಡಿ.ಎ.ಶಂಕರ್ ಅವರು ಬರೆದ ಲೇಖನಗಳು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ಪ್ರಬಂಧಗಳು ಹಾಗೂ ಮಾಡಿದ ಭಾಷಣಗಳ ಸಂಗ್ರಹ ಗುಚ್ಛವೇ ಈ ಕೃತಿ. ಹೀಗಾಗಿ ಶಂಕರ್ ಅವರ ಅರ್ಧಶತಮಾನದ ಸಾಹಿತ್ಯಿಕ ಕೃಷಿಯ ಹಿನ್ನೋಟವನ್ನಾಗಿಯೂ ಈ ಕೃತಿಯನ್ನು ನೋಡಬಹುದು.

ಕೃತಿಯ ಆರಂಭದಲ್ಲೇ ಇರುವ ಎ.ಕೆ. ರಾಮಾನುಜನ್ನರ ಕಾವ್ಯ: ಒಂದು ವಿವೇಚನೆ' ಮತ್ತು 'ಕೆ.ಎಸ್.ನ ನಡೆದ ಹಾದಿ' ಇವೆರಡೂ ಜಿ.ಎಸ್.ಶಿವರುದ್ರಪ್ಪ ಅವರು ಸಂಪಾದಿಸಿರುವ 'ಪ್ರಾಯೋಗಿಕ ವಿಮರ್ಶೆ' ಮತ್ತು 'ಚಂದನ' ಗ್ರಂಥಗಳಲ್ಲಿ ಪ್ರಕಟವಾಗಿವೆ. ಜೊತೆಗೆ 70ರ ದಶಕದಲ್ಲಿ ಪತ್ರಿಕೆಗಳಿಗೆ ಬರೆದ ಪುಸ್ತಕ ವಿಮರ್ಶೆಗಳ ಗುಚ್ಛವನ್ನೂ ಅವರಿಲ್ಲಿ ನೀಡಿದ್ದಾರೆ. 'ಪ್ರಜಾವಾಣಿ'ಯ ದೀಪಾವಳಿ ವಿಶೇಷಾಂಕದಲ್ಲಿ ಬಂದ ಲೇಖನವೂ ಇಲ್ಲಿದೆ. ಹೀಗೆ ಕೃತಿಯಲ್ಲಿನ ಹಲವು ಲೇಖನಗಳು ಈಗಾಗಲೇ ಅಚ್ಚಾಗಿರುವಂಥವು ಅಥವಾ ವಿಚಾರ ಸಂಕಿರಣಗಳಲ್ಲಿ ಭಾಷಣದ ರೂಪದಲ್ಲಿ ಕೇಳಿದಂಥವು. ಇವುಗಳನ್ನೆಲ್ಲ ಒಟ್ಟಾಗಿ ಕಲೆ ಹಾಕಿ ಪುಸ್ತಕ ರೂಪ ನೀಡಿದ್ದಾರೆ ಶಂಕರ್. ಇಲ್ಲಿರುವ ಲೇಖನಗಳು ಕೇವಲ ಬರವಣಿಗೆಯಾಗಿರದೆ ಒಳಾರ್ಥಗಳನ್ನು ಹುಡುಕುವ ಪ್ರಯತ್ನಗಳಾಗಿವೆ.

ತಮ್ಮ ಈ ಪ್ರಯತ್ನದ ಬಗ್ಗೆ ಮುನ್ನುಡಿಯಲ್ಲಿ ಮಾತನಾಡಿರುವ ಲೇಖಕರು, 'ವಿಮರ್ಶಾ ಕ್ಷೇತ್ರದಲ್ಲಿ 'ವಾಗರ್ಥ', ವಾಕ್ ಮತ್ತು ಅರ್ಥಗಳ ಸಂಬಂಧವನ್ನು ಕುರಿತು ವಿವೇಚಿಸಿರುವ ಬರವಣಿಗೆ ಈ ಸಂಪುಟದಲ್ಲಿದೆ. ಮಾತು, ಅರ್ಥಗಳ ಸಂಬಂಧ ವಿಸ್ತಾರವಾದದ್ದು, ನಿಗೂಢವಾದದ್ದು. ಅದರ ಹರಿವು, ಸೆಳೆವು, ಬೀಸುಗಳನ್ನು ತಿಳಿಯುವುದು, ನಿರ್ದೇಶಿಸುವುದು ಕಷ್ಟ. ಏಕೆಂದರೆ ಒಮ್ಮೆ ಅವನ್ನು ಕೂಡಿಸಿದರೆ ಅವು ಸ್ಫುರಿಸುವ ಅರ್ಥತರಂಗಗಳ ಪ್ರಪಂಚ ನಾವು ತಿಳಿದ, ಉದ್ದೇಶಿತ ಅರ್ಥ ಪ್ರಪಂಚವನ್ನು ದಾಟಿ ಹೋಗಿರುತ್ತವೆ' ಎಂದಿದ್ದಾರೆ.

'ಶ್ರೀ ರಾಮಾಯಣದರ್ಶನದಲ್ಲಿ ಕೆಲವು ಗ್ರಾಮೀಣ ಉಪಮೆ ಮಹೋಪಮೆಗಳು', 'ಯಶವಂತ ಚಿತ್ತಾಲರ 'ಆಟ': ಒಂದು ಅಧ್ಯಯನ', 'ಶೂನ್ಯ ಸಂಪಾದನೆಯಲ್ಲಿನ ಎರಡು ಪ್ರಸಂಗಗಳು', 'ತೆರೆದ ಮನದ ಚದುರಂಗ ಸಾಹಿತ್ಯ', 'ಭಾರತೀಯ ಶೂದ್ರ ಪುರಾಣ', 'ಏನಯ್ಯಾ ಇದೆ, ನಿಮ್ಮ ಕನ್ನಡದಲ್ಲಿ?', 'ನವೋದಯದ ವಸಂತ ವೈಭವ', 'ನಳ ಚರಿತ್ರೆ: ಒಂದು ಅನ್ವೇಷಣೆಯ ಕಥೆ' ಮೊದಲಾದ ಬರಹಗಳ ಶೀರ್ಷಿಕೆಗಳೇ ಈ ಕೃತಿಯ ವೈವಿಧ್ಯವನ್ನು ಸಾರುತ್ತವೆ.

80:20

8ನೇ ಪುಟದಿಂದ...

ಉಳಿದ ಶೇಕಡ 20ರಷ್ಟು ಮಾರಾಟ ಇನ್ನಿತರ ದೇಶಗಳಲ್ಲಿ ಆಗುತ್ತದೆ. ಅಮೆರಿಕದಲ್ಲಿ ಇಂದಿಗೂ ಅತಿ ಹೆಚ್ಚು ಮಾರಾಟವಾಗುವ ಕಾರು ಫೋರ್ಡ್ ಅಲ್ಲ. ಜಪಾನಿನ ಟೊಯೊಟಾ ಮತ್ತು ಹೊಂಡಾ ಕಾರುಗಳು. ಅಮೆರಿಕದ ಜನ ಬಯಸುವುದು ಜಪಾನ್ ಕಾರುಗಳನ್ನು. ಎಲೆಕ್ಟ್ರಾನಿಕ್ಸ್ ರಂಗದಲ್ಲಿ ಇತ್ತೀಚೆಗೆ ಜಪಾನ್ ಕಂಪನಿಗಳಿಗಿಂತ ದಕ್ಷಿಣ ಕೊರಿಯಾದ ಸ್ಯಾಮ್ಸಂಗ್, ಎಲ್‌ಜಿ ಮತ್ತು ಹ್ಯುಂಡೈ ಕಂಪನಿಗಳು ಮುಂಚೂಣಿಯಲ್ಲಿವೆ. ವಿಶ್ವದ ಶೇಕಡ 80ರಷ್ಟು ಎಲೆಕ್ಟ್ರಾನಿಕ್ ಮಾರುಕಟ್ಟೆಯನ್ನು ಇವುಗಳು ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಂಡಿವೆ. ತಮ್ಮ ಇಡೀ ವ್ಯವಹಾರವನ್ನು ಈ ಬಲಶಾಲಿ ರಾಷ್ಟ್ರಗಳ ಮೇಲೆಯೇ ಅವುಗಳು ಕೇಂದ್ರೀಕರಿಸಿವೆ. ಏಕೆಂದರೆ, ವಹಿವಾಟಿನ ಸಿಂಹಪಾಲು (Lion's share) ಅಲ್ಲಿಂದಲೇ ಬರುತ್ತದೆ. ಇನ್ನು ಸಾಫ್ಟ್‌ವೇರ್ ಜಗತ್ತಿಗೆ ಬಂದರೆ ಜಗತ್ತಿನ ಶೇ 80ರಷ್ಟು ಅವಶ್ಯಕತೆಯನ್ನು ನಮ್ಮ ಭಾರತ ಪೂರೈಸುತ್ತದೆ!

ದುರದೃಷ್ಟವಶಾತ್ ಬಹು ಜನರಿಗೆ ಅಂದರೆ ಮಾರ್ಕೆಟಿಂಗ್ ಜಗತ್ತಿನಲ್ಲಿ ದಿನ ನಿತ್ಯ ವ್ಯವಹರಿಸುವರಿಗೂ ಇದು ಇಟಲಿಯ ವಿಲ್‌ಫ್ರೆಡ್ ಎಂಬ ಅರ್ಥಶಾಸ್ತ್ರಜ್ಞ ನೀಡಿದ ಸೂತ್ರ ಎಂದು ತಿಳಿಯದು! ಎಲ್ಲರೂ 80:20ರ ಸಮೀಕರಣ ಎಂದು ಹೇಳುತ್ತಾರೆ, ಅಷ್ಟೇ.


ಈಗ ನಾವು ಈ 80:20ರ ಸಮೀಕರಣ ನಮ್ಮ ಪ್ರಕೃತಿಯಲ್ಲಿ ಹೇಗೆ ಅಡಕವಾಗಿದೆ ಎಂಬುದನ್ನು ತಿಳಿಯೋಣ. ಪ್ರಕೃತಿಯ ರಚನೆಯನ್ನೇ ನೋಡಿ. ನಮ್ಮ ಭೂಮಿಯ ಮೇಲೆ ಸುಮಾರು ಶೇ 80ರಷ್ಟು ಭಾಗ ನೀರು ಇದೆ. ಮತ್ತೆ ಉಳಿದ ಭಾಗ ಭೂಮಿಯಿದೆ. ನಮ್ಮ ಶರೀರದ ರಚನೆಯೂ ಇದೇ ಸೂತ್ರವನ್ನು ಆಧರಿಸಿದೆ. ಮುಕ್ಕಾಲು ಭಾಗ ಅಸ್ಥಿ, ಮಜ್ಜೆ, ಮಾಂಸ. ಕಾಲು ಭಾಗ ನೀರಿನ ಪ್ರಮಾಣವಿದೆ. ಮಾನವ ಶರೀರದ ಶೇಕಡ 80ರಷ್ಟು ರೋಗಗಳು ಶೇಕಡ 20ರಷ್ಟು ನೀರಿನ ಕಾರಣದಿಂದ ಮತ್ತು ಮಾನಸಿಕ ಒತ್ತಡವನ್ನು ತಾಳಲಾಗದೆ ಬರುತ್ತವೆ. ಆರೋಗ್ಯವಂತ ಮನುಷ್ಯನಿಗೆ ದಿನಕ್ಕೆ ಆರು ತಾಸು ನಿದ್ದೆ ಬೇಕು. ಅಂದರೆ 24 ತಾಸುಗಳ ಕಾಲು ಭಾಗ. ಕನ್ನಡದಲ್ಲಿ ಒಂದು ಗಾದೆಯಿದೆ. 'ಓದು ಒಕ್ಕಾಲು ಬರವಣಿಗೆ ಮುಕ್ಕಾಲು' ಎಂದು. ಅರ್ಥ ಇಷ್ಟೇ: ಒಂದು ಸಾರಿ ಓದಿದರೆ ಸಾಲದು, ಮೂರು ಬಾರಿ ಬರೆದು ಅಭ್ಯಾಸ ಮಾಡಬೇಕು. ಅಂದರಷ್ಟೇ ವಿಷಯ ಸರಿಯಾಗಿ ಮನನವಾಗುತ್ತದೆ.

ಅಂತೂ ಈ 80:20ರ ಸೂತ್ರವನ್ನು ಜಗತ್ತಿಗೆ ನೀಡಿದ ಇಟಲಿಯ ಅರ್ಥಜ್ಞ ವಿಲ್‌ಫ್ರೆಡ್ ಅವರಿಗೆ ನಾವೆಲ್ಲ ಕೃತಜ್ಞತೆ ಸಲ್ಲಿಸಬೇಕು. ಈ ಸೂತ್ರವನ್ನು ಅನ್ವಯಿಸಿ ಆರ್ಥಿಕ ಅಭಿವೃದ್ಧಿಗೆ ಹೊಸ ಹೊಸ ದಾರಿಗಳನ್ನೂ ಕಂಡುಕೊಳ್ಳಬೇಕು.

ಅಭಿಮಾನದಿಂದ ಬಿಡಿಸಿದ ವ್ಯಕ್ತಿಚಿತ್ರ

ಚಿದಾನಂದ ಸಾಲಿ

ಒಳನೋಟ



ಕರ್ನಾಟಕದ ಯುಗಪುರುಷ ಪಂ.ತಾರಾನಾಥರು
ಲೇ: ಲಕ್ಷ್ಮೀದೇವಿ ಶಾಸ್ತ್ರಿ
ಪ್ರ: ವಿಶ್ವ ಪ್ರಕಾಶನ
ಸಂ: 8197195027
ಪು: 370 ₹350

ಕರ್ನಾಟಕದಲ್ಲಿ ಇದ್ದುಕೊಂಡು ದೇಶ-ಭಾಷೆಗಳ ಗಡಿ ದಾಟಿ ತಮ್ಮ ಎತ್ತರ-ಬಿತ್ತರಗಳನ್ನು ಹರಹಿ, ಚುಂಬಕದಂತೆ ಬಾಳಿ ಬೆಳಗಿದ ಪಂ. ತಾರಾನಾಥರ ಜೀವನಚರಿತ್ರೆಯ ಕೃತಿಯಿದು. ಈ ಕೃತಿಯು ಒಟ್ಟು ಆರು ಅಧ್ಯಾಯಗಳಲ್ಲಿ ವಿಭಾಗೀಕರಣಗೊಂಡಿದೆ. ಮೊದಲ ಅಧ್ಯಾಯವು ತಾರಾನಾಥರ ಜೀವನ ಚರಿತ್ರೆಯಾಗಿದ್ದರೆ, ಎರಡು, ಮೂರು, ನಾಲ್ಕನೇ ಅಧ್ಯಾಯಗಳಲ್ಲಿ ಕ್ರಮವಾಗಿ ಈ ಬರೆಹಕ್ಕೆ ಆಧಾರ ಒದಗಿಸಿದ ಅಪರೂಪದ ದಾಖಲೆಗಳು, ಸಂಬಂಧಿಕರ ಸಂದರ್ಶನಗಳು, ಗುರು-ಹಿರಿಯರು ಮತ್ತು ಒಡನಾಡಿಗಳ ಅಭಿಪ್ರಾಯಗಳು ಇವೆ.

ಮಂಗಳೂರಿನಲ್ಲಿ ಹುಟ್ಟಿ, ಹೈದರಾಬಾದ್‌ನಲ್ಲಿ ಬೆಳೆದು, ಬೀದರ್‌ನಲ್ಲಿ ಉದ್ಯೋಗ ಮಾಡಿ, ರಾಯಚೂರಿನಲ್ಲಿ ಹಮ್‌ದರ್ದ್ ಶಾಲೆ ಹುಟ್ಟುಹಾಕಿ, ಆಂಧ್ರ ಗಡಿಯ ತುಂಗಭದ್ರಾದಲ್ಲಿ ಪ್ರೇಮಾಯತನ ಆಶ್ರಮ ಸ್ಥಾಪಿಸಿ, ಬೆಂಗಳೂರಿನಲ್ಲಿ ನಿಧನರಾದ ಪಂ. ತಾರಾನಾಥರು ಜೀವಿಸಿದ್ದು ಕೇವಲ 51 ವರ್ಷ! ಈ ಅರೆಶತಮಾನದಲ್ಲೂ ಅವರು ಒಂದು ಶತಮಾನಕ್ಕಾಗುವಷ್ಟು, ಒಂದು ವಿಶ್ವವಿದ್ಯಾಲಯ ಮಾಡುವಷ್ಟು ಕೆಲಸ ಮಾಡಿದ್ದಾರೆ.

ಕಾವ್ಯ, ಕಥೆ, ನಾಟಕ, ವೈಚಾರಿಕ ಪ್ರಕಾರಗಳಲ್ಲಿ ಅದೂ ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಕೃಷಿ ಮಾಡಿದ ಸಾಹಿತಿಯಾಗಿ; ಇಂಗ್ಲಿಷ್, ಹಿಂದಿ, ಮರಾಠಿಗಳಿಂದ ಕನ್ನಡಿಸಿದ ಅನುವಾದಕರಾಗಿ; ವಾಗ್ಮಿ, ನಟ, ಗಾಯಕ, ತಬಲಾಪಟು, ನಾಟ್ಯಶಾಸ್ತ್ರ ಕೋವಿದ, ಪತ್ರಕರ್ತ, ಶಿಕ್ಷಣತಜ್ಞ, ಆಯುರ್ವೇದ ವೈದ್ಯ, ಯೋಗಗುರು, ಸ್ವಾತಂತ್ರ್ಯ ಹೋರಾಟಗಾರ, ರಾಜಕೀಯ ಮುತ್ಸದ್ದಿ, ಅಧ್ಯಾತ್ಮ ಚಿಂತಕ ಹಾಗೂ ತಂತ್ರಮಾರ್ಗದ ಸಾಧಕರಾಗಿ ಅವರ ಪ್ರತಿಭಾವೃಕ್ಷದ ಬಿಳಲುಗಳು - ಯಾದಗಿರಿ, ಬಳ್ಳಾರಿ, ಬೀದರ್, ರಾಯಚೂರು, ನವಲಗುಂದ, ಧಾರವಾಡ ಊರುಗಳಲ್ಲಿ; ಆಂಧ್ರ, ಮಹಾರಾಷ್ಟ್ರ, ಕೇರಳ, ಬಂಗಾಲ ರಾಜ್ಯಗಳಲ್ಲಿ; ಇಂಗ್ಲೆಂಡ್, ಫ್ರಾನ್ಸ್, ಪೋಲೆಂಡ್, ನೆದರ್ಲೆಂಡ್ ಮುಂತಾದ ದೇಶಗಳಲ್ಲಿ ಹರಡಿಕೊಂಡಿವೆ.

ಭಾರತದಲ್ಲಿ ಗುರು ರವೀಂದ್ರರಂತೆ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಸಮಾನಪ್ರಭುತ್ವ ಹೊಂದಿ ಕೆಲಸ ಮಾಡಿದ ಮತ್ತೊಂದು ಉದಾಹರಣೆಯೆಂದರೆ ಪ್ರಾಯಶಃ ಅದು ತಾರಾನಾಥರದೇ ಇದ್ದಿರಬಹುದು. ಆಯುರ್ವೇದ, ಹಟಯೋಗ, ತಂತ್ರಸಾಧನಮಾರ್ಗಗಳನ್ನು ಉಪ ಆಸಕ್ತಿಗಳಾಗಿಯಷ್ಟೇ ಉಳಿಸಿಕೊಂಡು ಸಾಹಿತ್ಯವನ್ನೇ ಅವರು ಪ್ರಧಾನ ಆಸಕ್ತಿಯಾಗಿಸಿಕೊಂಡಿದ್ದರೆ ಅವರ ವ್ಯಕ್ತಿತ್ವವು ಇನ್ನೂ ಉಜ್ವಲವಾಗಿ ಬೆಳಗಿ, ತನ್ನ ಬೆಳಕಿನ ಕಿರಣಗಳನ್ನು ಕುಳಿತಲ್ಲಿಂದಲೇ ಎಲ್ಲೆಡೆ ಸೂಸಬಹುದಿತ್ತೇನೋ ಎಂಬ ಭಾವವನ್ನು ಒಡೆದು ಹೇಳದೆಯೂ ಓದುಗನಲ್ಲಿ ಮೂಡಿಸುವಂತೆ ಈ ಕೃತಿಯು ಮೂಡಿಬಂದಿದೆ.

ಇಷ್ಟಾಗಿಯೂ ಈ ಕೃತಿಯನ್ನು ಒಳಹೂರಣದ ದೃಷ್ಟಿಯಿಂದ ಇನ್ನೂ ಚೆನ್ನಾಗಿ ಮತ್ತು ಹೊರಆವರಣದ ದೃಷ್ಟಿಯಿಂದ ಮತ್ತಷ್ಟು ವೃತ್ತಿಪರವಾಗಿ ರೂಪಿಸುವ ಸಾಧ್ಯತೆಗಳು ಸಾಕಷ್ಟಿದ್ದವು. ಉದಾಹರಣೆಗೆ ಹೇಳುವುದಾದರೆ ಆರಂಭದಲ್ಲಿರುವ ಹಾರೈಕೆ-ಅಭಿಪ್ರಾಯಗಳು, ಸಣ್ಣಪುಟ್ಟ ಕಾಯಿಲೆಗಳ ಲಕ್ಷಣಗಳನ್ನು ವಿವರಿಸುವ ಬಾಕ್ಸ್ ಬರಹಗಳು ಮತ್ತು ಕೊನೆಯಲ್ಲಿರುವ ಹಮ್‌ದರ್ದ್ ಶಾಲೆಯ ಶತಮಾನೋತ್ಸವದ ಸ್ಮರಣ ಸಂಚಿಕೆಯಲ್ಲಿನ ಲೇಖಕಿಯ ಲೇಖನಗಳು ಓದುಗನೊಂದಿಗೆ ಯಾವ ವಿಧವಾದ ಸಂಬಂಧವನ್ನೂ ಸ್ಥಾಪಿಸಿಕೊಳ್ಳದೆ ಹೊರಗುಳಿದಿವೆ. ಐದನೆಯ ಅಧ್ಯಾಯದಿಂದ ಮುಂದಿನ ಎಲ್ಲ ಮಾಹಿತಿಯನ್ನು ಪ್ರಾಸಂಗಿಕವಾಗಿ ಅಲ್ಲಲ್ಲೇ ಸೇರಿಸಿಬಿಟ್ಟಿದ್ದರೆ ಪ್ರತ್ಯೇಕ ಅಧ್ಯಾಯ ಮಾಡುವ ಅಗತ್ಯವೇ ಬೀಳುತ್ತಿರಲಿಲ್ಲ. ಅಲ್ಲಲ್ಲಿ ಮುದ್ರಣ ದೋಷಗಳು ಮತ್ತು ಪುನರುಕ್ತಿಗಳು ಹಾಗೆಯೇ ಉಳಿದುಬಿಟ್ಟಿವೆ.

ಹಮ್‌ದರ್ದ್ ಶಾಲೆಯಲ್ಲಿ ಅಧ್ಯಾಪಕರಾಗಿ ದುಡಿದ ಏಕೈಕ ಅಭಿಮಾನಕ್ಕಾಗಿ ಲೇಖಕಿಯು ತಮ್ಮ ಎಪ್ಪತ್ತರ ಇಳಿವಯಸ್ಸಿನಲ್ಲಿ, ಮೂರು ವರ್ಷಗಳ ಕಾಲ ಮಗನನ್ನು ಬೆನ್ನಿಗೆ ಹಾಕಿಕೊಂಡು, ಹತ್ತಾರು ಊರುಗಳನ್ನು ಸುತ್ತಿ, ಅಪರೂಪದ ಮಾಹಿತಿಗಳನ್ನು ಸಂಗ್ರಹಿಸಿ, ಸ್ವಂತ ಹಣದಿಂದ ಪ್ರಕಟ ಮಾಡಿದ್ದಾರೆ. ಈ ಅಭಿಮಾನವೇ ಒಂದರ್ಥದಲ್ಲಿ ಈ ಕೃತಿಯ ಸಾಹಿತ್ಯಿಕ ಸ್ವರೂಪವನ್ನು ನಿಯಂತ್ರಿಸಿ, ಒಂದು ಚೌಕಟ್ಟಿನ ಮಿತಿಯನ್ನು ಹೇರಿದೆ. ಆದರೆ ಈ ಅಗಾಧ ಕ್ಷೇತ್ರ ಕಾರ್ಯದಿಂದ ಸಂಗ್ರಹಿಸಿದ ಅಪರೂಪದ ಆಧಾರಗಳು ಕೃತಿಯ ಈ ಮಿತಿಯನ್ನು ಗೌಣವಾಗಿಸಿವೆಯಲ್ಲದೆ ಅಧಿಕೃತತೆಯ ಮೊಹರನ್ನು ಒತ್ತುವ ಮೂಲಕ ಅದರ ಘನತೆಯನ್ನು ಹೆಚ್ಚಿಸಿವೆ.

ವಿಚಿತ್ರವಾದ ಸಾಮಾಜಿಕ ವಿಸ್ಮೃತಿಗೆ ಪಕ್ಕಾಗಿದ್ದ ಮಹೋನ್ನತ ವ್ಯಕ್ತಿತ್ವದ ಮಸುಕು ಮಸುಕಾದ ಚಿತ್ರದ ಮೇಲಿದ್ದ ದೂಳನ್ನು ಕೊಡವಿ ಒಂದು ಸ್ಫಟಿಕಸ್ಪಷ್ಟ ಜೀವನಚರಿತ್ರೆಯನ್ನು ಕಟ್ಟಿಕೊಟ್ಟಿರುವುದು ಈ ಕೃತಿಯ ಹೆಗ್ಗಳಿಕೆ. ಆದರೆ ಗುಣಪಡಿಸಲು ಸಾಧ್ಯವೇ ಇರದ ಕಾಯಿಲೆಗಳನ್ನೂ ಗುಣಪಡಿಸಿ ಎಷ್ಟೋ ಜೀವಗಳನ್ನು ಉಳಿಸಿದ ಪಂ.ತಾರಾನಾಥರು ಅರ್ಧಾಯುಷ್ಯದಲ್ಲೇ ತೀರಿಕೊಂಡದ್ದರ ಕಾರಣದ ಬಗ್ಗೆ ಮಾತ್ರ ಎಲ್ಲಿಯೂ ಸ್ಪಷ್ಟವಾದ ಮಾಹಿತಿಯಿಲ್ಲದಿರುವುದು ಈ ಕೃತಿಯ ಒಂದು ಪ್ರಮುಖ ಕೊರತೆ. ತಂತ್ರಸಾಧನೆಯಲ್ಲಾದ ಏರುಪೇರೇ ಸಾವಿಗೆ ಕಾರಣ ಎಂದು ಮುನ್ನುಡಿಕಾರರು ಊಹಿಸಿದ್ದರೆ, ಲೇಖಕರು ಒಂದೆರಡು ಕಡೆ ತೀವ್ರ ಅನಾರೋಗ್ಯವೇ ಕಾರಣವೆಂದು ಅಸ್ಪಷ್ಟ ಕಾರಣ ನೀಡಿದ್ದಾರೆ.

ಒಟ್ಟಂದದಲ್ಲಿ ಅನೂಹ್ಯ ಸಿನಿಮೀಯ ತಿರುವುಗಳ ಪಂ.ತಾರಾನಾಥರ ಜೀವನವು 'ಅವರ ವ್ಯಕ್ತಿತ್ವಕ್ಕೆ ಹೊರತಾದ ಕ್ಷೇತ್ರಗಳು ಯಾವುವಾದರೂ ಉಳಿದಿದ್ದವಾ ಎಂದು ಅನುಮಾನ ಮೂಡಿಸುವಷ್ಟು ವೈವಿಧ್ಯಮಯ ಆಯಾಮಗಳನ್ನು ಹೊಂದಿದೆ' ಎಂಬುದನ್ನು ಈ ಕೃತಿಯು ಸಾಧಾರಪೂರ್ವಕವಾಗಿ ಸಾಬೀತುಪಡಿಸುವಲ್ಲಿ ಯಶಸ್ವಿಯಾಗಿದೆ.

ವೈದ್ಯರೊಬ್ಬರ ಅನುಭವಗಳ ಗುಚ್ಛ



ಶಹರು ಮತ್ತು ಶ್ವೇತಾದ್ರಿ
ಲೇ:ಡಾ.ಗುರುಕಿರಣ್ ಎನ್.
ಪ್ರ:ಪೃಥ್ವಿ ಪ್ರಕಾಶನ, ಮೈಸೂರು
ಸಂ:9870414165
ಪು: 132 ₹135

ವೈದ್ಯಕೀಯ ಪದವಿ ಪಡೆದವರಲ್ಲಿ ಬಹುತೇಕರು ಗ್ರಾಮೀಣ ಭಾಗದಲ್ಲಿ ಸೇವೆ ಸಲ್ಲಿಸಲು ಹಿಂಜರಿಯುತ್ತಿರುವ ಕಾಲಘಟ್ಟದಲ್ಲಿ ಬೆಂಗಳೂರಿನಲ್ಲೇ ಹುಟ್ಟಿ ಬೆಳೆದು, ಹೋಮಿಯೋಪಥಿ ಪದ್ಧತಿಯಲ್ಲಿ ಪದವಿ ಪಡೆದು ಗ್ರಾಮೀಣ ಭಾಗದಲ್ಲೇ (ಚಾಮರಾಜನಗರ) ಆರೋಗ್ಯ ಸೇವೆ ಒದಗಿಸುತ್ತಿರುವ ವೈದ್ಯರೊಬ್ಬರ ವೃತ್ತಿ ಆರಂಭದ ಅನುಭವ ಕಥನವೇ 'ಶಹರು ಮತ್ತು ಶ್ವೇತಾದ್ರಿ'. ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನಬೆಟ್ಟಕ್ಕೆ ಶ್ವೇತಾದ್ರಿ ಎಂಬ ಹೆಸರೂ ಉಂಟು. ಕೃತಿಯ ಹೆಸರೇ ಹೇಳುವಂತೆ ಇದು ನಗರ ಮತ್ತು ಕಾಡಿನಲ್ಲಿ ಪಡೆದ ಅನುಭವಗಳ ಗುಚ್ಛ.

ಡಾ.ಗುರುಕಿರಣ್ ಅವರು ವೈದ್ಯಕೀಯ ಕೋರ್ಸ್ ಮುಗಿದ ತಕ್ಷಣ ಬೆಂಗಳೂರಿನ ವಿವಿಧ ಆಸ್ಪತ್ರೆಗಳಲ್ಲಿ ಆಲೋಪಥಿ ಪದ್ಧತಿಯಲ್ಲಿ ತರಬೇತಿ ಪಡೆಯುತ್ತಿದ್ದ ಸಂದರ್ಭದಲ್ಲಿ ಪಡೆದ ಅನುಭವಗಳನ್ನು ಈ ಪುಟ್ಟ ಕೃತಿಯಲ್ಲಿ ದಾಖಲಿಸಿದ್ದಾರೆ. ಆಸ್ಪತ್ರೆಯಲ್ಲಿ ಎದುರಾದ ಹಾಸ್ಯ ಸನ್ನಿವೇಶ, ರೋಗಿಗಳ ಮಾನಸಿಕ ತುಮುಲ, ಕುಟುಂಬದವರ ಸಂಕಷ್ಟ, ಮಾನವನ ಕ್ರೌರ್ಯ, ಹಿಂಸೆ, ಅಸಹಾಯಕತೆ... ಹೀಗೆ ಅನುಭವ ವೈವಿಧ್ಯವೇ ಇಲ್ಲಿ ಮೈದಳೆದಿದೆ.


ಕೃತಿ ಹೆಚ್ಚು ಆಪ್ತ ಎನಿಸುವುದು ಬಿಳಿಗಿರಿರಂಗನಬೆಟ್ಟ, ಕಾಡು, ಪ್ರಾಣಿ, ಪಕ್ಷಿ, ಸೋಲಿಗರು ಅವರ ಆಚಾರ ವಿಚಾರ ಕುರಿತ ಬರಹಗಳಿಂದ. ಬಿಳಿಗಿರಿರಂಗನಬೆಟ್ಟದ ವಿಜಿಕೆಕೆಯಲ್ಲಿ ಕಾರ್ಯನಿರ್ವಹಿಸಿದ ಸಂದರ್ಭದ ಅನುಭವಗಳನ್ನು ಗುರುಕಿರಣ್ ಅವರು ಪುಸ್ತಕದಲ್ಲಿ ರಸವತ್ತಾಗಿ ಕಟ್ಟಿಕೊಟ್ಟಿದ್ದಾರೆ. ಹೋಮಿಯೋಪಥಿ ವೈದ್ಯರಾಗಿದ್ದರೂ ಗಿಡಮೂಲಿಕೆಗಳು, ಆಯುರ್ವೇದ ಚಿಕಿತ್ಸೆಯಲ್ಲಿ ಅವುಗಳ ಬಳಕೆ, ಸೋಲಿಗರ ನಾಟಿ ಚಿಕಿತ್ಸೆಯ ಜ್ಞಾನದ ಕುರಿತು ಪ್ರಸ್ತಾಪಿಸಿದ್ದಾರೆ. ಗಿರಿಜನರ ಜೀವನ, ಸಂಸ್ಕೃತಿ, ಅವರು ಆಚರಿಸುವ ಹಬ್ಬಗಳು, ಬಿಳಿಗಿರಿರಂಗನಬೆಟ್ಟದ ಸೌಂದರ್ಯ, ದೊಡ್ಡ ಸಂಪಿಗೆ ಸೇರಿದಂತೆ ಬಿಳಿಗಿರಿ ಕಾನನದಲ್ಲಿರುವ ಪ್ರಮುಖ ಸ್ಥಳಗಳು, ಪ್ರಾಣಿಗಳು, ಅವುಗಳಿಂದ ಎದುರಾದ ಅಪಾಯದ ಸನ್ನಿವೇಶಗಳು, ಕಂಡ ಪಕ್ಷಿಗಳ ವಿವರಗಳನ್ನೂ ಪುಸ್ತಕದಲ್ಲಿ ದಾಖಲಿಸುವ ಪ್ರಯತ್ನ ಮಾಡಿದ್ದಾರೆ.

ಕಥೆ
ಮಂಜಯ್ಯ ದೇವರಮನಿ
ಅವರ
ಜಗದಣ್ಣನ ಲೆಕ್ಕ ಪುಸ್ತಕ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಸಂತೆಬೆನ್ನೂರು ಫೈಜ್ನಟ್ರಾಜ್
ಅವರ
ನಮ್ಮ ನಡುವಿನ ನೂರು ಆಯ್ಕೆಗೆ ಸಾವಿರ ಕಣ್ಣು
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಅವರು ಇದ್ದಿದ್ದೇ ಹಾಡಿನಂತೆ...

ಎನ್.ಎಸ್.ಶ್ರೀಧರ ಮೂರ್ತಿ



ಶಿವಮೊಗ್ಗ ಸುಬ್ಬಣ್ಣ ಪ್ರತಿಷ್ಠಾನ ಇದೇ 15ರಂದು ಬೆಂಗಳೂರಿನಲ್ಲಿ ಉದ್ಘಾಟನೆಗೊಳ್ಳಲಿದೆ. ಕಂಚಿನ ಕಂಠದ ಈ ಗಾಯಕನ ನೆನಪು ಮತ್ತೆ ಮತ್ತೆ ಕಾಡುತ್ತಲೇ ಇದೆ...

'ಏನ್ ಸ್ವಾಮಿ ಹೀಗಿದ್ದೀರಿ... ಎಷ್ಟು ದಿನವಾಯಿತು ಈ ಕಡೆ ಬಂದು' ಎಂಬ ಕಂಚಿನ ಕಂಠ ದೂರವಾಣಿಯ ಮೂಲಕ ಮೊಳಗಿದರೆ ಅದು ಸುಬ್ಬಣ್ಣನವರ ಧ್ವನಿ ಎಂದೇ ಅರ್ಥ. ಒಂದು ಕಾಲದಲ್ಲಿ ಈ ದೂರವಾಣಿ ಕರೆಗಳು ನನ್ನ ಜೀವನದ ಅವಿಭಾಜ್ಯ ಅಂಗಗಳಾಗಿದ್ದವು. ಸುಬ್ಬಣ್ಣವರ ಮಾತು ಎಂದರೆ ಒಂದು ರೀತಿಯಲ್ಲಿ ಹಾಡೇ. ಅದು ಲಹರಿ ಹರಿದಂತೆ, ಮಧ್ಯೆ, ಮಧ್ಯೆ ಹಾಡುಗಳಂತೂ ತೀರಾ ಸಾಮಾನ್ಯ. ಒಂದು ಸಲವಂತೂ ಅವರು ಸರಿಸುಮಾರು ಒಂದು ಗಂಟೆಯ ಅಂತರಲ್ಲಿ ಆರು ಸಲ ಫೋನ್ ಮಾಡಿದ್ದರು. ಅವರ ಮನೆಯಿಂದ ನಮ್ಮ ಮನೆಗೆ ಬರೀ ಎರಡು ಕಿಲೋ ಮೀಟರ್ ಅಂತರ. 'ಸರ್, ಹೇಳಿದ್ದರೆ ಮನೆಗೇ ಬರುತ್ತಿದ್ದೆ' ಎಂದರೆ 'ಅಯ್ಯೋ ಅನ್ನಿಸಿದ್ದನ್ನು ಆ ಕೂಡಲೇ ಹೇಳಬೇಕು, ನೀನು ಬರೋವರೆಗೆ ಕಾಯೋಕೆ ಆಗುತ್ತೇನಯ್ಯ' ಎಂದಿದ್ದರು. ಅದು ಸುಬ್ಬಣ್ಣ.

ಸುಬ್ಬಣ್ಣನವರಿಗೆ ಪ್ರಿಯವಾದ ಎರಡು ನೆನಪುಗಳಿದ್ದವು. ಶ್ರೇಷ್ಠ ಹಿನ್ನೆಲೆ ಗಾಯನಕ್ಕಾಗಿ ರಾಷ್ಟ್ರಪ್ರಶಸ್ತಿ ಪಡೆದ ಮೊದಲ ಕನ್ನಡಿಗನಾಗಿ (1979) ಪ್ರಶಸ್ತಿಯನ್ನು ಪಡೆದ ಸಂದರ್ಭ. ಮುಂದಿನ ಸಾಲಿನಲ್ಲಿಯೇ ಕೆ.ಎ.ಅಬ್ಬಾಸ್ ಕುಳಿತಿದ್ದರು. ಸುಬ್ಬಣ್ಣನವರು ಕಾಡು ಕುದುರೆ ಹಾಡಿದ ನಂತರ ವೇದಿಕೆಯ ಬಳಿ ಬಂದ ಅಬ್ಬಾಸ್. 'Subbanna does this song signify dance of wild horse' ಎಂದು ಕೇಳಿದ್ದರು. ಕನ್ನಡ ಗೊತ್ತಿಲ್ಲದ ಅಬ್ಬಾಸ್ ಅವರಿಗೆ ಹಾಡಿನ ಅಂತರಾಳ ತಿಳಿದಿದ್ದು ಕಂಬಾರರ ಸಾಹಿತ್ಯದ ಶಕ್ತಿಯಿಂದ ಎನ್ನುವುದು ಸುಬ್ಬಣ್ಣನವರ ನಂಬಿಕೆ, ಅದು ಸುಬ್ಬಣ್ಣನವರ ಹಾಡಿನ ಶಕ್ತಿ ಕೂಡ ಹೌದು.



ನೆಚ್ಚಿನ ಕವಿ ಕುವೆಂಪು ಅವರೊಂದಿಗೆ

ಸುಬ್ಬಣ್ಣನವರು ಮೈಸೂರಿನಲ್ಲಿ ಓದುತ್ತಿದ್ದ ಕಾಲಕ್ಕೆ ಆಗಿನ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಅವರು ಬಂದಿದ್ದರು (1959). ರಾಷ್ಟ್ರಗೀತೆಯನ್ನು ಸ್ಪಷ್ಟವಾಗಿ ಹಾಡುವವರು ಬೇಕು ಎನ್ನುವುದು ನೆಹರೂ ನಿರೀಕ್ಷೆ. ಆಗ ಅಲ್ಲಿಯೇ ಓದುತ್ತಿದ್ದ ಎಚ್.ಜಿ.ಸೋಮಶೇಖರ ರಾವ್ ಸುಬ್ಬಣ್ಣನವರ ಹೆಸರನ್ನು ಸೂಚಿಸಿದರು. ಬಾಡಿಗೆ ಜುಬ್ಬಾ, ವೇಸ್ಟ್ ಕೋಟ್ ಧರಿಸಿ ಸುಬ್ಬಣ್ಣನವರು ಹಾಡುತ್ತಿದ್ದರು. ಅವರು ಕಣ್ಣುಮುಚ್ಚಿ ಹಾಡುವುದು ರೂಢಿ (ಕೊನೆಯವರೆಗೂ ಅವರು ಹಾಡುತ್ತಿದ್ದ ರೀತಿಯೇ ಹಾಗೆ). ನೆಹರೂ ಬಂದಿದ್ದು ಸುಬ್ಬಣ್ಣನವರಿಗೆ ಗೊತ್ತಾಗಲೇ ಇಲ್ಲ. ತಮ್ಮ ಪಾಡಿಗೆ ತಾವು ಹಾಡುವುದನ್ನು ಮುಂದುವರೆಸಿದ್ದರು. ವ್ಯವಸ್ಥಾಪಕರು ಸೂಚಿಸಿದ್ದು ಸುಬ್ಬಣ್ಣನವರಿಗೆ ಗೊತ್ತಾಗಲೇ ಇಲ್ಲ. ಹಾಡುವುದನ್ನು ಮುಂದುವರಿಸಲಿ ಎಂದು ನೆಹರೂ ಅವರೇ ಸೂಚಿಸಿದರು. ಹಾಡು ಮುಗಿದು ನೆಹರೂ ಬೆನ್ನು ತಟ್ಟಿದಾಗಲೇ ಸುಬ್ಬಣ್ಣನವರು ಬಾಹ್ಯ ಪ್ರಪಂಚಕ್ಕೆ ಬಂದಿದ್ದು!

ಸಂಗೀತ ಸುಬ್ಬಣ್ಣನವರಿಗೆ ಮನೆತನದಿಂದಲೇ ಬಂದ ಆಸ್ತಿ. ಅವರ ತಾತ ಶಾಮಣ್ಣನವರೂ ಗಾಯಕರಾಗಿದ್ದವರು. ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಪರಿಣತಿಯನ್ನು ಪಡೆದು ಅದನ್ನು ತಮ್ಮ ಮುಂದಿನ ಪೀಳಿಗೆಗೆ ದಾಟಿಸಿದವರು. ಸುಬ್ಬಣ್ಣನವರು ತಮ್ಮ ಆರಂಭಿಕ ಸಂಗೀತ ಪಾಠ ಕಲಿತಿದ್ದು ತಾತನಿಂದಲೇ. ಇನ್ನು ಸುಬ್ಬಣ್ಣನವರ ತಾಯಿಯ ತಂದೆ ಕೃಷ್ಣ ಉಡುಪರಿಗೆ ಎರಡು ಹವ್ಯಾಸಗಳಿದ್ದವು. ಒಂದು ಹುಲಿ ಶಿಕಾರಿ, ಇನ್ನೊಂದು ಮೃದಂಗ ನುಡಿಸುವುದು. ಸುಬ್ಬಣ್ಣನವರ ತಂದೆ ಗಣೇಶ ರಾವ್ ಪುಸ್ತಕ ಪ್ರೇಮಿ, ಮಿತ ಭಾಷಿ, ಫಾರೆಸ್ಟ್ ಡಿಪಾರ್ಟಮೆಂಟ್‌ನಲ್ಲಿ ಸೂಪರಿಟೆಂಡೆಂಟ್ ಆಗಿದ್ದವರು. ತಾಯಿ ರಂಗನಾಯಕಮ್ಮ ಸಂಗೀತದಲ್ಲಿ ಆಸಕ್ತಿಯುಳ್ಳವರು, ಸಜ್ಜನಿಕೆಗೆ ಹೆಸರಾದವರು. ಸುಬ್ಬಣ್ಣನವರು ಹುಟ್ಟಿದ್ದು 1938ರ ಡಿಸೆಂಬರ್ 14ರಂದು.

ಸುಬ್ಬಣ್ಣನವರ ಸಂಗೀತದ ಆಸಕ್ತಿಗೆ ಇಂಬು ನೀಡಿದ್ದು ಬಾಲ್ಯದ ವಾತಾವರಣ. ವಿದ್ಯಾ ಗಣಪತಿ ಉತ್ಸವದಲ್ಲಿ ನಡೆಯುತ್ತಿದ್ದ ಸಂಗೀತ ಕಛೇರಿಗಳು ಅವರ ಸಂಗೀತಾಸಕ್ತಿಗೆ ಮೂಲವಾದವು. ಬಿ.ಕಾಂ ಓದಲು ಮೈಸೂರಿಗೆ ಬಂದ ಸುಬ್ಬಣ್ಣನವರು ಮೊದಲು ಹಾಡುತ್ತಿದ್ದು ಹಿಂದಿ ಹಾಡುಗಳನ್ನೇ. ಮಹಾರಾಜ ಕಾಲೇಜಿನಲ್ಲಿ ಓದುತ್ತಿದ್ದ ಅಶೋಕ್ ಕುಮಾರ್ ಎನ್ನುವ ವಿದ್ಯಾರ್ಥಿಯೊಬ್ಬ ಅಪಘಾತದಲ್ಲಿ ತೀರಿಕೊಂಡಾಗ ಅವನ ನೆನಪಿಗೆ ಏರ್ಪಾಟಾಗಿದ್ದ ಸ್ಪರ್ಧೆಯಲ್ಲಿ ಭಾಗವಹಿಸಿ ಅಡಿಗರ 'ಯಾವ ಮೋಹನ ಮುರಳಿ ಕರೆಯಿತು' ಹಾಡಿ ಬೆಳ್ಳಿ ಕಪ್ ಪಡೆದುಕೊಂಡರು. ಆಗ ಮಿತ್ರರಾಗಿದ್ದ ಎನ್.ಎಸ್.ಲಕ್ಷ್ಮಿನಾರಾಯಣ ಭಟ್ ಅವರು ಭಾವಗೀತೆ ಹಾಡುವಂತೆ ಒತ್ತಾಯಿಸಿದರು. ಅದು ಸುಬ್ಬಣ್ಣನವರ ಪಾಲಿಗೆ ಮಾತ್ರವಲ್ಲ, ಕನ್ನಡದ ಪಾಲಿಗೂ ದೊಡ್ಡ ತಿರುವಾಯಿತು.

ಸುಬ್ಬಣ್ಣನವರು ವಕೀಲರಾಗಿ ಶಿವಮೊಗ್ಗದಲ್ಲಿ ನೆಲೆ ನಿಂತರು. ಮನ ಮೆಚ್ಚಿದ ಶಾಂತ ಅವರ ಕೈಹಿಡಿದು ಸಂಸಾರಿಯೂ ಆದರು. ಆಕಾಶವಾಣಿಯಲ್ಲಿ 'ಎ' ಗ್ರೇಡ್ ಕಲಾವಿದರಾಗಿ ಹಾಡುತ್ತಿದ್ದರು. ಲಕ್ಷ್ಮಿನಾರಾಯಣ ಭಟ್ಟರ ಒತ್ತಾಸೆಯ ಮೇರೆಗೆ 'ಕರಿಮಾಯಿ' ಚಿತ್ರದಲ್ಲಿ ಹಾಡಿದರು. ಆಗ ಜಿ.ಸುಬ್ರಹ್ಮಣ್ಯ ಎಂದಿದ್ದ ಅವರ ಹೆಸರು ಗುರುತಾಗದೆ ಹಾಡು ಎಸ್.ಪಿ ಖಾತೆಗೆ ಸೇರಿ ಬಿಟ್ಟಿತ್ತು. ಮುಂದೆ 'ಕಾಡು ಕುದುರೆ' ಸಿನಿಮಾವನ್ನು ಕಂಬಾರರೇ ಮಾಡುವಾಗ ಶಿವಮೊಗ್ಗ ಸುಬ್ಬಣ್ಣ ಎನ್ನುವ ಮರು ನಾಮಕರಣವಾಯಿತು. ಈ ಹಾಡಿಗೆ ಶ್ರೇಷ್ಠ ಹಿನ್ನೆಲೆ ಗಾಯಕ ರಾಷ್ಟ್ರಪ್ರಶಸ್ತಿ ಒಲಿಯಿತು.

'ರಜತ ಕಮಲ' ಬಂದರೂ ಚಿತ್ರರಂಗ ಸುಬ್ಬಣ್ಣನವರಿಗೆ ಒಲಿಯಲಿಲ್ಲ. ಬದಲಾಗಿ ಸುಗಮ ಸಂಗೀತ ಅವರಿಗೆ ಕಾಯುತ್ತಿತ್ತು. ಸಂತ ಶಿಶುನಾಳ ಶರೀಫರ ಮೊದಲ ಹತ್ತು ಗೀತೆಗಳ ಧ್ವನಿಸುರಳಿ ಬಂದಾಗ ಸುಬ್ಬಣ್ಣ, 'ಕೋಡುಗನ ಕೋಳಿ', 'ಬಿದ್ದಿಯಬ್ಬೇ','ಅಳ ಬೇಡ ತಂಗಿ' ಗೀತೆಗಳನ್ನು ಹಾಡಿದರು. ಇಲ್ಲಿಂದ ಮುಂದೆ ಭಾವಗೀತೆಗಳಲ್ಲಿ ಅವರು ಹೊಸತನವನ್ನೇ ರೂಪಿಸಿದರು. ಬೆಂಗಳೂರಿಗೆ ಬಂದರು. ಗಟ್ಟಿಯಾಗಿ ನೆಲೆಯೂರಿದರು. ಸುಬ್ಬಣ್ಣನವರದು ಕವಿ ಮನೋಧರ್ಮ. ಕವಿತೆಯ ಅಂತರ್ಯವನ್ನು ಅರಿತು ಹಾಡು ಬಲ್ಲವರು ಅವರು. ಅದಕ್ಕೆ ಕುವೆಂಪು ಒಮ್ಮೆ ಹೇಳಿದರು, 'ಎಲ್ಲರೂ ನನ್ನ ಗೀತೆಗಳನ್ನು ಹತ್ತಿಕೊಂಡು ಹೋಗುತ್ತಾರೆ. ಆದರೆ ಸುಬ್ಬಣ್ಣ ಮಾತ್ರ ಹೊತ್ತುಕೊಂಡು ಹೋಗುತ್ತಾರೆ'. ಅವರದು ಅಪರೂಪದ ಕಂಠ. ಮಂದ್ರದಿಂದ ತಾರಕದವರೆಗೆ ವಿಹರಿಸಬಲ್ಲ ಸ್ಥಾಯಿ ಧ್ವನಿ ವಿಶೇಷ.

ಶ್ರೇಷ್ಠ ಹಿನ್ನೆಲೆ ಗಾಯಕ ರಾಷ್ಟ್ರಪ್ರಶಸ್ತಿ ಪಡೆದ ಮೊದಲ ಕನ್ನಡಿಗ (1979) ಎನ್ನುವ ಹೆಗ್ಗಳಿಕೆಯ ಸುಬ್ಬಣ್ಣನವರಿಗೆ ಕರ್ನಾಟಕ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿ (1985) ನೀಡಿ ಗೌರವಿಸಿದೆ. ಸುಗಮ ಸಂಗೀತಕ್ಕಾಗಿ ನೀಡುವ ಸಂತ ಶಿಶುನಾಳ ಪ್ರಶಸ್ತಿ (1999), ಕುವೆಂಪು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ (2008) ಅವರಿಗೆ ಸಂದ ಗೌರವಗಳು.

ಹಾಡಿನಂತೆಯೇ ಬದುಕಿದ ಸುಬ್ಬಣ್ಣನವರು ಗಾನರೂಪಿಯಾಗಿ ನಮ್ಮನ್ನು ಅಗಲಿದ್ದು 2022ರ ಆಗಸ್ಟ್ 11ರಂದು. ಸುಬ್ಬಣ್ಣನವರಿಗೆ ಮೊಮ್ಮಗಳು ಹುಟ್ಟಿದ ಸಂದರ್ಭ. ನಾನು, ನನ್ನ ಹೆಂಡತಿಯ ಜೊತೆ ಅವರ ಮನೆಗೆ ಹೋಗಿದ್ದೆ. ನನ್ನ ಹೆಂಡತಿ ಅವರ ಮನೆಗೆ ಬಂದಿದ್ದು ಅದೇ ಮೊದಲು. ಆಗ ಅತಿ ಹೆಚ್ಚು ಸಂಭ್ರಮಪಟ್ಟವರು ಸುಬ್ಬಣ್ಣನವರೇ. ಪೆಟ್ಟಿಗೆ ತೆಗೆದು ತಮಗೆ ಬಂದಿದ್ದ ರಜತ ಕಮಲವನ್ನು ನನ್ನ ಹೆಂಡತಿಗೆ ತೋರಿಸಿ ಚಿಕ್ಕ ಮಗುವಿನ ಹಾಗೆ ಸಂಭ್ರಮಿಸಿದ್ದರು. ಚಿಕ್ಕ ಮಗು ಎಂದೆ ಅಲ್ಲವೆ? ಸುಬ್ಬಣ್ಣನವರು ಇದ್ದಿದ್ದೇ ಹಾಗೆ. ಅವರ ಹಾಡಿನಂತೆ ಸರಳ, ನಿರ್ಮಲ.

ಡಿಜಿಟಲ್ ಕರೆನ್ಸಿ...

8ನೇ ಪುಟದಿಂದ...

ಡಿಜಿಟಲ್ ಕರೆನ್ಸಿಯು ಕ್ರಿಪ್ಟೊಕರೆನ್ಸಿ ಅಲ್ಲ. ಇದು ಹೂಡಿಕೆಯ ಉತ್ಪನ್ನವಲ್ಲ. ಇದರಲ್ಲಿ ಹಣ ಹೂಡಿಕೆ ಮಾಡಲು ಆಗುವುದಿಲ್ಲ. ಏಕೆಂದರೆ, ಇದೇ ಹಣ. ಇದನ್ನು ಬಳಸಿ ಬೇರೆ ಹೂಡಿಕೆ ಉತ್ಪನ್ನಗಳಲ್ಲಿ ಹೂಡಿಕೆ ಮಾಡಲು ಮುಂದೆ ಅವಕಾಶ ಸಿಗಬಹುದು. ಆರ್‌ಬಿಐ ಹೇಳಿರುವಂತೆ, 'ಖಾಸಗಿ ಕ್ರಿಪ್ಟೊಕರೆನ್ಸಿಗಳಲ್ಲಿ ಇರುವ ಅಪಾಯಗಳು ಇಲ್ಲದ ಡಿಜಿಟಲ್ ಕರೆನ್ಸಿಯನ್ನು ನಾಗರಿಕರಿಗೆ ಒದಗಿಸುವುದು ಕೇಂದ್ರೀಯ ಬ್ಯಾಂಕ್‌ನ ಜವಾಬ್ದಾರಿ ಕೂಡ ಹೌದು. ಈ ಡಿಜಿಟಲ್ ಕರೆನ್ಸಿಯು ನಗದು ಹಣವನ್ನು ಡಿಜಿಟಲ್ ರೂಪದಲ್ಲಿ ಬಳಸುವ ಅನುಭವವನ್ನೇ ನೀಡುತ್ತದೆ'.

ಆರ್‌ಬಿಐ ಡಿಜಿಟಲ್ ಕರೆನ್ಸಿಯನ್ನು ಚಲಾವಣೆಗೆ ತರುವುದಾಗಿ ಹೇಳಿದಾಗಿನಿಂದ ಕುತೂಹಲಿಗರು ಕೇಳುತ್ತಿರುವ ಪ್ರಶ್ನೆ, 'ಇದಕ್ಕೂ ಯುಪಿಐಗೂ ಇರುವ ವ್ಯತ್ಯಾಸ ಏನು?' ಡಿಜಿಟಲ್ ಕರೆನ್ಸಿಯನ್ನು ಯುಪಿಐ ಜೊತೆಗೇ ಹೋಲಿಸಿ ಪ್ರಶ್ನೆ ಕೇಳುತ್ತಿರುವುದಕ್ಕೆ, ಬೇರೆ ಪಾವತಿ ವ್ಯವಸ್ಥೆಗಳ ಜೊತೆ ಅಷ್ಟಾಗಿ ಹೋಲಿಸದೆ ಇರುವುದಕ್ಕೆ ಕಾರಣ ಯುಪಿಐ ಈವರೆಗೆ ಪಡೆದಿರುವ ಜನಪ್ರಿಯತೆ. ಇವೆರಡರ ನಡುವಿನ ವ್ಯತ್ಯಾಸ ಇಷ್ಟು: ಯುಪಿಐ ವ್ಯವಸ್ಥೆಯಡಿ ಹಣವನ್ನು ಪಾವತಿಸಲು ಬ್ಯಾಂಕ್ ನೆರವು ಬೇಕೇಬೇಕು. ಪಾವತಿ ಮಾಡುವ ವ್ಯಕ್ತಿ ಇಂತಿಷ್ಟು ಹಣವನ್ನು, ಇಂತಹ ವ್ಯಕ್ತಿಯ ಖಾತೆಗೆ ವರ್ಗಾವಣೆ ಮಾಡಬೇಕು ಎಂಬ ಸೂಚನೆಯನ್ನು ತಾನು ಖಾತೆ ಹೊಂದಿರುವ ಬ್ಯಾಂಕ್‌ಗೆ ಸ್ಮಾರ್ಟ್‌ಫೋನ್ ಮೂಲಕ ನೀಡುತ್ತಾನೆ. ಸೂಚನೆ ಸ್ವೀಕರಿಸಿದ ಬ್ಯಾಂಕ್, ಆ ಮೊತ್ತವನ್ನು ಹಣ ಸ್ವೀಕರಿಸುವ ವ್ಯಕ್ತಿಯ ಬ್ಯಾಂಕ್ ಖಾತೆಗೆ ರವಾನೆ ಮಾಡುತ್ತದೆ. ಇದು ಯುಪಿಐ ವ್ಯವಸ್ಥೆ. ಆದರೆ ಡಿಜಿಟಲ್ ಕರೆನ್ಸಿ ಬಳಸುವ ವ್ಯಕ್ತಿಯು, ತಮ್ಮ ಸ್ಮಾರ್ಟ್‌ಫೋನ್‌ನಲ್ಲಿ ಇರುವ ಡಿಜಿಟಲ್ ಕರೆನ್ಸಿ ವಾಲೆಟ್‌ನಲ್ಲಿನ ಡಿಜಿಟಲ್ ಹಣವನ್ನು ಇನ್ನೊಬ್ಬ ವ್ಯಕ್ತಿಯ ಸ್ಮಾರ್ಟ್‌ಫೋನ್‌ನಲ್ಲಿ ಇರುವ ಡಿಜಿಟಲ್ ವಾಲೆಟ್‌ಗೆ ನೇರವಾಗಿ ವರ್ಗಾವಣೆ ಮಾಡುತ್ತಾನೆ. ಇಲ್ಲಿ ಒಬ್ಬನಿಂದ ಇನ್ನೊಬ್ಬನಿಗೆ ಆಗುವ ಹಣದ ವರ್ಗಾವಣೆಯಲ್ಲಿ ಬ್ಯಾಂಕ್‌ಗೆ ಯಾವ ಪಾತ್ರವೂ ಇರುವುದಿಲ್ಲ. ಆದರೆ ವಾಲೆಟ್ ಸೇವೆಯನ್ನು ಆರ್‌ಬಿಐ ಸೂಚಿಸಿರುವ ಬ್ಯಾಂಕ್‌ಗಳೇ ನೀಡಬಹುದು. ವ್ಯಕ್ತಿಯೊಬ್ಬ ತನ್ನ ಭೌತಿಕ ವಾಲೆಟ್‌ನಿಂದ ನಗದನ್ನು ತೆಗೆದು, ಇನ್ನೊಬ್ಬನಿಗೆ ನೇರವಾಗಿ ನೀಡುವಂತೆಯೇ ಇದು. ನಗದು ರೂಪದ ಹಣದ ಹರಿವು ಮೂರನೆಯ ವ್ಯಕ್ತಿಗೆ ಗೊತ್ತಾಗಲು ಅವಕಾಶವಿಲ್ಲ. ಅದೇ ರೀತಿಯಲ್ಲಿ ಡಿಜಿಟಲ್ ಕರೆನ್ಸಿಯ ಹರಿವು ಕೂಡ ಮೂರನೆಯ ವ್ಯಕ್ತಿಗೆ ಗೊತ್ತಾಗುವುದಿಲ್ಲ. ಆದರೆ, ಯುಪಿಐ ವ್ಯವಸ್ಥೆಯಲ್ಲಿ ಒಂದೊಂದು ರೂಪಾಯಿ ವಹಿವಾಟು ಕೂಡ ಬ್ಯಾಂಕ್ ದಾಖಲೆಗಳಲ್ಲಿ ನಮೂದಾಗುತ್ತದೆ.

ಯುಪಿಐ ಬಳಕೆದಾರ ತನ್ನ ಹಣವನ್ನು ಬ್ಯಾಂಕ್‌ನಲ್ಲಿ ಇರಿಸಿರುತ್ತಾನೆ. ಹಾಗಾಗಿ ಆತನಿಗೆ ಬಡ್ಡಿ ಸಿಗುತ್ತಿರುತ್ತದೆ. ಆದರೆ ಡಿಜಿಟಲ್ ಕರೆನ್ಸಿಯನ್ನು ಬಳಸುವ ಹಣವನ್ನು ವಾಲೆಟ್‌ನಲ್ಲಿ ಇರಿಸಬೇಕಾಗುತ್ತದೆ. ಅದಕ್ಕೆ ಬಡ್ಡಿ ಸಿಗುವುದಿಲ್ಲ. ಬಳಕೆದಾರನ ಅನುಭವದ ದೃಷ್ಟಿಯಿಂದ ಹೇಳುವುದಾದರೆ, ಡಿಜಿಟಲ್ ಕರೆನ್ಸಿ ಮೂಲಕ 50 ರೂಪಾಯಿ ಪಾವತಿಸುವುದೂ ಯುಪಿಐ ವ್ಯವಸ್ಥೆ ಮೂಲಕ ಅಷ್ಟೇ ಹಣವನ್ನು ಪಾವತಿಸುವುದೂ ಒಂದೇ ಆಗಬಹುದು. ಆದರೆ, ತಾಂತ್ರಿಕವಾಗಿ ಇವೆರಡು ಕೂಡ ಭಿನ್ನವಾಗಿಯೇ ನಿಲ್ಲುತ್ತವೆ. ಯುಪಿಐ ವಹಿವಾಟಿಗೆ ದಿನದ ಮಿತಿ ಇದೆ. ದಿನವೊಂದರಲ್ಲಿ ಇಷ್ಟು ಮಾತ್ರ ಹಣವನ್ನು ಯುಪಿಐ ಮೂಲಕ ವರ್ಗಾವಣೆ ಮಾಡಬಹುದು ಎಂಬ ಮಿತಿ ವಿಧಿಸಲಾಗಿದೆ. ಹಾಗೆಯೇ, ಇಂತಿಷ್ಟು ಸಂಖ್ಯೆಯ ವಹಿವಾಟುಗಳನ್ನು ಮಾತ್ರ ನಡೆಸಬಹುದು ಎಂದು ಕೂಡ ಕೆಲವು ಬ್ಯಾಂಕ್‌ಗಳು ಮಿತಿ ಹಾಕಿವೆ. ಈ ಬಗೆಯ ಮಿತಿಯು ಡಿಜಿಟಲ್ ಕರೆನ್ಸಿಗೆ ಇರಲಿಕ್ಕಿಲ್ಲ. ಭೌತಿಕ ವಾಲೆಟ್‌ನಿಂದ ಹಣವನ್ನು ಇಂತಿಷ್ಟು ಬಾರಿ ಮಾತ್ರ ತೆಗೆದು ಕೊಡಬಹುದು ಎಂಬ ಮಿತಿ ಎಲ್ಲಿಯೂ ಇಲ್ಲವಲ್ಲ!

ಕಾನೂನಿನ ದೃಷ್ಟಿಯಲ್ಲಿ ಡಿಜಿಟಲ್ ಕರೆನ್ಸಿ ಹಾಗೂ ನಗದು ರೂಪದ ಕರೆನ್ಸಿ ಒಂದೇ ಎಂಬುದನ್ನು ಆರ್‌ಬಿಐ ಹೇಳಿದೆ. ಹಾಗಾಗಿ, ಕರೆನ್ಸಿಯನ್ನು ನಗದು ರೂಪದಲ್ಲಿ ಬಳಸಿ ನಡೆಸುವ ವಹಿವಾಟುಗಳಿಗೆ ಅನ್ವಯವಾಗುವ ಕಾನೂನುಗಳು ಅದನ್ನು ಡಿಜಿಟಲ್ ರೂಪದಲ್ಲಿ ಬಳಸುವಾಗಲೂ ಅನ್ವಯವಾಗುತ್ತದೆ. ಕ್ರಿಪ್ಟೊಕರೆನ್ಸಿಗಳಲ್ಲಿ ವಹಿವಾಟುಗಳಲ್ಲಿ ಇದೆ ಎಂದು ಹೇಳಲಾಗುವ ಗೋಪ್ಯತೆ ಡಿಜಿಟಲ್ ಕರೆನ್ಸಿ ವಹಿವಾಟುಗಳಿಗೆ ಇರುವುದಿಲ್ಲ. ಆದರೂ, ಸ್ವತಃ ಆರ್‌ಬಿಐ ಹೇಳಿರುವಂತೆ ಒಂದು ಹಂತದವರೆಗಿನ ಗೋಪ್ಯತೆ ಮಾತ್ರ ಡಿಜಿಟಲ್ ಕರೆನ್ಸಿಗಳಿಗೆ ಇರುತ್ತದೆ. ಸಾರ್ವಜನಿಕರು ನಡೆಸುವ ಎಲ್ಲ ಚಟುವಟಿಕೆಗಳು ತನಗೂ ಗೊತ್ತಾಗಬೇಕು ಎಂದು ಪ್ರಭುತ್ವಗಳು ಬಯಸುತ್ತಿರುವ ಈ ಹೊತ್ತಿನಲ್ಲಿ, ಡಿಜಿಟಲ್ ಕರೆನ್ಸಿಯ ವಹಿವಾಟುಗಳು ಪ್ರಭುತ್ವಕ್ಕೆ ಗೊತ್ತೇ ಆಗದಂತೆ ನಡೆಯುವವೇ?! ಸದ್ಯಕ್ಕೆ ಇದೊಂದು ಪ್ರಶ್ನೆ ಮಾತ್ರ. ಗೋಪ್ಯತೆಯು ಯಾವ ಹಂತದವರೆಗೆ, ಎಷ್ಟು ಮೊತ್ತದವರೆಗಿನ ವಹಿವಾಟುಗಳಿಗೆ ಎಂಬುದರ ಸ್ಪಷ್ಟ ಚಿತ್ರಣವನ್ನು ಆರ್‌ಬಿಐ ಮಾತ್ರ ನೀಡಬಲ್ಲದು.

ಯುಪಿಐ ಹಾಗೂ ಡಿಜಿಟಲ್ ಕರೆನ್ಸಿ ನಡುವೆ ಎಷ್ಟೇ ಭಿನ್ನತೆ, ಸಾಮ್ಯತೆಗಳು ಇದ್ದರೂ, ಜನರ ಬದುಕಿನಲ್ಲಿ ಯುಪಿಐ ತಂದಂತಹ ಬದಲಾವಣೆಗಳನ್ನು ಡಿಜಿಟಲ್ ಕರೆನ್ಸಿ ಕೂಡ ತರಬಲ್ಲದೇ? ನಗದು ರಹಿತವಾಗಿ ಹಣ ಪಾವತಿಸುವುದು ಒಂದು ಖುಷಿಯ ಕೆಲಸ ಎಂಬಂತಹ ಪರಿವರ್ತನೆಯನ್ನು ಡಿಜಿಟಲ್ ಕರೆನ್ಸಿ ತಂದೀತೇ? ಈ ಪ್ರಶ್ನೆಗಳಿಗೆ ಆರ್‌ಬಿಐ ಅಲ್ಲ, ಕಾಲ ಮಾತ್ರ ಉತ್ತರಿಸಬಹುದೇನೋ...

ಕ್ರಿಪ್ಟೊಕರೆನ್ಸಿಗಳ ಉಗಮ, ಅವುಗಳು ಜನಪ್ರಿಯತೆ ಪಡೆದುಕೊಂಡಿದ್ದು, ಆ ಜನಪ್ರಿಯತೆಯ ಕಾರಣದಿಂದಾಗಿಯೇ ನಾವು ಕಟ್ಟಿರುವ ಹಣಕಾಸು ವ್ಯವಸ್ಥೆಗೆ ಅಪಾಯ ಆಗಬಹುದು ಎಂದು ನೀತಿನಿರೂಪಕರಿಗೆ ಅನಿಸಿದ್ದು... ಬಹುಶಃ, ಇವೆಲ್ಲ ಆಗದೇ ಇದ್ದಿದ್ದರೆ ಡಿಜಿಟಲ್ ಕರೆನ್ಸಿ ಬಗ್ಗೆ ಕೇಂದ್ರೀಯ ಬ್ಯಾಂಕ್ ಆಲೋಚನೆ ಮಾಡುತ್ತಿರಲಿಲ್ಲವೇನೋ...

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಗಣಿತದಲ್ಲಿ ಗರ್ದಿ ಗಮ್ಮತ್ತು

ಸ್ವಾರಸ್ಯಕರ ಸಂಖ್ಯೆ

142857 ಇದೊಂದು ಸ್ವಾರಸ್ಯಕರ ಸಂಖ್ಯೆ. ಇದನ್ನು ಬರೆದುಕೊಳ್ಳಿ. ಈ ಸಂಖ್ಯೆಗೆ 1 ರಿಂದ 6ರವರೆಗಿನ ಅಂಕಿಗಳಿಂದ ಗುಣಿಸಿ ನೋಡಿ ಮತ್ತೆ ಮತ್ತೆ ಮೂಲ ಸಂಖ್ಯೆಯ ಅಂಕಿಗಳೇ ಚಕ್ರೀಯವಾಗಿ ಬರುತ್ತವೆ. ಒಂದು ರೀತಿಯಲ್ಲಿ ಭಕ್ತ ಪ್ರಹ್ಲಾದ ಹರಿನಾಮದ ಹಟ ತೊಟ್ಟಂತೆ ಈ ಸಂಖ್ಯಾ ಗುಣ.

ಉದಾ : 142857
x 5
714285

ಇಲ್ಲಿ ಮೂಲ ಸಂಖ್ಯೆಯ ಅಂಕಿಗಳೇ ಚಕ್ರೀಯವಾಗಿ ಮರಳಿ ಬಂದಿರುವದನ್ನು ಗಮನಿಸಿ. ಇದರಂತೆ ಉಳಿದ ಅಂಕಿಗಳಿಂದ ಗುಣಿಸಿ ಖಾತ್ರಿ ಮಾಡಿಕೊಳ್ಳಿ. ಆದರೆ ಇದೇ 142857ಕ್ಕೆ 7ರಿಂದ ಗುಣಿಸಿ ನೋಡಿ ಗುಣಲಬ್ದದಲ್ಲಿ ಬರೀ 9ಗಳೇ ಬರುತ್ತವೆ (ಇಂಥ ಸಂಖ್ಯೆಗಳಿಗೆ 'ಉಗ್ಗು ಸಂಖ್ಯೆ'ಗಳೆಂದು ಹೆಸರು). ಈಗ, ಇದಕ್ಕೆ ಸಂಬಂಧಪಟ್ಟಿರುವ ಒಂದು ಆಟ: ನೀವು 2 ಮತ್ತು 6ರ ನಡುವಿನ ಒಂದು ಸಂಖ್ಯೆ ಊಹಿಸಿಕೊಳ್ಳಿ. ಅದನ್ನು 1001 ರಿಂದ ಗುಣಿಸಿ ಮತ್ತೆ ಬಂದ ಉತ್ತರವನ್ನು 111ರಿಂದ ಗುಣಿಸಿ ಈಗ ಆ ಸಂಖ್ಯೆಯನ್ನು ಮಾತ್ರ 9ರಿಂದ ಗುಣಿಸಿ 7 ರಿಂದ ಭಾಗಿಸಿ ನೋಡಿ. ಭಾಗಲಬ್ದದಲ್ಲಿ 142857 ಈ ಸಂಖ್ಯೆಯ ಅಂಕಿಗಳೇ ಚಕ್ರೀಯವಾಗಿ ಬರುತ್ತವೆ.

ಉದಾ :
5
x 1001
5005
x 111
5005
5005
5005
555555
x 9
4999995

7) 4999995 (714285
49
009
7
29
28
019
14
059
56
035
35
00



ಹಳ್ಳಿಯ ಜನಪದ ಆಟಗಳು

(ಕೆಲವು ಆಟಗಳ ಹೆಸರುಗಳನ್ನು ಇಲ್ಲಿ ಕೊಡಲಾಗಿದೆ)

1. ಚುಕು ಬುಕು ರೈಲು
2. ಚೈನ್ ಕಟ್ಟೋ ಆಟ ಚೆಂಡು ಎಸೆಯುವ ಆಟ/ ಮಂಕಿಯಾಟ
3. ಜಡಿಯ ಲಿಂಗ ಆಟ
4. ಜುಗು ಜುಗು ಬತ್ತಿ ಆಟ
5. ಟ್ಯೂಬ್ ಲೈಟ್
6. ಡಿಂಗ್ ಡಿಂಗ್ ಆಟ/ದೊಂಗ್ ದೊಂಗ್ ಆಟ
7. ತೋಳಣ್ಣ ಎಷ್ಟು ಹೊತ್ತು?
8. ತೆಂಗಿನ ಗರಿ ಆಟ
9. ದಡಂದಡಿಕಿ/ಜಕ್‌ಬುಕ್ ಜಾಲಿಕಾಯಿ/ತುಕು-ತುಕು ಬಂಡಿ
10. ದುಬ್ಬಚೆಂಡಾಟ/ಡುಬ್ಬಕ ಡುಬ್ಬ ಆಟ/ನೆಡ್ಡೆ ಪಿರಿಕೆ ಆಟ
11. ದಂಡ ಪಕಡೋ/ಕೋಲು ಹಿಡಿಯುವ ಆಟ
12. ನಮ್ಮ ಕರಡಿ ಆಟ/ ಕರಡಿ ಸೆಣಸಾಟ
13. ನೀರು ಸೇದೋ ಬಾವಿ
14. ನೊರೆ ಗುಳ್ಳೆ ಆಟ/ಬುರುಗು ಗುಳ್ಳೆ ಆಟ ನಂದಿ ಕಂಬದಾಟ/ನಂದಿಕೋಲು ಓಟ
15. ಪತ್ರಾವಳಿ ಓಟ/ ಎಲೆ ತರುವ ಆಟ
16. ಪರಿಧಿ ಓಟ
17. ಪೇಪರ್ ದೋಣಿಯಾಟ

ಅದಲು ಬದಲು ಕಂಚಿ ಕದಲು...

ಇಲ್ಲಿ 'A' ಭಾಗದ ಪದದಲ್ಲಿನ ಅಕ್ಷರಗಳೇ ಬಿ ಭಾಗದಲ್ಲಿ ಬಂದಿವೆ. ಇದಕ್ಕೆ ಪದ ಗಿರಗಿಟ್ಟೆ ಆಟ ಎನ್ನಬಹುದು. ಎರಡನ್ನೂ ಸೇರಿಸಿ ಓದಿದರೆ...

A		B
1. ಬಹಳ	-	ಹಳಬ
2. ಸವತಿ	-	ವಸತಿ
3. ಸರಿಹೋದ	-	ಸಹೋದರಿ
4. ಮಾನವರ	-	ವರಮಾನ
5. ದಾನವರ	-	ವರದಾನ
6. ಬಿಡಾಡಿದನ	-	ದಡಾನಬಿಡಿ
7. ರವಿಮಾಮನ	-	ಮಾವಿನಮರ
8. ನಕಲಿಮಾವ	-	ವನಮಾಲಿಕ
9. ತುಳಸಿದಾಸ	-	ಸಸಿತುಳಿದಾ
10. ಅಮ್ಮನರಿವು	-	ನಮ್ಮ ಅರಿವು
11. ಕರಿದತಿಂಡಿ	-	ತಿಂದ ಕಡಿರಿ
12. ಮಸುಕು	-	ಕುಸುಮ
13. ಮನುಜ	-	ಜನುಮ
14. ಪ್ರಥಮ	-	ಪ್ರಮಥ



ಜಾಣಪದ ಆಟ


ಇಲ್ಲಿ ಕೊಟ್ಟಿರುವ ಮೂಲ ಅಕ್ಷರಗಳಿಗೆ ಸರಿ ಹೊಂದುವಂತೆ ಪಕ್ಕದಲ್ಲಿರುವ ಸುಳಿವು ಪದ ಆಧರಿಸಿ ಅದಕ್ಕೆ ಸರಿ ಹೊಂದುವ ಎರಡು ಅಕ್ಷರಗಳ ಪದ ರಚಿಸಿ

	ಮ	ರ	ಸುಳಿವು
1			ತುಂಡು ಮಾಡು
2			ಒಂದು ಅಂಕಿ
3			ವಿಕ್ರಯಿಸು
4			ಹತೋಟಿ ತಪ್ಪು
5			ಹದ್ದು, ಅಳತೆ

ದೃಶ್ಯ ಚಿತ್ರ ಶ್ರೇಷ್ಠ ಕಥೆಯ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಅತಿ ಆಸೆ ಗತಿಗೇಡು



ಒಂದು ಊರಿನಲ್ಲಿ ಬೀದಿನಾಯಿಯೊಂದಿತ್ತು. ಆದರೆ ಅದು ತುಂಬಾ ದುರಾಸೆಯದ್ದಾಗಿತ್ತು. ಏನು ಸಿಕ್ಕರೂ ತಾನೊಬ್ಬನೇ ತಿನ್ನಬೇಕು ಎನ್ನುವ ಸ್ವಭಾವ ಅದರದ್ದು



ಆ ನಾಯಿ ಒಂದು ದಿನ ಬಹಳ ಹಸಿವಿನಿಂದ ಕಂಗಾಲಾಗಿತ್ತು. ಅಂದು ಊರ ಹೊರಗಿನ ಗುಡಿಸಿಲಿನ ಕದದ ಸಂದಿಯಲ್ಲಿ ನುಗ್ಗಿತು. ಒಳಗೆ ಬುಟ್ಟಿಯಲ್ಲಿ ರೊಟ್ಟಿಯಿತ್ತು. ಎಲ್ಲವನ್ನೂ ಕಚ್ಚಿಕೊಂಡು ಪರಾರಿಯಾಯಿತು



ರೊಟ್ಟಿಯನ್ನೆಲ್ಲಾ ಬಾಯಿಯಲ್ಲಿ ಕಚ್ಚಿಕೊಂಡು ಹರಿವ ನೀರಿನ ಸೇತುವೆ ದಾಟಿ ಊರಾಚೆ ಹೋಗಿ ಕುಳಿತು ತಿನ್ನುವ ಆಸೆ ಅದರದ್ದಾಗಿತ್ತು. ಹಾಗೇ ಸಾಗುತ್ತಿತ್ತು



ನದಿಯ ನೀರಿನಲ್ಲಿ ತನ್ನದೇ ಪ್ರತಿಬಿಂಬ ಕಂಡಿತು. ಅದು ಮತ್ತೊಂದು ನಾಯಿ ಇರಬೇಕು ಎಂದು ಭಾವಿಸಿ, ಬೌ ಎಂದು ಬೊಗಳಿತು. ತನ್ನ ಬಾಯಿಯ ರೊಟ್ಟಿ ನೀರಿಗೆ ಬಿದ್ದು ತೇಲಿ ಹೋಯಿತು. ನಾಯಿ ಪೆಚ್ಚಾಗಿ ಹಸಿವಿನಿಂದಲೇ ಮುಂದೆ ಹೋಯಿತು.

ಕಳೆದ ಸಂಚಿಕೆಯ ಸರಿ ಉತ್ತರಗಳು

ಜಾಣಪದ ಆಟ

1. ಜಾಗ 2. ಜಂಗು 3. ಜಿಗಿ 4. ಜೋಗ 5. ಜೋಗಿ

ಅದಲು ಬದಲು

1. ಸಂಗೀತ ಸಂಗಮ
2. ಮೊದಲ ಕುರುಹು
3. ಮಧುರ ಭಾವನೆ
4. ದುಬಾರಿ ನಗರ

ಶಬ್ದಗಳ ಆಟ

1. ಕುಕ್ಕೆ 2. ಕೊಕ್ಕೆ 3. ಕುಕ್ಕು 4. ಕಕ್ಕು 5. ಕಕ್ಕಿ 6. ಕಕ್ಕ 7. ಕೊಕ್ಕು


ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು



ನರೇನ್ ಎನ್. ಮಹಾದೇವ
ಕೊಳ್ಳೇಗಾಲ (ಚಾಮರಾಜನಗರ)



ಲೇಖನಾ ಎಂ.ಆರ್.,
ಬೆಂಗಳೂರು



ಅಪೂರ್ವಾ ತಳವಾರ
ಕುಳಗೇರಿ ಕ್ರಾಸ್ (ಬಾಗಲಕೋಟೆ)

ಸರಿ ಉತ್ತರ ಮುಂದಿನ ವಾರ... ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ: majakoora@prajavani.co.in

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ರೋಚಕ ಹಣಾಹಣಿಯಲ್ಲಿ ನೆದರ್ಲೆಂಡ್ಸ್ ವಿರುದ್ಧ ಗೆಲುವು

ಸೆಮಿಗೆ ಮೆಸ್ಸಿ ಬಳಗ ಲಗ್ಗೆ

ಲುಸೈಲ್, ಕತಾರ್ (ರಾಯಿಟರ್ಸ್/ಎಎಫ್‌ಪಿ): ಕಾಲ್ಚೆಂಡಾಟದ ರೋಚಕತೆ, ಸೌಂದರ್ಯ ಹೊರಹೊಮ್ಮಿದ ಪಂದ್ಯದಲ್ಲಿ ಪೆನಾಲ್ಟಿ ಶೂಟೌಟ್‌ನಲ್ಲಿ ನೆದರ್ಲೆಂಡ್ಸ್ ತಂಡವನ್ನು ಮಣಿಸಿದ ಲಯೊನೆಲ್ ಮೆಸ್ಸಿ ನೇತೃತ್ವದ ಅರ್ಜೆಂಟೀನಾ ತಂಡ ಫಿಫಾ ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಲುಸೈಲ್ ಕ್ರೀಡಾಂಗಣದಲ್ಲಿ ಶುಕ್ರವಾರ ತಡರಾತ್ರಿ ನಡೆದ ಕ್ವಾರ್ಟರ್ ಫೈನಲ್ ಪಂದ್ಯವನ್ನು ನಿಗದಿತ ಅವಧಿಯಲ್ಲಿ ಜಯಿಸುವ ಅವಕಾಶ ಕೈಚೆಲ್ಲಿದರೂ ಶೂಟೌಟ್‌ನಲ್ಲಿ 4-3ರಲ್ಲಿ ಗೆದ್ದ ದಕ್ಷಿಣ ಅಮೆರಿಕದ ತಂಡ, ಟ್ರೋಫಿ ಜಯಿಸುವ ಕನಸು ಜೀವಂತವಾಗಿರಿಸಿಕೊಂಡಿತು.

ಶೂಟೌಟ್‌ನಲ್ಲಿ ಎದುರಾಳಿ ತಂಡದ ಎರಡು ಗೋಲುಗಳನ್ನು ತಡೆದ ಗೋಲ್‌ಕೀಪರ್ ಎಮಿಲಿಯಾನೊ ಮಾರ್ಟಿನೆಜ್ ಮತ್ತು ಕೊನೆಯ ಕಿಕ್‌ನಲ್ಲಿ ಗೋಲು ಗಳಿಸಿದ ಲೌಟಾರೊ ಮಾರ್ಟಿನೆಜ್ ಅವರು ಅರ್ಜೆಂಟೀನಾದ ಗೆಲುವಿನ ರೂವಾರಿಗಳು.

82 ನಿಮಿಷಗಳವರೆಗೂ 0–2 ರಲ್ಲಿ ಹಿನ್ನಡೆಯಲ್ಲಿದ್ದು, ಆ ಬಳಿಕ ಮರುಹೋರಾಟ ನಡೆಸಿ ಪಂದ್ಯವನ್ನು ಪೆನಾಲ್ಟಿ ಶೂಟೌಟ್‌ಗೆ ಕೊಂಡೊಯ್ದ ನೆದರ್ಲೆಂಡ್ಸ್ ತಂಡದ ಆಟ ಕೂಡಾ ಅಭಿಮಾನಿಗಳ ಮನಗೆದ್ದಿತು.

ಆರಂಭದಿಂದ ಕೊನೆಯವರೆಗೂ ಪ್ರೇಕ್ಷಕರ ಮೈನವಿರೇಳಿಸಿದ ಪಂದ್ಯದಲ್ಲಿ ನಿಗದಿತ ಹಾಗೂ ಹೆಚ್ಚುವರಿ ಅವಧಿಯ ಬಳಿಕ ಎರಡೂ ತಂಡಗಳು 2–2 ರಲ್ಲಿ ಸಮಬಲ ಸಾಧಿಸಿದ್ದವು.

ಪೆನಾಲ್ಟಿಯಲ್ಲಿ ನೆದರ್ಲೆಂಡ್ಸ್‌ನ ವರ್ಜಿಲ್ ವಾನ್ ಡೈಕ್ ಮತ್ತು ಸ್ಟೀವನ್ ಬೆರ್ಗುಯಿಸ್ ಅವರ ಕಿಕ್‌ಗಳನ್ನು ಮಾರ್ಟಿನೆಜ್ ತಡೆದರು. ಟೆನ್ ಕೂಪ್‌ಮೆನರ್ಸ್, ವೌಟ್ ವೆಗೋರ್ಸ್ಟ್ ಮತ್ತು ಲೂಕ್ ಡಿ ಜಾಂಗ್ ಗುರಿ ಸೇರಿಸಿದರು.

ಅರ್ಜೆಂಟೀನಾ ಪರ ಮೊದಲ ಮೂರು ಅವಕಾಶಗಳಲ್ಲಿ ಮೆಸ್ಸಿ, ಲಿಯಾಂಡ್ರೊ ಪರೆಡೆಸ್ ಮತ್ತು ಗೊಂಜಾಲೊ ಮಾಂಟಿಯೆಲ್ ಗುರಿ ಸೇರಿಸಿದರೆ, ನಾಲ್ಕನೇ ಅವಕಾಶದಲ್ಲಿ ಫೆರ್ನಾಂಡಿಸ್ ಚೆಂಡನ್ನು ಗೋಲ್‌ಪೋಸ್ಟ್‌ನಿಂದ ಹೊರಕ್ಕೆ ಹೊಡೆದರು.



ಪೆನಾಲ್ಟಿ ಶೂಟೌಟ್‌ನಲ್ಲಿ ನೆದರ್ಲೆಂಡ್ಸ್ ತಂಡದ ವರ್ಜಿಲ್ ವಾನ್ ಡೈಕ್ ಅವರ ಗೋಲು ಗಳಿಸುವ ಪ್ರಯತ್ನವನ್ನು ಅರ್ಜೆಂಟೀನಾ ಗೋಲ್‌ಕೀಪರ್ ಎಮಿಲಿಯಾನೊ ಮಾರ್ಟಿನೆಜ್ ಯಶಸ್ವಿಯಾಗಿ ತಡೆದರು –ಎಎಫ್‌ಪಿ ಚಿತ್ರ



ಲಯೊನೆಲ್ ಮೆಸ್ಸಿ ಸಂಭ್ರಮ

ಐದನೇ ಕಿಕ್ ತೆಗೆದ ಲೌಟಾರೊ ಮಾರ್ಟಿನೆಜ್ ಒದ್ದ ಚೆಂಡು ಎದುರಾಳಿ ಗೋಲ್‌ಕೀಪರ್ ಆಂಡ್ರೆಸ್ ನೊಪೆರ್ಟ್ ಅವರನ್ನು ತಪ್ಪಿಸಿಕೊಂಡು ಗುರಿ ಸೇರುತ್ತಿದ್ದಂತೆಯೇ ಅರ್ಜೆಂಟೀನಾ ಆಟಗಾರರ ಮತ್ತು ಮೆಸ್ಸಿ ಅವರ ಕೋಟ್ಯಾಂತರ ಅಭಿಮಾನಿಗಳ ಸಂಭ್ರಮದ ಕಟ್ಟೆಯೊಡೆಯಿತು. ಡಿ.13ರಂದು ನಡೆಯಲಿರುವ ಸೆಮಿಯಲ್ಲಿ ಮೆಸ್ಸಿ ಬಳಗ, ಕ್ರೊವೇಷ್ಯಾದ ಸವಾಲು ಎದುರಿಸಲಿದೆ.

ನೆದರ್ಲೆಂಡ್ಸ್ ಮರುಹೋರಾಟ: 35ನೇ ನಿಮಿಷದಲ್ಲಿ ಅರ್ಜೆಂಟೀನಾ ಮುನ್ನಡೆ ಗಳಿಸಿತು. ಮೆಸ್ಸಿ ನೀಡಿದ ಪಾಸ್‌ನಲ್ಲಿ ನಹುಯೆಲ್ ಮೊಲಿನಾ ಚೆಂಡನ್ನು ಗುರಿ ಸೇರಿಸಿದರು. ಮೆಸ್ಸಿ ಎದುರಾಳಿ ಡಿಫೆಂಡರ್‌ಗಳನ್ನು ತಪ್ಪಿಸಿ ಪಾಸ್ ನೀಡಿದ ರೀತಿ ಸೊಗಸಾಗಿತ್ತು. 73ನೇ ನಿಮಿಷದಲ್ಲಿ ತಂಡಕ್ಕೆ ದೊರೆತ ಪೆನಾಲ್ಟಿ ಕಿಕ್ ಅವಕಾಶವನ್ನು ಮೆಸ್ಸಿ ಗೋಲಾಗಿ ಪರಿವರ್ತಿಸಿದರು. 83ನೇ ನಿಮಿಷದಲ್ಲಿ ವೌಟ್ ವೆಗೋರ್ಸ್ಟ್ ಚೆಂಡನ್ನು ಗುರಿಸೇರಿಸಿ ನೆದರ್ಲೆಂಡ್ಸ್ ಹಿನ್ನಡೆಯನ್ನು 1–2ಕ್ಕೆ ತಗ್ಗಿಸಿದರು. ಇಂಜುರಿ ಅವಧಿಯಲ್ಲಿ (90 + 11ನೇ ನಿ.) ಅವರು ಮತ್ತೊಂದು ಗೋಲು ಗಳಿಸಿ 2–2 ರಲ್ಲಿ ಸಮಬಲಕ್ಕೆ ಕಾರಣರಾದರು.

16 ಹಳದಿ ಕಾರ್ಡ್: ಈ ಪಂದ್ಯದಲ್ಲಿ ಕಾವು ಹೆಚ್ಚಿದ್ದರಿಂದ ಎರಡೂ ತಂಡಗಳು ಒರಟಾಟ ಪ್ರದರ್ಶಿಸಿದವು. ಪರಸ್ಪರ ತಳ್ಳಾಟ, ಫೌಲ್ ಮತ್ತು ಮಾತಿನ ಚಕಮಕಿ ನಡೆಸಿದರು. ಇದರಿಂದ ಸ್ಪೇನ್‌ನ ರೆಫರಿ ಆಂಟೋನಿಯೊ ಮಟೆವು ಲಾಹೋಜ್ ಅವರು 16 ಮಂದಿಗೆ ಹಳದಿ ಕಾರ್ಡ್ ತೋರಿಸಬೇಕಾಯಿತು. ಪಂದ್ಯದ ಬಳಿಕ ವಾಗ್ವಾದ ಮಾಡಿದ ನೆದರ್ಲೆಂಡ್ಸ್ ತಂಡದ ಡೆಂಜಿಲ್ ಡಂಫ್ರೀಸ್ ಅವರಿಗೆ ಕೆಂಪು ಕಾರ್ಡ್ (ಎರಡು ಹಳದಿ ಕಾರ್ಡ್) ಕೂಡಾ ತೋರಿಸಿದರು.

ವರದಿಗಾರ ಗ್ರಾಂಟ್ ವಾಲ್ ನಿಧನ

ದೋಹಾ (ಎಎಫ್‌ಪಿ/ಎಪಿ): ವಿಶ್ವಕಪ್ ಟೂರ್ನಿಯ ಪಂದ್ಯಗಳ ವರದಿಗೆ ಬಂದಿದ್ದ ಅಮೆರಿಕದ ಕ್ರೀಡಾ ವರದಿಗಾರ ಗ್ರಾಂಟ್ ವಾಲ್ ಶುಕ್ರವಾರ ಪಂದ್ಯದ ವೇಳೆ ಕುಸಿದುಬಿದ್ದು ಮೃತಪಟ್ಟಿದ್ದಾರೆ. 48 ವರ್ಷದ ಗ್ರಾಂಟ್ ಅವರು ಸ್ಪೋರ್ಟ್ಸ್ ಇಲಸ್ಟ್ರೇಟೆಡ್, ಸಿಬಿಎಸ್ ಸ್ಪೋರ್ಟ್ಸ್ ಮತ್ತು ಇತರ ಮಾಧ್ಯಮಗಳಿಗೆ ಕೆಲಸ ಮಾಡಿದ್ದರು.' ಅವರಿಗೆ ಹೃದಯಾಘಾತವಾಗಿರುವ ಸಾಧ್ಯತೆಯಿದೆ' ಎಂದು 'ದಿ ವಾಲ್ ಸ್ಟ್ರೀಟ್ ಜರ್ನಲ್' ವರದಿ ಮಾಡಿದೆ.

ಮೊರೊಕ್ಕೊ ಚಾರಿತ್ರಿಕ ಸಾಧನೆ

ಪೋರ್ಚುಗಲ್ ತಂಡಕ್ಕೆ ನಿರಾಸೆ: ಕ್ರಿಸ್ಟಿಯಾನೊ ರೊನಾಲ್ಡೊ ಕನಸು ಭಗ್ನ



ಮೊರೊಕ್ಕೊ ತಂಡದ ಯೂಸೆಫ್ ಎನ್ ನೆಸ್ರಿ (ಬಲ) ಮತ್ತು ಅಶ್ರಫ್ ಹಕೀಮಿ ಸಂಭ್ರಮಿಸಿದರು – ಎಎಫ್‌ಪಿ ಚಿತ್ರ

ದೋಹಾ (ಎಎಫ್‌ಪಿ/ ರಾಯಿಟರ್ಸ್): ವಿಶ್ವಕಪ್ ಫುಟ್‌ಬಾಲ್ ಟ್ರೋಫಿ ಎತ್ತಿಹಿಡಿಯಬೇಕೆಂಬ ಕ್ರಿಸ್ಟಿಯಾನೊ ರೊನಾಲ್ಡೊ ಅವರ ಕನಸು ದೋಹಾದ ಅಲ್ ತುಮಾಮಾ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ಭಗ್ನಗೊಂಡಿತು.

ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಏಕೈಕ ಗೋಲಿನಿಂದ ಪೋರ್ಚುಗಲ್ ತಂಡವನ್ನು ಮಣಿಸಿದ ಮೊರೊಕ್ಕೊ, ಚಾರಿತ್ರಿಕ ಸಾಧನೆಯೊಂದಿಗೆ ಸೆಮಿಫೈನಲ್ ಪ್ರವೇಶಿಸಿತು. 42ನೇ ನಿಮಿಷದಲ್ಲಿ ಗೋಲು ಗಳಿಸಿದ ಯೂಸೆಫ್ ಎನ್ ನೆಸ್ರಿ ಅವರು ಮೊರೊಕ್ಕೊ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು.

ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದ ಆಫ್ರಿಕಾ ಖಂಡದ ಹಾಗೂ ಅರಬ್ ನಾಡಿನ ಮೊದಲ ತಂಡ ಎಂಬ ಗೌರವ ಮೊರೊಕ್ಕೊಗೆ ಒಲಿಯಿತು. 36 ವರ್ಷಗಳ ಹಿಂದೆ ಮೆಕ್ಸಿಕೊದಲ್ಲಿ ನಡೆದಿದ್ದ ಟೂರ್ನಿಯಲ್ಲಿ 16ರ ಘಟ್ಟ ಪ್ರವೇಶಿಸಿದ್ದು ಈ ತಂಡದ ಇದುವರೆಗಿನ ಅತ್ಯುತ್ತಮ ಸಾಧನೆ ಎನಿಸಿಕೊಂಡಿತ್ತು.

ಜಿದ್ದಾಜಿದ್ದಿನ ಸೆಣಸಾಟದ ಬಳಿಕ ಮೊದಲ ಅವಧಿ ಕೊನೆಗೊಳ್ಳಲು ಮೂರು ನಿಮಿಷಗಳು ಇರುವಾಗ ಮೊರೊಕ್ಕೊ ಮುನ್ನಡೆ ಗಳಿಸಿತು.

ಯಹ್ಯಾ ಅತಿಯತಲ್ಲಾ ಅವರ ಕ್ರಾಸ್‌ನಲ್ಲಿ ಬಂದ ಚೆಂಡನ್ನು ಹೆಡ್ ಮಾಡುವ ಮೂಲಕ ನೆಸ್ರಿ ಗುರಿ ಸೇರಿಸಿದರು. ಪೋರ್ಚುಗಲ್ ಗೋಲ್ ಕೀಪರ್ ಡಿಯಾಗೊ ಕೊಸ್ಟಾ ಅವರು ಚೆಂಡಿನ ಗತಿಯನ್ನು ಅಂದಾಜಿಸಲು ವಿಫಲರಾದದ್ದು ತಂಡಕ್ಕೆ ಮುಳುವಾಗಿ ಪರಿಣಮಿಸಿತು.

ಮೊದಲ ಇವೆಲೆನ್‌ನಲ್ಲಿ ಕಣಕ್ಕಿಳಿಯದ ರೊನಾಲ್ಡೊ 51ನೇ ನಿಮಿಷದಲ್ಲಿ ಬದಲಿ ಆಟಗಾರನಾಗಿ ಆಡಲಿಳಿದರು. ಆದರೆ ಗೋಲು ಗಳಿಸಲು ಅಥವಾ ಸಹ ಆಟಗಾರರ ಗೋಲಿಗೆ ನೆರವಾಗಲು ಅವರಿಗೆ ಸಾಧ್ಯವಾಗಲಿಲ್ಲ. ಪಂದ್ಯದ ಬಳಿಕ ನಿರಾಸೆಯೊಂದಿಗೆ ಅಂಗಳ ತೊರೆದರು.

ಎರಡನೇ ಅವಧಿಯಲ್ಲಿ ಆಟದ ವೇಗ ಹೆಚ್ಚಿಸಿದರೂ ಪೋರ್ಚುಗಲ್ ತಂಡಕ್ಕೆ ಎದುರಾಳಿ 'ರಕ್ಷಣಾ ಗೋಡೆ'ಯನ್ನು ದಾಟಲು ಅಗಲಿಲ್ಲ. ಮೊದಲ ಆಯ್ಕೆಯ ಮೂವರು ಡಿಫೆಂಡರ್‌ಗಳು ಗಾಯದ ಕಾರಣ ಆಡಲಿಳಿಯದಿದ್ದರೂ, ಮೊರೊಕ್ಕೊ ತಂಡದವರು ಎದುರಾಳಿ ಸ್ಟ್ರೈಕರ್‌ಗಳನ್ನು ಕಟ್ಟಿಹಾಕುವಲ್ಲಿ ಯಶಸ್ವಿಯಾದರು.

ಬೆಲ್ಜಿಯಂ ಮತ್ತು ಸ್ಪೇನ್ ತಂಡಗಳನ್ನು ಮಣಿಸಿದ್ದ ತಂಡ, ತನ್ನ ಅಚ್ಚರಿಯ ಓಟವನ್ನು ಇನ್ನೊಂದು ಪಂದ್ಯಕ್ಕೆ ಮುಂದುವರಿಸಿತು.

ಮೊರೊಕ್ಕೊ ತಂಡದ ವಾಲಿದ್ ಚೆದಿರಾ ಅವರು ಇಂಜುರಿ ಅವಧಿಯಲ್ಲಿ ಎರಡನೇ ಹಳದಿ ಕಾರ್ಡ್ ಪಡೆದು ಅಂಗಳದಿಂದ ಹೊರನಡೆದರು. ಸೆಮಿಯಲ್ಲಿ ಆಡುವ ಅವಕಾಶವನ್ನು ಅವರು ಕಳೆದುಕೊಂಡರು.

ಹಾಲಿ ಚಾಂಪಿಯನ್ ಫ್ರಾನ್ಸ್ ಮತ್ತು ಇಂಗ್ಲೆಂಡ್ ತಂಡಗಳ ನಡುವಿನ ಕ್ವಾರ್ಟರ್ ಫೈನಲ್ ಪಂದ್ಯದ ವಿಜೇತರನ್ನು, ಸೆಮಿಫೈನಲ್‌ನಲ್ಲಿ ಮೊರೊಕ್ಕೊ ಎದುರಿಸಲಿದೆ.

ದಾಖಲೆ ಸರಿಗಟ್ಟಿದ ರೊನಾಲ್ಡೊ: ರೊನಾಲ್ಡೊ ಅವರಿಗೆ ಇದು 196ನೇ ಅಂತರರಾಷ್ಟ್ರೀಯ ಪಂದ್ಯ ಆಗಿತ್ತು. ಈ ಮೂಲಕ ಅತಿಹೆಚ್ಚು ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿದ ಕುವೈತ್‌ನ ಬದೆರ್ ಅಲ್ ಮುತಾವ ಅವರ ಹೆಸರಿನಲ್ಲಿದ್ದ ದಾಖಲೆ ಸರಿಗಟ್ಟಿದರು.

ರಣಜಿ: ಕರ್ನಾಟಕ ತಂಡದಲ್ಲಿ ನಿಕಿನ್, ವಿಶಾಲ್‌ಗೆ ಸ್ಥಾನ



ನಿಕಿನ್ ಜೋಸ್

ಬೆಂಗಳೂರು: ನವಪ್ರತಿಭೆಗಳಾದ ನಿಕಿನ್ ಜೋಸ್ ಮತ್ತು ವಿಶಾಲ್ ಓನತ್ ಅವರಿಗೆ ಈ ಬಾರಿಯ ರಣಜಿ ಟ್ರೋಫಿ ಟೂರ್ನಿಯಲ್ಲಿ ಆಡಲಿರುವ ಕರ್ನಾಟಕ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಮಯಂಕ್ ಅಗರವಾಲ್ ನಾಯಕತ್ವದ 15 ಆಟಗಾರರ ತಂಡವನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಶನಿವಾರ ಪ್ರಕಟಿಸಿದೆ. ಈಚೆಗೆ ನಡೆದ ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ನಿಕಿನ್ ಉತ್ತಮವಾಗಿ ಆಡಿದ್ದರು. ಬಲಗೈ ಬ್ಯಾಟರ್ ವಿಶಾಲ್ ಓನತ್ 19 ವರ್ಷದೊಳಗಿನವರ ವಿಭಾಗದಲ್ಲಿ ರನ್‌ಗಳ ಹೊಳೆ ಹರಿಸಿದ್ದರು. ಆದರೆ ಸಂಭವನೀಯರ ಪಟ್ಟಿಯಲ್ಲಿದ್ದ ಕರುಣ್ ನಾಯರ್ ಅವರನ್ನು ಈ ಪಟ್ಟಿಯಿಂದ ಕೈಬಿಡಲಾಗಿದೆ.

ತಂಡ: ಮಯಂಕ್ ಅಗರವಾಲ್ (ನಾಯಕ), ಆರ್. ಸಮರ್ಥ್ (ಉಪನಾಯಕ), ನಿಕಿನ್ ಜೋಸ್, ವಿಶಾಲ್ ಓನತ್, ಮನೀಷ್ ಪಾಂಡೆ, ಕೆ.ವಿ. ಸಿದ್ಧಾರ್ಥ್, ಬಿ.ಆರ್. ಶರತ್, ಶರತ್ ಶ್ರೀನಿವಾಸ್ (ಇಬ್ಬರೂ ವಿಕೆಟ್‌ಕೀಪರ್), ಕೆ. ಗೌತಮ್, ಶ್ರೇಯಸ್ ಗೋಪಾಲ್, ರೋನಿತ್ ಮೋರೆ, ವಿ. ಕೌಶಿಕ್, ವಿದ್ವತ್ ಕಾವೇರಪ್ಪ, ವಿ. ವೈಶಾಖ, ಶುಭಾಂಗ್ ಹೆಗ್ಡೆ. ಪಿ.ವಿ. ಶಶಿಕಾಂತ್ (ಕೋಚ್), ದೀಪಕ್ ಚೌಗುಲೆ (ಫೀಲ್ಡಿಂಗ್ ಕೋಚ್), ಜಾಬ ಪ್ರಭು (ಫಿಸಿಯೊ), ಕೆ.ಸಿ. ಅವಿನಾಶ್ (ಸ್ಟ್ರೆಂಥ್–ಕಂಡಿಷನಿಂಗ್), ಎ. ರಮೇಶ್ ರಾವ್ (ಮ್ಯಾನೇಜರ್), ಸಿ.ಎಂ. ಸೋಮಸುಂದರ್ (ಮಸಾಜ್ ತಜ್ಞ), ರಾಜ್ ಕೀರ್ತಿ ಕಪಾಡಿಯಾ (ವಿಡಿಯೊ ಅನಾಲಿಸ್ಟ್).

ಸೋಲಿನ ಸುಳಿಯಲ್ಲಿ ವಿಂಡೀಸ್

ಅಡಿಲೇಡ್ (ಎಪಿ): ಆಲ್‌ರೌಂಡ್ ಪ್ರದರ್ಶನ ನೀಡಿದ ಆಸ್ಟ್ರೇಲಿಯಾ ತಂಡದವರು ವೆಸ್ಟ್ ಇಂಡೀಸ್ ವಿರುದ್ಧದ 2ನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಭರ್ಜರಿ ಗೆಲುವಿನತ್ತ ದಾಪುಗಾಲಿಟ್ಟಿದ್ದಾರೆ.

ಓವಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಗೆಲುವಿಗೆ 497 ರನ್‌ಗಳ ಗುರಿ ಪಡೆದಿರುವ ವಿಂಡೀಸ್ ತಂಡ ಮೂರನೇ ದಿನವಾದ ಶನಿವಾರದ ಆಟದ ಅಂತ್ಯಕ್ಕೆ 4 ವಿಕೆಟ್‌ಗೆ 38 ರನ್ ಗಳಿಸಿದೆ. ಇನ್ನು ಎರಡು ದಿನಗಳ ಆಟ ಬಾಕಿಯಿದ್ದು, ವಿಂಡೀಸ್ ಗೆಲುವಿಗೆ 459 ರನ್‌ಗಳು ಬೇಕಿದೆ.4 ವಿಕೆಟ್‌ಗೆ 102 ರನ್‌ಗಳಿಂದ 3ನೇ ದಿನದಾಟ ಮುಂದುವರಿಸಿದ ವಿಂಡೀಸ್ ಮೊದಲ ಇನಿಂಗ್ಸ್‌ನಲ್ಲಿ 214 ರನ್‌ಗಳಿಗೆ ಆಲೌಟಾಯಿತು. ಎದುರಾಳಿಗೆ ಫಾಲೋಆನ್ ನೀಡದೆ 2ನೇ ಇನಿಂಗ್ಸ್ ಆಡಿದ ಆತಿಥೇಯರು 31 ಓವರ್‌ಗಳಲ್ಲಿ 6 ವಿಕೆಟ್‌ಗೆ 199 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್; ಆಸ್ಟ್ರೇಲಿಯಾ 7 ವಿಕೆಟ್‌ಗೆ 511 ಡಿಕ್ಲೇರ್ಡ್. ವೆಸ್ಟ್ ಇಂಡೀಸ್: 69.3 ಓವರ್‌ಗಳಲ್ಲಿ 214 (ತೇಜ್‌ನಾರಾಯಣ ಚಂದ್ರಪಾಲ್ 47, ಆ್ಯಂಡರ್ಸನ್ ಫಿಲಿಪ್ 43, ನೇಥನ್ ಲಿಯೊನ್ 57ಕ್ಕೆ 3, ಮೈಕಲ್ ನೇಸರ್ 34ಕ್ಕೆ 2) ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ 31 ಓವರ್‌ಗಳಲ್ಲಿ 6 ವಿಕೆಟ್‌ಗೆ 199 ಡಿ. (ಉಸ್ಮಾನ್ ಖವಾಜಾ 45,ಟ್ರ್ಯಾವಿಸ್ ಹೆಡ್ ಔಟಾಗದೆ 38, ಅಲ್ಜರಿ ಜೋಸೆಫ್ 33ಕ್ಕೆ 3, ರೋಸ್ಟನ್ ಚೇಸ್ 25ಕ್ಕೆ 2). ವೆಸ್ಟ್ ಇಂಡೀಸ್: 22 ಓವರ್‌ಗಳಲ್ಲಿ 4 ವಿಕೆಟ್‌ಗೆ 38 (ಸ್ಕಾಟ್ ಬೋಲೆಂಡ್ 9ಕ್ಕೆ 3)

ನೆಟ್‌ಬಾಲ್: ಸೆಮಿಗೆ ಕರ್ನಾಟಕ ತಂಡಗಳು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಎದುರಾಳಿ ತಂಡಗಳ ಮೇಲೆ ಆಧಿಪತ್ಯ ಸ್ಥಾಪಿಸಿದ ಕರ್ನಾಟಕದ ಪುರುಷ ಮತ್ತು ಮಹಿಳಾ ತಂಡಗಳು ಕರ್ನಾಟಕ ರಾಜ್ಯ ಅಮೆಚೂರ್ ನೆಟ್‌ಬಾಲ್ ಸಂಸ್ಥೆ ಮತ್ತು ಚಿಕ್ಕಮಗಳೂರು ಜಿಲ್ಲಾ ನೆಟ್‌ಬಾಲ್ ಸಂಸ್ಥೆ ಆಯೋಜಿಸಿರುವ ದಕ್ಷಿಣ ವಲಯ ನೆಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಹಂತ ಪ್ರವೇಶಿಸಿದವು.

ಇಲ್ಲಿನ ಆದಿಚುಂಚನಗಿರಿ ತಾಂತ್ರಿಕ ವಿದ್ಯಾಲಯದ ಬಿಜಿಎಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಹೊನಲು ಬೆಳಕಿನ ಟೂರ್ನಿಯ ಲೀಗ್ ಹಂತದಲ್ಲಿ ಆತಿಥೇಯ ಪುರುಷ ಮತ್ತು ಮಹಿಳೆಯರು ತಲಾ ಎರಡು ಜಯದೊಂದಿಗೆ ಅಗ್ರ ಸ್ಥಾನ ಗಳಿಸಿದರು. 'ಎ' ಗುಂಪಿನಲ್ಲಿ ಪುರುಷರ ತಂಡ ಮೊದಲ ಲೀಗ್ ಪಂದ್ಯದಲ್ಲಿ ತಮಿಳುನಾಡು ವಿರುದ್ಧ 49–11ರಲ್ಲಿ , ಮತ್ತೊಂದು ಪಂದ್ಯದಲ್ಲಿ ಆಂಧ್ರಪ್ರದೇಶ ಎದುರು 45–13ರಲ್ಲಿ ಗೆಲುವು ಸಾಧಿಸಿತು. ಮಹಿಳಾ ವಿಭಾಗದಲ್ಲಿ 'ಬಿ' ಗುಂಪಿನ ಲ್ಲಿರುವ ಕರ್ನಾಟಕ 34-6ರಲ್ಲಿ ತೆಲಂಗಾಣವನ್ನೂ 28–6ರಲ್ಲಿ ಪುದುಚೇರಿಯನ್ನೂ ಮಣಿಸಿತು.

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಜೈಪುರ	22	15	6	1	82
ಪುಣೇರಿ	22	14	6	2	80
ಬೆಂಗಳೂರು	22	13	8	1	74
ಯುಪಿ	22	12	8	2	71
ತಲೈವಾಸ್	22	10	8	4	66
ಡೆಲ್ಲಿ	22	10	10	2	63

ಪ್ರೊ ಕಬಡ್ಡಿ: ಬುಲ್ಸ್‌ಗೆ ನಿರಾಸೆ

ಹೈದರಾಬಾದ್: ಬೆಂಗಳೂರು ಬುಲ್ಸ್ ತಂಡದವರು ಪ್ರೊ ಕಬಡ್ಡಿ ಲೀಗ್‌ನ ತಮ್ಮ ಕೊನೆಯ ಪಂದ್ಯದಲ್ಲಿ 30–36 ರಲ್ಲಿ ಯು ಮುಂಬಾ ಎದುರು ಸೋತರು.

ಗಚಿಬೌಲಿ ಕ್ರೀಡಾಂಗಣಲ್ಲಿ ಶನಿವಾರ ನಡೆದ ಪಂದ್ಯದಲ್ಲಿ 11 ಪಾಯಿಂಟ್ಸ್ ಗಳಿಸಿದ ಜೈ ಭಗವಾನ್ ಅವರು ಮುಂಬಾ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ದಿನದ ಮತ್ತೊಂದು ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ 61–38ರಿಂದ ತಮಿಳ್ ತಲೈವಾಸ್ ತಂಡವನ್ನು ಮಣಿಸಿತು.

ಬುಲ್ಸ್ ತಂಡ ಡಿ.13 ರಂದು ನಡೆಯಲಿರುವ 'ಎಲಿಮಿನೇಟರ್–1' ಪಂದ್ಯದಲ್ಲಿ ದಬಾಂಗ್ ಡೆಲ್ಲಿ ತಂಡವನ್ನು ಎದುರಿಸಲಿದೆ. 'ಎಲಿಮಿನೇಟರ್–2'ರಲ್ಲಿ ಯು.ಪಿ.ಯೋಧಾಸ್– ತಮಿಳ್ ತಲೈವಾಸ್ ಪೈಪೋಟಿ ನಡೆಸಲಿವೆ.

ಪಾಯಿಂಟ್ ಪಟ್ಟಿಯಲ್ಲಿ ಕ್ರಮವಾಗಿ ಮೊದಲ 2 ಸ್ಥಾನಗಳನ್ನು ಪಡೆದಿರುವ ಜೈಪುರ ಮತ್ತು ಪುಣೇರಿ ತಂಡಗಳು ನೇರವಾಗಿ ಸೆಮಿ ಪ್ರವೇಶಿಸಿವೆ.

ಕ್ರಿಕೆಟ್: ದೊಡ್ಡ ಮುನ್ನಡೆಯತ್ತ ಇಂಗ್ಲೆಂಡ್

ಮುಲ್ತಾನ್ (ಎಎಫ್‌ಪಿ): ಬೆನ್ ಡಕೆಟ್ ಹಾಗೂ ಹ್ಯಾರಿ ಬ್ರೂಕ್ ಅವರ ಅರ್ಧಶತಕಗಳ ಬಲದಿಂದ ಪ್ರವಾಸಿ ಇಂಗ್ಲೆಂಡ್ ತಂಡವು ಪಾಕಿಸ್ತಾನ ಎದುರು ನಡೆಯುತ್ತಿರುವ ಟೆಸ್ಟ್ ಪಂದ್ಯದಲ್ಲಿ ದೊಡ್ಡ ಮುನ್ನಡೆಯತ್ತ ಹೆಜ್ಜೆ ಇಟ್ಟಿದೆ.

ಪಂದ್ಯದ ಎರಡನೇ ದಿನವಾದ ಶನಿವಾರ ಇಂಗ್ಲೆಂಡ್ ತಂಡವು ಮೊದಲ ಇನಿಂಗ್ಸ್‌ನಲ್ಲಿ 79 ರನ್‌ಗಳ ಮುನ್ನಡೆ ಗಳಿಸಿತು. ಎರಡನೇ ಇನಿಂಗ್ಸ್‌ನಲ್ಲಿ 49 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 202 ರನ್ ಗಳಿಸಿತು. 281 ರನ್‌ಗಳ ಮುನ್ನಡೆ ಸಾಧಿಸಿದೆ. ಆರಂಭಿಕ ಬ್ಯಾಟರ್ ಬೆನ್ ಡಕೆಟ್ (79; 88ಎ, 4X6) ಮತ್ತು ಹ್ಯಾರಿ (ಬ್ಯಾಟಿಂಗ್ 74; 108ಎ, 4X8, 6X1) ಉತ್ತಮ ಕಾಣಿಕೆ ನೀಡಿದರು.

ಪಾಕ್ ತಂಡದ ಅಬ್ರಾರ್ ಅಹಮದ್ 3 ವಿಕೆಟ್‌ಗಳನ್ನು ಗಳಿಸಿದರು. ಅವರು ಬೆನ್ ಡಕೆಟ್, ವಿಲ್ ಜ್ಯಾಕ್ಸ್ ಮತ್ತು ರೂಟ್ ವಿಕೆಟ್‌ಗಳನ್ನು ಗಳಿಸಿದರು.

ಸಂಕ್ಷಿಪ್ತ ಸುದ್ದಿ

ಚೆಟ್ರಿ ಬಳಗಕ್ಕೆ ಬ್ಲಾಸ್ಟರ್ಸ್ ಸವಾಲು

ಬೆಂಗಳೂರು: ಗೆಲುವಿನ ಹುಡುಕಾಟದಲ್ಲಿರುವ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಭಾನುವಾರ ಕೇರಳ ಬ್ಲಾಸ್ಟರ್ಸ್ ತಂಡಕ್ಕೆ ಮುಖಾಮುಖಿಯಾಗಲಿದೆ.

ಕೊಚ್ಚಿಯ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಉಭಯ ತಂಡಗಳ ನಡುವಣ ಹಣಾಹಣಿಗೆ ವೇದಿಕೆ ಸಜ್ಜುಗೊಂಡಿದೆ. ಎಂಟು ಪಂದ್ಯಗಳನ್ನು ಆಡಿರುವ ಸುನಿಲ್ ಚೆಟ್ರಿ ನಾಯಕತ್ವದ ಬಿಎಫ್‌ಸಿ ಏಳು ಪಾಯಿಂಟ್ಸ್ ಗಳಿಸಿ ಒಂಬತ್ತನೇ ಸ್ಥಾನದಲ್ಲಿದೆ. ಬೆಂಗಳೂರಿನಲ್ಲಿ ಆಡಿದ ಕಳೆದ ಪಂದ್ಯದಲ್ಲಿ ತಂಡವು ಎಟಿಕೆ ಮೋಹನ್ ಬಾಗನ್ ಎದುರು ಎಡವಿತ್ತು.

ಕೇರಳ ಬ್ಲಾಸ್ಟರ್ಸ್ ಪಾಯಿಂಟ್ಸ್ ಪಟ್ಟಿಯಲ್ಲಿ ಆರನೇ ಸ್ಥಾನದಲ್ಲಿದೆ.

ಪಂದ್ಯ ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್, ಜಿಯೊ ಟಿವಿ

ಟಿಟಿ: ಯಶಸ್ವಿನಿಗೆ ಬೆಳ್ಳಿ, ಕಂಚು

ಬೆಂಗಳೂರು: ಭಾರತದ ಯಶಸ್ವಿನಿ ಘೋರ್ಪಡೆ ಮತ್ತು ಸುಹಾನಾ ಸೈನಿ ಜೋಡಿಯು ಇತ್ತೀಚೆಗೆ ನಡೆದ ಐಟಿಟಿಎಫ್ ವಿಶ್ವ ಯೂತ್ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕಂಚಿನ ಪದಕ ಗೆದ್ದುಕೊಂಡಿದೆ.

ಟ್ಯುನಿಷಿಯಾದಲ್ಲಿ ನಡೆದ ಟೂರ್ನಿಯ ಬಾಲಕಿಯರ ಡಬಲ್ಸ್‌ನ ಸೆಮಿಫೈನಲ್‌ನಲ್ಲಿ ಕರ್ನಾಟಕದ ಯಶಸ್ವಿನಿ ಮತ್ತು ಸುಹಾನಾ 14-16, 4-11, 6-11ರಿಂದ ಜಪಾನ್‌ನ ಹರಿಮೊಟೊ– ಕಿಹಾರಾ ಎದುರು ಸೋತರು. ಕ್ವಾರ್ಟರ್‌ಫೈನಲ್‌ನಲ್ಲಿ ಭಾರತದ ಆಟಗಾರ್ತಿಯರು 14-12, 5-11, 11-4, 11-7ರಿಂದ ಚೀನಾ ತೈಪೆಯ ಚೆನ್ ಮತ್ತು ಅಮೆರಿಕದ ಗಿಲಿಯಾ ಎದುರು ಗೆದ್ದಿದ್ದರು.

ಇದಕ್ಕೂ ಮೊದಲು ಪೋರ್ಚುಗಲ್‌ನಲ್ಲಿ ನಡೆದ ಡಬ್ಲ್ಯುಟಿಟಿ ಯೂತ್ ಸ್ಟಾರ್ ಕಂಟೆಂಡರ್ ಟೂರ್ನಿಯಲ್ಲಿ ಯಶಸ್ವಿನಿ– ಸುಹಾನಾ ಬೆಳ್ಳಿ ಪದಕ ಜಯಿಸಿದ್ದರು. ಫೈನಲ್‌ನಲ್ಲಿ 7-11, 11-13, 7-11ರಿಂದ ಚೀನಾ ತೈಪೆಯ ಟಿಸಾಯ್– ಹಂಗ್ ಎದುರು ಸೋತಿದ್ದರು.

ಕಬಡ್ಡಿ: ವೆಲ್ಸ್‌ಗೆ ಪ್ರಶಸ್ತಿ

ಬೆಂಗಳೂರು: ಚೆನ್ನೈನ ವೆಲ್ಸ್ ವಿವಿ ತಂಡವು ಇಲ್ಲಿ ನಡೆದ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯಗಳ ಪುರುಷರ ಕಬಡ್ಡಿ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಭಾರತ ವಿಶ್ವವಿದ್ಯಾಲಯಗಳ ಸಂಘ ಮತ್ತು ಬೆಂಗಳೂರು ನಗರ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಕೋರಮಂಗಲದ ಸಂತ ಫ್ರಾನ್ಸಿಸ್ ಕಾಲೇಜಿನಲ್ಲಿ ಆಯೋಜಿಸಿದ್ದ ಟೂರ್ನಿಯಲ್ಲಿ ವೆಲ್ಸ್ ತಂಡವು ಮಂಗಳೂರು ವಿವಿ ತಂಡವನ್ನು ಸೋಲಿಸಿ ಪ್ರಶಸ್ತಿ ಜಯಿಸಿತು. ಚೆನ್ನೈನ ಎಸ್‌ಆರ್‌ಎಂಐಎಸ್‌ಟಿ ವಿವಿ ತಂಡ ಮೂರನೇ ಮತ್ತು ಮೈಸೂರು ವಿವಿ ತಂಡಗಳು 4ನೇ ಸ್ಥಾನ ಪಡೆದವು.